ಗುರುವಾರ, ನವೆಂಬರ್ 10, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ರಾಷ್ಟ್ರೀಕೃತ
ಬ್ಯಾಂಕ್‌ಗಳಿಗೆ
ಬೇಕಾಗಿದ್ದಾರೆ
ಸ್ಪೆಷಲ್ ಆಫೀಸರ್ಸ್



ಪ್ರಜಾ ಮತ
ಜನತಂತ್ರದ ಹಬ್ಬ 2022

ಸುಳ್ಳುಗಳಿಂದ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ: ಮಲ್ಲಿಕಾರ್ಜುನ ಖರ್ಗೆ

ಹಿಮಾಚಲ ಪ್ರದೇಶದ ಬನೂತಿಯಲ್ಲಿ ಪಕ್ಷದ ಪರ ಪ್ರಚಾರ ರ‍್ಯಾಲಿಯಲ್ಲಿ ಭಾಗಿಯಾದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ –ಪಿಟಿಐ ಚಿತ್ರ

ಬನೂತಿ (ಶಿಮ್ಲಾ) (ಪಿಟಿಐ): ಬಿಜೆಪಿ, ಸುಳ್ಳುಗಳ ಮೂಲಕ ದೇಶದಾದ್ಯಂತ ಜನರನ್ನು ಮೂರ್ಖರನ್ನಾಗಿ ಮಾಡಿರಬಹುದು. ಆದರೆ ಹಿಮಾಚಲ ಪ್ರದೇಶದಲ್ಲಿ ಅದು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬನೂತಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರದಲ್ಲಿ ಭಾಗಿಯಾದ ಅವರು, ‘ಇಲ್ಲಿನ ಜನರು ಸುಶಿಕ್ಷಿತರು, ಎಲ್ಲವನ್ನೂ ಅಳೆದೂ ತೂಗಿ ಮತ ಚಲಾಯಿಸುತ್ತಾರೆ. 15 ಲಕ್ಷ ಉದ್ಯೋಗ ಸೃಷ್ಟಿ, ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ಎಂಬ ಸುಳ್ಳುಗಳ ಮೂಲಕ ಬಿಜೆಪಿ ದೇಶದಾದ್ಯಂತ ಜನರನ್ನು ಮೂರ್ಖರನ್ನಾಗಿ ಮಾಡಿರಬಹುದು. ಆದರೆ ಇಲ್ಲಿ ಅದು ಸಾಧ್ಯವಿಲ್ಲ’ ಎಂದು ಹೇಳಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪ್ರಣಾಳಿಕೆಯಲ್ಲಿರುವ ಎಲ್ಲಾ ಭರವಸೆಗಳನ್ನೂ ಈಡೇರಿಸಲಿದೆ ಮತ್ತು ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮರು ಜಾರಿ ಮಾಡಲಿದೆ’ ಎಂದು ತಿಳಿಸಿದರು.

ಹಿಮಾಚಲ ಪ್ರದೇಶ: ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ

‘ಅಭಿವೃದ್ಧಿಯ ಶತ್ರು ಕಾಂಗ್ರೆಸ್’

ಚಂಬಿ/ಸುಜಾನ್‌ಪುರ, ಹಿಮಾಚಲ ಪ್ರದೇಶ (ಪಿಟಿಐ): ಹಿಮಾಚಲ ಪ್ರದೇಶಕ್ಕೆ ‘ಡಬಲ್ ಎಂಜಿನ್’ ನ ಸ್ಥಿರ ಮತ್ತು ಬಲಿಷ್ಠ ಸರ್ಕಾರದ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಕಾಂಗ್ರಾ ಜಿಲ್ಲೆ ಮತ್ತು ಸುಜಾನ್‌ಪುರದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಮೋದಿ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ರಾಜ್ಯಕ್ಕೆ ದ್ರೋಹ ಬಗೆದಿದೆ ಮತ್ತು ಅಭಿವೃದ್ಧಿಯ ಶತ್ರು ಎಂದು ಆರೋಪಿಸಿದರು.

2017ರ ವರೆಗೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ತಾವು ಪ್ರಧಾನಿಯಾದ ನಂತರ ಕಾಂಗ್ರೆಸ್ ಪ್ರಗತಿಗೆ ಅಡ್ಡಿಪಡಿಸುವ ಕೆಲಸ ಮಾಡಿದ್ದರಿಂದ ರಾಜ್ಯದ ಅಭಿವೃದ್ಧಿಗೆ ಬಿಜೆಪಿ ಅಧಿಕಾರದಲ್ಲಿ ಉಳಿಯುವುದು ಅಗತ್ಯ ಎಂದರು.

ಗುಡ್ಡಗಾಡು ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳುವ ಬಿಜೆಪಿ ಪ್ರಯತ್ನಕ್ಕೆ ಪ್ರತಿಸ್ಪರ್ಧಿಯಾಗಿರುವ ಕಾಂಗ್ರೆಸ್, ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಮಾತ್ರ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ. ಬಿಜೆಪಿಯನ್ನು ಅಧಿಕಾರಕ್ಕೆ ತರಲು ರಾಜ್ಯದ ಜನರು ಮನಸ್ಸು ಮಾಡಿದ್ದಾರೆ ಎಂದು ಅವರು ಪ್ರತಿಪಾದಿಸಿದರು.

ರಾಜಸ್ಥಾನ ಮತ್ತು ಛತ್ತೀಸ್‌ಗಡ ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ಕಾಂಗ್ರೆಸ್ ನ ಆಂತರಿಕ ಕಲಹದ ವರದಿಗಳು ಅಲ್ಲಿಂದ ಹೊರಬರುತ್ತವೆ ಎಂದು ಅವರು ಹೇಳಿದರು.

ಕಾಂಗ್ರೆಸ್ ವಿರುದ್ಧ ಜನರಿಗೆ ಎಷ್ಟು ಕೋಪವಿದೆಯೆಂದರೆ, ಅದನ್ನು ಸೋಲಿಸಿದ ನಂತರ ದಶಕಗಳಿಂದ ಅನೇಕ ರಾಜ್ಯಗಳಲ್ಲಿ ಅಧಿಕಾರಕ್ಕೆ ಆಯ್ಕೆ ಮಾಡಿಲ್ಲ ಎಂದು ತಮಿಳುನಾಡು, ಬಿಹಾರ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ಉದಾಹರಣೆಗಳನ್ನು ನರೇಂದ್ರ ಮೋದಿ ಅವರು ಉಲ್ಲೇಖಿಸಿದರು.

ಹಿಮಾಚಲ ಪ್ರದೇಶದ ಚಂಬಿಯಲ್ಲಿ ಬುಧವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು.

ಗುಜರಾತ್: ಮತ್ತೊಬ್ಬ ಶಾಸಕ ಬಿಜೆಪಿಗೆ

ಅಹಮದಾಬಾದ್ (ಪಿಟಿಐ): ಗುಜರಾತ್ ಕಾಂಗ್ರೆಸ್ ಶಾಸಕ ಭಗವಾನ್ ಬಾರದ್ ಅವರು ತಮ್ಮ ಶಾಸಕ ಸ್ಥಾನಕ್ಕೆ ಮತ್ತು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ ಮತ್ತು ಬಿಜೆಪಿ ಸೇರ್ಪಡೆಯಾಗಲು ಸಿದ್ಧತೆ ನಡೆಸಿದ್ದಾರೆ.

ತಲಾಲ ಕ್ಷೇತ್ರದ ಶಾಸಕರಾಗಿದ್ದ ಅವರು ಸ್ಪೀಕರ್‌ಗೆ ರಾಜೀನಾಮೆ ಪತ್ರ ನೀಡಿದ್ದಾರೆ. ಬೆಂಬಲಿಗರೊಂದಿಗೆ ಚರ್ಚಿಸಿ ಕಾಂಗ್ರೆಸ್ ತೊರೆದಿದ್ದಾಗಿ ಮತ್ತು ಮುಂಬರಲಿರುವ ವಿಧಾನಸಭೆ ಚುನಾವಣೆಗೆ ಟಿಕೆಟ್ ಪಡೆಯುವ ಕುರಿತು ಯಾವುದೇ ಒಪ್ಪಂದ ಮಾಡಿಕೊಳ್ಳದೇ ಬಿಜೆಪಿಯನ್ನು ಸೇರುವುದಾಗಿ ಬಾರದ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಮಂಡ್ಯದಲ್ಲಿ ಕದ್ದ ಬಾಲಾಜಿ ವಿಗ್ರಹ ತಮಿಳುನಾಡಿನಲ್ಲಿ ವಶ

ಚೆನ್ನೈ (ಪಿಟಿಐ): ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ದೇವಾಲಯದಿಂದ ಕಳವು ಮಾಡಿದ್ದ ಬಾಲಾಜಿ ವಿಗ್ರಹವನ್ನು ತಮಿಳುನಾಡಿನ ಗೋಬಿಚೆಟ್ಟಿಪಾಳ್ಯಂನ ಮನೆಯೊಂದರಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ವಿಗ್ರಹ ವಿಭಾಗದ ಸಿಐಡಿ ಬುಧವಾರ ತಿಳಿಸಿದೆ.

ಕೇಂದ್ರ ವಲಯದ ಹೆಚ್ಚುವರಿ ಡಿಎಸ್‌ಪಿ ಬಾಲಮುರುಗನ್ ಮೇಲ್ವಿಚಾರಣೆಯಲ್ಲಿ ಇನ್‌ಸ್ಪೆಕ್ಟರ್ ಎಲಾಂಗೊ ನೇತೃತ್ವದಲ್ಲಿ ಅಧಿಕಾರಿಗಳು ವಿಗ್ರಹ (22.8 ಕೆ.ಜಿ ತೂಕ, 58 ಸೆಂ.ಮೀ ಎತ್ತರ) ವಶಪಡಿಸಿಕೊಂಡಿದ್ದಾರೆ.

ಕೆಲ ವರ್ಷಗಳ ಹಿಂದೆ ಮಂಡ್ಯದ ದೇವಾಲಯದಿಂದ ವಿಗ್ರಹವನ್ನು ದೇವಸ್ಥಾನದ ಪೂಜಾರಿ ಕಳವು ಮಾಡಿ ಗೋಬಿಚೆಟ್ಟಿಪಾಳ್ಯದ ವಕೀಲರಿಗೆ ಮಾರಾಟ ಮಾಡಿದ್ದ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ಇನ್‌ಸ್ಪೆಕ್ಟರ್‌ಗಳಾದ ಪಾಂಡಿಯರಾಜನ್ ಮತ್ತು ರಾಜೇಶ್ ಅವರು ಶ್ರೀಮಂತ ವಿಗ್ರಹ ಕಳ್ಳಸಾಗಣೆದಾರರಂತೆ ವೇಷ ಧರಿಸಿಕೊಂಡು ವಿಗ್ರಹ ಹುಡುಕಲು ಪ್ರಾರಂಭಿಸಿದರು. ನ.4 ರಂದು ಅವಿನಾಶಿ ರಸ್ತೆಯ ಕಾಫಿ ಶಾಪ್ ನಲ್ಲಿ ಮಧ್ಯವರ್ತಿಯ ಮೂಲಕ ವಕೀಲರ ಮನೆಗೆ ತೆರಳಿ, ಖರೀದಿಸುವ ನೆಪದಲ್ಲಿ ವಿಗ್ರಹ ವಶಪಡಿಸಿಕೊಂಡು, ವಕೀಲನನ್ನು ಬಂಧಿಸಿದ್ದಾರೆ.

ಬಾಲಕಿ ಮೇಲೆ ಬಾಲಕರಿಂದ ಸಾಮೂಹಿಕ ಅತ್ಯಾಚಾರ

ಕರೀಂಗಂಜ್, ಅಸ್ಸಾಂ (ಪಿಟಿಐ): 13 ವರ್ಷ ವಯಸ್ಸಿನ ಬಾಲಕಿಯೊಬ್ಬಳ ಮೇಲೆ ಆರು ಮಂದಿ ಬಾಲಕರು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ ಎನ್ನಲಾದ ಘಟನೆ ಅಸ್ಸಾಂನ ಕರೀಂಗಂಜ್ ಜಿಲ್ಲೆಯಲ್ಲಿ ನಡೆದಿದೆ. ಕಾನೂನು ಸಂಘರ್ಷಕ್ಕೆ ಒಳಪಟ್ಟ ಎಲ್ಲಾ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಜಿಲ್ಲೆಯ ರಾಮಕೃಷ್ಣ ನಗರ ಪ್ರದೇಶದಲ್ಲಿ ನವೆಂಬರ್ 1ರಂದು ಈ ಪ್ರಕರಣ ನಡೆದಿದೆ. ಬಂಧಿತರೆಲ್ಲರೂ 13ರಿಂದ 15 ವರ್ಷ ವಯಸ್ಸಿನ ಒಳಗಿನವರು ಎಂದು ಪೊಲೀಸರು ತಿಳಿಸಿದ್ದಾರೆ. ‘ಮನೆಯಲ್ಲಿ ಬಾಲಕಿ ಒಬ್ಬಳೇ ಇದ್ದ ವೇಳೆ ಬಾಲಕರು ಮನೆಯೊಳಗೆ ನುಗ್ಗಿದ್ದಾರೆ. ಒಬ್ಬರಾದ ಮೇಲೆ ಒಬ್ಬರು ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಾರೆ. ಅತ್ಯಾಚಾರದ ವಿಡಿಯೊವನ್ನೂ ಚಿತ್ರೀಕರಿಸಿ, ಆಕೆಯ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಬಾಲಕಿಯ ಪೋಷಕರು ದೂರಿನಲ್ಲಿ ಮಾಹಿತಿ ನೀಡಿದ್ದಾರೆ.

ಐಪಿಸಿ ಮತ್ತು ಮಕ್ಕಳ ಮೇಲಿನ ದೈಹಿಕ ದೌರ್ಜನ್ಯ ತಡೆ ಕಾಯ್ದೆ– 2012 (ಪೋಕ್ಸೊ) ಅಡಿ ಹಲವಾರು ಮೊಕದ್ದಮೆಗಳನ್ನು ಬಾಲಕರ ವಿರುದ್ಧ ದಾಖಲಿಸಲಾಗಿದೆ. ಮೊಬೈಲ್‌ನಲ್ಲಿ ಅವರು ಚಿತ್ರೀಕರಿಸಿದ್ದ ವಿಡಿಯೊ ಅಳಿಸಲಾಗಿದೆ. ರಕ್ತ ಮಾದರಿ, ಇತರ ಸಾಕ್ಷ್ಯಗಳನ್ನು ಸಂಗ್ರಹಿಸಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೋದಿಗೆ ಸವಾಲೊಡ್ಡಲು ರಾಹುಲ್ ಸಮರ್ಥ: ಗೆಹಲೋತ್

ಶಿಮ್ಲಾ (ಪಿಟಿಐ): 2024ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲೊಡ್ಡುವ ಸಾಮರ್ಥ್ಯ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ಇದೆ. ಆದರೆ, ಸರ್ವ ಸಮ್ಮತ ನಾಯಕ ಯಾರಾಗಬೇಕೆನ್ನುವುದನ್ನು ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಿ ನಿರ್ಧರಿಸಲಿವೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಬುಧವಾರ ಹೇಳಿದ್ದಾರೆ.

ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, ‘ ರಾಹುಲ್ ಅವರು ಭಾರತ್ ಜೋಡೊ ಯಾತ್ರೆ ಮೂಲಕ ಧ್ವನಿ ಎತ್ತುತ್ತಿರುವ ವಿಷಯಗಳು ಸಾರ್ವಜನಿಕರಿಗೆ ಸಂಬಂಧಿಸಿದ್ದಾಗಿವೆ’ ಎಂದರು. ಚುನಾವಣೆಯಲ್ಲಿ ಮೋದಿಯವರಿಗೆ ಸವಾಲೊಡ್ಡುವ ಶಕ್ತಿ ರಾಹುಲ್ ಅವರಿಗಿದೆ. ಇದು ಅವರಲ್ಲಿ ಆರಂಭದಿಂದಲೂ ಇತ್ತು. ಆದರೆ, ಅವರ ವ್ಯಕ್ತಿತ್ವಕ್ಕೆ ಜಾಲತಾಣದ ದುರುಪಯೋಗದ ಮೂಲಕ ಕಳಂಕ ಹಚ್ಚಲಾಯಿತು. ಜನರಿಗೀಗ ಇದು ಅರ್ಥವಾಗಿದೆ’ ಎಂದು ಹೇಳಿದರು.

ಕೇರಳ ರಾಜ್ಯಪಾಲರ ನಡೆಗೆ ಎಡಿಟರ್ಸ್ ಗಿಲ್ಡ್ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಇತ್ತೀಚೆಗೆ ಸುದ್ದಿಗೋಷ್ಠಿಯಿಂದ ಎರಡು ಸುದ್ದಿವಾಹಿನಿಗಳ ಪತ್ರಕರ್ತರನ್ನು ಹೊರಗೆ ಕಳುಹಿಸಿದ ಕ್ರಮಕ್ಕೆ ಭಾರತೀಯ ಸಂಪಾದಕರ ಒಕ್ಕೂಟದ (ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ) ತೀವ್ರ ವಿರೋಧ ವ್ಯಕ್ತಪಡಿಸಿದೆ.

ನವೆಂಬರ್ 7ರಂದು ಕೊಚ್ಚಿಯಲ್ಲಿ ನಿಗದಿಯಾಗಿದ್ದ ಸುದ್ದಿಗೋಷ್ಠಿ ಆರಂಭಕ್ಕೂ ಮುನ್ನ, ‘ಕೈರಳಿ’ ಮತ್ತು ‘ಮೀಡಿಯಾ ಒನ್’ನ ಸುದ್ದಿವಾಹಿನಿಗಳ ಪತ್ರಕರ್ತರು ಸುದ್ದಿಗೋಷ್ಠಿಯಿಂದ ಹೊರ ಹೋಗಬೇಕು ಎಂದು ರಾಜ್ಯಪಾಲರು ಸೂಚನೆ ನೀಡಿದ್ದರು. ಈ ಸುದ್ದಿವಾಹಿನಿಗಳ ಪತ್ರಕರ್ತರು ಹೊರನಡೆದ ನಂತರವಷ್ಟೇ ಮಾಧ್ಯಮದವರೊಂದಿಗೆ ಸಂವಾದ ಆರಂಭಿಸಿದ್ದರು.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಭಾರತೀಯ ಸಂಪಾದಕರ ಒಕ್ಕೂಟ, ಉನ್ನತ ಸಾಂವಿಧಾನಕ ಹುದ್ದೆಯಲ್ಲಿರುವ ಮತ್ತು ಮಾಧ್ಯಮ ಸ್ವತಂತ್ರ ಸೇರಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ ಜವಾಬ್ದಾರಿ ಹೊತ್ತವರು ಈ ರೀತಿ ಕೆಲ ಮಾಧ್ಯಮಗಳನ್ನು ಗುರಿಯಾಗಿಸುತ್ತಿರುವುದು ತೀವ್ರ ನೋವುಂಟು ಮಾಡಿದೆ. ಅಧಿಕಾರದಲ್ಲಿ ಇರುವವರನ್ನು ಟೀಕಿಸುವ ಅಧಿಕಾರ ಮಾಧ್ಯಮಗಳಿಗೆ ಇದೆ. ಆದರೆ ಇಂಥ ಟೀಕೆಯೇ ಸುದ್ದಿಗೋಷ್ಠಿಯಿಂದ ಮಾಧ್ಯಮಗಳನ್ನು ಹೊರಗಿಡಲು ಕಾರಣವಾಗಬಾರದು ಎಂದು ತಿಳಿಸಿದೆ.

ಮಾಧ್ಯಮ ಸ್ವಾತಂತ್ರ್ಯವನ್ನು ಗೌರವಿಸುವ ಮತ್ತು ಪ್ರತಿಯೊಂದು ಮಾಧ್ಯಮಕ್ಕೂ ಸರ್ಕಾರದ ವ್ಯವಹಾರಗಳ ಕುರಿತ ವರದಿಗಾರಿಕೆಗೆ ಪೂರ್ಣ ಪ್ರಮಾಣದಲ್ಲಿ ಅವಕಾಶ ನೀಡಬೇಕಾದ ಅಗತ್ಯವಿದೆ ಎಂದೂ ಒಕ್ಕೂಟ ಹೇಳಿದೆ.

ಎಲ್ಗಾರ್ ಪರಿಷದ್ ಪ್ರಕರಣ: ಗೌತಮ್ ನವ್ಲಾಖಾ ಅರ್ಜಿ ವಿಚಾರಣೆ

ಭ್ರಷ್ಟರಿಂದ ದೇಶ ನಾಶ: ‘ಸುಪ್ರೀಂ’

ನವದೆಹಲಿ (ಪಿಟಿಐ): ಭ್ರಷ್ಟರು ದೇಶ ನಾಶ ಮಾಡುತ್ತಿದ್ದಾರೆ ಮತ್ತು ಅವರು ಹಣದ ಸಹಾಯದಿಂದ ಭ್ರಷ್ಟಾಚಾರದಿಂದ ಪಾರಾಗುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಎಲ್ಗಾರ್ ಪರಿಷದ್–ಮಾವೊವಾದಿ ಸಂಪರ್ಕ ಪ್ರಕರಣದಲ್ಲಿ ತಮ್ಮನ್ನು ನ್ಯಾಯಾಂಗ ಬಂಧನದಲ್ಲಿರಿಸುವ ಬದಲು ಗೃಹಬಂಧನದಲ್ಲಿರಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಗೌತಮ್ ನವ್ಲಾಖಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಅವರ ಮನವಿಯನ್ನು ವಿರೋಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ‘ನವ್ಲಾಖಾ ಅವರಂತಹ ಜನರು ದೇಶ ನಾಶಪಡಿಸಲು ಬಯಸುತ್ತಾರೆ. ಅವರ ಸಿದ್ಧಾಂತವು ಆ ರೀತಿಯದ್ದಾಗಿದೆ. ಅವರು ಮುಗ್ಧ ಜನರು ಎಂದಲ್ಲ. ಅವರು ನಿಜವಾದ ಯುದ್ಧದಲ್ಲಿ ತೊಡಗಿರುವ ವ್ಯಕ್ತಿಗಳು’ ಎಂದು ಹೇಳಿದರು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಪೀಠ, ‘ಈ ದೇಶವನ್ನು ಯಾರು ನಾಶಪಡಿಸುತ್ತಿದ್ದಾರೆಂದು ತಿಳಿಯಲು ಬಯಸುವಿರಾ? ಭ್ರಷ್ಟರಾಗಿರುವ ಜನರು. ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳುವವರು ಯಾರು?’ ಎಂದು ಪ್ರಶ್ನಿಸಿತು.

‘ಚುನಾಯಿತ ಪ್ರತಿನಿಧಿಗಳನ್ನು ಖರೀದಿಸಲು ಜನರು ಕೋಟ್ಯಂತರ ರೂಪಾಯಿ ಬಗ್ಗೆ ಮಾತನಾಡುವ ವಿಡಿಯೊವನ್ನು ನೋಡಿದ್ದೇವೆ. ಅವರು ದೇಶದ ವಿರುದ್ಧ ಏನನ್ನೂ ಮಾಡುತ್ತಿಲ್ಲ ಎಂದು ಹೇಳುತ್ತೀರಾ? ತಡೆಯದಿದ್ದರೆ ಅವರು ಸಂತೋಷದಿಂದ ಮುಂದುವರಿಯುತ್ತಾರೆ. ಅವರು ತಪ್ಪಿಸಿಕೊಳ್ಳಲು ಸಹಾಯ ಮಾಡುವ ಹಣದ ಚೀಲಗಳಿವೆ’ ಎಂದು ಹೇಳಿದೆ.

ಭ್ರಷ್ಟರನ್ನು ಸಮರ್ಥಿಸುತ್ತಿಲ್ಲ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಹೇಳಿದರು. ಗೃಹಬಂಧನದ ಕೋರಿಕೆ ಅನುಮತಿಸಿದರೆ ನವ್ಲಾಖಾಗೆ ಯಾವ ಷರತ್ತುಗಳನ್ನು ವಿಧಿಸಬಹುದು ಎಂಬ ಬಗ್ಗೆ ಸೂಚನೆಗಳನ್ನು ಪಡೆಯಲು ಮತ್ತು ಅದನ್ನು ತಿಳಿಸುವಂತೆ ರಾಜು ಅವರಿಗೆ ಕೋರ್ಟ್ ಕೇಳಿದೆ.

‘ಕನಿಷ್ಠ ಸ್ವಲ್ಪ ಸಮಯದವರೆಗೆ ನೋಡೋಣ. ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಏನೂ ಆಗದಂತೆ ನೀವು ಪರಿಶೀಲಿಸಿಕೊಂಡು ಬನ್ನಿ. ಅವರು ಏನಾದರೂ ಮಾಡಿದರೆ, ತಮ್ಮ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾರೆ. ಅವರು ಹಲವಾರು ಸಮಸ್ಯೆಗಳನ್ನು ಹೊಂದಿದ್ದಾರೆ’ ಎಂದು ಪೀಠ ಹೇಳಿದೆ

ನವ್ಲಾಖಾ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ವೈದ್ಯಕೀಯ ವರದಿಗಳು ಅವರಿಗೆ ಜೈಲಿನಲ್ಲಿ ಚಿಕಿತ್ಸೆ ನೀಡುವ ಸಾಧ್ಯತೆ ಇಲ್ಲ ಎಂದು ತೋರಿಸುತ್ತವೆ ಎಂದು ಹೇಳಿದರು.

‘ಲಾಭ ಗಳಿಸಲು ಶಿಕ್ಷಣವೆಂಬುದು ವ್ಯಾಪಾರವಲ್ಲ’

ನವದೆಹಲಿ (ಪಿಟಿಐ): ಶಿಕ್ಷಣ ಎಂಬುದು ಲಾಭ ಗಳಿಸುವ ಸಲುವಾಗಿ ನಡೆಸುವ ವ್ಯಾಪಾರವಲ್ಲ. ಹೀಗಾಗಿ ಬೋಧನಾ ಶುಲ್ಕವು ಯಾವಾಗಲೂ ಕೈಗೆಟುಕುವಂತಿರಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ, ರಾಜ್ಯದ ಮೆಡಿಕಲ್ ಕಾಲೇಜುಗಳ ಬೋಧನಾ ಶುಲ್ಕವನ್ನು ವಾರ್ಷಿಕ ₹ 24 ಲಕ್ಷಕ್ಕೆ ಹೆಚ್ಚಳ ಮಾಡಿದ್ದ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಿದ್ದ ಆಂಧ್ರಪ್ರದೇಶ ಹೈಕೋರ್ಟ್‌ನ ಕ್ರಮವನ್ನು ಎತ್ತಿ ಹಿಡಿಯಿತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ನಾರಾಯಣ ಮೆಡಿಕಲ್ ಕಾಲೇಜು ಹಾಗೂ ಆಂಧ್ರಪ್ರದೇಶ ಸರ್ಕಾರ ಮೇಲ್ಮನವಿ ಸಲ್ಲಿಸಿದ್ದವು.

ನಾರಾಯಣ ಮೆಡಿಕಲ್ ಕಾಲೇಜು ಹಾಗೂ ರಾಜ್ಯ ಸರ್ಕಾರ ಪ್ರಕರಣದ ವೆಚ್ಚ ಒಟ್ಟು ₹ 5 ಲಕ್ಷ ನೀಡಬೇಕು ಎಂದು ಆದೇಶಿಸಿದ ನ್ಯಾಯಪೀಠ, ಈ ಮೊತ್ತವನ್ನು ಆರು ವಾರಗಳ ಒಳಗಾಗಿ ಕೋರ್ಟ್ ರಿಜಿಸ್ಟ್ರಿಯಲ್ಲಿ ಠೇವಣಿ ಇಡುವಂತೆ ಸೂಚಿಸಿತು.

‘ಬೋಧನಾ ಶುಲ್ಕವನ್ನು ₹ 24 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದು ಈ ಮೊದಲಿದ್ದ ಶುಲ್ಕಕ್ಕಿಂತ ಏಳು ಪಟ್ಟು ಹೆಚ್ಚು ಇದ್ದು, ಯಾವ ರೀತಿಯಲ್ಲಿಯೂ ಈ ಕ್ರಮ ಸಮರ್ಥನೀಯವಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಸೊರೇನ್‌ಗೆ ಸಮನ್ಸ್

ರಾಂಚಿ (ಪಿಟಿಐ): ಜಾರ್ಖಂಡ್‌ನಲ್ಲಿ ನಡೆದಿದೆ ಎನ್ನಲಾಗಿರುವ ಅಕ್ರಮ ಗಣಿಗಾರಿಕೆ ಸಂಬಂಧ ತನಿಖೆ ನಡೆಸುತ್ತಿರುವ ಇ.ಡಿ, ಹಣ ಅಕ್ರಮ ವರ್ಗಾವಣೆ ವಿಚಾರವಾಗಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಹೊಸದಾಗಿ ಸಮನ್ಸ್ ಜಾರಿಮಾಡಿದೆ. ಇದೇ 17ರಂದು ಹಾಜರಾಗುವಂತೆ ಸೂಚಿಸಿದೆ.

ಸಂಕ್ಷಿಪ್ತ ಸುದ್ದಿ

‘ಜಿ20 ಲಾಂಛನದಲ್ಲಿ ಬಿಜೆಪಿಯ ಕಮಲ ಆಘಾತಕಾರಿ’

ನವದೆಹಲಿ(ಪಿಟಿಐ): ಬಿಜೆಪಿಯ ಚುನಾವಣಾ ಚಿಹ್ನೆ ಕಮಲವನ್ನು ಜಿ20 ಲಾಂಛನದ ಭಾಗವಾಗಿಸಿರುವುದು ಆಘಾತಕಾರಿ. ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಪಕ್ಷವು ವೈಯಕ್ತಿಕ ಪ್ರಚಾರಕ್ಕೆ ಯಾವುದೇ ಅವಕಾಶವನ್ನೂ ಕಳೆದುಕೊಳ್ಳುವುದಿಲ್ಲ ಎಂದು ಕಾಂಗ್ರೆಸ್ ಬುಧವಾರ ಟೀಕಿಸಿದೆ.

ಈ ಬಾರಿಯ ಜಿ–20 ಅಧ್ಯಕ್ಷತೆ ವಹಿಸುವ ಅವಕಾಶ ಭಾರತಕ್ಕೆ ಲಭಿಸಿದ ಹಿನ್ನೆಲೆಯಲ್ಲಿ ಜಿ20 ಲಾಂಛನ, ಧ್ಯೇಯ ವಾಕ್ಯ ಹಾಗೂ ವೆಬ್‌ಸೈಟ್ ಅನ್ನು ಪ್ರಧಾನಿ ಮೋದಿ ಅವರು ಅನಾವರಣಗೊಳಿಸಿದ ಮರು ದಿನವೇ ಕಾಂಗ್ರೆಸ್, ಟೀಕಾ ಪ್ರಹಾರ ನಡೆಸಿದೆ.

ಕಾಂಗ್ರೆಸ್ ಟೀಕೆಗೆ ಎದಿರೇಟು ನೀಡಿರುವ ಬಿಜೆಪಿ, ಕಾಂಗ್ರೆಸ್ ನೇತೃತ್ವದ ಸರ್ಕಾರವಿರುವಾಗಲೇ 1950ರಲ್ಲಿ ಕಮಲವನ್ನು ರಾಷ್ಟ್ರೀಯ ಪುಷ್ಪವೆಂದು ಘೋಷಿಸಲಾಗಿದೆ. ಇಷ್ಟೊಂದು ಹಳೆಯದಾದ ಪಕ್ಷವು ಪ್ರತಿಯೊಂದು ರಾಷ್ಟ್ರೀಯ ಲಾಂಛನದ ಬಗ್ಗೆ ಏಕೆ ಇಷ್ಟೊಂದು ಕೀಳಾಗಿ ನಡೆದುಕೊಳ್ಳುತ್ತಿದೆ ಎಂದು ಪ್ರಶ್ನಿಸಿದೆ.

‘ಜಿ20 ಲಾಂಛನವು ದೇಶದ ರಾಷ್ಟ್ರಧ್ವಜದ ಕೇಸರಿ, ಬಿಳಿ ಮತ್ತು ಹಸಿರು ಮತ್ತು ನೀಲಿ ಬಣ್ಣಗಳಿಂದ ಪ್ರೇರಣೆ ಪಡೆದಿದೆ. ಇದು ಭಾರತದ ರಾಷ್ಟ್ರೀಯ ಪುಷ್ಪ ಕಮಲದೊಂದಿಗೆ ಭೂಗ್ರಹವನ್ನು, ಸವಾಲುಗಳ ಮಧ್ಯೆ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

‘2.49 ಲಕ್ಷ ಮತದಾರರು ಶತಾಯುಷಿಗಳು’

ಪುಣೆ: ಭಾರತದಲ್ಲಿ 100 ವರ್ಷ ಮೇಲ್ಪಟ್ಟ 2.49 ಲಕ್ಷ ಮತದಾರರಿದ್ದಾರೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹೇಳಿದ್ದಾರೆ.

ಮಹಾರಾಷ್ಟ್ರದ ಪುಣೆ ನಗರದಲ್ಲಿ ಮತದಾರ ಪಟ್ಟಿಗೆ ಹೆಸರನ್ನು ಸೇರಿಸುವ ಕುರಿತಂತೆ ಜನಜಾಗೃತಿ ಮೂಡಿಸಲು ಹಮ್ಮಿಕೊಳ್ಳಲಾಗಿದ್ದ ಸೈಕಲ್ ರ‍್ಯಾಲಿ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ 1.80 ಕೋಟಿ ಮತದಾರರು 80 ವರ್ಷ ಮೇಲ್ಪಟ್ಟವರು ಎಂದಿದ್ದಾರೆ.

ಮತದಾರ ಪಟ್ಟಿಗೆ ಸೇರ್ಪಡೆ ಚಟುವಟಿಕೆ ವೇಗಗೊಳಿಸುವ ಕುರಿತು ಮಾತನಾಡಿದ ಅವರು, ಹಿಮಾಲಯದಿಂದ ದಕ್ಷಿಣದ 6,000 ಕಿಮೀ ಕರಾವಳಿ, ಪಶ್ಚಿಮ ಮತ್ತು ಪೂರ್ವದ ಮರುಭೂಮಿಗಳು ಸೇರಿ ನಮ್ಮ ಪಟ್ಟಿಯಲ್ಲಿ ಸುಮಾರು 2.49 ಲಕ್ಷ ಮತದಾರರು 100 ವರ್ಷ ದಾಟಿದ್ದಾರೆ. ಅವರ ಜೊತೆ ಮಾತನಾಡಿದಾಗ, ಅವರು ತಮ್ಮ ಜೀವನದುದ್ದಕ್ಕೂ ಮತ ಚಲಾಯಿಸುತ್ತಿರುವುದನ್ನು ಕೇಳಿ ಸಮಾಧಾನ ಮತ್ತು ಸಂತೋಷವಾಗುತ್ತದೆ’ಎಂದು ಹೇಳಿದರು.

ಆರೋಪಿಗಳ ಖುಲಾಸೆ ಪ್ರಶ್ನಿಸಿದ್ದ ಅರ್ಜಿ ವಜಾ

ಲಖನೌ (ಪಿಟಿಐ): ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಸೇರಿದಂತೆ 32 ಆರೋಪಿಗಳನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

‘ಅರ್ಜಿದಾರರನ್ನು ಸಂತ್ರಸ್ತರೆಂದು ಪರಿಗಣಿಸಲು ಆಗುವುದಿಲ್ಲ. ಪ್ರಕರಣ ಸಂಬಂಧ ಅರ್ಜಿ ಸಲ್ಲಿಸುವ ಹಕ್ಕು ಅವರಿಗೆ ಇಲ್ಲ. ಹೀಗಾಗಿ ಅರ್ಜಿಯನ್ನು ವಜಾಗೊಳಿಸುತ್ತಿದ್ದೇವೆ’ ಎಂದು ನ್ಯಾಯಾಧೀಶರಾದ ರಮೇಶ್ ಸಿನ್ಹಾ ಮತ್ತು ಸರೋಜ್ ಯಾದವ್ ಅವರನ್ನೊಳಗೊಂಡ ಲಖನೌ ವಿಭಾಗೀಯ ನ್ಯಾಯಪೀಠ ಹೇಳಿದೆ.

ಅಯೋಧ್ಯೆ ನಿವಾಸಿಗಳಾದ ಹಾಜಿ ಮಹಮೂದ್ ಅಹ್ಮದ್ ಮತ್ತು ಸೈಯದ್ ಅಖ್ಲಾಕ್ ಅಹ್ಮದ್ ಅವರು ಖುಲಾಸೆ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ತಾವು ಮಸೀದಿ ಧ್ವಂಸ ಪ್ರಕರಣದ ಸಂತ್ರಸ್ತರು ಎಂದು ಅರ್ಜಿಯಲ್ಲಿ ತಿಳಿಸಿದ್ದರು.

ಅರ್ಜಿದಾರರು ಈ ಪ್ರಕರಣದಲ್ಲಿ ದೂರುದಾರರು ಅಥವಾ ಸಂತ್ರಸ್ತರಲ್ಲ. ಆದ್ದರಿಂದ ವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಅಪರಿಚಿತರಂತೆ ಮೇಲ್ಮನವಿ ಸಲ್ಲಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಮತ್ತು ಸಿಬಿಐ ತನ್ನ ಆಕ್ಷೇಪಣೆಯಲ್ಲಿ ಒತ್ತಿ ಹೇಳಿತ್ತು.

ಅಮಾನ್ಯೀಕರಣ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ನ.24ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): 2016ರ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡಿದ್ದ ‘ನೋಟು ಅಮಾನ್ಯೀಕರಣ’ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನವೆಂಬರ್ 24ಕ್ಕೆ ಮುಂದೂಡಿದೆ.

ಈ ವಿಷಯದ ಕುರಿತು ಸಮಗ್ರವಾದ ಅಫಿಡವಿಟ್ ಸಲ್ಲಿಸಲು ಒಂದು ವಾರ ಸಮಯಾವಕಾಶ ನೀಡುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಕೋರ್ಟ್‌ಗೆ ಮನವಿ ಮಾಡಿಕೊಂಡರು. ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಎಸ್.ಎ. ನಜೀರ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠವು ವಿಚಾರಣೆಯನ್ನು ಮುಂದೂಡಿತು.

ಸಮಗ್ರವಾದ ಅಫಿಡವಿಟ್ಟನ್ನು ಸಲ್ಲಿಸಲು ಸಾಧ್ಯವಾಗದ ಕಾರಣ ವೆಂಕಟರಮಣಿ ಅವರು ಕೋರ್ಟ್‌ಗೆ ಕ್ಷಮೆಯನ್ನೂ ಯಾಚಿಸಿದರು.

ವಿಚಾರಣೆ ಮುಂದೂಡುವಂತೆ ಸಾಂವಿಧಾನಿಕ ಪೀಠಕ್ಕೆ ಮನವಿ ಮಾಡಿರುವುದು ಮುಜುಗರದ ವಿಷಯ ಎಂದು ಪ್ರತ್ಯೇಕ ಅರ್ಜಿದಾರರ ಪರವಾಗಿ ಕೋರ್ಟ್‌ನಲ್ಲಿ ಹಾಜರಿದ್ದ ಹಿರಿಯ ವಕೀಲರಾದ ಶ್ಯಾಮ್ ದಿವಾನ್ ಮತ್ತು ಪಿ. ಚಿದಂಬರಂ ಅವರು ಕೋರ್ಟ್‌ಗೆ ಹೇಳಿದರು. ಸಾಂವಿಧಾನಿಕ ಪೀಠದ ಸದ್ಯರಾಗಿರುವ ನ್ಯಾಯಮೂರ್ತಿ ನಾಗರತ್ನ ಅವರು ಈ ಹೇಳಿಕೆಯನ್ನು ಅನುಮೋದಿಸಿದರು.

ಹಣ ಅಕ್ರಮ ವರ್ಗಾವಣೆ: ಸಂಜಯ್ ರಾವುತ್‌ಗೆ ಜಾಮೀನು

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಸಂಸದ ಸಂಜಯ್ ರಾವುತ್ ಅವರಿಗೆ ಮುಂಬೈನ ವಿಶೇಷ ನ್ಯಾಯಾಲಯವೊಂದು ಬುಧವಾರ ಜಾಮೀನು ಮಂಜೂರು ಮಾಡಿತು.

ಮುಂಬೈನ ಅರ್ಥರ್ ರಸ್ತೆ ಜೈಲಿನಲ್ಲಿ ರಾವುತ್ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು. ಬುಧವಾರ ಸಂಜೆ ಸುಮಾರು 5 ಗಂಟೆಗೆ ಅವರು ಜೈಲಿನಿಂದ ಹೊರಬಂದರು. ರಾವುತ್ ಅವರ ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ಜೈಲಿನೆದುರು ನೆರೆದಿದ್ದರು. ಅವರ ಬಿಡುಗಡೆಯನ್ನು ಘೋಷಣೆ ಕೂಗುವ ಮತ್ತು ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿದರು.

₹1,034 ಕೋಟಿ ಮೊತ್ತದ ಪತ್ರಾ ಚಾಳ್ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಹಣ ಅಕ್ರಮ ಮೊಕದ್ದಮೆಯಲ್ಲಿ ರಾವುತ್ ಅವರನ್ನು ಆಗಸ್ಟ್ 1ರಂದು ಇ.ಡಿ ಬಂಧಿಸಿತ್ತು.

ಇ.ಡಿ ಮನವಿ: ರಾವುತ್ ಅವರಿಗೆ ಜಾಮೀನು ಮಂಜೂರಾಗುತ್ತಿದ್ದಂತೆ ಹಲವಾರು ಬೆಳವಣಿಗೆಗಳು ನಡೆದವು. ಜಾಮೀನು ಆದೇಶವನ್ನು ಶುಕ್ರವಾರದ ವರೆಗೂ ಕಾರ್ಯರೂಪಕ್ಕೆ ತರದಂತೆ ವಿಶೇಷ ನ್ಯಾಯಾಲಯಕ್ಕೆ ಇ.ಡಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ತಿರಸ್ಕೃತಗೊಂಡ ಕೂಡಲೇ ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ ಇ.ಡಿ, ವಿಶೇಷ ನ್ಯಾಯಾಲಯದ ಆದೇಶಕ್ಕೆ ತಕ್ಷಣ ತಡೆ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿತು.

ಈ ಅರ್ಜಿ ತಿರಸ್ಕರಿಸಿದ ಬಾಂಬೆ ಹೈಕೋರ್ಟ್, ಎರಡೂ ಕಡೆಯ ವಾದವನ್ನು ಆಲಿಸದೇ ಜಾಮೀನಿಗೆ ತಡೆ ನೀಡಿ ಆದೇಶ ಹೊರಡಿಸಲಾಗುವುದಿಲ್ಲ ಎಂದಿತು. ಈ ಕುರಿತ ಮುಂದಿನ ವಿಚಾರಣೆಯನ್ನು ಕೋರ್ಟ್ ಗುರುವಾರಕ್ಕೆ ನಿಗದಿಪಡಿಸಿದೆ.

ಕೇರಳ: ವಿ.ವಿ ಕಾಯ್ದೆಗೆ ತಿದ್ದುಪಡಿ– ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಕುಲಾಧಿಪತಿ ಹುದ್ದೆ: ರಾಜ್ಯಪಾಲರ ತೆಗೆಯಲು ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿ ಹುದ್ದೆಯಿಂದ ರಾಜ್ಯಪಾಲರನ್ನು ತೆಗೆದುಹಾಕಲು ಅನುಕೂಲವಾಗುವಂತೆ ವಿ.ವಿ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತರಲು ಕೇರಳ ಸರ್ಕಾರ ಬುಧವಾರ ನಿರ್ಧರಿಸಿದೆ.

ಅಲ್ಲದೇ, ಶೈಕ್ಷಣಿಕ ಕ್ಷೇತ್ರದ ತಜ್ಞರನ್ನು ಕುಲಾಧಿಪತಿಗಳ ಹುದ್ದೆಗೆ ನೇಮಕ ಮಾಡುವುದು ಸಹ ಈ ತಿದ್ದುಪಡಿಯ ಉದ್ದೇಶವಾಗಿದೆ. ಈ ಸಂಬಂಧ ಸುಗ್ರೀವಾಜ್ಞೆಯನ್ನು ಹೊರಡಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಈ ನಿರ್ಧಾರ ಕುರಿತು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ಬಿಡುಗಡೆ ಮಾಡಿದೆ. ‘ರಾಜ್ಯಪಾಲರು ಸಾಂವಿಧಾನಿಕ ಕರ್ತವ್ಯಗಳನ್ನು ನಿಭಾಯಿಸಬೇಕು. ಹೀಗಾಗಿ ಅವರನ್ನು ವಿಶ್ವವಿದ್ಯಾಲಯಗಳ ಕುಲಾಧಿಪತಿಗಳನ್ನಾಗಿ ನೇಮಕ ಮಾಡುವುದು ಸಮಂಜಸವಲ್ಲ ಎಂಬ ಪುಂಛಿ ಆಯೋಗದ ಶಿಫಾರಸಿನಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಇದರೊಂದಿಗೆ ರಾಜ್ಯಪಾಲ ಹಾಗೂ ಸರ್ಕಾರದ ನಡುವಿನ ಸಂಘರ್ಷ ಹೊಸ ಘಟ್ಟ ತಲುಪಿದಂತಾಗಿದೆ. ಇನ್ನೊಂದೆಡೆ, ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರ ನಡೆ ಏನಾಗಿರಲಿದೆ ಎಂಬುದು ಮುಖ್ಯವಾಗಲಿದೆ.

ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಬದಲಿಸುವುದಕ್ಕೆ ಸಂಬಂಧಿಸಿ, ವಿ.ವಿ.ಗಳ ಕಾಯ್ದೆಗೆ ತಿದ್ದುಪಡಿ ತಂದ ಮಸೂದೆಗಳಿಗೆ ಎರಡು ತಿಂಗಳಾದರೂ ರಾಜ್ಯಪಾಲ ಖಾನ್ ಅವರು ಅಂಕಿತ ಹಾಕಿಲ್ಲ ಎಂಬುದು ಗಮನಾರ್ಹ.

ತಮಿಳುನಾಡು ರಾಜ್ಯಪಾಲರ ವಜಾಕ್ಕೆ ಆಗ್ರಹ

ಚೆನ್ನೈ (ಪಿಟಿಐ): ತಮಿಳುನಾಡು ರಾಜ್ಯಪಾಲರನ್ನು ವಜಾ ಮಾಡಿ ಎಂದು ಆಡಳಿತರೂಢ ಡಿಎಂಕೆ ಪಕ್ಷ ರಾಷ್ಟ್ರಪತಿಗಳಿಗೆ ಪತ್ರ ಬರೆದಿದೆ. ರಾಜ್ಯಪಾಲ ಆರ್.ಎನ್ ರವಿ ‘ಶಾಂತಿಭಂಗ‘ಕ್ಕೆ ಕಾರಣವಾಗುತ್ತಿದ್ದಾರೆ ಎಂದು ಡಿಎಂಕೆ ಆರೋಪಿಸಿದೆ.

‘ಸಂವಿಧಾನ ಬದ್ಧವಾಗಿ ಆಯ್ಕೆಯಾದ ಸರ್ಕಾರಕ್ಕೆ ಜನರ ಸೇವೆ ಮಾಡಲು ರಾಜ್ಯಪಾಲರು ಅಡ್ಡಿಪಡಿಸುತ್ತಿದ್ದಾರೆ. ಅವರು ಕೋಮು ದ್ವೇಷವನ್ನು ಪ್ರಚೋದಿಸುತ್ತಿದ್ದಾರೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ ಪತ್ರದಲ್ಲಿ ಡಿಎಂಕೆ ಆರೋಪಿಸಿದೆ.

‘ಸಂವಿಧಾನವನ್ನು ರಕ್ಷಣೆ ಮಾಡುತ್ತೇನೆ ಎಂದು ಪ್ರತಿಜ್ಞೆ ಸ್ವೀಕಾರ ಮಾಡಿರುವ ಅವರು ಅದನ್ನು ಪಾಲನೆ ಮಾಡುತ್ತಿಲ್ಲ. ವಿಧಾನಸಭೆಯಲ್ಲಿ ಅನುಮೋದನೆ ಪಡೆದುಕೊಂಡ ಮಸೂದೆಗಳಿಗೆ ಒಪ್ಪಿಗೆ ನೀಡಲು ತಡ ಮಾಡುತ್ತಿದ್ದಾರೆ’ ಎಂದು ಡಿಎಂಕೆ ಅಸಮಾಧಾನ ವ್ಯಕ್ತಪಡಿಸಿದೆ. ‘ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ವೇಳೆ ಅವರು ನೀಡುವ ಹೇಳಿಕೆಗಳು ಕೆಲವೊಮ್ಮೆ ದೇಶದ್ರೋಹ ಹೇಳಿಕೆ ಎಂದು ಪರಿಗಣಿಸಬಹುದು‘ ಎಂದು ಹೇಳಿರುವ ಡಿಎಂಕೆ, ರಾಜ್ಯಪಾಲ ಆರ್.ಎನ್. ರವಿಯವರು ಸಾಂವಿಧಾನಿಕ ಹುದ್ದೆಯಲ್ಲಿ ಮುಂದುವರಿಯಲು ಅನರ್ಹರು. ಅವರನ್ನು ಕಿತ್ತು ಹಾಕಬೇಕು‘ ಎಂದು ಆಗ್ರಹಿಸಿದೆ.

ಕರ್ನಾಟಕದ ನಾಲ್ಕು ಆನೆಗಳು ಪಿಲಿಭಿತ್ ಹುಲಿ ರಕ್ಷಿತಾರಣ್ಯಕ್ಕೆ

ಪಿಲಿಭಿತ್ (ಪಿಟಿಐ): ಉತ್ತರ ಪ್ರದೇಶ ಸರ್ಕಾರವು ತನ್ನ ಪಿಲಿಭಿತ್ ರಕ್ಷಿತಾರಣ್ಯಕ್ಕೆ (ಪಿಟಿಆರ್) ಬಿಡಲು ಬುಧವಾರ ಕರ್ನಾಟಕದಿಂದ ನಾಲ್ಕು ಆನೆಗಳನ್ನು ಪಡೆದುಕೊಂಡಿದೆ.

ಕಾಡಿನ ಪಕ್ಕದ ಹಳ್ಳಿಗಳಲ್ಲಿ ಮಾನವ- ವನ್ಯಜೀವಿ ಸಂಘರ್ಷ ಪರೀಕ್ಷಿಸಲು ಆನೆಗಳನ್ನು ತರಲಾಗಿದೆ. ಗಸ್ತು ಮೂಲಕ ಆನೆಗಳ ಚಲನವಲನದ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ಪಿಟಿಆರ್ ಉಪ ನಿರ್ದೇಶಕ ನವೀನ್ ಖಂಡೇಲ್‌ವಾಲ್ ಹೇಳಿದ್ದಾರೆ.

ನಿಸರ್ಗ (12), ಮಣಿಕಂಠ (8) ಹೆಸರಿನ ಎರಡು ಆನೆಗಳು ಮತ್ತು ಏಳು ಹಾಗೂ 14 ವರ್ಷದ ಇನ್ನೆರಡು ಆನೆಗಳನ್ನು ಉತ್ತರಪ್ರದೇಶ ಅರಣ್ಯ ಸಚಿವ ಅರುಣ್ ಸಕ್ಸೇನಾ ಅವರು ಮಾಲಾ ವಲಯದಲ್ಲಿ ಸ್ವಾಗತಿಸಿ, ಪೂಜೆ ಸಲ್ಲಿಸಿದರು. ಈ ಆನೆಗಳು ಪ್ರವಾಸಿಗರನ್ನು ಆಕರ್ಷಿಸಲು ನೆರವಾಗಲಿವೆ ಎಂದು ಹೇಳಿದರು.

ಗುರುವಾರ, ನವೆಂಬರ್ 10, 2022 | ₹ 6.00
www.prajavani.net
f /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೌನಿ ಮೋಡಿ
ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಮೌನಿ ರಾಯ್ ಪಾಲ್ಗೊಂಡಿದ್ದರು

ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಸಲ್ಲಿಕೆಯಾದ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ

‘ಪ್ರಜ್ಞೆ ತಪ್ಪಿಸಿ ಅತ್ಯಾಚಾರ ಎಸಗುತ್ತಿದ್ದರು...’

• ಜಿ.ಬಿ. ನಾಗರಾಜ

ಚಿತ್ರದುರ್ಗ: ‘ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿನಿಯರನ್ನು ಪುಸಲಾಯಿಸಿ ರಾತ್ರಿ ವೇಳೆ ಬೆಡ್‌ರೂಂಗೆ ಕರೆಸಿಕೊಳ್ಳುತ್ತಿದ್ದರು. ಚಾಕೊಲೇಟ್ ರೂಪದ ಅಮಲು ಪದಾರ್ಥ ನೀಡಿ ಪ್ರಜ್ಞೆ ತಪ್ಪಿಸುತ್ತಿದ್ದರು. ಲೈಂಗಿಕ ಬಲಾತ್ಕಾರ ಎಸಗಿ ದೈಹಿಕ ಆಸೆ ತೀರಿಸಿಕೊಳ್ಳುತ್ತಿದ್ದರು. ಎಚ್ಚರವಾದ ಬಳಿಕ ಬೆದರಿಕೆ ಹಾಕುತ್ತಿದ್ದರು...’

ಶಿವಮೂರ್ತಿ ಮುರುಘಾ ಶರಣರು

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸಿದ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದು ಹೀಗೆ.

ಅತ್ಯಾಚಾರ ಆರೋಪ, ಪೋಕ್ಸೊ, ಎಸ್‌.ಸಿ ಮತ್ತು ಎಸ್‌.ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣದ ತನಿಖೆಯನ್ನು ಪೊಲೀಸರು ಭಾಗಶಃ ಪೂರ್ಣಗೊಳಿಸಿದ್ದಾರೆ.

‘2018ರಲ್ಲಿ 7ನೇ ತರಗತಿಗೆ ಪ್ರವೇಶ ಪಡೆದಿದ್ದ 17 ವರ್ಷದ ಸಂತ್ರಸ್ತೆಯು, ಮಠದ ಆವರಣದಲ್ಲಿದ್ದ ಹಾಸ್ಟೆಲ್‌ನಲ್ಲಿ ಆಶ್ರಯ ಪಡೆದಿದ್ದಳು. ಮಠದ ಪೀಠಾಧ್ಯಕ್ಷರಾಗಿರುವ ಪ್ರಕರಣದ ಮೊದಲ ಆರೋಪಿಯು ವಿದ್ಯಾರ್ಥಿನಿಯರು ಮತ್ತು ಅವರ ಕುಟುಂಬದ ಮೇಲೆ ಅನುಕಂಪ ತೋರಿ ಗೌರವ ಹಾಗೂ ವಿಶ್ವಾಸ ಗಳಿಸುತ್ತಿದ್ದರು. ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ರಾತ್ರಿ ವೇಳೆ ಒಬ್ಬರೇ ಇರುವ ಸಂದರ್ಭದಲ್ಲಿ ಬೆಡ್‌ರೂಂಗೆ ವಿದ್ಯಾರ್ಥಿನಿಯರನ್ನು ಕರೆಸಿಕೊಳ್ಳುತ್ತಿದ್ದರು. 2018 ಮತ್ತು 2020ರಲ್ಲಿ ಹಲವು ಬಾರಿ ಹೀಗೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ’ ಎಂಬುದು ತನಿಖೆಯ ವೇಳೆ ತಿಳಿದುಬಂದಿದೆ ಎಂದು ಪೊಲೀಸರು ಉಲ್ಲೇಖಿಸಿದ್ದಾರೆ.

‘16 ವರ್ಷದ ಮತ್ತೊಬ್ಬ ಸಂತ್ರಸ್ತ ವಿದ್ಯಾರ್ಥಿನಿಯನ್ನು 2021 ಹಾಗೂ 2022ರಲ್ಲಿ ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳಲಾಗಿದೆ. 2ನೇ ಆರೋಪಿಯಾಗಿರುವ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಹಾಗೂ 4ನೇ ಆರೋಪಿಯಾದ ಮಠದ ವ್ಯವಸ್ಥಾಪಕ ಪರಮಶಿವಯ್ಯ ಈ ಕೃತ್ಯಕ್ಕೆ ಸಹಕರಿಸಿದ್ದಾರೆ. ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾರೆ’ ಎಂಬ ಅಂಶ ದೋಷಾರೋಪ ಪಟ್ಟಿಯಲ್ಲಿದೆ.

ಪ್ರತ್ಯೇಕ ದೋಷಾರೋಪ ಪಟ್ಟಿ ಏಕೆ?: ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರ ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಅ.27ರಂದು ಎರಡು ದೋಷಾರೋಪ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. 331 ಹಾಗೂ 347 ಪುಟಗಳ ಎರಡು ಪ್ರತ್ಯೇಕ ದೋಷಾರೋಪ ಪಟ್ಟಿಯ ಬಗ್ಗೆ ನ್ಯಾಯಾಲಯ ಸ್ಪಷ್ಟನೆ ಕೇಳಿತ್ತು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯ ವ್ಯಾಪ್ತಿಯಡಿ ಒಬ್ಬ ಬಾಲಕಿ ಬರುವುದರಿಂದ ಪ್ರತ್ಯೇಕ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾಗಿ ತನಿಖಾಧಿಕಾರಿಯು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದ್ದರು.

84 ಸಾಕ್ಷ್ಯಗಳ ಸಂಗ್ರಹ: ಪ್ರಕರಣದ ತನಿಖೆ ನಡೆಸಿದ ಪೊಲೀಸರು 84 ಸಾಕ್ಷ್ಯಗಳನ್ನು ಕಲೆಹಾಕಿದ್ದಾರೆ. ಮಠದಲ್ಲಿ ಕೆಲಸ ಮಾಡುವವರು, ಶಿಕ್ಷಕಿಯರು, ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡಿದವರೂ ಸೇರಿದಂತೆ ಹಲವರು ತನಿಖೆಯ ವೇಳೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ಎಲ್ಲ ಸಾಕ್ಷಿಗಳ ಹೆಸರು ಸಹಿತ ವಿವರವನ್ನು ತನಿಖಾಧಿಕಾರಿ ದೋಷಾರೋಪ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ನೀಡಿದ್ದಾರೆ.

ಮೂವರ ವಿರುದ್ಧ ದೋಷಾರೋಪ

ಸಂತ್ರಸ್ತ ವಿದ್ಯಾರ್ಥಿನಿಯರು ಐವರು ಆರೋಪಿಗಳ ವಿರುದ್ಧ ದೂರು ದಾಖಲಿಸಿದ್ದರು. ತನಿಖೆಯ ಸಂದರ್ಭದಲ್ಲಿ ಮೂವರ ಮೇಲಿನ ಆರೋಪಕ್ಕೆ ಪೂರಕ ಸಾಕ್ಷ್ಯ ಲಭ್ಯವಾಗಿವೆ.

ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರು, ಹಾಸ್ಟೆಲ್‌ನ ಮಹಿಳಾ ವಾರ್ಡನ್ ಹಾಗೂ ಮಠದ ವ್ಯವಸ್ಥಾಪಕ ಪರಮಶಿವಯ್ಯ ಅವರ ವಿರುದ್ಧದ ಆರೋಪಕ್ಕೆ ತನಿಖೆಯಲ್ಲಿ ಸಾಕ್ಷ್ಯಗಳು ದೊರೆತಿವೆ. 17 ವರ್ಷದ ಬಾಲಕ ಹಾಗೂ ಗಂಗಾಧರಯ್ಯ ಎಂಬುವವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದ ಪೂರಕ ಸಾಕ್ಷ್ಯಗಳು ಸಿಕ್ಕಿಲ್ಲ ಎಂಬುದಾಗಿ ದೋಷಾರೋಪ ಪಟ್ಟಿಯಲ್ಲಿ ತನಿಖಾಧಿಕಾರಿ ಉಲ್ಲೇಖಿಸಿದ್ದಾರೆ.

‘ಧಾರ್ಮಿಕ ಸಂಸ್ಥೆ ದುರ್ಬಳಕೆ’

ಮಠದ ಆವರಣದಲ್ಲಿ ಲೈಂಗಿಕ ಕ್ರಿಯೆ ನಡೆಸುವ ಮೂಲಕ ಶಿವಮೂರ್ತಿ ಮುರುಘಾ ಶರಣರು ಧಾರ್ಮಿಕ ಸಂಸ್ಥೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ತನಿಖಾಧಿಕಾರಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಧಾರ್ಮಿಕ ಸಂಸ್ಥೆಯ ದುರ್ಬಳಕೆ ತಡೆ ಕಾಯ್ದೆಯ ಸೆಕ್ಷನ್‌- 3 (ಎಫ್) ಮತ್ತು ಸೆಕ್ಷನ್‌- 7ರ ಸ್ಪಷ್ಟ ಉಲ್ಲಂಘನೆಯಾಗಿದ್ದು, ಇದರ ಅಡಿಯಲ್ಲಿ ದೋಷಾರೋಪ ದಾಖಲಿಸಿದ್ದಾರೆ.

‘ಬಟ್ಟೆ ಬಿಚ್ಚಿಸಿ ತಬ್ಬಿಕೊಳ್ಳುತ್ತಿದ್ದರು..’

‘ರಾತ್ರಿ ಟ್ಯೂಷನ್ ಅವಧಿ ಮುಗಿದ ಬಳಿಕ, ಕಸ ಗುಡಿಸುವ ನೆಪದಲ್ಲಿ ನಮ್ಮನ್ನು ಕೊಠಡಿಯಲ್ಲಿ ಉಳಿಸಿಕೊಳ್ಳುತ್ತಿದ್ದರು. ಪಕ್ಕದಲ್ಲಿ ಕೂರಿಸಿಕೊಂಡು ಹಣ್ಣು ನೀಡುತ್ತಿದ್ದರು. ಬಟ್ಟೆ ಬಿಚ್ಚಲು ಹೇಳಿ ತಬ್ಬಿಕೊಳ್ಳುತ್ತಿದ್ದರು....’

ಸಂತ್ರಸ್ತ ವಿದ್ಯಾರ್ಥಿನಿಯೊಬ್ಬರು ತನಿಖಾಧಿಕಾರಿ ಎದುರು ನೀಡಿದ ಹೇಳಿಕೆ ಇದು. ಆರೋಪಿ ಮದ್ಯ ಸೇವನೆ ಮಾಡುತ್ತಿದ್ದರು, ಬೆನ್ನು ಉಜ್ಜಿಸಿಕೊಳ್ಳುವ ನೆಪದಲ್ಲಿ ಸ್ನಾನದ ಕೊಠಡಿಗೆ ಕರೆಸಿಕೊಳ್ಳುತ್ತಿದ್ದರು ಎಂಬ ಸಂಗತಿಯನ್ನು ಸಂತ್ರಸ್ತೆ ತಿಳಿಸಿದ್ದಾಳೆ.

‘ಕೊಠಡಿಗೆ ಯಾರು ಹೋಗಬೇಕು ಎಂಬ ಚೀಟಿಯನ್ನು ಶಿವಮೂರ್ತಿ ಮುರುಘಾ ಶರಣರು ಮಹಿಳಾ ವಾರ್ಡನ್‌ಗೆ ನೀಡುತ್ತಿದ್ದರು. ಆ ಪ್ರಕಾರವಾಗಿ ಒಬ್ಬೊಬ್ಬರು ಒಂದೊಂದು ದಿನ ತೆರಳಬೇಕಿತ್ತು. ಒಂದು ವೇಳೆ ಹೋಗದೇ ಇದ್ದರೆ ಎಲ್ಲರನ್ನೂ ಶಿಕ್ಷೆಗೆ ಗುರಿ ಮಾಡಲಾಗುತ್ತಿತ್ತು’ ಎಂದು ಬಾಲಕಿ ಹೇಳಿದ್ದಾಳೆ.

ಸುದ್ದಿ 2 ನಿಮಿಷ

‘ಕುಚಲಕ್ಕಿ ಭತ್ತಕ್ಕೆ ₹ 500 ಪ್ರೋತ್ಸಾಹಧನ’

ಕಾರವಾರ: ‘ಕರಾವಳಿ ಜಿಲ್ಲೆಗಳಿಗೆ ಪಡಿತರ ವ್ಯವಸ್ಥೆಯಡಿ ಕುಚಲಕ್ಕಿ ವಿತರಿಸಲು ಖರೀದಿಸುವ ಪ್ರತಿ ಕ್ವಿಂಟಲ್ ಭತ್ತಕ್ಕೆ ₹ 500 ಪ್ರೋತ್ಸಾಹ ಧನ ನೀಡಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರತಿ ಕ್ವಿಂಟಲ್ ಭತ್ತಕ್ಕೆ ₹ 2,040 ಬೆಂಬಲ ಬೆಲೆ ನಿಗದಿ ಮಾಡಲಾಗಿದೆ. ಆದರೆ, ಕುಚಲಕ್ಕಿಗೆ ಬಳಸುವ ಭತ್ತವನ್ನು ಕೇರಳ ರಾಜ್ಯದ ಪಡಿತರ ವ್ಯವಸ್ಥೆಯಡಿ ₹ 2,220ರಂತೆ ಖರೀದಿಸಲಾಗುತ್ತಿದೆ. ನಮ್ಮ ರಾಜ್ಯದ ಹಲವು ರೈತರು ಆ ರಾಜ್ಯಕ್ಕೆ ಭತ್ತ ಮಾರಾಟ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲೂ ಕುಚಲಕ್ಕಿಯ ಭತ್ತಕ್ಕೆ ಸೀಮಿತವಾಗಿ ₹ 500 ಪ್ರೋತ್ಸಾಹ ಧನ ನೀಡಿ ಒಟ್ಟು ₹ 2,540ರಂತೆ ಖರೀದಿಸಲಾಗುವುದು. ಖರೀದಿ ಕೇಂದ್ರಗಳನ್ನು ಶೀಘ್ರವೇ ಆರಂಭಿಸಲಾಗುತ್ತದೆ. ಆದ್ದರಿಂದ ರೈತರು ತರಾತುರಿಯಲ್ಲಿ ಭತ್ತ ಮಾರಾಟ ಮಾಡಬಾರದು’ ಎಂದು ಮನವಿ ಮಾಡಿದರು.

ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ: ಡಿಸೆಂಬರ್ ಗಡುವು

ದಾವಣಗೆರೆ: ನೌಕರರು ಡಿಸೆಂಬರ್ ಅಂತ್ಯದೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂದು ರಾಜ್ಯ ಸರ್ಕಾರ ಗಡುವು ನೀಡಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ಸರ್ಕಾರ, ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೆ ಸೇವಾ ಬಡ್ತಿ, ವೇತನ ಬಡ್ತಿಯನ್ನು ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. 50 ವರ್ಷ ದಾಟಿದ ನೌಕರರಿಗೆ ಈ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

‘ಕಂಪ್ಯೂಟರ್ ಜ್ಞಾನ ಈಗಿನ ಕಾಲಕ್ಕೆ ಅನಿವಾರ್ಯ. ಸರ್ಕಾರಿ ನೌಕರರಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಕಡ್ಡಾಯ ಮಾಡಿದ್ದು ತಪ್ಪಲ್ಲ. ಆದರೆ, ಸೂಕ್ತ ತರಬೇತಿ ನೀಡುವ ವ್ಯವಸ್ಥೆಯಾಗಬೇಕು’ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ. ಫಾಲಾಕ್ಷಿ ಹೇಳಿದರು.

ಚಿನ್ನದ ದೋಸೆಗೆ ₹1 ಸಾವಿರ!

ತುಮಕೂರು: ಒಂದು ಮಸಾಲೆ ದೋಸೆಯ ಬೆಲೆ ಬರೋಬ್ಬರಿ ₹1 ಸಾವಿರ ರೂಪಾಯಿ! ಇದು ಸಾಮಾನ್ಯ ದೋಸೆಯಲ್ಲ; ನಿಜವಾಗಿಯೂ ಚಿನ್ನದ ದೋಸೆ!

– ಇಲ್ಲಿಯ ಗಾಂಧಿನಗರದಲ್ಲಿರುವ ಉಡುಪಿ ಶ್ರೀಕೃಷ್ಣ ಭೋಜನಾಲಯದಲ್ಲಿ ಒಂದು ದೋಸೆ ಬೆಲೆ ₹1,001! ಎಣ್ಣೆ ಬಳಸದೆ ತುಪ್ಪದಿಂದ ದೋಸೆ ತಯಾರಿಸಿ, ಅದರ ಮೇಲ್ಭಾಗದಲ್ಲಿ ಚಿನ್ನದ ಹಾಳೆ ಅಂಟಿಸಲಾಗುತ್ತದೆ. ಇದಕ್ಕೆ ‘ಗೋಲ್ಡನ್ ಫಾಯಿಲ್ ಎಡಿಬಲ್ ಮಸಾಲ ದೋಸೆ’ ಎಂದು ಹೆಸರಿಡಲಾಗಿದೆ.

ಹೋಟೆಲ್‌ನಲ್ಲಿ ಹೊಸ ಪ್ರಯತ್ನ ನಡೆದಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ದೋಸೆಯ ರುಚಿ ಸವಿದವರು ಬೇರೆಯವರಿಗೂ ಒಮ್ಮೆ ತಿನ್ನುವಂತೆ ಸಲಹೆ ಮಾಡುತ್ತಿದ್ದಾರೆ. ಹೀಗಾಗಿ ಹೋಟೆಲ್‌ಗೆ ಭೇಟಿ ನೀಡಿ, ಚಿನ್ನದ ದೋಸೆ ಕೇಳುವವರ ಸಂಖ್ಯೆ ಹೆಚ್ಚುತ್ತಿದೆ. ಗುಜರಾತ್‌ನಿಂದ ಚಿನ್ನದ ಹಾಳೆ ತರಿಸಲಾಗುತ್ತದೆ.

ತುಮಕೂರಿನ ಉಡುಪಿ ಶ್ರೀಕೃಷ್ಣ ಭೋಜನಾಲಯದಲ್ಲಿ ತಯಾರಿಸಿದ ಚಿನ್ನದ ದೋಸೆ

ಒಮ್ಮೆ 10ರಿಂದ 20 ಚಿನ್ನದ ಹಾಳೆ ಬರುತ್ತವೆ. ದೋಸೆ ಬಿಸಿ ಇರುವಾಗಲೇ ಅದರ ಮೇಲೆ ಹಾಳೆ ರೀತಿಯಲ್ಲಿರುವ ಚಿನ್ನದ ಹಾಳೆ ಅಂಟಿಸಲಾಗುತ್ತದೆ.

‘ಬೆಂಗಳೂರಿನ ಹೋಟೆಲ್ ಒಂದರಲ್ಲಿ ಈ ರೀತಿಯ ಚಿನ್ನದ ದೋಸೆ ತಯಾರಿಸುತ್ತಿದ್ದರು. ಅದರ ಪ್ರೇರಣೆಯಿಂದಾಗಿ ನಾವು ಸಹ ಚಿನ್ನದ ದೋಸೆ ಮಾಡುತ್ತಿದ್ದೇವೆ. ಇದನ್ನು ಸೇವಿಸುವುದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮ ಆಗುವುದಿಲ್ಲ. ಬೇಡಿಕೆ ಬಂದಾಗ ಮಾತ್ರ ಮಾಡಿಕೊಡಲಾಗುತ್ತದೆ’ ಎಂದು ಹೋಟೆಲ್ ಮಾಲೀಕ ಕಾರ್ತಿಕ್ ಹೇಳಿದರು.

ಒಡನಾಡಿ ವಿರುದ್ಧ ದೂರು ನೀಡಿದ ಉಸ್ತುವಾರಿ ಸ್ವಾಮೀಜಿ

ಚಿತ್ರದುರ್ಗ: ‘ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸುವಂತೆ ವಿದ್ಯಾರ್ಥಿನಿಯರಿಗೆ ಪ್ರಚೋದಿಸಲಾಗಿದ್ದು, ಈ ಕುರಿತು ಈ ಬಗ್ಗೆ ತನಿಖೆ ನಡೆಸಬೇಕು’ ಎಂದು ಮುರುಘಾ ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಠದ ಪ್ರೌಢಶಾಲೆಯ ಮಾಜಿ ಉದ್ಯೋಗಿ ಬಸವರಾಜೇಂದ್ರ, ಮುರುಘಾ ಮಠದ ಗಾಯತ್ರಿ, ಮೈಸೂರಿನ ಒಡನಾಡಿ ಸಂಸ್ಥೆಯ ವಿರುದ್ಧ ದೂರು ನೀಡಲಾಗಿದ್ದು, ಇಬ್ಬರು ನಡೆಸಿದ ಸಂಭಾಷಣೆಯ ಆಡಿಯೊವೊಂದನ್ನು ದೂರಿನೊಂದಿಗೆ ಸಲ್ಲಿಸಲಾಗಿದೆ.

‘ಗಾಯತ್ರಿ ಎಂಬುವವರು ಹಣದ ಆಸೆಗೆ ಒಡನಾಡಿ ಸೇವಾ ಸಂಸ್ಥೆ ಜತೆ ಶಾಮೀಲಾಗಿ, ಮಕ್ಕಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಶರಣರ ವಿರುದ್ಧ ವ್ಯವಸ್ಥಿತ ಪಿತೂರಿ ಮಾಡಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸ್ಥಳ ಮಹಜರು: ಎರಡನೇ ಆರೋಪಿ ಹಾಸ್ಟಲ್‌ನ ಮಹಿಳಾ ವಾರ್ಡನ್‌ರನ್ನು ಬುಧವಾರ ಮುರುಘಾ ಮಠಕ್ಕೆ ಕರೆ ತಂದ ಪೊಲೀಸರು, ಎರಡನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರು ನಡೆಸಿದರು.

ಕಾರವಾರ ತಾಲ್ಲೂಕಿನ ಕೈಗಾ ಟೌನ್‌ಶಿಪ್ ಬಳಿ ಕಂಡುಬಂದ ‘ಅಮುರ್ ಫಾಲ್ಕನ್’ ಎಂಬ ವಲಸೆ ಹಕ್ಕಿಯು ಘೋರ ಚಳಿಯಿಂದ ತಪ್ಪಿಸಿಕೊಳ್ಳಲು 22 ಸಾವಿರ ಕಿ. ಮೀ. ದೂರವನ್ನು ಪ್ರತಿವರ್ಷ ಕ್ರಮಿಸುತ್ತದೆ. ಮಂಗೋಲಿಯಾ, ಚೀನಾ ಮತ್ತು ರಷ್ಯಾ ದೇಶಗಳು ಇದರ ಸಾಮಾನ್ಯ ಆವಾಸಸ್ಥಾನ ಚಿತ್ರ: ಸೂರಜ್ ಪ್ರಕಾಶ್

ರಾಜ್ಯದ ಮತದಾರರ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮತದಾರರ ಕರಡು ಪಟ್ಟಿಯನ್ನು ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಕಟಿಸಲಾಗಿದೆ. ಜಿಲ್ಲಾಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿ ಹಾಗೂ ಆ ವ್ಯಾಪ್ತಿಯಲ್ಲಿ ಬರುವ ಮತಗಟ್ಟೆಗಳಲ್ಲಿ ಈ ಪಟ್ಟಿ ಲಭ್ಯವಿದೆ’ ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

‘ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆ- 2023’ರ ಮತದಾರರ ಕರಡು ಪಟ್ಟಿಗೆ ಸಂಬಂಧಿಸಿದಂತೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಡಿ. 8ರವರೆಗೆ ಅವಕಾಶವಿದೆ. ಈ ಪಟ್ಟಿ ಕುರಿತು ನ. 12 ಮತ್ತು 20, ಡಿ. 3 ಮತ್ತು 4ರಂದು ವಿಶೇಷ ಪ್ರಚಾರ ಹಮ್ಮಿಕೊಳ್ಳಲಾಗುವುದು. ಜ. 5ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುವುದು’ ಎಂದರು.

‘ಜ. 1ರೊಳಗೆ 18 ವರ್ಷ ತುಂಬಿದವರು ಮಾತ್ರ ವಾರ್ಷಿಕ ಮತದಾರರ ಪಟ್ಟಿ ಪರಿಷ್ಕರಣೆ ಸಮಯದಲ್ಲಿ ನೋಂದಾಯಿಸಿಕೊಳ್ಳಲು ಈ ಮೊದಲು ಅವಕಾಶ ನೀಡಲಾಗಿತ್ತು. ಈಗ 17 ವರ್ಷ ದಾಟಿದವರು ಮತದಾರರಾಗಲು ಒಂದು ವರ್ಷ ಮೊದಲೇ ನಮೂನೆ 6ರ ಮೂಲಕ ಮುಂಗಡವಾಗಿ ಅರ್ಜಿ ಸಲ್ಲಿಸಬಹುದು’ ಎಂದರು.



ಮತದಾರರ ಪಟ್ಟಿಗೆ ಹೆಸರು ಸೇರಿಸಲು ನಮೂನೆ-6, ಅನಿವಾಸಿ ಭಾರತೀಯರು ಹೆಸರು ಸೇರಿಸಲು ನಮೂನೆ-6ಎ, ಪಟ್ಟಿಯಲ್ಲಿ ಹೆಸರಿರುವ ಮತದಾರರು ಸ್ವಯಂಪ್ರೇರಿತರಾಗಿ ಆಧಾರ್ ಅಥವಾ ನಮೂನೆ -6ಬಿಯಲ್ಲಿ ನಮೂದಿಸಿದ ಇತರ 11 ದಾಖಲೆಗಳಲ್ಲಿ ಒಂದನ್ನು ಜೋಡಿಸಿ ದೃಢೀಕರಿಸಲು ನಮೂನೆ-6ಬಿ, ಆಕ್ಷೇಪಣೆ, ಹೆಸರು ತೆಗೆದು ಹಾಕಲು ನಮೂನೆ-7, ವಿಧಾನಸಭಾ ಕ್ಷೇತ್ರದ ಒಳಗೆ-ಹೊರಗೆ ನಿವಾಸ, ಮೊಬೈಲ್ ಸಂಖ್ಯೆ ಬದಲಿಸಲು, ತಿದ್ದುಪಡಿ, ಅಸ್ಪಷ್ಟ ಭಾವಚಿತ್ರ ಬದಲಾಯಿಸಲು, ಎಪಿಕ್ ಬದಲಾವಣೆ, ಪಟ್ಟಿಯಲ್ಲಿ ವ್ಯಕ್ತಿಯ ಗುರುತು ನಮೂದಿಸಲು ನಮೂನೆ-8ನ್ನು www.nvsp.in ಅಥವಾ Voter Portal ಅಥವಾ ಮೊಬೈಲ್ ಆ್ಯಪ್ Voter Helpline ಮೂಲಕ ಸಲ್ಲಿಸಬಹುದು’ ಎಂದು ಅವರು ವಿವರಿಸಿದರು.

‘18ರಿಂದ 19 ವಯಸ್ಸಿನ ಎಲ್ಲರ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಣಿಗೆ ಪ್ರಚಾರ ಕೈಗೊಳ್ಳಲಾಗಿದೆ. ಜೊತೆಗೆ, ಪಟ್ಟಿಯಲ್ಲಿ ಹೆಸರಿದ್ದು, ಮೃತಪಟ್ಟಿದ್ದರೆ, ವಲಸೆ ಹೋಗಿದ್ದರೆ, ಎರಡು ಕಡೆ ಹೆಸರುಗಳಿದ್ದರೆ, ಅಂಥ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗುವುದು. ಮತದಾರರ ವಿವರ ತಪ್ಪಾಗಿದ್ದರೆ ನಮೂನೆ 8 ಸಲ್ಲಿಸಿ ತಿದ್ದುಪಡಿ ಮಾಡಿಕೊಳ್ಳಬಹುದು. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಿಧಾನಸಭಾ ಕ್ಷೇತ್ರದ ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವೆಲ್ ಏಜೆಂಟ್ (ಬಿಎಲ್‌ಎ) ನೇಮಿಸಿ, ಅರ್ಹ ಮತದಾರರ ನೋಂದಣಿಗೆ ಸಹಕರಿಸಬೇಕು’ ಎಂದು ಅವರು ಮನವಿ ಮಾಡಿದರು.

‘ಅರ್ಹ ಮತದಾರರು ತಮ್ಮ ಮೊಬೈಲ್‌ಗಳಲ್ಲಿ Voter Helpline ಆ್ಯಪ್ ಡೌನ್‌ಲೋಡ್ ಮಾಡಿ ಸಂಬಂಧಪಟ್ಟ ಅರ್ಜಿಗಳನ್ನು www.nvsp.in ಪೋರ್ಟಲ್ ಮೂಲಕವೂ ಸಲ್ಲಿಸಬಹುದು. ಮತದಾರರ ಪಟ್ಟಿ, ಗುರುತಿನ ಚೀಟಿ, ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು ಮತಗಟ್ಟೆ ಅಧಿಕಾರಿಗಳಿಂದಲೂ ಪಡೆಯಬಹುದು’ ಎಂದೂ ಅವರು ಹೇಳಿದರು.

ಈದ್ಗಾ ಮೈದಾನದಲ್ಲಿ ಟಿಪ್ಪು ಜಯಂತಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿರೋಧ ಪಕ್ಷಗಳ ವಿರೋಧದ ನಡುವೆಯೇ ನಗರದ ಚನ್ನಮ್ಮ ವೃತ್ತದ ಬಳಿಯ ಈದ್ಗಾ ಮೈದಾನದಲ್ಲಿ ಟಿಪ್ಪು ಜಯಂತಿ ಆಚರಣೆಗೆ ಮಹಾನಗರ ಪಾಲಿಕೆಯು ಬುಧವಾರ ಅನುಮತಿ ನೀಡಿದೆ. ಜಯಂತಿ ಆಚರಣೆಗೆ ಅನುಮತಿ ಕೋರಿ, ಎಐಎಂಐಎಂ ಪಕ್ಷ ಮತ್ತು ಸಮತಾ ಸೈನಿಕ ದಳ ಮನವಿ ಸಲ್ಲಿಸಿದ್ದವು.

ಈ ಕುರಿತು ಉಪ ಮೇಯರ್, ವಿರೋಧ ಪಕ್ಷದ ನಾಯಕ, ಸಭಾ ನಾಯಕ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರೊಂದಿಗೆ ಮೇಯರ್ ಈರೇಶ ಅಂಚಟಗೇರಿ ಸಂಜೆ ಎರಡು ತಾಸು ಸಭೆ ನಡೆಸಿ, ‘ಗಣೇಶೋತ್ಸವ ಸಂದರ್ಭದಲ್ಲಿ ರಚಿಸಿದ್ದ ಸದನ ಸಮಿತಿ, ಮೈದಾನವನ್ನು ಎಲ್ಲರಿಗೂ ಮುಕ್ತಗೊಳಿಸುವಂತೆ ಶಿಫಾರಸು ಮಾಡಿತ್ತು. ಅದರಂತೆ, ಮಹಾಪುರುಷರ ಜಯಂತಿಗೆ ಅನುಮತಿ ನೀಡಲು ನಿರ್ಧರಿಸಲಾಗಿದೆ. ಇನ್ನು ಮುಂದೆ ಧಾರ್ಮಿಕ, ಸಾಮಾಜಿಕ ಹಾಗೂ ವಾಣಿಜ್ಯ ಚಟುವಟಿಕೆಗಳಿಗೂ ಮೈದಾನ ಮುಕ್ತವಾಗಿರಲಿದೆ. ಆಯುಕ್ತರು ಷರತ್ತುಬದ್ಧ ಅನುಮತಿ ನೀಡಲಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

> **ಸಭೆಯ ನಿರ್ಧಾರ ಕುರಿತು, ಮೇಯರ್ ಅವರು ಲಿಖಿತವಾಗಿ ತಿಳಿಸಲಿದ್ದಾರೆ. ಪರಿಶೀಲನೆ ಬಳಿಕ ಮಹಾಪುರುಷರ ಜಯಂತಿ ಸೇರಿದಂತೆ ಇತರ ಆಚರಣೆಗಳಿಗೆ ಷರತ್ತುಬದ್ಧ ಅನುಮತಿ ನೀಡಲಾಗುವುದು.**
> **ಡಾ. ಗೋಪಾಲಕೃಷ್ಣ ಬಿ.,** ಆಯುಕ್ತ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

‘ಟಿಪ್ಪು ಜಯಂತಿಗೆ ವೈಯಕ್ತಿಕವಾಗಿ ನನ್ನ ಮತ್ತು ಪಕ್ಷದ ವಿರೋಧವಿದ್ದರೂ, ಬೇರೆಯವರು ಆಚರಿಸಲು ಅನುಮತಿ ಕೇಳಿದಾಗ ನಿರಾಕರಿಸಲಾಗದು. ರಾಜ್ಯ ಸರ್ಕಾರ ಟಿಪ್ಪು ಜಯಂತಿ ಆಚರಿಸುವುದಿಲ್ಲ ಎಂದು ಹೇಳಿರುವುದರಿಂದ, ಪಾಲಿಕೆಯಿಂದಲೂ ಜಯಂತಿ ಆಚರಿಸುವುದಿಲ್ಲ’ ಎಂದರು.

ಅನುಮತಿ ಬೆನ್ನಲ್ಲೆ, ಟಿಪ್ಪು ಜಯಂತಿಗೆ ಮನವಿ ಸಲ್ಲಿಸಿದ್ದ ಎಐಎಂಐಎಂ ಪಕ್ಷದ ಜಿಲ್ಲಾ ಜಂಟಿ ಕಾರ್ಯದರ್ಶಿ ವಿಜಯ ಗುಂಟ್ರಾಳ ಅವರು, ತಮ್ಮ ಪಕ್ಷದ ಅಧ್ಯಕ್ಷರ ವಿರೋಧ ಲೆಕ್ಕಿಸದೆ, ಗುರುವಾರ ಮಧ್ಯಾಹ್ನ 12 ಗಂಟೆಗೆ ಪಕ್ಷದ ವತಿಯಿಂದಲೇ ಜಯಂತಿ ಆಚರಿಸುವುದಾಗಿ ತಿಳಿಸಿದ್ದಾರೆ. ಆದರೆ, ಮೈದಾನದಲ್ಲಿ ಜಯಂತಿ ಆಚರಣೆಗೆ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಹಾಗೂ ಪಾಲಿಕೆ ಸದಸ್ಯ ನಜೀರ ಅಹ್ಮದ ಹೊನ್ಯಾಳ ವಿರೋಧ ವ್ಯಕ್ತಪಡಿಸಿದ್ದಾರೆ.

‘ಅನುಮತಿ ಕೊಟ್ಟಿರುವುದರ ಹಿಂದೆ ಮುಂಬರುವ ವಿಧಾನಸಭಾ ಚುನಾವಣೆಯ ಲೆಕ್ಕಾಚಾರವಿದೆ’ ಎಂದು ಪಾಲಿಕೆ ವಿರೋಧ ಪಕ್ಷದ ನಾಯಕ ದೊರೈರಾಜ್ ಮಣಿಕುಂಟ್ಲ ಅಸಮಾಧಾನ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

ಪೂರ್ಣ ತನಿಖೆ ಮುಗಿಯದೇ ನಿರ್ಧಾರಕ್ಕೆ ಬರಬೇಡಿ: ಸಿಎಂ

ದಾವಣಗೆರೆ: ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ತಮ್ಮನ ಮಗ ಚಂದ್ರಶೇಖರ್ ಸಾವಿನ ಪ್ರಕರಣದ ಕುರಿತು ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಬೇಕು. ಅಲ್ಲಿಯವರೆಗೆ ಪೊಲೀಸರು ಯಾವುದೇ ತೀರ್ಮಾನಕ್ಕೆ ಬರಬಾರದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಹೊನ್ನಾಳಿಯಲ್ಲಿನ ರೇಣುಕಾಚಾರ್ಯ ಅವರ ನಿವಾಸಕ್ಕೆ ಬುಧವಾರ ಭೇಟಿ ನೀಡಿ ಸಾಂತ್ವನ ಹೇಳಿದ ಬಳಿಕ ಅವರು ಸುದ್ದಿಗಾರರ ಜತೆಗೆ ಮಾತನಾಡಿದರು.

‘ನಾನು ಮುಖ್ಯಮಂತ್ರಿಯಾಗಿ ಬಂದಿಲ್ಲ. ರೇಣುಕಾಚಾರ್ಯ ಸಹೋದರನಾಗಿ ಬಂದಿದ್ದೇನೆ. ಅವರ ಜತೆಗೆ ನಿರಂತರ ಸಂಪರ್ಕದಲ್ಲಿದ್ದೆ. ಆದರೂ ಮನಸ್ಸು ತಡೆಯಲಾರದೇ ಬಂದಿದ್ದೇನೆ’ ಎಂದರು.

100 ಕ್ಷೇತ್ರಗಳಲ್ಲಿ ಸ್ಪರ್ಧೆ: ಬಡಗಲಪುರ ನಾಗೇಂದ್ರ

ಹೊಸಪೇಟೆ (ವಿಜಯನಗರ): ‘ಬರುವ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 100 ಕ್ಷೇತ್ರಗಳಲ್ಲಿ ಸ್ಪರ್ಧಿಸುವುದರ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಅದಕ್ಕಾಗಿ ವೇದಿಕೆ ರಚಿಸಲಾಗುವುದು’ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಹೆಸರಲ್ಲಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಬದಲಾಗಿ ಹೊಸ ವೇದಿಕೆ ರಚಿಸಲಾಗುವುದು. ನ. 19ರಂದು ಮಂಡ್ಯದಲ್ಲಿ ಈ ಸಂಬಂಧ ಸಭೆ ನಡೆಯಲಿದ್ದು, ಅಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿಡರು.

‘ಅನ್ನದಲ್ಲೂ, ಮಣ್ಣಿನಲ್ಲೂ ತಿಂದವರು ಸಿದ್ದರಾಮಯ್ಯ’

ರಾಯಬಾಗ (ಬೆಳಗಾವಿ ಜಿಲ್ಲೆ): ‘ಕೇಂದ್ರ ಸರ್ಕಾರ ನೀಡಿದ ಅಕ್ಕಿ ಚೀಲಗಳ ಮೇಲೆ ಸಿದ್ದರಾಮಯ್ಯ ತಮ್ಮ ಫೋಟೊ ಅಂಟಿಸಿಕೊಂಡರು. ಬೆಂಗಳೂರು, ಬಳ್ಳಾರಿ, ಮಂಗಳೂರಿನ ಮಣ್ಣಿನಲ್ಲೂ ಸಾಕಷ್ಟು ತಿಂದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಪಟ್ಟಣದಲ್ಲಿ ಬುಧವಾರ ಬಿಜೆಪಿ ಜನ ಸಂಕಲ್ಪ ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು, ‘ಕೇಂದ್ರದ ಬಿಜೆಪಿ ಸರ್ಕಾರ ನೀಡಿದ ಅನ್ನದಲ್ಲೂ ಕನ್ನ ಹಾಕಿದವರು ಸಿದ್ದರಾಮಯ್ಯ. ಸಣ್ಣ ನೀರಾವರಿ ಯೋಜನೆಯಲ್ಲಿ ಕಾಮಗಾರಿ ಮಾಡದೇ ದೊಡ್ಡ ಮೊತ್ತದ ಬಿಲ್ ತೆಗೆದು ಲೂಟಿ ಮಾಡಿದರು’ ಎಂದು ದೂರಿದರು.

ಬಿಜೆಪಿ ತೊರೆದ ಬಣಕಾರ

ಹಿರೇಕೆರೂರು (ಹಾವೇರಿ): ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ. ಬಣಕಾರ ಅವರು ಅಧ್ಯಕ್ಷ ಸ್ಥಾನಕ್ಕೆ ಮತ್ತು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ.


ಯು.ಬಿ. ಬಣಕಾರ

ಬೆಂಗಳೂರಿಗೆ ತೆರಳಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ನಿರ್ದೇಶಕ ಸ್ಥಾನಕ್ಕೂ ರಾಜೀನಾಮೆ ನೀಡಿದ್ದಾರೆ. ಮುಂಬರುವ ಚುನಾವಣೆಗೆ ಬಿಜೆಪಿಯಲ್ಲಿ ಟಿಕೆಟ್ ದೊರೆಯುವ ಸಾಧ್ಯತೆ ಇಲ್ಲ ಎಂಬುದು ಖಚಿತವಾದ ಮೇರೆಗೆ ಅವರು ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ ಎಂದು ಕ್ಷೇತ್ರದಲ್ಲಿ ಚರ್ಚೆ ನಡೆಯುತ್ತಿದೆ.

ಮೊಕದ್ದಮೆ ಹಿಂಪಡೆಯಲು ಮಾಧುಸ್ವಾಮಿ ಮನವಿ

ಚಿಕ್ಕನಾಯಕನಹಳ್ಳಿ: ಕೋವಿಡ್ ನಿರ್ಬಂಧ ಉಲ್ಲಂಘನೆ ಆರೋಪದಲ್ಲಿ ಸಾರ್ವಜನಿಕರ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಅಗತ್ಯವಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದಲ್ಲಿ ಬುಧವಾರ ನೂತನ ಪೊಲೀಸ್ ಠಾಣೆ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮೊಕದ್ದಮೆ ಹಿಂಪಡೆಯುವುದರಿಂದ ಪೊಲೀಸ್ ಇಲಾಖೆ ಮತ್ತು ನ್ಯಾಯಾಲಯಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಹೀಗಾಗಿ ಪ್ರಕರಣ ಹಿಂತೆಗೆದುಕೊಳ್ಳುವಂತೆ ಗೃಹ ಸಚಿವರಿಗೆ ಮನವಿ ಮಾಡಿದ್ದೇನೆ’ ಎಂದರು.

‘ಜಾರಕಿಹೊಳಿ ಅವರದ್ದು ವಾಮಾಚಾರದ ಕುಟುಂಬ’

ದೇವನಹಳ್ಳಿ: ‘ಕಾಂಗ್ರೆಸ್ ಶಾಸಕ ಸತೀಶ ಜಾರಕಿಹೊಳಿ ಅವರದ್ದು ವಾಮಾಚಾರದ ಕುಟುಂಬ ಇರಬೇಕು. ಹಾಗಾಗಿಯೇ ಅವರು ಹೆಚ್ಚಾಗಿ ಸ್ಮಶಾನವನ್ನು ಪ್ರೀತಿಸುತ್ತಾರೆ’ ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಜಗ್ಗೇಶ್ ಟೀಕಿಸಿದ್ದಾರೆ.

‘ಅವರು ಹಿಂದೂ ಸಂಸ್ಕೃತಿ ಒಪ್ಪದಿದ್ದರೂ ಮಾಟ, ಮಂತ್ರ ಮಾಡುವವರು ಆಗಿರಬೇಕು. ಬಹುಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟಾಗುವಂತೆ ಅವರು ವರ್ತಿಸಿದ್ದಾರೆ. ಇಲ್ಲಿನ ಧರ್ಮಕ್ಕೆ ಅವರು ಗೌರವ ನೀಡಬೇಕು’ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ.
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಬರವಣಿಗೆಯ ಬೆಳವಣಿಗೆಗೆ ನೆರವು



7ನೇ ತರಗತಿಯಲ್ಲಿ ಇದ್ದಾಗ ‘ಪ್ರಜಾವಾಣಿ’ಗೆ ಮುಖಾಮುಖಿಯಾದೆ. ಅಂದಿನಿಂದ ಇಂದಿನವರೆಗೆ ನಾನು ಈ ಪತ್ರಿಕೆ ಓದುಗ.

ವಿಶೇಷವೆಂದರೆ ಪತ್ರಿಕಾ ಕ್ಷೇತ್ರಕ್ಕೆ ಕಾಲಿಟ್ಟಾಗ ‘ಪ್ರಜಾವಾಣಿ’ಯೇ ನನ್ನಗುರು. ಅದೊಂದು ರೀತಿ ದ್ರೋಣಾಚಾರ್ಯ - ಏಕಲವ್ಯ ಸಂಬಂಧದಂತೆ. ಆದರೆ ಈ ದ್ರೋಣಾಚಾರ್ಯ ನನ್ನ ಬೆರಳು ಕೇಳಲಿಲ್ಲ, ಬದಲು ನನ್ನ ಬೆರಳನ್ನು ಬಲಪಡಿಸಿದ ಗುರು.

ಆ ಸದನ ಸಮೀಕ್ಷೆ, ಸುದ್ದಿಯ ಹೊಸತನ, ಸಂದರ್ಶನಗಳನ್ನು ಓದುತ್ತಾ, ಆ ರೀತಿಯಲ್ಲಿ ಬರೆಯಲು ಪ್ರಯತ್ನಿಸುತ್ತಾ ನನ್ನ ಬೆಳವಣಿಗೆ ಆ ಕ್ಷೇತ್ರದಲ್ಲಿ ಸಾಗಿತು. ‘ಪ್ರಜಾವಾಣಿ’ ನನ್ನ ದೈನಂದಿನದ ಭಾಗ. ಇಂದೂ ಸಾಹಿತ್ಯ, ಸಂಗೀತ, ವಿಮರ್ಶೆ, ಕಲೆ ಈ ರೀತಿ ಸುದ್ದಿಯಷ್ಟೇ ಅಲ್ಲ ಒಂದು ಪರಿಪೂರ್ಣ ಪತ್ರಿಕೆಯಾಗಿ ಅದು ನನ್ನ ಮನೆ- ಮನ ತುಂಬುತ್ತಿದೆ.

ಅದಕ್ಕೆ ಇನ್ನೂ 25 ಸೇರಲಿ, ಆ ಶತಮಾನದ ಸಂಭ್ರಮ ನೋಡುವ ಸೌಭಾಗ್ಯ ನನ್ನದಾಗಲಿ.

ಸ. ಗಿರಿಜಾಶಂಕರ, ಪತ್ರಕರ್ತ, ಚಿಕ್ಕಮಗಳೂರು

ಮನೆಯ ಸದಸ್ಯ ‘ಪ್ರಜಾವಾಣಿ’

‘ಪ್ರಜಾವಾಣಿ’ ನಮ್ಮ ಮನೆಯ ಅವಿಭಾಜ್ಯ ಸದಸ್ಯ. ಚಿಕ್ಕವನಿದ್ದಾಗ ಫ್ಯಾಂಟಮ್, ಮಾಂಡ್ರೇಕ್ ಮುಂತಾದ ಕಾಮಿಕ್ಸ್ ಮೂಲಕ ನನ್ನ ಗೆಳೆಯನಾಗಿ, ಸೋಮವಾರದಿಂದ ಭಾನುವಾರದವರೆಗೆ ವಿಶೇಷ ಸಂಚಿಕೆಗಳಿಂದ ಸಾಹಿತ್ಯ, ಸಂಸ್ಕೃತಿ, ಕೃಷಿ, ವಿಜ್ಞಾನ ಕುರಿತು ಉಪಯುಕ್ತ ಮಾಹಿತಿ ನೀಡುವ ಬೋಧಕನಾಗಿ, ಸಿನಿಮಾ ನಾಟಕ ಮುಂತಾದ ರಂಜನೀಯ ವಿಷಯಗಳು, ಅಂದಿನ ‘ಛೂ ಬಾಣ’ ಅಂಕಣ, ಚಿನಕುರಳಿಯ ಕಚಗುಳಿ, ಪದಬಂಧ, ಸುಡೊಕುಗಳಿಂದ ಬುದ್ಧಿಮತ್ತೆಯನ್ನು ಸಾಣೆ ಹಿಡಿಯುವವನಾಗಿ, ಪ್ರಮುಖವಾಗಿ ಪ್ರತಿದಿನವೂ ಸುದ್ದಿಯನ್ನು ಬಿತ್ತುವ ಬಾತ್ಮೀದಾರನಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಜಾತ್ಯತೀತ, ಪಕ್ಷಾತೀತವಾಗಿ ಪ್ರಜಾಪ್ರಭುತ್ವದ ಧ್ಯೇಯಗಳನ್ನು ಪಾಲಿಸುತ್ತಿರುವ ಪ್ರಬುದ್ಧ ಪತ್ರಿಕೆಯಾಗಿದೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಪತ್ರಿಕೆಯೆನಿಸಿರುವ ‘ಪ್ರಜಾವಾಣಿ’ ಇದೇ ಪ್ರಜ್ಞಾವಂತಿಕೆಯೊಂದಿಗೆ ಪ್ರವಹಿಸುತ್ತಿರಲಿ ಎಂದು ಪ್ರೀತಿ ಪೂರ್ವಕವಾಗಿ ಹಾರೈಸುತ್ತೇನೆ.

ಆರ್‌.ಟಿ. ಅರುಣ್‌ಕುಮಾರ್, ಕಲಾವಿದ, ದಾವಣಗೆರೆ

ಸಮೃದ್ಧ ಪತ್ರಿಕೆ



‘ಪ್ರಜಾವಾಣಿ’ ಓದಿದ ನಂತರ ಅನ್ಯ ಪತ್ರಿಕೆಗಳತ್ತ ಗಮನ ಹರಿಯುವುದಿಲ್ಲ. ಓದುಗನೊಬ್ಬನ ಅಗತ್ಯಗಳನ್ನು ಸಮಗ್ರವಾಗಿ ಕಟ್ಟಿಕೊಡುವ ಸಮೃದ್ಧ ಪತ್ರಿಕೆ ‘ಪ್ರಜಾವಾಣಿ’. ರಾಜ್ಯ, ರಾಷ್ಟ್ರೀಯ ಹಾಗೂ ವಿದೇಶದ ಸುದ್ದಿಗಳ ಜತೆಗೆ 25–50 ವರ್ಷಗಳ ಹಿಂದಿನ ಪ್ರಸ್ತುತ ದಿನದ ಇತಿಹಾಸದ ಒಳನೋಟವನ್ನು ಬಹುಶಃ ಯಾವ ಪತ್ರಿಕೆಯೂ ಕೊಡುತ್ತಿಲ್ಲ. ಜಾತ್ಯತೀತ, ಧರ್ಮಾತೀತ, ಪಕ್ಷಾತೀತ, ಸಂಘಟನಾತೀತವಾದ ನಿಲುವುಗಳನ್ನು ಹೊಂದಿ ಸಂವಿಧಾನದ ಸಮಾನತೆ, ಸಹೋದರತೆ, ಭಾವೈಕ್ಯದ ಆಶಯಗಳನ್ನು ಸಾಕಾರಗೊಳಿಸಿದೆ. ಜನವಿರೋಧಿ ನೀತಿ, ನಿಲುವುಗಳನ್ನು ಖಂಡತುಂಡವಾಗಿ ಧಿಕ್ಕರಿಸುವ ಸಂಪಾದಕೀಯ ಅಪ್ಯಾಯಮಾನವಾದುದು.

ಹೆಗ್ಗೆರೆ ರಂಗಪ್ಪ, ದ.ಸಂ.ಸ ರಾಜ್ಯ ಸಂಘಟನಾ ಸಂಚಾಲಕ

ನಿಷ್ಪಕ್ಷಪಾತ ಪತ್ರಿಕೋದ್ಯಮ



ಪ್ರಜಾವಾಣಿ ನಿಷ್ಠುರ ಪತ್ರಿಕೋದ್ಯಮಕ್ಕೆ ಒಂದು ಮಾದರಿ. ವಿಶ್ವಾಸಾರ್ಹ ಸುದ್ದಿಗಳನ್ನು ಪ್ರಸಾರ ಮಾಡಲು ಯಾವ ಮುಲಾಜಿಗೂ ಒಳಗಾಗದೆ ರಾಜಕೀಯ, ಕಲೆ, ಸಾಹಿತ್ಯ, ಚರಿತ್ರೆ, ಕ್ರೀಡೆ ಮತ್ತು ಸಾಮಾಜಿಕ ವಿದ್ಯಮಾನಗಳನ್ನು ಓದುಗರಿಗೆ ಒದಗಿಸುತ್ತದೆ. ಕೊರೊನಾಕ್ಕಿಂತ ಮೊದಲು ದಿನಾಲು ಬರುತ್ತಿದ್ದ ಪ್ರತ್ಯೇಕ ಪುರವಣಿಗೆಗಳನ್ನು ಓದುವದೇ ಒಂದು ಖುಷಿಯಾಗಿತ್ತು. ನಾನಂತೂ ಸುಮಾರು ಪುರವಣಿಗಳನ್ನು ಸಂಗ್ರಹ ಮಾಡಿರುತ್ತೇನೆ. ಆದರೆ ಕೊರೊನಾ ನಂತರ ಪ್ರತ್ಯೇಕ ಪುರವಣಿ ಬರುತ್ತಿಲ್ಲ. ಆದರೂ ಪರವಾಗಿಲ್ಲ. ಜನಪರವಾದ ಬದ್ಧತೆ ಮುಂದುವರಿಯಲಿ ಎಂದು ಆಶಿಸುತ್ತೇನೆ. ಪತ್ರಿಕೆಗೆ ನನ್ನ ಅಭಿನಂದನೆಗಳು.

ಪಿ.ಎಚ್. ಪಾಟೀಲ್, ರಾಣೆಬೆನ್ನೂರ

3 ದಿನಗಳ ಸಾವಯವ ಕೃಷಿಕರ ಮೇಳದಲ್ಲಿ ದೇಶದ 2 ಸಾವಿರ ಮಂದಿ ಭಾಗಿ

ಕಿಸಾನ್ ಸ್ವರಾಜ್ ಸಮ್ಮೇಳನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ರಾಷ್ಟ್ರಮಟ್ಟದ 5ನೇ ‘ಕಿಸಾನ್ ಸ್ವರಾಜ್ ಸಮ್ಮೇಳನ’ವನ್ನು ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ನ.11ರಿಂದ 13ರವರೆಗೆ ಆಯೋಜಿಸಲಾಗಿದ್ದು, 23 ರಾಜ್ಯಗಳ 2ಸಾವಿರಕ್ಕೂ ಹೆಚ್ಚು ಸಾವಯವ ಕೃಷಿಕರು, ಕೃಷಿ ವಿಜ್ಞಾನಿಗಳು, ತಂತ್ರಜ್ಞರು ಭಾಗವಹಿಸಲಿದ್ದಾರೆ.

‘ಎಎಸ್‌ಎಚ್‌ಎ (ಅಲಯನ್ಸ್ ಫಾರ್ ಸಸ್ಟೈನಬಲ್ ಆ್ಯಂಡ್ ಹೊಲಿಸ್ಟಿಕ್ ಅಗ್ರಿಕಲ್ಚರ್) ಕಿಸಾನ್ ಸ್ವರಾಜ್’ ಸಂಸ್ಥೆ ಆಯೋಜಿಸಿರುವ ಸಮ್ಮೇಳನವನ್ನು ನ.11ರ ಬೆಳಿಗ್ಗೆ 10ಕ್ಕೆ ಬೀಜ ಸಂರಕ್ಷಕಿ ಪಾಪಮ್ಮ ಉದ್ಘಾಟಿಸಲಿದ್ದಾರೆ.

‘ಬೀಜ ಉತ್ಸವ, ಗೆಡ್ಡೆ-ಗೆಣಸು ಮೇಳ, ಕೃಷಿ ಗೋಷ್ಠಿ, ವಸ್ತುಪ್ರದರ್ಶನ ಇರಲಿದೆ. ಸುಸ್ಥಿರ ಕೃಷಿಯತ್ತ ಹೊರಳಿ ಯಶಸ್ಸು ಸಾಧಿಸಿದ ರೈತರು ಅನುಭವ ಹಂಚಿಕೊಳ್ಳಲಿದ್ದಾರೆ’ ಎಂದು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರಿನಲ್ಲಿ ನಡೆಯಲಿರುವ ‘ಕಿಸಾನ್ ಸ್ವರಾಜ್ ಸಮ್ಮೇಳನ’ದ ಪೋಸ್ಟರ್ ಅನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬುಧವಾರ ಬಿಡುಗಡೆ ಮಾಡಿದರು. ಮಹಿಳಾ ಕಿಸಾನ್ ಅಧಿಕಾರ್ ಮಂಚ್‌ನ ರಾಜ್ಯ ಸಂಚಾಲಕಿ ಕವಿತಾ ಶ್ರೀನಿವಾಸನ್, ‘ಆಶಾ ಕಿಸಾನ್ ಸ್ವರಾಜ್’ನ ಕಪಿಲ್ ಶಾ, ಜನಪದ ಸೇವಾ ಟ್ರಸ್ಟ್‌ನ ಸಂತೋಷ್ ಕೌಲಗಿ, ಪರಿಸರ ತಜ್ಞ ಯು.ಎನ್‌.ರವಿಕುಮಾರ್, ಕೃಷ್ಣ ಪ್ರಸಾದ್ ಇದ್ದಾರೆ

‘ಜಾಗತಿಕ ತಾಪಮಾನ ಏರಿಕೆಯು ಕೃಷಿ ವಲಯದ ಮೇಲೆ ಭಾರಿ ಪರಿಣಾಮ ಬೀರಿದೆ. ಈ ಬಗ್ಗೆ ಜಾಗೃತಿ ಮೂಡಿಸುವ ಸಮ್ಮೇಳನದಲ್ಲಿ ರೈತರು, ನಗರವಾಸಿಗಳು, ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು’ ಎಂದು ಕೋರಿದರು.

ಸದಸ್ಯ ಕೃಷ್ಣಪ್ರಸಾದ್ ಮಾತನಾಡಿ, ‘ಸುಭಾಷ್ ಶರ್ಮಾ, ಭರತ್ ಭೂಷಣ ತ್ಯಾಗಿ, ಸಬರಮತಿ, ಡಾ.ದೇವೇಂದ್ರ ಶರ್ಮಾ, ವಿಜಯ್ ಜರ್ದಾರಿ, ಸುರೇಶ್ ದೇಸಾಯಿ ಸೇರಿದಂತೆ ಸಾವಯವ ಕೃಷಿಕರು ಪಾಲ್ಗೊಳ್ಳುತ್ತಿರುವ ಈ ಸಮ್ಮೇಳನವು ಸಾವಯವ ಕೃಷಿಕರ ಕುಂಭಮೇಳವಾಗಿದೆ’ ಎಂದು ಬಣ್ಣಿಸಿದರು.

ಪರಿಸರ ತಜ್ಞ ಯು.ಎನ್. ರವಿಕುಮಾರ್, ‘ಆಶಾ ಕಿಸಾನ್ ಸ್ವರಾಜ್’ನ ಕಪಿಲ್ ಶಾ, ಜನಪದ ಸೇವಾ ಟ್ರಸ್ಟ್‌ನ ಸಂತೋಷ್ ಕೌಲಗಿ, ಮಹಿಳಾ ಕಿಸಾನ್ ಅಧಿಕಾರ್ ಮಂಚ್‌ನ ರಾಜ್ಯ ಸಂಚಾಲಕಿ ಕವಿತಾ ಶ್ರೀನಿವಾಸನ್ ಇದ್ದರು.

ಗುರುವಾರ, ನವೆಂಬರ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 310 | ಪುಟ 18
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಪ್ರಗತಿ ಪ್ರತಿಮೆ
ಸಿಇಟಿ: 14ರ ನಂತರ 2ನೇ ಸುತ್ತು ಆರಂಭ 5
ಸರ್ಕಾರದಿಂದ ವೆಚ್ಚ ಕಡಿತ ಸಾಧ್ಯತೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,033 ▼	18,157 ▼	₹53,086 (ಬೆಂಗಳೂರು)	₹62,100 (ಬೆಂಗಳೂರು)	81.47 ▲

ಪ್ರತಿದಿನ 30 ನಿಮಿಷ 'ರಾಷ್ಟ್ರೀಯ ಹಿತಾಸಕ್ತಿ'ಯ ಕಾರ್ಯಕ್ರಮ ಪ್ರಸಾರ ಕಡ್ಡಾಯ

ಟಿ.ವಿ.ವಾಹಿನಿಗಳಿಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ/ ಬೆಂಗಳೂರು: ಎಲ್ಲಾ ವಾಹಿನಿಗಳು ಪ್ರತಿದಿನ ರಾಷ್ಟ್ರೀಯ ಹಿತಾಸಕ್ತಿಯ ಕಾರ್ಯಕ್ರಮವನ್ನು ಕಡ್ಡಾಯವಾಗಿ ಪ್ರಸಾರ ಮಾಡಬೇಕು. ಸುದ್ದಿ ವಾಹಿನಿಗಳು, ಮನರಂಜನಾ ವಾಹಿನಿಗಳು ಸೇರಿ ಎಲ್ಲಾ ಸ್ವರೂಪದ ಟಿ.ವಿ.ವಾಹಿನಿಗಳ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ನೇಮಕ ಹಾಗೂ ಪಾಲುದಾರರ ಆಯ್ಕೆಗೂ ಮುನ್ನ ಅನುಮತಿ ಪಡೆಯಬೇಕು. ಈ ಮಾರ್ಗಸೂಚಿಯನ್ನು ಪಾಲಿಸದ ಮತ್ತು ನಿರಂತರವಾಗಿ ಉಲ್ಲಂಘಿಸುವ ವಾಹಿನಿಗೆ ನೀಡಿರುವ ಅನುಮತಿಯನ್ನು ರದ್ದುಪಡಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಹೇಳಿದೆ.

ಕೇಂದ್ರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಬುಧವಾರ ಹೊರಡಿಸಿರುವ, 'ಭಾರತದಲ್ಲಿ ಉಪಗ್ರಹ ವಾಹಿನಿಗಳ ಅಪ್‌ಲಿಂಕಿಂಗ್ ಮತ್ತು ಡೌನ್‌ಲಿಂಕಿಂಗ್ ಮಾರ್ಗಸೂಚಿಗಳು-2022'ರಲ್ಲಿ ಈ ಷರತ್ತುಗಳು ಇವೆ. ಸಚಿವಾಲಯವು ಈ ಹಿಂದೆಯೇ ಸಿದ್ಧಪಡಿಸಿದ್ದ ಈ ಮಾರ್ಗಸೂಚಿಗೆ ಕೇಂದ್ರ ಸಚಿವ ಸಂಪುಟವು ಇದೇ ಸೆಪ್ಟೆಂಬರ್ 28ರಂದು ಅನುಮೋದನೆ ನೀಡಿತ್ತು. ಈ ಮಾರ್ಗಸೂಚಿಗಳ ಜಾರಿ ಸಂಬಂಧ ಬುಧವಾರ ಅಧಿಸೂಚನೆ ಹೊರಡಿಸಲಾಗಿದೆ. ಈ ಮೊದಲು 2011ರಲ್ಲಿ ಇಂತಹ ಮಾರ್ಗಸೂಚಿ ಹೊರಡಿಸಲಾಗಿತ್ತು.

ಇದು ಉಪಗ್ರಹ ವಾಹಿನಿಗಳ ಅಪ್‌ಲಿಂಕಿಂಗ್ ಮತ್ತು ಡೌನ್‌ಲಿಂಕಿಂಗ್ ಮಾರ್ಗಸೂಚಿ ಆಗಿದ್ದರೂ, ವಾಹಿನಿಗಳಲ್ಲಿ ಏನು ಪ್ರಸಾರವಾಗಬೇಕು ಮತ್ತು ಹೇಗೆ ಪ್ರಸಾರವಾಗಬೇಕು ಎಂಬುದನ್ನು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

'ದೇಶದ ಎಲ್ಲಾ ವಾಹಿನಿಗಳಲ್ಲಿ (ಕ್ರೀಡಾ ವಾಹಿನಿಗಳನ್ನು ಹೊರತುಪಡಿಸಿ) ಪ್ರತಿದಿನ 30 ನಿಮಿಷಗಳು 'ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾಮಾಜಿಕವಾಗಿ ಪ್ರಸ್ತುತ'ವಾದ ವಿಷಯಾಧಾರಿತ ಕಾರ್ಯಕ್ರಮವನ್ನು ಕಡ್ಡಾಯವಾಗಿ ಪ್ರಸಾರ ಮಾಡಬೇಕು' ಎಂದು ಮಾರ್ಗಸೂಚಿಯ 35ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

'ರಾಷ್ಟ್ರೀಯ ಹಿತಾಸಕ್ತಿಯ ವಿಷಯಾಧರಿತ ಕಾರ್ಯಕ್ರಮವನ್ನು ಮಾರ್ಗಸೂಚಿಯನ್ನು ಪಾಲಿಸಲು ಅಗತ್ಯವಾದ ರೀತಿಯಲ್ಲಿ ವಾಹಿನಿಗಳು ಏರ್ಪಾಡು ಮಾಡಿಕೊಳ್ಳಬೇಕು. ಇಂತಹ ಕಾರ್ಯಕ್ರಮಗಳ ಬಗ್ಗೆ ಕೇಂದ್ರ ಸರ್ಕಾರವು ಆಗಾಗ್ಗೆ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಲಿದೆ. ಎಲ್ಲಾ ವಾಹಿನಿಗಳು ಈ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಾಲಿಸಬೇಕು' ಎಂದು ಮಾರ್ಗಸೂಚಿಯಲ್ಲಿ ನಿರ್ದೇಶಿಸಲಾಗಿದೆ.

ಮಾರ್ಗಸೂಚಿ ಪ್ರಕಾರ, ಭಾರತದಿಂದ ಕಾರ್ಯನಿರ್ವಹಿಸುವ ಎಲ್ಲಾ ಟಿ.ವಿ. ವಾಹಿನಿಗಳ ಕಂಪನಿ ಅಥವಾ ಲಿಮಿಟೆಡ್ ಲಯಬಲೆಟಿ ಪಾರ್ಟ್‌ನರ್ (ಎಲ್‌ಎಲ್‌ಪಿ) ಕಂಪನಿಯ ನಿರ್ದೇಶಕರು, ಪಾಲುದಾರರು ಮತ್ತು ಸಿಇಒ ಯಾರಾಗುತ್ತಾರೆ ಎಂಬುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು.

'ಈ ಹುದ್ದೆಗಳಲ್ಲಿ ಇರುವವರು ರಾಜೀನಾಮೆ ನೀಡಿದರೂ, ಅದನ್ನು ಮಾಹಿತಿ ಮತ್ತು ಪ್ರಸಾರ ಸಚಿವಾಲಯಕ್ಕೆ ಮಾಹಿತಿ ನೀಡಬೇಕು. ಈ ಹುದ್ದೆಗಳಿಗೆ ನೇಮಕ ಮಾಡುವುದಕ್ಕೂ ಮುನ್ನ ಸಚಿವಾಲಯದ 'ಸೆಕ್ಯುರಿಟಿ ಕ್ಲಿಯರೆನ್ಸ್ (ಭದ್ರತಾ ನಿರಾಕ್ಷೇಪಣಾ ಪತ್ರ)' ಪಡೆಯಬೇಕು' ಎಂದು ಮಾರ್ಗಸೂಚಿಯಲ್ಲಿ ಷರತ್ತು ಹಾಕಲಾಗಿದೆ. ಈ ಷರತ್ತು ಈ ಹಿಂದಿನ ಮಾರ್ಗಸೂಚಿಯಲ್ಲೂ ಇತ್ತು. 'ಸೆಕ್ಯುರಿಟಿ ಕ್ಲಿಯರೆನ್ಸ್ ನಿರಾಕರಿಸಲಾಗುವ ವ್ಯಕ್ತಿಗಳನ್ನು ಈ ಹುದ್ದೆಗಳಿಗೆ ನೇಮಕ ಮಾಡುವಂತಿಲ್ಲ' ಎಂದು ನೂತನ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

9ನೇ ಪುಟ ನೋಡಿ

ನೇರ ಪ್ರಸಾರಕ್ಕೂ ಷರತ್ತು

ಸುದ್ದಿ ವಾಹಿನಿಗಳು ಯಾವುದೇ ಕಾರ್ಯಕ್ರಮಗಳ ನೇರ ಪ್ರಸಾರಕ್ಕೂ ಮುನ್ನ ಪೂರ್ವಾನುಮತಿ ಪಡೆಯಬೇಕಿಲ್ಲ. ಆದರೆ, ಕಾರ್ಯಕ್ರಮದ ನೇರ ಪ್ರಸಾರಕ್ಕೆ ಬಳಸುವ ಅಪ್‌ಲಿಂಕಿಂಗ್ ಉಪಕರಣ ಸೇವೆ ಯಾರಿಂದ ಪಡೆಯಲಾಗುತ್ತಿದೆ ಎಂಬುದರ ಮಾಹಿತಿ ನೀಡಬೇಕು. ಮತ್ತು ಅಂತಹ ಉಪಕರಣಗಳನ್ನು ಮೊದಲೇ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದೆ. ಇದನ್ನು ಉಲ್ಲಂಘಿಸಿದಲ್ಲಿ, ಕಾರ್ಯಕ್ರಮದ ಪ್ರಸಾರವನ್ನು ತಡೆಹಿಡಿಯಲಾಗುತ್ತದೆ ಮತ್ತು ನಿಗದಿತ ಅವಧಿಗೆ ವಾಹಿನಿಯ ಪ್ರಸಾರವನ್ನು ನಿರ್ಬಂಧಿಸಲಾಗುತ್ತದೆ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಮನರಂಜನಾ ವಾಹಿನಿಗಳು ಯಾವುದೇ ಕಾರ್ಯಕ್ರಮಗಳ ನೇರ ಪ್ರಸಾರ ಮಾಡುವುದಕ್ಕೂ ಮುನ್ನ 15 ದಿನ ಮೊದಲೇ ಅನುಮತಿ ಪಡೆಯಲೇಬೇಕು. ಪೂರ್ವಾನುಮತಿ ಪಡೆಯದೇ ಇದ್ದಲ್ಲಿ, ಕಾರ್ಯಕ್ರಮದ ಪ್ರಸಾರವನ್ನು ತಡೆಯಲಾಗುತ್ತದೆ ಮತ್ತು ವಾಹಿನಿಗೆ ನೀಡಲಾಗಿರುವ ಅನುಮತಿಯನ್ನು ಅಮಾನತು ಮಾಡಲಾಗುತ್ತದೆ ಎಂದು ವಿವರಿಸಲಾಗಿದೆ.

ಪ್ರಮುಖ ಅಂಶಗಳು

- ವಿದೇಶಿ ವಾಹಿನಿಗಳನ್ನು ಮತ್ತು ಅವುಗಳ ಕಾರ್ಯಕ್ರಮಗಳನ್ನು ಭಾರತದಿಂದ ಅಪ್‌ಲಿಂಕ್ ಮಾಡಬಹುದು
- ಈ ಮೊದಲು ಒಂದು ವಾಹಿನಿಗೆ ಒಂದೇ ಟೆಲಿಪೋರ್ಟ್ ಬಳಕೆಗೆ ಅವಕಾಶ ಇತ್ತು. ಈಗ ಈ ಮಿತಿಯನ್ನು ತೆಗೆದುಹಾಕಲಾಗಿದೆ
- ವಾಹಿನಿಗಳು ಪ್ರಸಾರದ ಭಾಷೆಯನ್ನು ಬದಲಾವಣೆ ಮಾಡಿಕೊಳ್ಳುವ ಮುನ್ನ ಪೂರ್ವಾನುಮತಿ ಪಡೆಯಬೇಕಿಲ್ಲ
- ಸುದ್ದಿ ವಾಹಿನಿಗಳಿಗೆ ಈವರೆಗೆ ಒಂದು ವರ್ಷದವರೆಗೆ ಮಾತ್ರ ಅನುಮತಿ ನೀಡಲಾಗುತ್ತಿತ್ತು. ನಂತರ ಪ್ರತಿವರ್ಷ ಅನುಮತಿ ಪಡೆಯಬೇಕಿತ್ತು. ಈಗ ಒಂದೇ ಬಾರಿ ಐದು ವರ್ಷಗಳ ಅವಧಿಗೆ ಅನುಮತಿ ನೀಡಲಾಗುತ್ತದೆ

ರಾಷ್ಟ್ರಧ್ವಜಕ್ಕೆ ಪ್ರಣಾಮ

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ ಬಳಿಕ ಡಿ.ವೈ.ಚಂದ್ರಚೂಡ್ ಅವರು ತಮ್ಮ ಕಚೇರಿಯಲ್ಲಿನ ತ್ರಿವರ್ಣ ಧ್ವಜಕ್ಕೆ ನಮಸ್ಕರಿಸಿದರು. ಪತ್ನಿ ಕಲ್ಪನಾ ದಾಸ್ ಇದ್ದಾರೆ –ಪಿಟಿಐ ಚಿತ್ರ

ಸುದ್ದಿ 9

ಕ್ರಿಕೆಟ್: ಫೈನಲ್‌ಗೆ ಪಾಕಿಸ್ತಾನ

ಸಿಡ್ನಿ (ಪಿಟಿಐ): ಪಾಕಿಸ್ತಾನ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿತು.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಪಾಕ್ ತಂಡವು 7 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡವು ಡೆರಿಲ್ ಮಿಚೆಲ್ (ಔಟಾಗದೆ 53) ಅರ್ಧಶತಕ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 152 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ ಶತಕದ ಜೊತೆಯಾಟವಾಡಿದರು. ಇದರಿಂದಾಗಿ ತಂಡವು 19.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 153 ರನ್ ಗಳಿಸಿತು.

ಗುರುವಾರ ಅಡಿಲೇಡ್‌ನಲ್ಲಿ ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಆಡಲಿದೆ. 10

ಕಂಪನಿಯ ಶೇಕಡ 13ರಷ್ಟು ನೌಕರರು ಮನೆಗೆ

ಮೆಟಾ: 11 ಸಾವಿರ ನೌಕರರ ವಜಾ

ನ್ಯೂಯಾರ್ಕ್ (ಎಪಿ): ಫೇಸ್‌ಬುಕ್‌ನ ಮಾಲೀಕತ್ವ ಹೊಂದಿರುವ ಮೆಟಾ ಕಂಪನಿಯು 11 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುತ್ತಿದೆ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮಾರ್ಕ್ ಝುಕರ್‌ಬರ್ಗ್ ತಿಳಿಸಿದ್ದಾರೆ.

ಅಂದರೆ, ಮೆಟಾ ಕಂಪನಿಯ ಶೇಕಡ 13ರಷ್ಟು ನೌಕರರು ಕೆಲಸ ಕಳೆದುಕೊಳ್ಳಲಿದ್ದಾರೆ. ಟ್ವಿಟರ್ ಕಂಪನಿಯಲ್ಲಿ ಉದ್ಯೋಗ ಕಡಿತ ನಡೆದ ವಾರದ ನಂತರದಲ್ಲಿ ಮೆಟಾ ಕೂಡ ಅದೇ ಹಾದಿ ತುಳಿದಿದೆ. ಸಾಂಕ್ರಾಮಿಕದ ಅವಧಿಯಲ್ಲಿ ದೊಡ್ಡ ಮಟ್ಟದಲ್ಲಿ ನೇಮಕಾತಿ ನಡೆಸಿದ್ದ ಹಲವು ತಂತ್ರಜ್ಞಾನ ಕಂಪನಿಗಳು ಈಗ ಉದ್ಯೋಗ ಕಡಿತ ಮಾಡುತ್ತಿವೆ.

ಸಾಂಕ್ರಾಮಿಕ ಕೊನೆಗೊಂಡ ನಂತರದಲ್ಲಿಯೂ ತೀವ್ರಗತಿಯ ಬೆಳವಣಿಗೆ ಇರುತ್ತದೆ ಎಂಬ ನಿರೀಕ್ಷೆಯಲ್ಲಿ ದೊಡ್ಡ ಮಟ್ಟದಲ್ಲಿ ನೇಮಕಾತಿ ನಡೆಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ, ದುರದೃಷ್ಟದ ಸಂಗತಿಯೆಂದರೆ, ನಿರೀಕ್ಷಿಸಿದ ರೀತಿಯಲ್ಲಿ ಅದು ಆಗಲಿಲ್ಲ ಎಂದು ಝುಕರ್‌ಬರ್ಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇತರ ಸಾಮಾಜಿಕ ಜಾಲತಾಣ ಕಂಪನಿಗಳ ರೀತಿಯಲ್ಲಿಯೇ ಮೆಟಾ ಕೂಡ ಲಾಕ್‌ಡೌನ್ ಕಾಲಘಟ್ಟದಲ್ಲಿ ಹಣಕಾಸಿನ ವರಮಾನ ಹೆಚ್ಚಿಸಿಕೊಂಡಿತ್ತು. ಆ ಸಂದರ್ಭದಲ್ಲಿ ಜನ ಹೆಚ್ಚಾಗಿ ಮನೆಯೊಳಗೆ ಕಾಲ ಕಳೆಯುತ್ತಿದ್ದರು, ತಮ್ಮ ಸ್ಮಾರ್ಟ್‌ಫೋನ್ ಮೂಲಕ ಸಾಮಾಜಿಕ ಜಾಲತಾಣಗಳನ್ನು ಹೆಚ್ಚು ಬಳಸುತ್ತಿದ್ದರು.



ಆದರೆ, ನಿರ್ಬಂಧಗಳು ಸಡಿಲವಾದ ನಂತರದಲ್ಲಿ ಜನ ಹೊರಗೆ ಹೋಗಲು ಆರಂಭಿಸಿದರು. ಕಂಪನಿಗಳ ಆದಾಯದ ಬೆಳವಣಿಗೆಯು ಕುಸಿಯಲಾರಂಭಿಸಿತು. ಆರ್ಥಿಕ ಮಂದಗತಿ ಹಾಗೂ ಆನ್‌ಲೈನ್ ಜಾಹೀರಾತು ವರಮಾನ ಹೆಚ್ಚಳವು ಆಶಾದಾಯಕ ಆಗಿಲ್ಲದಿರುವುದು ಮೆಟಾ ಕಂಪನಿಯ ಸಮಸ್ಯೆಗಳಿಗೆ ಕಾರಣ. ಮೆಟಾ ಕಂಪನಿಗೆ ಹೆಚ್ಚಿನ ಆದಾಯ ಸಿಗುವುದು ಆನ್‌ಲೈನ್ ಜಾಹೀರಾತುಗಳ ಮೂಲಕ.

ಮೆಟಾ ಕಂಪನಿಯು 'ಮೆಟಾವರ್ಸ್' ಮೇಲೆ 10 ಬಿಲಿಯನ್ ಡಾಲರ್‌ಗೂ (ಅಂದಾಜು ₹ 81 ಸಾವಿರ ಕೋಟಿ) ಹೆಚ್ಚು ಹೂಡಿಕೆ ಮಾಡಿದೆ. ಇದು ಆ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದವರ ಚಿಂತೆಗೆ ಕಾರಣವಾಗಿದೆ. ಟಿಕ್‌ಟಾಕ್ ಕಡೆಯಿಂದ ಎದುರಾಗಿರುವ ಸ್ಪರ್ಧೆಯು ಮೆಟಾ ಕಂಪನಿಗೆ ಸವಾಲಾಗಿದೆ. ಮೆಟಾ ಮಾಲೀಕತ್ವದ ಇನ್‌ಸ್ಟಾಗ್ರಾಂ ಕಡೆಯಿಂದ ಯುವಕರು ಟಿಕ್‌ಟಾಕ್ ಕಡೆ ವಾಲುತ್ತಿದ್ದಾರೆ.

ತಗ್ಗಿದ ವರಮಾನ

ಆ್ಯಪಲ್ ಕಂಪನಿಯು ಖಾಸಗಿತನಕ್ಕೆ ಸಂಬಂಧಿಸಿದಂತೆ ಜಾರಿಗೊಳಿಸಿರುವ ನೀತಿಗಳಿಂದಾಗಿಯೂ ಮೆಟಾ ವರಮಾನಕ್ಕೆ ಧಕ್ಕೆ ಆಗಿದೆ. ಮೆಟಾ ಕಂಪನಿಯ ಷೇರು ಮೌಲ್ಯವು ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಇದುವರೆಗೆ ಶೇ 69ರಷ್ಟು ಕುಸಿದಿದೆ.

'ನಾವು ವೆಚ್ಚವನ್ನು ಕಡಿಮೆ ಮಾಡಿದ್ದೇವೆ, ಬಜೆಟ್ ತಗ್ಗಿಸಿದ್ದೇವೆ, ಭತ್ಯೆಗಳನ್ನು ಕಡಿಮೆ ಮಾಡುತ್ತಿದ್ದೇವೆ, ರಿಯಲ್ ಎಸ್ಟೇಟ್ ವಲಯದಲ್ಲಿ ನಮ್ಮ ಹೆಜ್ಜೆ ಗುರುತು ಕಡಿಮೆ ಮಾಡುತ್ತಿದ್ದೇವೆ' ಎಂದು ಮಾರ್ಕ್ ಝುಕರ್‌ಬರ್ಗ್ ಹೇಳಿದ್ದಾರೆ.

ನೌಕರರನ್ನು ಕೆಲಸದಿಂದ ತೆಗೆಯುವ ನಿರ್ಧಾರವು 'ಮೆಟಾ ಇತಿಹಾಸದಲ್ಲಿನ ಅತ್ಯಂತ ಕಷ್ಟದ ಬದಲಾವಣೆ' ಎಂದು ಅವರು ತಿಳಿಸಿದ್ದಾರೆ.

ಕೆಎಸ್‌ಸಿಎಗೆ ರಘುರಾಮ್ ಭಟ್ ಅಧ್ಯಕ್ಷ

ಬೆಂಗಳೂರು: ಕ್ರಿಕೆಟಿಗ ರಘುರಾಮ್ ಭಟ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

64 ವರ್ಷದ ಭಟ್ ಅವರು ಎರಡು ಟೆಸ್ಟ್ ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. 82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದರು. ಕರ್ನಾಟಕದ ಪ್ರಮುಖ ಸ್ಪಿನ್ನರ್‌ಗಳಲ್ಲಿ ರಘುರಾಮ್ ಕೂಡ ಒಬ್ಬರು.

ಕೆಎಸ್‌ಸಿಎ ಚುನಾವಣೆಯು ನವೆಂಬರ್ 20ರಂದು ನಡೆಯಬೇಕಿತ್ತು. ನಾಮಪತ್ರಗಳನ್ನು ಮರಳಿ ಪಡೆಯಲು ಬುಧವಾರ ಕೊನೆಯ ದಿನವಾಗಿತ್ತು. ರಘುರಾಮ್ ಅವರ ಪ್ರತಿಸ್ಪರ್ಧಿಗಳು ನಾಮಪತ್ರ ಹಿಂತೆಗೆದುಕೊಂಡರು.ಎ. ಶಂಕರ್ ಕಾರ್ಯದರ್ಶಿ ಹಾಗೂ ಬಿ.ಕೆ. ಸಂಪತ್ ಕುಮಾರ್ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ. 10

'ಹಿಂದೂ' ಪದ ವಿವಾದ: 'ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ'

ಹೇಳಿಕೆ ಹಿಂಪಡೆದ ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹಿಂದೂ ಪದಕ್ಕೆ ಕೆಟ್ಟ ಅರ್ಥಗಳಿವೆ' ಎಂದು ಹೇಳಿಕೆ ನೀಡಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ ಜಾರಕಿಹೊಳಿ ಅವರು ಬುಧವಾರ ಆ ಹೇಳಿಕೆಯನ್ನು ಹಿಂಪಡೆದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಸತೀಶ ಜಾರಕಿಹೊಳಿ, 'ಹಿಂದೂ ಪದ ಕುರಿತು ನಾನು ನೀಡಿದ ಹೇಳಿಕೆಯನ್ನು ತಿರುಚಿ ಅಪಪ್ರಚಾರ ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿ ಆಗಬಾರದೆಂದು ಹೇಳಿಕೆ ಹಿಂಪಡೆದಿದ್ದೇನೆ. ನನ್ನ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಅಲ್ಲದೇ, 'ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನನ್ನನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಹೊರಟಿವೆ. ನನ್ನ ತೇಜೋವಧೆ ಮಾಡುವ ವ್ಯವಸ್ಥಿತ ಪಿತೂರಿ ನಡೆದಿದೆ. ಈ ಎಲ್ಲ ಅಂಶಗಳ ಕುರಿತು ಪರಿಶೀಲಿಸಬೇಕು. ನೈಜ ಸ್ಥಿತಿ ವಿವರಿಸದೇ, ಅವಾಂತರ ಸೃಷ್ಟಿಸಿದವರ ವಿರುದ್ಧ ತನಿಖೆಗಾಗಿ ಸಮಿತಿ ರಚಿಸಬೇಕು' ಎಂದೂ ವಿನಂತಿಸಿದ್ದಾರೆ.

'ಹಿಂದೂ ಶಬ್ದ ಪರ್ಷಿಯನ್ ಭಾಷೆಯಿಂದ ಬಂದಿದೆ. ಇದು ಭಾರತಕ್ಕೆ ಹೇಗೆ ಬಂತು? ಹಲವಾರು ಲೇಖನಗಳಲ್ಲಿ ಹಿಂದೂ ಪದದ ಬಗ್ಗೆ ಕೆಟ್ಟ ಅರ್ಥಗಳಿವೆ ಎಂಬುದಾಗಿ ಬರೆದಿದ್ದಾರೆ ಎಂದು ನಾನು ಹೇಳಿಕೆ ನೀಡಿದ್ದೇನೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ಆಗಬೇಕಾದುದು ಅವಶ್ಯ ಎಂದು ಹೇಳಿದ್ದೇನೆ. ವಿಕಿಪೀಡಿಯಾ, ಪುಸ್ತಕಗಳು, ಶಬ್ದಕೋಶಗಳು ಹಾಗೂ ಇತಿಹಾಸಕಾರರ ಬರಹದ ಉಲ್ಲೇಖದ ಮೇಲೆ ಈ ನನ್ನ ಭಾಷಣ ಆಧರಿತವಾಗಿದೆ' ಎಂದು ವಿವರಿಸಿದ್ದಾರೆ.

ನಿಪ್ಪಾಣಿಯಲ್ಲಿ ನ.6ರಂದು ನಡೆದ ಮಾನವ ಬಂಧುತ್ವ ವೇದಿಕೆಯ ಕಾರ್ಯಕ್ರಮದಲ್ಲಿ ಸತೀಶ ಜಾರಕಿಹೊಳಿ ಈ ವಿಷಯ ಪ್ರಸ್ತಾಪಿಸಿದ್ದರು. 'ಹಿಂದೂ ಎಂಬ ಪದಕ್ಕೆ ಕೆಟ್ಟ ಅರ್ಥಗಳಿವೆ. ಈ ಬಗ್ಗೆ ಶಬ್ದಕೋಶ ಹಾಗೂ ವಿಕಿಪೀಡಿಯಾದಲ್ಲಿ ದಾಖಲೆಗಳಿವೆ. ನಾನು ಕ್ಷಮೆ ಕೇಳುವ ಪ್ರಮೇಯವೇ ಇಲ್ಲ. ನನ್ನದು ತಪ್ಪೆಂದು ಸಾಬೀತು ಮಾಡಿದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಮಂಗಳವಾರ ಸವಾಲು ಹಾಕಿದ್ದರು.

ಇದನ್ನು ಖಂಡಿಸಿ ಬುಧವಾರ ರಾಜ್ಯದ ವಿವಿಧೆಡೆ ಬಿಜೆಪಿ ಹಾಗೂ ವಿವಿಧ ಸಂಘಟನೆಗಳಿಂದ ಪ್ರತಿಭಟನೆ ವ್ಯಕ್ತವಾಯಿತು.

ತನಿಖೆ ಮಾಡುವುದಕ್ಕೆ ಏನಿದೆ: ಸಿ.ಎಂ



ಬೆಳಗಾವಿ: 'ಮಾತು ಆಡಿದರೆ ಹೋಯಿತು. ಮುತ್ತು ಒಡೆದರೆ ಹೋಯಿತು. ಹೀಗಿರುವಾಗ ಶಾಸಕ ಸತೀಶ ಜಾರಕಿಹೊಳಿ ಮಾತು ಆಡಿದ್ದಷ್ಟೇ ಅಲ್ಲ, ಅದನ್ನು ಸಮರ್ಥಿಸಿಕೊಳ್ಳುವ ಸಾಹಸ ಮಾಡಿದರು. ಈಗ ವಿಷಾದ ವ್ಯಕ್ತಪಡಿಸಿರುವುದು ಎಷ್ಟರಮಟ್ಟಿಗೆ ಸರಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

'ಹಿಂದೂ' ಪದದ ಬಗ್ಗೆ ತಾವು ನೀಡಿದ್ದ ಹೇಳಿಕೆ ಹಿಂದಕ್ಕೆ ಪಡೆದಿರುವುದಾಗಿ ಸತೀಶ ಜಾರಕಿಹೊಳಿ ಬರೆದ ಪತ್ರದ ವಿಚಾರವಾಗಿ ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಅವರು ಪ್ರತಿಕ್ರಿಯಿಸಿದರು. 'ಸತೀಶ ಅವರು ಶಬ್ದಕೋಶ ನೋಡಿ ಮಾತನಾಡಿದ್ದೇನೆ ಎನ್ನುತ್ತಾರೆ. ಆದರೆ, ಅದರ ಅರ್ಹತೆ ಏನು? ಈಗಾಗಲೇ ವಿಕಿಪೀಡಿಯಾ ಹಲವು ಬಾರಿ ತನಿಖೆಗೆ ಒಳಪಟ್ಟಿದೆ. ಆ ಸಂಸ್ಥೆಯ ಮುಖ್ಯಸ್ಥನ ಮೇಲೆ ಹಲವು ಪ್ರಕರಣಗಳಿವೆ' ಎಂದ ಬೊಮ್ಮಾಯಿ, 'ನನಗೆ ಅವರು ನೀಡಿರುವ ಪತ್ರದಲ್ಲಿ ಯಾವ ಅಂಶಗಳಿವೆ ಎಂಬುದನ್ನು ಪರಿಶೀಲಿಸುತ್ತೇನೆ. ತನಿಖೆ ಮಾಡುವುದಕ್ಕೆ ಏನಿದೆ' ಎಂದು ಪ್ರಶ್ನಿಸಿದರು.

7 ನೇ ವೇತನ ಆಯೋಗ: ಸುಧಾಕರ ರಾವ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ ರಾವ್ ಅವರ ಅಧ್ಯಕ್ಷತೆಯಲ್ಲಿ 7ನೇ ವೇತನ ಆಯೋಗ ರಚಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ದಾವಣಗೆರೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು ಈ ವಿಷಯ ತಿಳಿಸಿದರು. ಈ ಸಂಬಂಧ ಕಡತ ಸಿದ್ಧವಾಗಿದ್ದು, ಮುಖ್ಯಮಂತ್ರಿ ಸಹಿಯಷ್ಟೇ ಬಾಕಿ ಇದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ವೃಂದಗಳ ಒಟ್ಟು ನೌಕರರು ಪಡೆಯುತ್ತಿರುವ ಮೂಲ ವೇತನದ ಮೊತ್ತ ₹23,908 ಕೋಟಿ. ಈಗ ತುಟ್ಟಿ ಭತ್ಯೆ ದರ ಮೂಲ



ಸುಧಾಕರ ರಾವ್

ವೇತನದ ಶೇ 31 ಇದ್ದು, ಇದರ ಮೊತ್ತ ₹7,411.48 ಕೋಟಿ. ಇವೆರಡೂ ಸೇರಿದರೆ ₹31,319 ಕೋಟಿ ಆಗುತ್ತದೆ. ಮೂಲ ವೇತನ ಮತ್ತು ಶೇ 31 ರಷ್ಟು ತುಟ್ಟಿ ಭತ್ಯೆ ವಿಲೀನದ ನಂತರ ನಿಗದಿಯಾಗುವ ವೇತನಕ್ಕೆ ಶೇ 40 ಫಿಟ್‌ಮೆಂಟ್ ನೀಡಿದಲ್ಲಿ ಸರ್ಕಾರಕ್ಕೆ ಆಗುವ ಹೆಚ್ಚುವರಿ ವೆಚ್ಚ ₹12,527 ಕೋಟಿಯಾಗಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ತಿಳಿಸಿದ್ದಾರೆ.

ಈಗ 6 ಲಕ್ಷ ಸರ್ಕಾರಿ ನೌಕರರು, ಅಧಿಕಾರಿಗಳು, 3.40 ಲಕ್ಷ ಮಂದಿ ವಿವಿಧ ನಿಗಮ, ಮಂಡಳಿಗಳು, ಪ್ರಾಧಿಕಾರಿಗಳು, ವಿಶ್ವವಿದ್ಯಾಲಯಗಳ ಸಿಬ್ಬಂದಿ, 4 ಲಕ್ಷ ಪಿಂಚಣಿದಾರರು ಇದ್ದು, ವೇತನ ಪರಿಷ್ಕರಣೆ ಇವರೆಲ್ಲರಿಗೂ ಅನ್ವಯವಾಗಲಿದೆ ಎಂದು ಹೇಳಿದ್ದಾರೆ.

ಅಲ್ಲದೆ, ಹೊಸ ಆಯೋಗವು ಆಡಳಿತಾತ್ಮಕ ವಿಷಯಗಳ ಸುಧಾರಣೆ, ಖಾಲಿ ಇರುವ ಹುದ್ದೆಗಳ ಭರ್ತಿ, ನೇಮಕಾತಿ ಮತ್ತು ಮುಂಬಡ್ತಿ ನಿಯಮಗಳ ಸರಳೀಕರಣಕ್ಕೆ ಶಿಫಾರಸು, ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಗೆ ಶಿಫಾರಸು, ಅನವಶ್ಯಕ ವೆಚ್ಚಗಳಿಗೆ ಕಡಿವಾಣ, ಸರ್ಕಾರಿ ಕಚೇರಿಗಳಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಮಹಿಳಾ ನೌಕರರ ಸಮಸ್ಯೆಗಳ ಸುಧಾರಣೆ ಬಗ್ಗೆಯೂ ಗಮನಹರಿಸಲಿದೆ.

ಕೇಂದ್ರ ಸರ್ಕಾರದ ಮಾದರಿಯಲ್ಲಿ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಮತ್ತು ವಿಶೇಷ ಭತ್ಯೆಗಳ ಪರಿಷ್ಕರಣೆ, ವಿವಿಧ ಇಲಾಖಾ ವೃಂದಗಳ ವೇತನ ಶ್ರೇಣಿಯಲ್ಲಿನ ತಾರತಮ್ಯ ಸರಿಪಡಿಸಬೇಕು ಎಂದೂ ನೌಕರರ ಸಂಘ ಮನವಿ ಮಾಡಿದೆ.

ಒಳ ಪುಟಗಳು

ನೇಪಾಳದಲ್ಲಿ ಭೂಕಂಪ: 6 ಸಾವು 8
ಉಡಾವಣಾ ವಾಹನಗಳ ಲ್ಯಾಂಡಿಂಗ್ ಪರೀಕ್ಷೆಗೆ ಸಿದ್ಧತೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆಪಿಎಸ್‌ಸಿ: ಅಕ್ರಮ ತಡೆಗೆ ಕಣ್ಗಾವಲು • ಬ್ಲೂಟೂತ್ ಪತ್ತೆಗೆ ಫ್ರಿಸ್ಕಿಂಗ್

ಅಭ್ಯರ್ಥಿ ಖಾತ್ರಿಗೆ ಐರಿಸ್ ಸ್ಕ್ಯಾನ್!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕಳ್ಳ ಮಾರ್ಗದ ಮೂಲಕ ಎದುರಿಸುವ ಅಭ್ಯರ್ಥಿಗಳ ಪತ್ತೆಗೆ ಅತ್ಯಾಧುನಿಕ 'ಕಣ್ಗಾವಲು' ವ್ಯವಸ್ಥೆ ಅಳವಡಿಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮುಂದಾಗಿದೆ.

ಪರೀಕ್ಷೆಗೆ ಅಸಲಿ ಅಭ್ಯರ್ಥಿ ಬದಲು ನಕಲಿ ವ್ಯಕ್ತಿ ಹಾಜರಾಗುವುದು, ಬ್ಲೂಟೂತ್ ಸಾಧನ ಬಳಕೆ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ, ಪರೀಕ್ಷೆ ಆರಂಭಕ್ಕೂ ಮೊದಲೇ ಅಭ್ಯರ್ಥಿಗಳ ನೈಜತೆ ಪರಿಶೀಲಿಸಲು ಐರಿಸ್ (ಕಣ್ಣಿನ ಪಾಪೆ) ಸ್ಕ್ಯಾನ್ ಮತ್ತು ದೇಹದ ಯಾವುದೇ ಭಾಗದಲ್ಲಿ ಸೂಕ್ಷ್ಮ ಎಲೆಕ್ಟ್ರಾನಿಕ್ ಉಪಕರಣ ಹೊಂದಿದ್ದರೂ ಶೋಧಿಸುವ (ಫ್ರಿಸ್ಕಿಂಗ್) ಸಾಧನವನ್ನು ಪರೀಕ್ಷಾ ಕೇಂದ್ರದಲ್ಲಿ ಅಳವಡಿಸಲು ಕೆಪಿಎಸ್‌ಸಿ ತೀರ್ಮಾನಿಸಿದೆ.

ಬ್ಲೂ ಟೂತ್ ಬಳಸಿ ಪರೀಕ್ಷೆ ಬರೆದು ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಸಹಾಯಕ ಎಂಜಿನಿಯರ್ ಹುದ್ದೆ ಗಿಟ್ಟಿಸಲು ಯತ್ನಿಸಿದ ಮೂವರನ್ನು ಕೆಪಿಎಸ್‌ಸಿ ಡಿಬಾರ್ ಮಾಡಿದೆ. ಎಸ್‌ಡಿಎ, ಎಫ್‌ಡಿಎ ನೇಮಕಾತಿಗೆ ನಡೆದ ಪರೀಕ್ಷೆಯಲ್ಲೂ ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಇಂಥ ಅಕ್ರಮಗಳನ್ನು ತಡೆಯಲು ಇದೇ ಮೊದಲ ಬಾರಿಗೆ ಹೊಸ ವ್ಯವಸ್ಥೆ ಅಳವಡಿಸಲು ಉದ್ದೇಶಿಸಲಾಗಿದೆ.

ಪ್ರಜಾವಾಣಿ ವಿಶೇಷ

ಈ ಬಗ್ಗೆ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್, 'ಸ್ಪರ್ಧಾತ್ಮಕ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಅತಿ ಸೂಕ್ಷ್ಮ, ಸೂಕ್ಷ್ಮವೆಂದು ಗುರುತಿಸಿದ ಪರೀಕ್ಷಾ ಕೇಂದ್ರಗಳ ಮೇಲೆ ಇನ್ನು ಮುಂದೆ ನಮ್ಮ ಕೇಂದ್ರ ಕಚೇರಿಯಿಂದಲೇ ಕಣ್ಣಿಡಲು ತೀರ್ಮಾನಿಸಲಾಗಿದೆ. ಆ ಮೂಲಕ, ಪರೀಕ್ಷಾ ಹಂತದಲ್ಲಿ ಯಾವುದೇ ಅಕ್ರಮ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು' ಎಂದರು.

'ಪರೀಕ್ಷೆ ನಡೆಸಲು ಆಯ್ಕೆ ಮಾಡುವ ಕೇಂದ್ರಗಳ ಮ್ಯಾಪಿಂಗ್ ನಡೆಸಿ ಸೂಕ್ಷ್ಮ, ಅತಿಸೂಕ್ಷ್ಮ ಕೇಂದ್ರಗಳನ್ನು ಗುರುತಿಸುವ ಕೆಲಸ ಈಗಾಗಲೇ ಆರಂಭವಾಗಿದೆ. ಅಭ್ಯರ್ಥಿಗಳ ನೈಜತೆ ಪರಿಶೀಲನೆ, ಸಿಟಿಟಿವಿ ಕ್ಯಾಮೆರಾ ಅಳವಡಿಕೆ, ಎಲೆಕ್ಟ್ರಾನಿಕ್ ಉಪಕರಣ ಇದೆಯೇ ಎಂದು ಶೋಧಿಸುವ ವ್ಯವಸ್ಥೆಗಳನ್ನು ಯಾವ ಕೇಂದ್ರಗಳಲ್ಲಿ ಅಳವಡಿಸಬೇಕೆಂದು ಪರೀಕ್ಷಾ ಕೇಂದ್ರಗಳ ಸೂಕ್ಷ್ಮತೆಯನ್ನು ತಿಳಿದುಕೊಂಡ ಬಳಿಕ ನಿರ್ಧರಿಸಲಾಗುವುದು' ಎಂದು ಹೇಳಿದರು.

'ಪರೀಕ್ಷಾ ಕೇಂದ್ರವಾಗಿ ಆಯ್ಕೆ ಮಾಡುವ ಬಹುತೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಈಗಾಗಲೇ ಸಿಸಿಟಿವಿ ಕ್ಯಾಮೆರಾಗಳಿವೆ. ಆದರೆ, ಅವುಗಳನ್ನು ಶಾಲಾ ಆಡಳಿತ ಮಂಡಳಿಗಳೇ ನಿರ್ವಹಿಸುತ್ತಿವೆ. ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ನಡೆದರೆ ಅಲ್ಲಿನ ಸಿಸಿಟಿವಿ ಕ್ಯಾಮೆರಾದ ವಿಡಿಯೊ ತುಣುಕುಗಳನ್ನು ಪಡೆದು ಪರಿಶೀಲಿಸಲಾಗುತ್ತದೆ. ಆದರೆ, ಕೆಲವು ಸಂಸ್ಥೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕೆಲಸವೇ ಮಾಡುತ್ತಿಲ್ಲ. ಇನ್ನೂ ಕೆಲವು ಸಂಸ್ಥೆಯವರು ವಿಡಿಯೊ ತುಣುಕುಗಳನ್ನು ಸಂಗ್ರಹಿಸಿಡುತ್ತಿಲ್ಲ. ಈ ಕಾರಣಕ್ಕೆ ಖಾಸಗಿ ವೃತಿಪರ ಸಂಸ್ಥೆಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಗುತ್ತಿಗೆ ನೀಡಿ, ಪರೀಕ್ಷಾ ವ್ಯವಸ್ಥೆಯ ಮೇಲೆ ನಿಗಾ ವಹಿಸಲು ಉದ್ದೇಶಿಸಲಾಗಿದೆ. ಎಲೆಕ್ಟ್ರಾನಿಕ್ ಉಪಕರಣವಿದೆಯೇ ಎಂದು ಪುರುಷ ಮತ್ತು ಮಹಿಳಾ ಅಭ್ಯರ್ಥಿಯ ಇಡೀ ದೇಹವನ್ನು ಶೋಧಿಸುವ (ಫ್ರಿಸ್ಕಿಂಗ್) ಪ್ರತ್ಯೇಕ ವ್ಯವಸ್ಥೆಯನ್ನೂ ಮಾಡಲಾಗುವುದು' ಎಂದು ವಿವರ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯುವ ಉದ್ದೇಶದಿಂದ ಅಭ್ಯರ್ಥಿಗಳು, ಪರೀಕ್ಷಾ ಕೇಂದ್ರಗಳ ಮೇಲೆ ಕಣ್ಣಿಡುವ ವ್ಯವಸ್ಥೆಯ ಸೇವೆ ಪಡೆಯಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ

ವಿಕಾಸ್ ಕಿಶೋರ್ ಸುರಳ್ಕರ್
ಕಾರ್ಯದರ್ಶಿ, ಕೆಪಿಎಸ್‌ಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್‌ಸಿಎನ್‌ಬಿಎನ್‌ಸಿಎಸ್‌ಟಿ_14_2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಅ) ಆರ್‌ಡಿಎಸ್‌ಓ ಡ್ರಾಯಿಂಗ್ ಸಂ. ಟಿ–8673–8680ಗೆ ಸೇತುವೆ ಸಂಪರ್ಕಕ್ಕಾಗಿ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಸರಬರಾಜು. ಪ್ರಮಾಣ – 60 ಸೆಟ್‌ಗಳು. ಆ) ಆರ್‌ಡಿಎಸ್‌ಓ ಡ್ರಾಯಿಂಗ್ ಸಂ. ಟಿ–8672ಗೆ ಬ್ರಿಡ್ಜ್ ಗಾರ್ಡ್ ರೈಲ್‌ಗಾಗಿ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಸರಬರಾಜು. ಪ್ರಮಾಣ – 2700 ಸಂಖ್ಯೆಗಳು. ಇ) ಆರ್‌ಡಿಎಸ್‌ಓ ಡ್ರಾಯಿಂಗ್ ಸಂ. ಟಿ–8671ಗೆ ಲೆವೆಲ್ ಕ್ರಾಸಿಂಗ್‌ಗಳಿಗಾಗಿ 60 ಕೆಜಿ ಅಗಲದ ಪಿಎಸ್‌ಸಿ ಸ್ಲೀಪರ್‌ಗಳ ತಯಾರಿಕೆ ಮತ್ತು ಸರಬರಾಜು. ಪ್ರಮಾಣ – 700 ಸಂಖ್ಯೆಗಳು.	ರೂ. 1,36,42,638/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28–11–2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ಉಗ್ರಾಣ / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/472/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಬಿಸಿ–ಜಿಎಸ್‌ಯು–ಓಎಫ್‌ಎಫ್ ಬಿಎಲ್‌ಡಿಜಿ–04 ದಿನಾಂಕ : 03–11–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ, ಬೆಂಗಳೂರು ಇವರಿಗಾಗಿ ಹಾಲಿ ಇರುವ ವಿಭಾಗೀಯ ಕಛೇರಿ ಅನೆಕ್ಸ್ ಕಟ್ಟಡ ಮೂರನೇ ಮಹಡಿಯಲ್ಲಿ ಕಛೇರಿ ಸ್ಥಳಾವಕಾಶದ ಉದ್ದೇಶಿತ ನಿರ್ಮಾಣ. ನಿರ್ವಹಣಾ ಅವಧಿ 12 ತಿಂಗಳು.	ರೂ. 2,27,85,699/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25–11–2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ

ಪಿಯುಬಿ/470/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಬೆಂಗಳೂರು

S.W.Railways SWRRLY SWRRLY

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ವರದಿ ಸಲ್ಲಿಕೆ • ಬಿಎಂಟಿಎಫ್ ನೆರವು ಕೇಳಿದ ಬಿಬಿಎಂಪಿ

ಹಲಸೂರು: ಗುರುದ್ವಾರದಿಂದ ರಾಜಕಾಲುವೆ ಒತ್ತುವರಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಲಸೂರಿನಲ್ಲಿ ಗುರುದ್ವಾರದ ಕಾಮಗಾರಿಗಾಗಿ ರಾಜಕಾಲುವೆ ಒತ್ತುವರಿ ಮಾಡಲಾಗಿದ್ದು, ಈ ಒತ್ತುವರಿಯನ್ನು ಬೆಂಗಳೂರು ಮಹಾನಗರ ಕಾರ್ಯಪಡೆಯ (ಬಿಎಂಟಿಎಫ್) ಸಹಕಾರದಲ್ಲಿ ತೆರವು ಮಾಡಲಾಗುತ್ತದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಿಳಿಸಿದೆ.

ಹಲಸೂರು ಕೆರೆಯ ಮೀಸಲು ಪ್ರದೇಶದಲ್ಲಿ ಪರಿಸರ ನಿಯಮಗಳನ್ನು ಉಲ್ಲಂಘಿಸಿ ಗುರುದ್ವಾರದವರು ಬಹು ಮಹಡಿ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿ ಹಲಸೂರಿನ ಶಾಂತಿ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ವಿವೇಕ್ ಎಂಬುವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠದಲ್ಲಿ ಪ್ರಕರಣ ದಾಖಲಿಸಿದ್ದರು. ಈ ಬಗ್ಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಜಂಟಿ ಸಮಿತಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು ಎಂದು ಎನ್‌ಜಿಟಿ ನಿರ್ದೇಶನ ನೀಡಿತ್ತು. ಈ ಬಗ್ಗೆ ವರದಿ ಸಲ್ಲಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಗೂ ಸೂಚನೆ ನೀಡಿತ್ತು. ಮಂಡಳಿಯು ಎನ್‌ಜಿಟಿಗೆ ಇದೀಗ ವರದಿ ಸಲ್ಲಿಸಿದೆ. ಈ ವರದಿಯಲ್ಲಿ ಒತ್ತುವರಿಯ ಬಗ್ಗೆ ಉಲ್ಲೇಖ ಇದೆ.

'ಗುರುದ್ವಾರದ ಆಡಳಿತ ಮಂಡಳಿಯು 10 ಸಾವಿರ ಚದರ ಮೀಟರ್ ಪ್ರದೇಶದಲ್ಲಿ 'ಗುರುದ್ವಾರ ಗುರು ಸಿಂಗ್ ಸಭಾ' ಕಟ್ಟಡ ನಿರ್ಮಾಣ ಮಾಡುತ್ತಿದೆ. ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನೂ ನಿರ್ಮಿಸುತ್ತಿದೆ. ರಾಜಕಾಲುವೆಯಲ್ಲಿ ಈ ಕಾಮಗಾರಿಯನ್ನು ನಡೆಸಲಾಗುತ್ತಿದೆ. ಮಂಡಳಿಯಿಂದ ಅನುಮತಿ ಪಡೆಯದೆ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ಬಗ್ಗೆ ಮಂಡಳಿಯು ಗುರುದ್ವಾರದ ಆಡಳಿತ ಮಂಡಳಿಗೆ ಜೂನ್‌ನಲ್ಲೇ ನೋಟಿಸ್ ನೀಡಿತ್ತು. ಈ ನೋಟಿಸ್‌ಗೆ ಈವರೆಗೆ ಉತ್ತರ ನೀಡಿಲ್ಲ' ಎಂದು ಮಂಡಳಿಯ ಹಿರಿಯ ಪರಿಸರ ಅಧಿಕಾರಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

'ರಾಜಕಾಲುವೆ ಒತ್ತುವರಿ ಮಾಡಿರುವ ವಿಚಾರವು ಬಿಬಿಎಂಪಿಯ ಪೂರ್ವ ವಿಭಾಗದ ಮುಖ್ಯ ಎಂಜಿನಿಯರ್ (ಪೂರ್ವ ವಿಭಾಗ) ಅವರ ಗಮನಕ್ಕೆ 2021ರ ಫೆಬ್ರುವರಿಯಲ್ಲೇ ಬಂದಿತ್ತು. ಈ ಬಗ್ಗೆ ಅವರು ಜಂಟಿ ಆಯುಕ್ತರಿಗೆ ಪತ್ರ ಬರೆದಿದ್ದರು. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಎಂಜಿನಿಯರ್‌ಗೆ ಸೂಚನೆ ನೀಡಿದ್ದರು. ರಾಜಕಾಲುವೆ ಗಡಿ ಗುರುತು ಮಾಡಲು ಸರ್ವೆ ನಡೆಸಬೇಕಿದ್ದು, ಸರ್ವೆಯರ್‌ಗಳನ್ನು ಒದಗಿಸುವಂತೆ ಮುಖ್ಯ ಎಂಜಿನಿಯರ್ ಅವರು ಜಿಲ್ಲಾಧಿಕಾರಿ ಅವರಿಗೆ ಈ ವರ್ಷದ ಜೂನ್‌ನಲ್ಲಿ ಪತ್ರ ಬರೆದಿದ್ದರು. ಆದರೆ, ಜಿಲ್ಲಾಡಳಿತ ಸರ್ವೆಯರ್‌ಗಳನ್ನು ಒದಗಿಸಿರಲಿಲ್ಲ. ಬಳಿಕ ಮತ್ತೊಮ್ಮೆ ಪತ್ರ ಬರೆದು ನೆನಪಿಸಲಾಗಿದೆ. ಸರ್ವೆಯರ್‌ಗಳು ಗಡಿ ಗುರುತು ಮಾಡಿದ ಬಳಿಕ ಒತ್ತುವರಿ ತೆರವು ಮಾಡಲಾಗುತ್ತದೆ ಎಂದು ಪಾಲಿಕೆ ತಿಳಿಸಿದೆ' ಎಂದೂ ವರದಿಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಗುರುದ್ವಾರ ಆಡಳಿತ ಮಂಡಳಿ, 'ಕಟ್ಟಡವನ್ನು 5 ಸಾವಿರ ಚದರ ಮೀಟರ್ ಜಾಗದಲ್ಲಷ್ಟೇ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಪ್ರತ್ಯೇಕ ಅನುಮತಿ ಪಡೆಯುವ ಅಗತ್ಯ ಇಲ್ಲ. ಜತೆಗೆ, ಗುರುದ್ವಾರವು ಹಲಸೂರು ಕೆರೆಯ ಕೆಳಭಾಗದಲ್ಲಿ ಇದೆ. ರಾಜಕಾಲುವೆಯ ಒತ್ತುವರಿಯನ್ನೂ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದೆ.

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-U04010KA2002SGC030438)

ಗ್ರಾಮೀಣ ಪ್ರದೇಶಗಳಲ್ಲಿ ನವೆಂಬರ್–2022 ಮಾಹೆಯ 3ನೇ ಶನಿವಾರ ದಿನಾಂಕ 19.11.2022 ರಂದು "ವಿದ್ಯುತ್ ಅದಾಲತ್" ನಡೆಸಲಾಗುವ ಹಳ್ಳಿಗಳ ವಿವರ

ಕ್ರ. ಸಂ.	ಜಿಲ್ಲೆ	ವಿಭಾಗ	ಉಪವಿಭಾಗ	ತಾಲ್ಲೂಕು	ವಿದ್ಯುತ್ ಅದಾಲತ್ ನಡೆಸಲಾಗುವ ಹಳ್ಳಿಯ ಹೆಸರು	ಭಾಗವಹಿಸುವ ಅಧಿಕಾರಿಯ ಹೆಸರು, ಪದನಾಮ
1	ಕೋಲಾರ	ಕೋಲಾರ	ಕೋಲಾರ ಗ್ರಾಮೀಣ ಉಪ ವಿಭಾಗ	ಕೋಲಾರ	ಸೀತಿ	ಶ್ರೀ. ನಟರಾಜ್.ಎಲ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ನಾಗರಾಜ.ಜಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
2	ಕೋಲಾರ	ಕೋಲಾರ	ಕೋಲಾರ ನಗರ ಉಪ–ವಿಭಾಗ	ಕೋಲಾರ	ಕೂಟೇರಿ	ಶ್ರೀ.ಕೆ.ಎಂ.ವಿ.ಸ್ವಾಮಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
3	ಕೋಲಾರ	ಕೋಲಾರ	ಶ್ರೀನಿವಾಸಪುರ	ಶ್ರೀನಿವಾಸಪುರ	ಪುಲಗೂರಕೋಟೆ	ಶ್ರೀ ಪಿ.ರಾಮತೀರ್ಥ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
4	ಕೋಲಾರ	ಕೆಜಿಎಫ್	ಕೆಜಿಎಫ್	ಕೆಜಿಎಫ್	ಸಿಂಗರಹಳ್ಳಿ	ಶ್ರೀಮತಿ. ಹೇಮಲತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
5	ಕೋಲಾರ	ಕೆಜಿಎಫ್	ಮಾಲೂರು	ಮಾಲೂರು	ಅಬ್ಬೇನಹಳ್ಳಿ	ಶ್ರೀ. ಅನ್ವಾರ್ ಪಾಷಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
6	ಕೋಲಾರ	ಕೆಜಿಎಫ್	ಬೇತಮಂಗಲ	ಕೆಜಿಎಫ್	ಹುಲ್ಕೂರು	ಶ್ರೀ ರವೀಂದ್ರಬಾಬು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
7	ಕೋಲಾರ	ಕೆಜಿಎಫ್	ಮುಳಬಾಗಿಲು	ಮುಳಬಾಗಿಲು	ಅಂಗೊಂಡಹಳ್ಳಿ	ಶ್ರೀ.ವಿ.ಎಂ.ರಮೇಶ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
8	ಕೋಲಾರ	ಕೆಜಿಎಫ್	ಬಂಗಾರಪೇಟೆ	ಬಂಗಾರಪೇಟೆ	ದಾಸರಹೊಸಹಳ್ಳಿ	ಶ್ರೀ ರಮೇಶ್ ಕುಮಾರ್.ಪಿ.ಜಿ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ. ರಾಮಕೃಷ್ಣ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	ಬಾಗೇಪಲ್ಲಿ	ನಾರೇಮದ್ದೇಪಲ್ಲಿ	ಶ್ರೀ. ಕೆ.ಆರ್ ಸೋಮಶೇಖರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
10	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಗ್ರಾಮೀಣ ಉಪ ವಿಭಾಗ	ಚಿಕ್ಕಬಳ್ಳಾಪುರ	ಚೆಲುಮೇನಹಳ್ಳಿ	ಶ್ರೀ. ಸಿ.ಎನ್ ವಾಸುದೇವ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
11	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ನಗರ ಉಪ ವಿಭಾಗ	ಚಿಕ್ಕಬಳ್ಳಾಪುರ	ಕೇತೇನಹಳ್ಳಿ	ಶ್ರೀ ಆನಂದ ಕುಮಾರ್ ಕೆ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ. ಎಂ. ಅಜಿತ್ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
12	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಗೌರಿಬಿದನೂರು	ಗೌರಿಬಿದನೂರು	ಬೇವಿನಹಳ್ಳಿ	ಶ್ರೀ ವಿನಯ್ ಕುಮಾರ್ ಹೆಚ್.ಪಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
13	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಗುಡಿಬಂಡೆ	ಗೌರಿಬಿದನೂರು	ಲಕ್ಕಸಂದ್ರ	ಶ್ರೀ ವಿನಯ್ ಕುಮಾರ್ ಹೆಚ್.ಪಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
14	ಚಿಕ್ಕಬಳ್ಳಾಪುರ	ಚಿಂತಾಮಣಿ	ಚಿಂತಾಮಣಿ ಗ್ರಾಮೀಣ ಉಪ ವಿಭಾಗ	ಚಿಂತಾಮಣಿ	ನಂದನಹೊಸಹಳ್ಳಿ	ಶ್ರೀನಿವಾಸ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
15	ಚಿಕ್ಕಬಳ್ಳಾಪುರ	ಚಿಂತಾಮಣಿ	ಚಿಂತಾಮಣಿ ನಗರ ಉಪ ವಿಭಾಗ	ಚಿಂತಾಮಣಿ	ಕೊಡದವಾಡಿ	ಶ್ರೀ. ಡಿ ಜಿ ಶಿವಶಂಕರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
16	ಚಿಕ್ಕಬಳ್ಳಾಪುರ	ಚಿಂತಾಮಣಿ	ಶಿಡ್ಲಘಟ್ಟ ಗ್ರಾಮೀಣ ಉಪ ವಿಭಾಗ	ಶಿಡ್ಲಘಟ್ಟ	ಸುಗಟೂರು	ಶ್ರೀ. ವೈ ಎಸ್ ವೆಂಕಟೇಶಪ್ಪ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ. ಬಿ ಪ್ರಭು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
17	ಚಿಕ್ಕಬಳ್ಳಾಪುರ	ಚಿಂತಾಮಣಿ	ಶಿಡ್ಲಘಟ್ಟ ನಗರ ಉಪ ವಿಭಾಗ	ಶಿಡ್ಲಘಟ್ಟ	ತಿಪ್ಪೇನಹಳ್ಳಿ	ಶ್ರೀ. ಕೆ ಆರ್ ರೇವಣ್ಣ ಸಿದ್ದಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
18	ತುಮಕೂರು	ತುಮಕೂರು	ತುಮಕೂರು ನಗರ ಉಪ ವಿಭಾಗ–1	ತುಮಕೂರು	ಕುಪ್ಪೂರು	ಶ್ರೀ ನಾಗರಾಜು ಹೆಚ್.ಪಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
19	ತುಮಕೂರು	ತುಮಕೂರು	ತುಮಕೂರು ನಗರ ಉಪ ವಿಭಾಗ–2	ತುಮಕೂರು	ಜೋಡಿ ಗಂಗಸಂದ್ರ	ಶ್ರೀ ವೆಂಕಟೇಶ್.ಬಿ.ಎಸ್ ಸ.ಕಾ.ಇಂ(ವಿ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
20	ತುಮಕೂರು	ತುಮಕೂರು	ತುಮಕೂರು ಗ್ರಾಮೀಣ ಉಪ ವಿಭಾಗ–1	ತುಮಕೂರು	ಹೊಸಪಾಳ್ಯ	ಶ್ರೀ ಲೋಕೇಶ.ಕೆ.ಎಲ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಮೆಹಬೂಬ್ ಶರೀಫ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
21	ತುಮಕೂರು	ತುಮಕೂರು	ತುಮಕೂರು ಗ್ರಾಮೀಣ ಉಪ ವಿಭಾಗ–2	ತುಮಕೂರು	ಗಳಿಗೇನಹಳ್ಳಿ	ಶ್ರೀ ಹರೀಶ್ ಸ.ಕಾ.ಇಂ(ವಿ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
22	ತುಮಕೂರು	ತುಮಕೂರು	ಕ್ಯಾತಸಂದ್ರ	ತುಮಕೂರು	ಬೊಮ್ಮನಹಳ್ಳಿ	ಹೆಚ್.ಆರ್.ಶ್ರೀನಿವಾಸ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
23	ತುಮಕೂರು	ತುಮಕೂರು	ಗುಬ್ಬಿ	ಗುಬ್ಬಿ	ಯರನಹಟ್ಟಿ	ಶ್ರೀ ಅನಿಲ್ ಕುಮಾರ್, ಸ.ಕಾ.ಇಂ(ವಿ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
24	ತುಮಕೂರು	ತುಮಕೂರು	ನಿಟ್ಟೂರು	ಗುಬ್ಬಿ	ಮುಚ್ಚವೀರನಹಳ್ಳಿ	ಶ್ರೀ ಅನಿಲ್ ಕುಮಾರ್, ಸ.ಕಾ.ಇಂ(ವಿ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
25	ತುಮಕೂರು	ತಿಪಟೂರು	ತಿಪಟೂರು	ತಿಪಟೂರು	ನೆಲ್ಲಿಕೆರೆ	ಶ್ರೀ ಸೋಮಶೇಖರ್ ಗೌಡ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ .ಮನೋಹರ್ ಟಿ.ಎಲ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
26	ತುಮಕೂರು	ತಿಪಟೂರು	ತುವರೆಕೆರೆ	ತುರುವೇಕೆರೆ	ದೊಡ್ಡಗೋರಾಘಟ್ಟ	ಶ್ರೀ. ಚಂದ್ರನಾಯ್ಕ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
27	ತುಮಕೂರು	ತಿಪಟೂರು	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	ಕೋಡಿಪಾಳ್ಯ	ಶ್ರೀ ರಾಜಶೇಖರ್ ಎಂ.ಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
28	ತುಮಕೂರು	ಮಧುಗಿರಿ	ಮಧುಗಿರಿ	ಮಧುಗಿರಿ	ನೇರಳೆಕೆರೆ	ಶ್ರೀ ಮಾಯಕಣ್ಣ ನಾಯ್ಕ್ ಎಂ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
29	ತುಮಕೂರು	ಮಧುಗಿರಿ	ಶಿರಾ ನಗರ	ಶಿರಾ	ಬೊಮ್ಮಗಾನಹಳ್ಳಿ	ಶ್ರೀ. ಶಾಂತರಾಜು.ಹೆಚ್.ಇ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
30	ತುಮಕೂರು	ಮಧುಗಿರಿ	ಶಿರಾ ಗ್ರಾಮೀಣ	ಶಿರಾ	ಹೊನ್ನೇನಹಳ್ಳಿ	ಶ್ರೀ ಗೋವಿಂದರಾಯ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
31	ತುಮಕೂರು	ಮಧುಗಿರಿ	ಕೊರಟಗೆರೆ	ಕೊರಟಗೆರೆ	ಎಂ. ಗೊಲ್ಲಹಳ್ಳಿ	ಶ್ರೀ. ಬಿ ಜಿ ಅರಸರಾಜು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
32	ತುಮಕೂರು ಜಿಲ್ಲೆ	ಮಧುಗಿರಿ	ಪಾವಗಡ	ಪಾವಗಡ	ಮಾರಮ್ಮನಹಳ್ಳಿ	ಶ್ರೀ ಬಿ.ಜಿ.ಕೃಷ್ಣಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
33	ತುಮಕೂರು	ಮಧುಗಿರಿ	ಕೊಡಿಗೇನಹಳ್ಳಿ	ಮಧುಗಿರಿ	ಸಿಂಗನಹಳ್ಳಿ	ಶ್ರೀ ಕೆ.ಪಂಪಾಪತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
34	ತುಮಕೂರು	ಕುಣಿಗಲ್	ಕುಣಿಗಲ್	ಕುಣಿಗಲ್	ಕೋಘಟ್ಟ	ಶ್ರೀ ಪುರುಷತ್ತಮ್ ಆರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
35	ತುಮಕೂರು	ಕುಣಿಗಲ್	ಹುಲಿಯೂರು ದುರ್ಗ	ಕುಣಿಗಲ್	ಹಳೆವೂರು	ಶ್ರೀ ವೀರಭದ್ರಾಚಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
36	ತುಮಕೂರು	ಕುಣಿಗಲ್	ಯಡಿಯೂರು	ಕುಣಿಗಲ್	ಕಾಚೇನಹಳ್ಳಿ	ಶ್ರೀ. ಸುಹೇಲ್ ಅಹಮದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
37	ದಾವಣಗೆರೆ	ದಾವಣಗೆರೆ	ದಾವಣಗೆರೆ ಗ್ರಾಮೀಣ ಉಪ ವಿಭಾಗ	ದಾವಣಗೆರೆ	ನಾಗನೂರು	ಶ್ರೀ. ಬಿ.ಎಸ್. ಜಗದೀಶ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಸುಧೀರ್ ಕುಮಾರ್ ಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
38	ದಾವಣಗೆರೆ	ದಾವಣಗೆರೆ	ಆನಗೋಡು	ಆನಗೋಡು	ಹಾಲವರ್ತಿ	ಶ್ರೀ ತೀರ್ಥೇಶ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
39	ದಾವಣಗೆರೆ	ದಾವಣಗೆರೆ	ಜಗಳೂರು	ಜಗಳೂರು	ಅಸಗೋಡು ವಡ್ಡರಹಟ್ಟಿ	ಶ್ರೀ ಗಿರೀಶ್ ನಾಯಕ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
40	ದಾವಣಗೆರೆ	ದಾವಣಗೆರೆ	ಚೆನ್ನಗಿರಿ	ಚೆನ್ನಗಿರಿ	ಗಂಡುಗನಹಂಕಲು	ಶ್ರೀ ಲೋಹಿತ್ ಕುಮಾರ್ ಕೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
41	ದಾವಣಗೆರೆ	ದಾವಣಗೆರೆ	ಸಂತೇಬೆನ್ನೂರು	ಚೆನ್ನಗಿರಿ	ಕಾರಿಗನೂರು	ಶ್ರೀಮತಿ ವಿಜಯಲಕ್ಷ್ಮಿ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಪ್ರವೀಣ್ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
42	ದಾವಣಗೆರೆ	ಹರಿಹರ	ಹರಿಹರ	ಹರಿಹರ	ಗುಡ್ಡದತುಮ್ಮಿನಕಟ್ಟೆ	ಶ್ರೀ ಪಿ. ವಿನಯ ಕುಮಾರ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಲಕ್ಕಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
43	ದಾವಣಗೆರೆ	ಹರಿಹರ	ಹೊನ್ನಾಳಿ	ಹೊನ್ನಾಳಿ	ರಾಂಪುರ	ಶ್ರೀ ರವಿಕಿರಣ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
44	ದಾವಣಗೆರೆ	ಹರಿಹರ	ನ್ಯಾಮತಿ	ನ್ಯಾಮತಿ	ಕುರುವಾ ಹಳ್ಳದಿಬ್ಬ	ಶ್ರೀ ಶ್ರೀನಿವಾಸ್ ಬಿ.ಕೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
45	ವಿಜಯನಗರ	ಹರಿಹರ	ಹರಪನಹಳ್ಳಿ	ಹರಪನಹಳ್ಳಿ	ನಿಲುವಂಜಿ	ಶ್ರೀ ವಿರೂಪಾಕ್ಷಪ್ಪಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
46	ವಿಜಯನಗರ	ಹರಿಹರ	ತೆಲಗಿ	ಹರಪನಹಳ್ಳಿ	ಗಡಿಗುಡಿಹಾಳು	ಶ್ರೀ ಜಯಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
47	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ನಗರ ಉಪ ವಿಭಾಗ	ಚಿತ್ರದುರ್ಗ	ಕಾಸವರಹಟ್ಟಿ	ಶ್ರೀ ನಾಗರಾಜ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
48	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ಗ್ರಾಮೀಣ ಉಪ ವಿಭಾಗ	ಚಿತ್ರದುರ್ಗ	ಕಂಠಿಹಳ್ಳಿ	ಶ್ರೀ ಕಿರಣ್ ರೆಡ್ಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
49	ಚಿತ್ರದುರ್ಗ	ಚಿತ್ರದುರ್ಗ	ಹೊಳಲ್ಕೆರೆ	ಹೊಳಲ್ಕೆರೆ	ಬೂದಿಪುರ	ಶ್ರೀ ನಾಗರಾಜಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
50	ಚಿತ್ರದುರ್ಗ	ಚಿತ್ರದುರ್ಗ	ಹೊಸದುರ್ಗ	ಹೊಸದುರ್ಗ	ಭಾಗಶೆಟ್ಟಿಹಳ್ಳಿ	ಶ್ರೀ ತಿರುಪತಿ ನಾಯಕ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
51	ಚಿತ್ರದುರ್ಗ	ಚಿತ್ರದುರ್ಗ	ಶ್ರೀರಾಂಪುರ	ಹೊಸದುರ್ಗ	ಬಲ್ಲಾಳಸಮುದ್ರ ಗೊಲ್ಲರಹಟ್ಟಿ	ಶ್ರೀ ಡಿ.ಜಯಣ್ಣ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ನಿರಂಜನಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
52	ಚಿತ್ರದುರ್ಗ	ಹಿರಿಯೂರು	ಹಿರಿಯೂರು	ಹಿರಿಯೂರು	ಕಳವಿಭಾಗಿ	ಶ್ರೀ ಎಂ.ಹೆಚ್. ಲಿಂಗರಾಜ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಪೀರ್ ಸಾಬ್. ಹೆಚ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
53	ಚಿತ್ರದುರ್ಗ	ಹಿರಿಯೂರು	ಚಳ್ಳಕೆರೆ	ಚಳ್ಳಕೆರೆ	ಚೌಳೂರು	ಶ್ರೀ ಎನ್.ಎಸ್.ರಾಜು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
54	ಚಿತ್ರದುರ್ಗ	ಹಿರಿಯೂರು	ತಲಾಕ್	ಚಳ್ಳಕೆರೆ	ತಿಪ್ಪಾರೆಡ್ಡಿಹಳ್ಳಿ	ಶ್ರೀ ತಿಮ್ಮರಾಜು ಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
55	ಚಿತ್ರದುರ್ಗ	ಹಿರಿಯೂರು	ಮೊಳಕಾಲ್ಮೂರು	ಮೊಳಕಾಲ್ಮೂರು	ವಡ್ಡೇರಹಳ್ಳಿ	ಶ್ರೀ ಜಿ.ಶಿವಪ್ರಸಾದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
56	ಬೆಂಗಳೂರು	ಜಾಲಹಳ್ಳಿ	ಎನ್–9	ಬೆಂಗಳೂರು ಉತ್ತರ	ಸಿಲ್ವೆಪುರ	ಶ್ರೀ ಜೀತೇಂದ್ರಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
57	ಬೆಂಗಳೂರು	ಹೆಬ್ಬಾಳ	ಸಿ–7	ಬೆಂಗಳೂರು ಉತ್ತರ	ದಿಬ್ಬೂರು	ಶ್ರೀ ಧನಂಜಯ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
58	ಬೆಂಗಳೂರು ನಗರ	ಕೆಂಗೇರಿ	ಕೆ–1	ಬೆಂಗಳೂರು ದಕ್ಷಿಣ	ಹೆಚ್.ಗೊಲ್ಲಹಳ್ಳಿ	ಶ್ರೀ ರಮೇಶ್.ಎಲ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
59	ಬೆಂಗಳೂರು ದಕ್ಷಿಣ	ಕೆಂಗೇರಿ	ಕೆ–3	ಬೆಂಗಳೂರು ದಕ್ಷಿಣ	ಆಗರ	ಶ್ರೀ ರಾಜೇಶ್ ಹೆಚ್ ಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
60	ಬೆಂಗಳೂರು ನಗರ	ಕೆಂಗೇರಿ	ಕೆ–4	ಬೆಂಗಳೂರು ಉತ್ತರ	ಮಂಗನಹಳ್ಳಿ	ಶ್ರೀ ಅಶೋಕ್ ಹೆಂಡಿಗೆರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
61	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ನೆಲಮಂಗಲ	ನೆಲಮಂಗಲ	ಪಿಲ್ಲಹಳ್ಳಿ	ಶ್ರೀ. ಮನೋಹರ ಶೆಟ್ಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
62	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ದೊಡ್ಡಬಳ್ಳಾಪುರ ನಗರ	ದೊಡ್ಡಬಳ್ಳಾಪುರ	ಪಾಲನಜೋಗಿಹಳ್ಳಿ	ಶ್ರೀ ಮಂಜುನಾಥ.ಆರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
63	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ದೊಡ್ಡಬಳ್ಳಾಪುರ ಗ್ರಾಮೀಣ	ದೊಡ್ಡಬಳ್ಳಾಪುರ	ಹೊಸಕೋಟೆ	ಶ್ರೀ ಇನಾಯತ್ ಉಲ್ಲಾ ಖಾನ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
64	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ದಾಬಸ್‌ಪೇಟೆ	ನೆಲಮಂಗಲ	ಗೋರಘಟ್ಟ	ಶ್ರೀ ಸಿ.ಧನಂಜಯ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ನಾರಾಯಣ ಭೋವಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
65	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೇವನಹಳ್ಳಿ	ದೇವನಹಳ್ಳಿ	ಐಬಸಾಪುರ	ಶ್ರೀ ಶಶಿಧರ್ ಎಂ.ಕೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
66	ಬೆಂಗಳೂರು ನಗರ	ಹೊಸಕೋಟೆ	ವಿದ್ಯಾನಗರ	ಯಲಹಂಕ(ಬೆಂಗಳೂರು ಉತ್ತರ)	ಹುಣಸೂರು	ಶ್ರೀ ವೇಣುಗೋಪಾಲ್. ಹೆಚ್.ಜೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
67	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಹೊಸಕೋಟೆ	ಹೊಸಕೋಟೆ	ನಡುವತ್ತಿ	ಶ್ರೀ ಪುಟ್ಟಶಾಮಯ್ಯ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
68	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ನಂದಗುಡಿ	ಹೊಸಕೋಟೆ	ದೊಡ್ಡಹರಳಗೆರೆ	ಶ್ರೀ ಅಶೋಕ್ ಪಿ.ಆರ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ.ಪುಟ್ಟಶಾಮಯ್ಯ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
69	ಬೆಂಗಳೂರು ನಗರ	ಹೊಸಕೋಟೆ	ಆವಲಹಳ್ಳಿ	ಬೆಂಗಳೂರು ಪೂರ್ವ	ರಘುವನಹಳ್ಳಿ	ಶ್ರೀ ನಾರಾಯಣಸ್ವಾಮಿ ಗೌಡ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
70	ರಾಮನಗರ	ರಾಮನಗರ	ಬಿಡದಿ	ರಾಮನಗರ	ಇಟ್ಟಮಡು	ಶ್ರೀ ಶಿವಕುಮಾರ್ ಎನ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀಮತಿ. ಅನುರಾಧ. ಬಿ.ವಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
71	ರಾಮನಗರ	ರಾಮನಗರ	ಚನ್ನಪಟ್ಟಣ ಗ್ರಾಮೀಣ	ಚನ್ನಪಟ್ಟಣ	ಅವೇರಹಳ್ಳಿ	ಶ್ರೀ ಚಿದಾನಂದ್ ಜಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
72	ರಾಮನಗರ	ರಾಮನಗರ	ಚನ್ನಪಟ್ಟಣ ನಗರ	ಚನ್ನಪಟ್ಟಣ	ವಂದಾರಗುಪ್ಪೆ	ಶ್ರೀಮತಿ ಚಂದನ ವಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
73	ರಾಮನಗರ	ರಾಮನಗರ	ರಾಮನಗರ ಗ್ರಾಮೀಣ	ರಾಮನಗರ	ಚಿಕ್ಕಗಂಗವಾಡಿ	ಶ್ರೀ. ನಾಗೇಶ್. ಎಂ.ಕೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
74	ರಾಮನಗರ	ರಾಮನಗರ	ರಾಮನಗರ ನಗರ	ರಾಮನಗರ	ಗೋಪಾಲಪುರ	ಶ್ರೀ ಕೃಷ್ಣಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
75	ರಾಮನಗರ	ರಾಮನಗರ	ಬೇವೂರು	ಚನ್ನಪಟ್ಟಣ	ಕುಂತುರುದೊಡ್ಡಿ	ಶ್ರೀ ಎನ್.ಪುಟ್ಟಸ್ವಾಮಿ(ವಿ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
76	ರಾಮನಗರ	ಕನಕಪುರ	ಕನಕಪುರ ಗ್ರಾಮೀಣ	ಕನಕಪುರ	ಗೊಲ್ಲರದೊಡ್ಡಿ	ಶ್ರೀ. ಮಾದೇಶ್. ಎಂ (I/C), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
77	ರಾಮನಗರ	ಕನಕಪುರ	ಕನಕಪುರ ನಗರ	ಕನಕಪುರ	ಅನಮಾನಹಳ್ಳಿ	ಶ್ರೀ ನಾಗರಾಜು ಹೆಚ್.ಎಂ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ ಅನಿಲ್ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
78	ರಾಮನಗರ	ಕನಕಪುರ	ಹಾರೋಹಳ್ಳಿ	ಕನಕಪುರ	ಲಗ್ಗಲಹಳ್ಳಿ	ಶ್ರೀ ರವಿಕುಮಾರ್. ಹೆಚ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
79	ರಾಮನಗರ	ಕನಕಪುರ	ಸಾತನೂರು	ಕನಕಪುರ	ಚೂಡಹಳ್ಳಿ	ಶ್ರೀ ರಂಗಸ್ವಾಮಿ. ಬಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
80	ಬೆಂಗಳೂರು ನಗರ	ಚಂದಾಪುರ	ಆನೇಕಲ್	ಆನೇಕಲ್	ಕಾಡುಜಕ್ಕನಹಳ್ಳಿ	ಶ್ರೀ ಶಂಕರ್ ಬಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
81	ಬೆಂಗಳೂರು ನಗರ	ಚಂದಾಪುರ	ಚಂದಾಪುರ	ಆನೇಕಲ್	ಹಲಸಹಳ್ಳಿ / ತಿಪ್ಪಸಂದ್ರ	ಶ್ರೀ ಚಂದ್ರಶೇಖರ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ. ವೆಂಕಟಸ್ವಾಮಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
82	ಬೆಂಗಳೂರು ನಗರ	ಚಂದಾಪುರ	ವೀರಸಂದ್ರ	ಆನೇಕಲ್	ನೆರಳೂರು	ಶ್ರೀ ರಾಜ್ ಕುಮಾರ್ ಎಸ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
83	ಬೆಂಗಳೂರು ನಗರ	ಚಂದಾಪುರ	ಅತ್ತಿಬೆಲೆ	ಆನೇಕಲ್	ಆದಿಗರಹಳ್ಳಿ	ಶ್ರೀ ವೆಂಕಟೇಶ್ವರ ಕೆ.ಎನ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
84	ಬೆಂಗಳೂರು ನಗರ	ಚಂದಾಪುರ	ಜಿಗಣಿ	ಆನೇಕಲ್	ಪೋಡು	ಶ್ರೀ ಭರತ್ ಚೌವ್ಹಾಣ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
85	ರಾಮನಗರ	ಮಾಗಡಿ	ಮಾಗಡಿ	ಮಾಗಡಿ	ಮಂಚನಬೆಲೆ	ಶ್ರೀ ಮಂಜುನಾಥ.ಎಂ.ಎಸ್, ಕಾರ್ಯನಿರ್ವಾಹಕ ಅಭಿಯಂತರರು (ವಿ) ಮತ್ತು ಶ್ರೀ.ಬಸವರಾಜ.ಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
86	ಬೆಂಗಳೂರು ನಗರ	ಮಾಗಡಿ	ತಾವರೆಕೆರೆ	ಬೆಂಗಳೂರು ದಕ್ಷಿಣ	ಗಿಡ್ಡೇನಹಳ್ಳಿ	ಶ್ರೀ ಮಧು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
87	ರಾಮನಗರ	ಮಾಗಡಿ	ಕುದೂರು	ಮಾಗಡಿ	ಹೂಜೇನಹಳ್ಳಿ	ಶ್ರೀ ಠಾಕ್ರಾ ನಾಯ್ಕ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912 | ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ವಾಸಾಸಂಇ/ವಾಪ್ರ/ಜಿಎ/2976/2022–23

ಸಹಿ/–
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)

2030ಕ್ಕೆ 300 ಶತಕೋಟಿ ಡಾಲರ್ ವಹಿವಾಟು ನಡೆಯುವ ಸಾಧ್ಯತೆ

‘ಜೈವಿಕ ಕ್ರಾಂತಿ–2’ಗೆ ಬೆಂಗಳೂರು ಸಿದ್ಧ

• ಎಸ್.ರವಿಪ್ರಕಾಶ್

ಬೆಂಗಳೂರು: ಜೀವ ವಿಜ್ಞಾನ ಅದರಲ್ಲೂ ವಂಶವಾಹಿ ಕ್ಷೇತ್ರದ ವಿಷಯಗಳಿಗೆ ಸಂಬಂಧಿಸಿದ (ಜಿನೋಮಿಕ್‌–02) ಎರಡನೇ ಕ್ರಾಂತಿಗೆ (ಜೈವಿಕ ಕ್ರಾಂತಿ–2) ಉದ್ಯಾನ ನಗರಿ ಬೆಂಗಳೂರು ವೇದಿಕೆಯಾಗಲಿದೆ!

ಸದ್ದಿಲ್ಲದೇ ನಡೆಯುತ್ತಿರುವ ಈ ಜೈವಿಕ ತಂತ್ರಜ್ಞಾನದ ಕ್ರಾಂತಿಯ ಪರಿಣಾಮ ವಿಶ್ವದ ಹಲವು ಜೈವಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಜ್ಞಾನ ನಗರಿಯೂ ಆಗಲಿದೆ.

ಮಾನವನನ್ನು ಹಿಂಡಿ ಹಾಕುವ ಕ್ಯಾನ್ಸರ್‌, ಅಲ್ಜಿಮರ್ಸ್‌, ಥಲಸ್ಸೆಮಿಯಾ ಸೇರಿದಂತೆ ಹಲವು ಗಂಭೀರ ಸ್ವರೂಪದ ಕಾಯಿಲೆಗಳಿಗೆ ಜೀನ್‌ ಎಡಿಟಿಂಗ್‌, ಇಮ್ಯುನೋ ಥೆರಪಿ, ಜೀನ್‌ ಥೆರಪಿಯಂತಹ ಮುಂದುವರಿದ ವಿಧಾನಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ, ಕೃಷಿ ಕ್ಷೇತ್ರದಲ್ಲಿ ಕೀಟ ಬಾಧೆ, ಇಳುವರಿ ಕೊರತೆ, ಸರ್ವ ಋತುಗಳನ್ನು ಸಹಿಸಬಲ್ಲ ವಂಶವಾಹಿ ತಿದ್ದಿದ (ಜೀನ್‌ ಎಡಿಟಿಂಗ್‌) ತಳಿಗಳ ಅಭಿವೃದ್ಧಿ, ಫಾರ್ಮಸಿ, ಜೈವಿಕ ಇಂಧನ, ರೋಗಗಳನ್ನು ಸುಲಭವಾಗಿ ಪತ್ತೆ ಮಾಡಬಲ್ಲ ವೈದ್ಯಕೀಯ ಕಿಟ್‌ಗಳು... ಹೀಗೆ ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಹತ್ತು ಹಲವು ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಸಂಶೋಧನೆ, ಅಭಿವೃದ್ಧಿ ಮತ್ತು ಉತ್ಪಾದನೆ ಬೆಂಗಳೂರಿನಲ್ಲಿ ನಡೆಯಲಿದ್ದು, ಇದನ್ನೇ ‘ಜಿನೋಮಿಕ್‌–2’ ಎರಡನೇ ಕ್ರಾಂತಿ ಎಂದೂ ವಿಜ್ಞಾನಿಗಳು ಬಣ್ಣಿಸುತ್ತಾರೆ.

‘ಮಾಹಿತಿ ತಂತ್ರಜ್ಞಾನ (ಐಟಿ) ಕ್ಷೇತ್ರದಂತೆ ಜೈವಿಕ ತಂತ್ರಜ್ಞಾನದ ‘ರಾಜಧಾನಿ’ ಬೆಂಗಳೂರು ಆಗಲಿದ್ದು, 2023ಕ್ಕೆ ಈ ಕ್ಷೇತ್ರದ ಆರ್ಥಿಕತೆ 100 ಶತಕೋಟಿ ಡಾಲರ್‌ ಗುರಿ ಮುಟ್ಟಲಿದೆ. 2025 ಕ್ಕೆ ಈ ಗುರಿ ನಿಗದಿ ಮಾಡಲಾಗಿದ್ದು, ಎರಡು ವರ್ಷ ಮೊದಲೇ ಈ ಗುರಿ ತಲುಪಲಾಗುತ್ತಿದೆ. 2030 ಕ್ಕೆ 300 ಶತಕೋಟಿ ಡಾಲರ್‌ಗಳಿಗೆ ತಲುಪುವುದು ನಿಶ್ಚಿತ’ ಎನ್ನುತ್ತಾರೆ ಭಾರತೀಯ ವಿಜ್ಞಾನ ಸಂಸ್ಥೆಯ ‘ಸೆಂಟರ್‌ಫಾರ್‌ ಬಯೋಸಿಸ್ಟಮ್‌ ಸೈನ್ಸ್‌, ಎಂಜಿನಿಯರಿಂಗ್‌’ ವಿಭಾಗದ ಪ್ರೊಫೆಸರ್‌ ವಿಜಯ್‌ ಚಂದ್ರು. ಇವರು ಬೆಂಗಳೂರು ಟೆಕ್‌ ಸಮ್ಮಿಟ್‌ನ ಜೀವ ವಿಜ್ಞಾನ ವಿಭಾಗದ ಅಧ್ಯಕ್ಷರೂ ಆಗಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ಇವೆಲ್ಲವನ್ನೂ ಸೇರಿ ಜೈವಿಕ ಅರ್ಥವ್ಯವಸ್ಥೆ (ಬಯೋಎಕಾನಮಿ) ಎನ್ನುತ್ತೇವೆ. ಕೃಷಿ, ಆರೋಗ್ಯ, ಉದ್ಯಮ, ಔಷಧ, ಕಾರಕ (ರೀಏಜೆಂಟ್‌) ತಂತ್ರಜ್ಞಾನ, ನವೀಕರಿಸಬಹುದಾದ ಜೈವಿಕ ತಂತ್ರಜ್ಞಾನ ಕ್ಷೇತ್ರ, ಸಿಂಥೆಟಿಕ್‌ ಬಯಾಲಜಿ, ಸ್ಮಾರ್ಟ್‌ ಪ್ರೋಟೀನ್‌ ಕ್ಷೇತ್ರದಲ್ಲೂ ದೊಡ್ಡ ಮಟ್ಟದಲ್ಲಿ ಸಂಶೋಧನೆ ಅಭಿವೃದ್ಧಿ ನಡೆಯುತ್ತಿವೆ ಮತ್ತು ಅವುಗಳ ಅನ್ವಯವೂ ಆಗುತ್ತಿದೆ. ಈ ಕ್ಷೇತ್ರಗಳಲ್ಲಿ ದೇಶಿ ಕಂಪನಿಗಳೇ ಆಳವಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ’ ಎಂದು ಹೇಳಿದರು.

‘ಕ್ಯಾನ್ಸರ್‌, ಥಲಸ್ಸೆಮಿಯಾ, ಸ್ವಯಂ ನಿರೋಧಕ ಶಕ್ತಿಯನ್ನು (ಆಟೋ ಇಮ್ಯೂನ್‌ ಡಿಸೀಸ್‌) ಕಳೆದುಕೊಂಡ ಕಾಯಿಲೆಗಳಿಗೂ ಅತ್ಯಾಧುನಿಕ ಇಮ್ಯುನೋಥೆರಪಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಬೆಂಗಳೂರು ಜೈವಿಕ ತಂತ್ರಜ್ಞಾನದ ‘ಪ್ರಸ್ಥಭೂಮಿ’ ಆಗಲು ಇಲ್ಲಿರುವ ವಿಜ್ಞಾನದ ಶೈಕ್ಷಣಿಕ ಸಂಸ್ಥೆಗಳು, ವಿಜ್ಞಾನದ ಸಂಶೋಧನಾ ಸಂಸ್ಥೆಗಳು ಮತ್ತು ಉದ್ಯಮಗಳು ಮುಖ್ಯ ಕಾರಣ. ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲೂ ವ್ಯಾಪಿಸಿದೆ. ಭಾರತೀಯ ವಿಜ್ಞಾನ ಸಂಸ್ಥೆ, ಎನ್‌ಸಿಬಿಎಸ್‌, ಜೆಎನ್‌ಸಿಎಎಸ್‌ಆರ್‌, ಬ್ರೈನ್‌ ರೀಸರ್ಚ್‌ ಸೆಂಟರ್‌, ನಿಮ್ಹಾನ್ಸ್‌ ಸೇರಿ ಹಲವು ಸಂಸ್ಥೆಗಳು, ನವೋದ್ಯಮಗಳು ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿವೆ’ ಎಂದು ವಿಜಯ್‌ ಚಂದ್ರು ಅವರು ಹೇಳಿದರು.

ಮುಖ್ಯಾಂಶಗಳು

- ವಂಶವಾಹಿ ಕಾಯಿಲೆಗಳಿಗೆ ಜೀನ್‌ ಎಡಿಟಿಂಗ್‌ ಮೂಲಕ ಪರಿಹಾರ
- ಕೃಷಿಯಲ್ಲಿ ಹಲವು ಹೊಸ ಬಗೆಯ ಸಂಕರಗೊಳಿಸಿದ ತಳಿಗಳ ಅಭಿವೃದ್ಧಿ
- ಜೈವಿಕ ಇಂಧನ ಕ್ಷೇತ್ರದಲ್ಲೂ ಕ್ರಾಂತಿಕಾರಿ ಸಂಶೋಧನೆ

‘ಕ್ರಾಂತಿ’ಯಿಂದ ದರವೂ ಇಳಿಕೆ

ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಈ ಕ್ರಾಂತಿಯ ಪರಿಣಾಮ ಔಷಧಗಳು, ಚಿಕಿತ್ಸೆಗಳು, ಬಿತ್ತನೆ ಬೀಜಗಳು, ಜೈವಿಕ ಇಂಧನ ಬೆಲೆಯೂ ಕಡಿಮೆ ಆಗಲಿದೆ. ಹಿಂದೆ ವಂಶವಾಹಿ ಅನುಕ್ರಮಣಿಕೆಯ ವೆಚ್ಚ ತುಂಬಾ ದುಬಾರಿ ಆಗಿತ್ತು. ಈಗ ಸುಮಾರು 100 ಡಾಲರ್‌ಗಳಿಗೆ ಇಳಿಕೆಯಾಗಿದೆ. ಅದೇ ರೀತಿಯಲ್ಲಿ ಕೈಗೆಟಕುವ ದರದಲ್ಲಿ ಸೇವೆಗಳು ಲಭ್ಯವಾಗಲಿವೆ ಎಂದು ವಿಜಯ್‌ ಚಂದ್ರು ಹೇಳಿದರು.

ಮೆಟ್ರೊ ನಿಲ್ದಾಣದಲ್ಲಿ ಪುಸ್ತಕ ಮಳಿಗೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಪುಸ್ತಕಗಳು ಲಭ್ಯ

ಪ್ರಜಾವಾಣಿ ವಾರ್ತೆ

ಮೆಟ್ರೊ ನಿಲ್ದಾಣದಲ್ಲಿ ಉದ್ಘಾಟನೆಗೊಂಡ ಪುಸ್ತಕ ಮಳಿಗೆಯಲ್ಲಿನ ಪುಸ್ತಕಗಳನ್ನು ಚಂದ್ರಶೇಖರ ಕಂಬಾರ, ಜಯರಾಮರಾಜೇ ಅರಸ್‌, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್‌ ಹಾಗೂ ಅಕಾಡೆಮಿಯ ಕಾರ್ಯದರ್ಶಿ ಕೆ. ಶ್ರೀನಿವಾಸ್‌ ರಾವ್‌ ಅವರು ಪರಿಶೀಲಿಸಿದರು.

ಬೆಂಗಳೂರು: ಕೇಂದ್ರ ಸಾಹಿತ್ಯ ಅಕಾಡೆಮಿಯು ಮೆಜೆಸ್ಟಿಕ್‌ನಲ್ಲಿರುವ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಪುಸ್ತಕ ಮಳಿಗೆಯನ್ನು ಪ್ರಾರಂಭಿಸಿದ್ದು, ಇಲ್ಲಿ ಕನ್ನಡ ಸೇರಿ 24 ಭಾಷೆಗಳ ಅಕಾಡೆಮಿ ಪ್ರಕಟಿತ ಪುಸ್ತಕಗಳು ದೊರೆಯಲಿವೆ.

ದಕ್ಷಿಣ ಭಾರತದ ಮೆಟ್ರೊ ನಿಲ್ದಾಣವೊಂದರಲ್ಲಿ ಇದೇ ಮೊದಲ ಬಾರಿಗೆ ಅಕಾಡೆಮಿ ಮಳಿಗೆ ಪ್ರಾರಂಭಿಸಿದೆ. ಮೆಟ್ರೊ ನಿಲ್ದಾಣದ ‘ಎ’ ಗೇಟ್‌ನ ಪ್ರವೇಶ ದ್ವಾರದಲ್ಲಿ ಮಳಿಗೆಯನ್ನು ನಿರ್ಮಿಸಲಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಮಳಿಗೆ ಕಾರ್ಯನಿರ್ವಹಿಸಲಿದೆ. ಪುಸ್ತಕಗಳ ಮೇಲೆ ಶೇ 20ರವರೆಗೆ ರಿಯಾಯಿತಿಯೂ ಇರಲಿದೆ. ಮಳಿಗೆಯಲ್ಲಿ ಇರದ, ಅಕಾಡೆಮಿ ಪ್ರಕಟಿತ ಪುಸ್ತಕಗಳನ್ನು ಗ್ರಾಹಕರು ನೀಡುವ ವಿಳಾಸಕ್ಕೆ ಕಳುಹಿಸುವ ವ್ಯವಸ್ಥೆಯನ್ನೂ ರೂಪಿಸಲಾಗಿದೆ.

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರು ಮಳಿಗೆಯನ್ನು ಉದ್ಘಾಟಿಸಿ, ಮಾತನಾಡಿದರು. ‘ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಿನ ಮೆಟ್ರೊ ನಿಲ್ದಾಣದಲ್ಲಿ ಪುಸ್ತಕ ಮಳಿಗೆ ತೆರೆದಿದ್ದೇವೆ. ನವದೆಹಲಿಯ ಮೆಟ್ರೊ ನಿಲ್ದಾಣದಲ್ಲಿ ಈ ಮೊದಲು ಮಳಿಗೆ ನಿರ್ಮಿಸಿದ್ದೆವು. ಅದು ಜನಪ್ರಿಯಗೊಂಡಿದ್ದರಿಂದ ಇಲ್ಲಿಯೂ ಅಂತಹ ಮಳಿಗೆ ಪ್ರಾರಂಭಿಸಲಾಗಿದೆ. ಇದು ಜನಪ್ರಿಯವಾಗುವ ವಿಶ್ವಾಸವಿದೆ’ ಎಂದು ಹೇಳಿದರು.

ನಿವೃತ್ತ ಐಎಎಸ್‌ ಅಧಿಕಾರಿ ಬಿ.ಆರ್‌. ಜಯರಾಮರಾಜೇ ಅರಸ್‌, ‘ಕೇಂದ್ರ ಸಾಹಿತ್ಯ ಅಕಾಡೆಮಿಯು ಉತ್ತಮ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ ಸೇರಿ ಅನ್ಯ ಭಾಷೆಗಳ ಗ್ರಂಥಗಳು ಇಲ್ಲಿವೆ. ಅಕಾಡೆಮಿಯ ಪುಸ್ತಕಗಳು ದೇಶದಲ್ಲಿನ ಭಾವೈಕ್ಯಕ್ಕೆ ಪ್ರೋತ್ಸಾಹ ನೀಡುತ್ತವೆ. ಈಗ ಜನಸಾಮಾನ್ಯರು ಓಡಾಡುವ ಪ್ರದೇಶದಲ್ಲಿ ಪುಸ್ತಕ ಮಳಿಗೆ ತೆರೆದಿರುವುದರಿಂದ ಸಾಹಿತ್ಯ ಹೆಚ್ಚು ಹೆಚ್ಚು ಜನರನ್ನು ತಲುಪಲಿದೆ’ ಎಂದರು.

ಪುಸ್ತಕ ಮಳಿಗೆ ವಿಸ್ತರಣೆ

‘ಮುಂದಿನ ದಿನಗಳಲ್ಲಿ ಇನ್ನಷ್ಟು ಮೆಟ್ರೊ ನಿಲ್ದಾಣಗಳಲ್ಲಿ ಪುಸ್ತಕ ಮಳಿಗೆ ತೆರೆಯುವ ಆಶಯ ಹೊಂದಿದ್ದೇವೆ. ಇಡೀ ದೇಶದಲ್ಲಿ ಎಲ್ಲ ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಏಕೈಕ ಸಂಸ್ಥೆ ಕೇಂದ್ರ ಸಾಹಿತ್ಯ ಅಕಾಡೆಮಿ. ನಾವು ಪ್ರಕಟಿಸುವ ಪುಸ್ತಕಗಳು ದೇಶದ 24 ಭಾಷೆಗಳಿಗೂ ಭಾಷಾಂತರಗೊಳ್ಳುತ್ತವೆ. ಆದ್ದರಿಂದ ಅಕಾಡೆಮಿಯ ಬಳಿ ಸಾಹಿತ್ಯ ಪುಸ್ತಕಗಳ ಖಜಾನೆಯೇ ಇದೆ. ಈ ಖಜಾನೆಯನ್ನು ಜನಸಾಮಾನ್ಯರ ಬಳಿ ತಲುಪಿಸುವ ಪ್ರಯತ್ನವನ್ನು ಈ ಮಳಿಗೆ ಮಾಡಲಿದೆ’ ಎಂದು ಚಂದ್ರಶೇಖರ ಕಂಬಾರ ಹೇಳಿದರು.

ಹುಬ್ಬಳ್ಳಿಗೆ ಶೀಘ್ರ ವಂದೇ ಭಾರತ್‌

ಪ್ರಜಾವಾಣಿ ವಾರ್ತೆ

ವಂದೇ ಭಾರತ್‌ ಎಕ್ಸ್‌ಪ್ರೆಸ್‌

ಬೆಂಗಳೂರು: ಚೆನ್ನೈ–ಬೆಂಗಳೂರು–ಮೈಸೂರು ನಡುವೆ ವಂದೇ ಭಾರತ್‌ ಎಕ್ಸ್‌ಪ್ರೆಸ್‌ ರೈಲು ಸಂಚಾರಕ್ಕೆ ಶುಕ್ರವಾರ ಅಧಿಕೃತವಾಗಿ ಚಾಲನೆ ದೊರಕಲಿದ್ದು, ಈ ನಡುವೆ ಬೆಂಗಳೂರು–ಹುಬ್ಬಳ್ಳಿ ನಡುವೆಯೂ ವಂದೇ ಭಾರತ್‌ ಎಕ್ಸ್‌ಪ್ರೆಸ್‌ ಸಂಚರಿಸುವ ಕಾಲ ಹತ್ತಿರವಾಗುತ್ತಿದೆ.

ಈ ಎರಡು ನಗರಗಳ ನಡುವೆ ರೈಲು ಸಂಚಾರ ಆರಂಭಿಸಲು ವೇಳಾಪಟ್ಟಿ ನೀಡುವಂತೆ ರೈಲ್ವೆ ಮಂಡಳಿಯು ನೈರುತ್ಯ ರೈಲ್ವೆಯನ್ನು ಕೇಳಿದೆ. ಪ್ರಸ್ತಾವನೆ ಕಳುಹಿಸಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್‌ ಕಿಶೋರ್‌ ತಿಳಿಸಿದ್ದಾರೆ.

ರೈಲ್ವೆ ಖಾತೆ ರಾಜ್ಯ ಸಚಿವೆ ದರ್ಶನಾ ಜರ್ದೋಶ್‌ ಅವರು ರಾಜ್ಯದ ಸಂಸದರೊಂದಿಗೆ ಇತ್ತೀಚೆಗೆ ಸಭೆ ನಡೆಸಿದ್ದರು. ಈ ವೇಳೆ ರಾಜ್ಯಸಭೆ ಸದಸ್ಯ ಲೇಹರ್‌ ಸಿಂಗ್‌ ಅವರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದರು. ಲಹರ್‌ ಸಿಂಗ್‌ ಸಿರೋಯಾ ಅವರ ಪತ್ರಕ್ಕೆ ಪ್ರತಿಕ್ರಿಯಿಸಿರುವ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರು, ಈ ವಿವರ ನೀಡಿದ್ದಾರೆ.

‘ಧಾರವಾಡದ ತನಕ ವಂದೇ ಭಾರತ್‌ ಎಕ್ಸ್‌ಪ್ರೆಸ್‌ ಸಂಚರಿಸಬೇಕು ಎಂದು ಸಂಸದ ಪ್ರಹ್ಲಾದ್‌ ಜೋಶಿ ಕೋರಿದ್ದಾರೆ. ಅದನ್ನೂ ರೈಲ್ವೆ ಮಂಡಳಿಗೆ ಸಲ್ಲಿಸಲಾಗಿದೆ. ಚಿಕ್ಕಜಾಜೂರು ಬಳಿ ಜೋಡಿ ಮಾರ್ಗ ಕಾಮಗಾರಿ ನಡೆಯುತ್ತಿದೆ.

ಇನ್ನೊಂದೆಡೆ ಇಡೀ ಮಾರ್ಗದ ವಿದ್ಯುದ್ದೀಕರಣ ಕಾಮಗಾರಿ ಪ್ರಗತಿಯಲ್ಲಿದೆ. ಮಾರ್ಚ್‌ ವೇಳೆಗೆ ಎರಡೂ ಕಾಮಗಾರಿ ಪೂರ್ಣಗೊಳ್ಳಲಿದ್ದು, ಆ ಬಳಿಕವೇ ವಂದೇ ಭಾರತ್‌ ಎಕ್ಸ್‌ಪ್ರೆಸ್‌ ಸಂಚರಿಸಲು ಸಾಧ್ಯ. ಕಾಮಗಾರಿ ಪೂರ್ಣಗೊಳ್ಳುವ ಸಂದರ್ಭದಲ್ಲಿ ವೇಳಾಪಟ್ಟಿ ಸಿದ್ಧಪಡಿಸಲಾಗುವುದು’ ಎಂದು ನೈರುತ್ಯ ರೈಲ್ವೆ ಅಧಿಕಾರಿಯೊಬ್ಬರು ವಿವರಿಸಿದರು.

ಯಶವಂತಪುರ ಮತ್ತು ಕಂಟೋನ್ಮೆಂಟ್‌ ರೈಲು ನಿಲ್ದಾಣಗಳ ಪುನರ್‌ ಅಭಿವೃದ್ಧಿ ಯೋಜನೆಗಳಿಗೂ ಮಂಜೂರಾತಿ ದೊರಕಿದೆ. ಕಂಟೋನ್ಮೆಂಟ್‌ ನಿಲ್ದಾಣದ ಕಾಮಗಾರಿಗೆ ಟೆಂಡರ್‌ ಕರೆಯಲಾಗಿದ್ದು, ನ.23ರಂದು ತೆರೆಯಲಾಗುತ್ತದೆ. ಯಶವಂತಪುರ ನಿಲ್ದಾಣದ ಕಾಮಗಾರಿಗೆ ಟೆಂಡರ್‌ ಪ್ರಕ್ರಿಯೆ ಪೂರ್ಣಗೊಂಡಿದೆ. ಈ ಎರಡು ಕಾಮಗಾರಿಗಳಿಗೂ ಪ್ರಧಾನ ಮಂತ್ರಿ ಈಗಾಗಲೇ ಶಂಕುಸ್ಥಾಪನೆ ನೆರವೇರಿಸಿದ್ದಾರೆ ಎಂದು ಸಂಜೀವ್‌ ಕಿಶೋರ್‌ ವಿವರಿಸಿದ್ದಾರೆ.

ಮೈಸೂರು ರೈಲು ನಿಲ್ದಾಣ ಮತ್ತು ನಾಗೇನಹಳ್ಳಿ ನಿಲ್ದಾಣಗಳ ಅಭಿವೃದ್ಧಿಗೆ ₹493 ಕೋಟಿ ಮೊತ್ತದ ಕಾಮಗಾರಿಗೆ ರೈಲ್ವೆ ಮಂಡಳಿ ಒಪ್ಪಿಗೆ ನೀಡಿದೆ. ಟೆಂಡರ್‌ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು..

ಸಾಲ ಮನ್ನಾಗೆ ವಿಶ್ವಕರ್ಮ ಮಹಾಸಭಾ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ನೀಡಿರುವ ಸಾಲವನ್ನು ಮನ್ನಾ ಮಾಡಬೇಕು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಒತ್ತಾಯಿಸಿದೆ.

‘ಸಮುದಾಯದ ಮುಂದಿನ ಪೀಳಿಗೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯ ಅಭಿವೃದ್ಧಿಗಾಗಿ ವಿಶ್ವಕರ್ಮ ಸಮಾಜವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು. ಈ ಹಿನ್ನಲೆಯಲ್ಲಿ ರಾಜ್ಯದಾದ್ಯಂತ ಹೋರಾಟಗಳು ನಡೆಯುತ್ತಿವೆ’ ಎಂದು ಯುವ ಘಟಕದ ಅಧ್ಯಕ್ಷ ಮಳವಳ್ಳಿ ಶ್ರೀನಿವಾಸ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದ ಯಾವುದಾದರೂ ವಿಶ್ವವಿದ್ಯಾಲಯಕ್ಕೆ ಅಮರಶಿಲ್ಪಿ ಜಕಣಾಚಾರಿ ಅವರ ಹೆಸರನ್ನು ನಾಮಕರಣ ಮಾಡಬೇಕು. ವಿಶ್ವಕರ್ಮರ ಪಂಚ ಕುಲ ಕಸುಬುಗಳಿಗೆ ಉತ್ತೇಜನ ನೀಡಲು ಯೋಜನೆ ರೂಪಿಸಬೇಕು. ಸಮುದಾಯದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಜಿಲ್ಲಾಮಟ್ಟದಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

‘ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲು ಮೀನಮೇಷ ಎಣಿಸುತ್ತಿದೆ. ಬೇರೆ ಅಭಿವೃದ್ಧಿ ನಿಗಮಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿದೆ. ಆದರೆ, ವಿಶ್ವಕರ್ಮ ಅಭಿವೃದ್ಧಿ ನಿಮಗಕ್ಕೆ ಅಧ್ಯಕ್ಷರನ್ನು ನೇಮಿಸದೇ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಸಮುದಾಯವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಬಿಡುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ವತಿಯಿಂದ ನ.11ರಂದು ಶಿವಾನಂದ ವೃತ್ತದಲ್ಲಿರುವ ಗುರುರಾಜ ಕಲ್ಯಾಣ ಮಂಟಪದಲ್ಲಿ ರಾಜ್ಯಮಟ್ಟದ ಉಚಿತ ವಧು–ವರರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಸಾಲು ಮರದ ತಿಮ್ಮಕ್ಕ ಉದ್ಘಾಟನೆ ಮಾಡಲಿದ್ದು, ಕೆ. ಪಿ. ನಂಜುಂಡಿ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

ನಿಧನ ವಾರ್ತೆ

ಆನಂದ ಕುಮಾರ್‌

ಆನಂದ ಕುಮಾರ್‌

ಉಡುಪಿ: ದಿ. ಪ್ರಿಂಟರ್ಸ್‌ (ಮೈಸೂರು) ಪ್ರೈವೆಟ್‌ ಲಿಮಿಟೆಡ್‌ನ (ಟಿಪಿಎಂಎಲ್‌) ಪ್ರೊಡಕ್ಷನ್‌ ವಿಭಾಗದ ಉದ್ಯೋಗಿ ಆನಂದಕುಮಾರ್‌ (59) ಅವರು ಬುಧವಾರ ಮಣಿಪಾಲದ ಆಸ್ಪತ್ರೆಯಲ್ಲಿ ನಿಧನರಾದರು.

ಕುಂದಾಪುರ ತಾಲ್ಲೂಕಿನ ಕಂದಾವರ ಮೂಡಲಕಟ್ಟೆಯ ಕೊಟ್ವಾಡಿ ಮನೆ ಗ್ರಾಮದ ಆನಂದ್‌ ಕುಮಾರ್‌ ಅವರು, ಟಿಪಿಎಂಎಲ್‌ ಸಂಸ್ಥೆಯಲ್ಲಿ 39 ವರ್ಷ ಕಾರ್ಯನಿರ್ವಹಿಸಿದ್ದರು. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ನಡೆಯಿತು.

ಸುಧಾ, ಮಯೂರ ಓದಿರಿ

ಜಲಮಂಡಳಿ: ಇಂದು ಅದಾಲತ್‌

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ವತಿ ಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 10ರಂದು ನೀರಿನ ಅದಾಲತ್‌ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್‌ ನಡೆಯಲಿದೆ. ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ 8762228888 ಸಂದೇಶ ಕಳುಹಿಸುವ ಮೂಲಕ ದೂರು ಸಲ್ಲಿಸಬಹುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್‌, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್‌ ವೀಧಿ, ಬೆಂಗಳೂರು–560 001.

ಕ್ರಮಾಂಕ.: ಇಡಿ/57/ಯುಎಂವಿ/2022 ದಿನಾಂಕ:08.11.2022

ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಯ ನೇಮಕಾತಿ

ಮೈಸೂರು ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 20 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು

ಸಹಿ/– ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/3001/2022–23

ಇನ್‌ಸೈಟ್: ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಪರೀಕ್ಷೆಗಳ ತರಬೇತಿಗೆ ದೇಶದಲ್ಲಿಯೇ ಪ್ರಸಿದ್ಧ ಸಂಸ್ಥೆಯಾಗಿರುವ ಇನ್‌ಸೈಟ್ ಐಎಎಸ್ ತರಬೇತಿ ಕೇಂದ್ರದ ವತಿಯಿಂದ ಮಂಗಳವಾರ ಚಂದ್ರಾ ಲೇಔಟ್‌ನಲ್ಲಿ ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಕನ್ನಡ ನಾಡು–ನುಡಿಯ ಪರಂಪರೆಯ ವೈಭವ ಬಿಂಬಿಸುವ ರೀತಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ವಿನಯ್ ಕುಮಾರ್ ಜಿ.ಬಿ. ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 'ನಂತರ ಮಾತನಾಡಿದ ಅವರು, ನಾಡಿನ ಏಕತೆ, ಸ್ವಾಭಿಮಾನ, ಸಾಮರಸ್ಯ ಮತ್ತು ಸಹಬಾಳ್ವೆಯ ಸಂಕೇತವಾದ ರಾಜ್ಯೋತ್ಸವವನ್ನು ರಾಜ್ಯದಾದ್ಯಂತ ಕನ್ನಡಿಗರು ಹೆಮ್ಮೆಯಿಂದ ಆಚರಣೆ ಮಾಡುತ್ತಾರೆ. ಕರ್ನಾಟಕದ ಪ್ರತಿ ಮನೆ–ಮನದಲ್ಲಿ ಹಬ್ಬದ ರೀತಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ಕನ್ನಡ ರಾಜ್ಯೋತ್ಸವ ನಿತ್ಯೋತ್ಸವವಾಗಬೇಕು ಎಂಬುದು ಇನ್‌ಸೈಟ್ ಸಂಸ್ಥೆಯ ಆಶಯ' ಎಂದರು.

ವಿದ್ಯಾರ್ಥಿಗಳ ಡೊಳ್ಳು ಕುಣಿತ ತಂಡದ ಜೊತೆಗೆ ತಾಯಿ ಭುವನೇಶ್ವರಿಯ ಮೆರವಣಿಗೆ ಚಂದ್ರಲೇಔಟ್ ಮುಖ್ಯ ರಸ್ತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಂಸ್ಥೆಯ ವಿದ್ಯಾರ್ಥಿಗಳಿಂದ ಪ್ರಾರ್ಥನೆ ಹಾಗೂ ನಾಡ ಗೀತೆಯಿಂದ ಪ್ರಾರಂಭವಾಗಿ, ಕನ್ನಡ ನಾಡು-ನುಡಿ, ಪರಂಪರೆಯನ್ನು ಬಿಂಬಿಸುವ ಭರತನಾಟ್ಯ, ಯಕ್ಷಗಾನ,ಡೊಳ್ಳು ಕುಣಿತ,ನಾಟಕಾಭಿನಯ,ಕನ್ನಡ ಸುಮಧುರ ಚಿತ್ರ ಗೀತೆಗಳ ಗಾಯನ, ನೃತ್ಯ ಹೀಗೆ ಹತ್ತು ಹಲವಾರು ಕಲಾ ಪ್ರಕಾರಗಳು ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು.

ಕನ್ನಡ ಚಿತ್ರರಂಗದ ಹಿನ್ನಲೆ ಗಾಯಕಿ ಶಮಿತಾ ಮಲ್ನಾಡ್ ಮತ್ತು ತಂಡದ ಗಾಯನ ಪ್ರದರ್ಶನ ನೆರೆದಿದ್ದ ಎಲ್ಲಾ ಪ್ರೇಕ್ಷಕರ ಗಮನ ಸೆಳೆಯಿತು.

ಕಾರ್ಯನಿರ್ವಾಹಕ ಅಧಿಕಾರಿ ಶರತ್ ಕುಮಾರ್ ಎಸ್, ವಿಜಯನಗರದ ಶಾಸಕ ಎಂ. ಕೃಷ್ಣಪ್ಪ, ಪಾಲಿಕೆ ಮಾಜಿ ಸದಸ್ಯರಾದ ದೊಡ್ಡಣ್ಣ, ಉಮೇಶ್ ಶೆಟ್ಟಿ, ವೆಂಕಟೇಶ್, ಕಿರುತೆರೆಯ ನಟ ನಾರಾಯಣಸ್ವಾಮಿ ಹಾಗೂ ಸಂಸ್ಥೆಯ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ 3,500 ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಹಾಗೂ ನಾಗರಿಕರು ಇದ್ದರು.

Thanks Giving

ಕೃತಜ್ಞರಾಗಿರುತ್ತೇವೆ ಅದ್ಭುತವಾದ ಅಣ್ಣೆ ವೇಲಂಕಣಿ ಮಾತೆ ನನ್ನ ಮಗಳ ಲಿವರ್ ಸೋಂಕು ಗುಣ ಪಡಿಸಿದ್ದಕ್ಕೆ ನಮ್ಮ ಹೃದಯಪೂರ್ವಕ ಧನ್ಯವಾದಗಳು

– ಸುರೇಶ್ ಮತ್ತು ಕುಟುಂಬ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 29/ 2022–23 ದಿನಾಂಕ : 04.11.2022
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ಇವರು ಮೈಕ್ರೋಬಯಾಲಜಿ ಪ್ರಯೋಗಾಲಯ, ಚಿಕ್ಕಬಳ್ಳಾಪುರ ಇಲ್ಲಿಗೆ ಅವಶ್ಯವಿರುವ ಮೀಡಿಯಾ/ಕನ್ಸ್ಯೂಮಬಲ್ಸ್ ಸರಬರಾಜು ಮತ್ತು ಇತರೆ ಅವಶ್ಯಕವಾದ ವಸ್ತುಗಳನ್ನು ಸರಬರಾಜು ಮಾಡಲು ಉತ್ಪಾದಕರು/ಅಧಿಕೃತ ವಿತರಕರು/ನೋಂದಾಯಿತ ಸರಬರಾಜುದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆಯ ಅನ್ವಯ ಇ–ಟೆಂಡರನ್ನು ಕರೆಯಲಾಗಿದೆ. ಇದರ ವಿವರಗಳನ್ನು ಇಲಾಖಾ ವೆಬ್‌ಸೈಟ್ (www.eproc.karnataka.gov.in)ನಲ್ಲಿ ಪಡೆಯಬಹುದಾಗಿದೆ ಹಾಗೂ ಕಛೇರಿಯ ಅವಧಿಯಲ್ಲಿ ಪಡೆಯಬಹುದಾಗಿದೆ.

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ: (1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 04.11.2022ರ ಸಂಜೆ 4.30 ಗಂಟೆಯ** ನಂತರ (2) ಇ.ಟೆಂಡರ್‌ನಲ್ಲಿ ಬಿಡ್‌ದಾರರು ಅಪ್‌ಲೋಡ್ ಮಾಡಲು ಕಡೆಯ **ದಿನಾಂಕ: 21.11.2022 ಸಂಜೆ 5.00 ಗಂಟೆಯವರೆಗೆ.** (3) ಬಿಡ್ ತೆರೆಯುವ **ದಿನಾಂಕ: 24.11.2022 ಸಂಜೆ 5.00 ಗಂಟೆಗೆ.**

ಮೇಲ್ಕಂಡ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: +9180 2551216 ಮತ್ತು +9125501227ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ336/ಎಂ.ಸಿ.ಎ/2022–23.

ಕೋವಿಡ್–19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ. 6 ಅಡಿ ದೈಹಿಕ ಅಂತರ ಪಾಲಿಸಿ. ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಮುಂಭಾಗದ ಗುಬ್ಬಿ ತೋಟದಪ್ಪ ರಸ್ತೆಯಲ್ಲಿ ಗುಂಡಿಗಳು ಇಲ್ಲದಂತೆ ಸಮತಟ್ಟು ಮಾಡಿರುವುದು (ಎಡಚಿತ್ರ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ ಸಾಗುವ ರಸ್ತೆಗೆ ಹೊಸದಾಗಿ ಡಾಂಬರು ಹಾಕಲಾಗಿದೆ —ಪ್ರಜಾವಾಣಿ ಚಿತ್ರ: ಎಂ.ಎಸ್‌ಮಂಜುನಾಥ್

ಗುಬ್ಬಿ ತೋಟದಪ್ಪ ರಸ್ತೆ ಗುಂಡಿ ಮಾಯ; ಕಾಂಕ್ರೀಟ್ ರಸ್ತೆಗೆ ಮುನ್ನ ಡಾಂಬರು

ಮೋದಿ ಭೇಟಿ: ರಸ್ತೆ ಡಾಂಬರಿಗೆ ಅನಗತ್ಯ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷಗಳಿಂದ ಸವಾರರ ಸಂಕಷ್ಟಕ್ಕೆ ಕಾರಣವಾಗಿದ್ದ ರಸ್ತೆ ಗುಂಡಿಗಳು ಬೆಳಗಾಗುವಲ್ಲಿ ಮಾಯವಾಗಿವೆ. ವೈಟ್‌ಟಾಪಿಂಗ್ ಮಾಡಬೇಕು ಎಂದು ಗುಂಡಿ ಮುಚ್ಚಲೂ ಹಿಂದೇಟು ಹಾಕುತ್ತಿದ್ದ ಎಂಜಿನಿಯರ್‌ಗಳು ಆ ರಸ್ತೆಯನ್ನು ಕೆರೆದು ನೈಸ್ ಮಾಡಿದ್ದಾರೆ. ಇದಕ್ಕೆಲ್ಲ ಕಾರಣ ಪ್ರಧಾನಿ ನರೇಂದ್ರ ಮೋದಿ ಭೇಟಿ.

ನಗರದ ರೈಲು ನಿಲ್ದಾಣದ ಮುಂಭಾಗದ ಗುಬ್ಬಿ ತೋಟದಪ್ಪ ರಸ್ತೆ ವರ್ಷಗಳಿಂದ ಗುಂಡಿಮಯವಾಗಿದೆ. 'ಕಾಂಕ್ರೀಟ್ ರಸ್ತೆ (ವೈಟ್ ಟಾಪಿಂಗ್) ಆಗುತ್ತದೆ, ಹೀಗಾಗಿ ದುರಸ್ತಿ ಮಾಡೊಲ್ಲ' ಎಂದು ಸವಾರರಿಗೆ ಅತ್ಯಂತ ಕಷ್ಟವಾಗುತ್ತಿದ್ದ ಸ್ಥಿತಿಯಲ್ಲೂ ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಿದ್ದರು.

ಆದರೆ, ಇದೀಗ ರಸ್ತೆಯನ್ನು ಮಟ್ಟಮಾಡಿದ್ದಾರೆ. ಜೆಸಿಬಿಯಲ್ಲಿ ಕೆರೆದು ಗುಂಡಿಗಳಿಲ್ಲದಂತೆ ಮಾಡಿದ್ದಾರೆ.

₹7.8 ಕೋಟಿ ವೆಚ್ಚದಲ್ಲಿ ವೈಟ್‌ಟಾಪಿಂಗ್ ಮಾಡಲು ಈ ರಸ್ತೆಗೆ ಟೆಂಡರ್ ಆಗಿದೆ. ಆದರೆ, ಈಗ ಅನಗತ್ಯವಾಗಿ ಡಾಂಬರು ಅಥವಾ ಬೇಸ್ ಹಾಕುತ್ತಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

'ವೈಟ್ ಟಾಪಿಂಗ್‌ಗೇ ಮಾಡುತ್ತೇವೆ' ಎಂದು ಮುಖ್ಯ ಆಯುಕ್ತ, ಪ್ರಧಾನ ಎಂಜಿನಿಯರ್ ಹಾಗೂ ಸ್ಥಳೀಯ ಎಂಜಿನಿಯರ್‌ಗಳು ಹೇಳುತ್ತಿದ್ದಾರೆ. ಆದರೆ, ಒಂದು ಪದರ ಡಾಂಬರು ಹಾಕಿ ಅದನ್ನು ಸನ್ನದ್ಧುಗೊಳಿಸುತ್ತಿದ್ದಾರೆ. ಪ್ರಧಾನಿ ಮೋದಿ ಅವರು ಪಕ್ಕದ ರಸ್ತೆಯಲ್ಲಿ ಹೋಗುವುದರಿಂದ ಈ ರಸ್ತೆ ಚೆನ್ನಾಗಿ ಕಾಣಲೆಂದು ಎಂಜಿನಿಯರ್‌ಗಳು 'ಒತ್ತಡದಿಂದ' ಇಂತಹ ಕೆಲಸ ಮಾಡುತ್ತಿದ್ದಾರೆ ಎಂಬ ದೂರಿದೆ.

'ಕಾಂಕ್ರೀಟ್ ರಸ್ತೆ ಮಾಡಲು ಈ ರೀತಿ ಸ್ಕ್ರಾಚ್ ಮಾಡಿದ್ದಾರೆ ಎಂದಿಟ್ಟುಕೊಳ್ಳೋಣ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಗುಂಡಿಗಳಲ್ಲಿ ಬೀಳದೆ ನಾವೆಲ್ಲ ಸಂಚಾರ ಮಾಡುತ್ತಿದ್ದೆವು. ಈ ಬುದ್ಧಿ ಮೊದಲು ಏಕೆ ಬಂದಿರಲಿಲ್ಲ' ಎಂದು ಸವಾರ ರಾಮಚಂದ್ರ ಪ್ರಶ್ನಿಸಿದರು.

'ಪ್ರಧಾನಿ ಬರುತ್ತಾರೆ ಎಂದು ಕಾಂಕ್ರೀಟ್ ಮಾಡುವ ರಸ್ತೆಗೆ ಡಾಂಬರು ಹಾಕಿ ಅನಗತ್ಯವಾಗಿ ವೆಚ್ಚ ಮಾಡಲಾಗುತ್ತಿದೆ. ಕಾಂಕ್ರೀಟ್ ರಸ್ತೆಗೆ ಸಿದ್ಧತೆ ಮಾಡಿಕೊಳ್ಳುವುದೇ ಆಗಿದ್ದರೆ ಈ ಕೆಲಸಕ್ಕೆ ಮುನ್ನ ಯುಟಿಲಿಟಿ ಡಕ್ಟ್‌ಗಳನ್ನು ಏಕೆ ಮಾಡಿಲ್ಲ. ಈಗ ಹಾಕುವ 10 ಎಂಎಂ ಅಥವಾ ಯಾವುದೇ ಬಿಟಮಿನ್ ಎಲ್ಲವೂ ವೇಸ್ಟ್ ಆಗುವುದಿಲ್ಲವೇ?' ಎಂದು ಸ್ಥಳೀಯ ಮಳಿಗೆ ಮಾಲೀಕ ಅಬ್ದುಲ್ ಕೇಳಿದರು.

ಈ ನಡುವೆ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಓಕಳಿಪುರಂ ಕಡೆಗೆ ಹಾಗೂ ರೈಲು ನಿಲ್ದಾಣದ ಕಡೆಯ ರಸ್ತೆಗಳೆಲ್ಲ ಡಾಂಬರು ಕಂಡು ನಳನಳಿಸುತ್ತಿವೆ. ಮಣ್ಣಿನ ಬೆಟ್ಟಗಳು, ಅವಶೇಷಗಳು ಕಾಣದಂತೆ ಅದಕ್ಕೆ ಅಡ್ಡವಾಗಿ ತಗಡು ಬಡಿಯಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಸಾಗುವ ರಸ್ತೆಗಳು ಅತ್ಯಂತ ವಿಜೃಂಭಣೆಯಿಂದ ಸಿಂಗಾರಗೊಂಡಿದ್ದರೆ, ಅದರ ಪಕ್ಕದ ರಸ್ತೆಗಳಲ್ಲಿ ಗುಂಡಿಗಳು ಬಿಬಿಎಂಪಿ ವೈಫಲ್ಯವನ್ನು ಎತ್ತಿತೋರುತ್ತಿವೆ.

ಮಾಗಡಿ ರಸ್ತೆ, ಬಿನ್ನಿಮಿಲ್ ರಸ್ತೆ, ಸಿರಸಿ ವೃತ್ತದ ಸುತ್ತಮುತ್ತಲಿನ ರಸ್ತೆಗಳಲ್ಲಿ ಗುಂಡಿಗಳು ಸಾಕ್ಷಿವೆ. ಇವು ಮಾತ್ರ ಬಿಬಿಎಂಪಿ ಕಣ್ಣಿಗೆ ಬಿದ್ದಿಲ್ಲ. ಪ್ರಧಾನಿ ಸಂಚರಿಸುವ ರಸ್ತೆಗಳನ್ನು ಮಾತ್ರ ದುರಸ್ತಿ ಮಾಡುತ್ತಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಈ ರಸ್ತೆಯಲ್ಲಿ ಬರೊಲ್ಲ...

'ಗುಬ್ಬಿ ತೋಟದಪ್ಪ ರಸ್ತೆಯನ್ನು ವೈಟ್ ಟಾಪಿಂಗ್ ಮಾಡುತ್ತಿದ್ದೇವೆ. ಅದಕ್ಕೆ ಸಿದ್ಧತೆಯಾಗಿ ನಾವು ಬೇಸ್ ರೆಡಿ ಮಾಡಿಕೊಳ್ಳುತ್ತಿದ್ದೇವೆ. ಯುಟಿಲಿಟಿ ಡಕ್ಟ್‌ಗಳನ್ನು ಮಾಡಲು ಮತ್ತೆ ಎಲ್ಲವನ್ನು ಅಗೆದು ಮಾಡುತ್ತೇವೆ. ಪ್ರಧಾನಿ ಈ ರಸ್ತೆಯಲ್ಲಿ ಬರೊಲ್ಲ' ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದರು.

ಸಂಚಾರ ನಿರ್ಬಂಧ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನ. 11ರಂದು ನಗರಕ್ಕೆ ಆಗಮಿಸಲಿದ್ದು, ಅವರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟ ನಿರ್ಬಂಧಿಸಲಾಗಿದೆ.

'ವಿಧಾನಸೌಧ, ರೈಲು ನಿಲ್ದಾಣ ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಕ್ರಮಗಳಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದಾರೆ. ಅವರ ಭದ್ರತೆ ದೃಷ್ಟಿಯಿಂದ ಸಾರ್ವಜನಿಕರ ವಾಹನಗಳಿಗೆ ನಿರ್ಬಂಧ ವಿಧಿಸಲಾಗಿದೆ. ಸಾರ್ವಜನಿಕರು ಬದಲಿ ಮಾರ್ಗದಲ್ಲಿ ಸಂಚರಿಸಬೇಕು. ಪ್ರತಿಯೊಂದು ರಸ್ತೆಯಲ್ಲೂ ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ಬೆಳಿಗ್ಗೆ 7ರಿಂದ ಮಧ್ಯಾಹ್ನ 3 ಗಂಟೆವರೆಗೆ ನಗರದಲ್ಲಿ ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಹಲವೆಡೆ ದಟ್ಟಣೆ ಉಂಟಾಗುವ ಸಾಧ್ಯತೆಯೂ ಇದೆ' ಎಂದಿದ್ದಾರೆ.

ಆರು ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಕರಡು ಪಟ್ಟಿ ಬಿಡುಗಡೆ • ಡಿ.8ರವರೆಗೆ ಆಕ್ಷೇಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 91 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಜನವರಿ 1ಕ್ಕೆ ಹೋಲಿಸಿದರೆ ಸುಮಾರು 3 ಲಕ್ಷ ಮತದಾರರು ಕಡಿಮೆಯಾಗಿದ್ದು, 6 ಲಕ್ಷ ಮತದಾರರನ್ನು ಪಟ್ಟಿಯಿಂದ ಬಿಡಲಾಗಿದೆ. 3 ಲಕ್ಷ ಮತದಾರರು ಹೊಸದಾಗಿ ನೋಂದಣಿಯಾಗಿದ್ದಾರೆ.

ಮುಂದಿನ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಭಾರತ ಚುನಾವಣೆ ಆಯೋಗದ ನಿರ್ದೇಶನದಂತೆ ಬಿಬಿಎಂಪಿ ವ್ಯಾಪ್ತಿಯ ಮತದಾರರ ಕರಡು ಪಟ್ಟಿಯನ್ನು ನ.9ರಂದು ಪ್ರಕಟಿಸಲಾಗಿದೆ. ಡಿ.8ರವರೆಗೆ ಆಕ್ಷೇಪಣೆಗೆ ಅವಕಾಶ ಕಲ್ಪಿಸಿದ್ದು, ಜ.5ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ನಾಗರಿಕರು ಮತದಾರರ ಪಟ್ಟಿ ಯಲ್ಲಿ ತಮ್ಮ ಹೆಸರಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ಆಕ್ಷೇಪಣೆ ಅಥವಾ ತಿದ್ದುಪಡಿ ಇದ್ದರೆ ಸರಿಪಡಿಸಿಕೊಳ್ಳಬಹುದು. www.bbmp.gov.in ನಲ್ಲಿ ಕರಡು ಪಟ್ಟಿ ಲಭ್ಯವಿದೆ" ಎಂದರು.

ಬಿಬಿಎಂಪಿಯ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ 8,514 ಮತಗಟ್ಟೆಗಳಿದ್ದು, ಇದೀಗ ಅದರ ಸಂಖ್ಯೆ 8,615ಕ್ಕೆ ಹೆಚ್ಚಾಗಿದೆ. ಕಂದಾಯ ಅಧಿಕಾರಿಗಳು, ವಾರ್ಡ್ ಕಚೇರಿಗಳಲ್ಲಿ ಮತದಾರರಿಗೆ ವಿಶೇಷ ನೋಂದಣಿ ಅಭಿಯಾನವನ್ನು ನ.12, 20, ಡಿ.3 ಹಮ್ಮಿಕೊಳ್ಳಲಾಗಿದೆ. ಡಿ.4ರಂದು ಅಂತಿಮ ವಿಶೇಷ ನೋಂದಣಿ ಅಭಿಯಾನ ನಡೆಯಲಿದೆ ಎಂದು ಅವರು ಹೇಳಿದರು.

2023ರ ಜ.1, ಏ.1, ಜು.1 ಹಾಗೂ ಅ.1ರಂದು 18 ವರ್ಷ ತುಂಬಲಿರುವ ನಾಗರಿಕರು ಈಗಲೇ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಲು ಅರ್ಜಿ ಸಲ್ಲಿಸಬಹುದು ಎಂದರು.

ಮತದಾರರ ಪಟ್ಟಿ ಪರಿಷ್ಕರಣೆ–2023 ಅಂಗವಾಗಿ ಜಾಥಾ ನಡೆಸಲಾಯಿತು

ಅಂಕಿ ಅಂಶ

91,15,805 ಒಟ್ಟು ಮತದಾರರು

47,35,952 ಪುರುಷರು

43,78,214 ಮಹಿಳೆಯರು

6,69,652 ಪಟ್ಟಿಯಿಂದ ಬಿಡಲಾದ ಮತದಾರರು

3,07,535 ಹೊಸದಾಗಿ ಸೇರ್ಪಡೆಯಾದವರು

ಅತಿಹೆಚ್ಚು ಮತದಾರರ ವಿಧಾನಸಭೆ ಕ್ಷೇತ್ರ	
ಬೆಂಗಳೂರು ದಕ್ಷಿಣ	6,41,466
ಮಹದೇವಪುರ	5,64,285
ಯಶವಂತಪುರ	5,06,951
ಕೆ.ಆರ್.ಪುರ	4,83,476
ಬ್ಯಾಟರಾಯನಪುರ	4,63,078

ಅತಿಕಡಿಮೆ ಮತದಾರರ ವಿಧಾನಸಭೆ ಕ್ಷೇತ್ರ	
ಶಿವಾಜಿನಗರ	1,91,728
ಜಯನಗರ	2,00,689
ರಾಜಾಜಿನಗರ	2,01,055
ಚಿಕ್ಕಪೇಟೆ	2,10,803
ಶಾಂತಿನಗರ	2,11,513

ಅಧಿಕಾರಿಗಳಿಂದ ಜಾಥಾ

ಮತದಾರರ ಪಟ್ಟಿ ಪರಿಷ್ಕರಣೆ-2023 ಅಂಗವಾಗಿ ಮುಖ್ಯ ಚುನಾವಣೆ ಅಧಿಕಾರಿ ಮನೋಜ್‌ಕುಮಾರ್ ಮೀನಾ, ಜಿಲ್ಲಾ ಚುನಾವಣೆ ಅಧಿಕಾರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಜಾಥಾ ನಡೆಸಿದರು.

ಹಡ್ಸನ್ ವೃತ್ತದಿಂದ ಆರಂಭವಾದ ಜಾಥಾ, ಕಬ್ಬನ್ ಉದ್ಯಾನದ ಮುಖ್ಯದ್ವಾರದಿಂದ, ಸೆಂಟ್ರಲ್ ಲೈಬ್ರರಿ, ಹೈಕೋರ್ಟ್, ವಿಧಾನಸೌಧ ರಸ್ತೆ, ಪ್ರೆಸ್ ಕ್ಲಬ್, ಕಬ್ಬನ್ ಉದ್ಯಾನದ ಮೂಲಕ ಬಾಲಭವನದವರೆಗೆ ನಡೆಯಿತು.

ಬಿಬಿಎಂಬಿ, ಮುಖ್ಯ ಚುನಾವಣಾಧಿಕಾರಿ ಕಚೇರಿ ಸಿಬ್ಬಂದಿ, ಚುನಾವಣಾ ಸಾಕ್ಷರತಾ ಸಂಘ, ಎನ್.ಸಿ.ಸಿ, ಎನ್.ಎಸ್.ಎಸ್ ವಿದ್ಯಾರ್ಥಿಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಭಾಗವಹಿಸಿದ್ದರು. ವಿಶೇಷ ಆಯುಕ್ತ ಎಸ್.ರಂಗಪ್ಪ, ಡಾ. ತ್ರಿಲೋಕ್ ಚಂದ್ರ, ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್, ಉಪ ಆಯುಕ್ತ ಮುರಳೀಧರ್, ಸಹಾಯ ಆಯುಕ್ತ ಉಮೇಶ್ ಇದ್ದರು.

ಆಧಾರ್ ಲಿಂಕ್; ನಗರ ಹಿಂದೆ

ಮತದಾರರ ಪಟ್ಟಿಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುವ ಪ್ರಕ್ರಿಯೆಯಲ್ಲಿ ರಾಜ್ಯಮಟ್ಟದಲ್ಲಿ ಶೇ 68ರಷ್ಟು ಯಶ ಸಾಧಿಸಲಾಗಿದೆ. ಆದರೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 26ರಷ್ಟು ಮತದಾರರು ಮಾತ್ರ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿದ್ದಾರೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ವೋಟರ್ ಹೆಲ್ಪ್‌ಲೈನ್ ಆ್ಯಪ್ ಮೂಲಕ ಆಧಾರ್ ಲಿಂಕ್ ಮಾಡಿಕೊಳ್ಳಬಹುದು. ಅಲ್ಲಿಯೇ ಇ–ಎಪಿಕ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮತಗಟ್ಟೆ ವಿವರ, ಮತದಾನದ ಮಾಹಿತಿ ಎಲ್ಲವನ್ನೂ ಈ ಆ್ಯಪ್‌ನಲ್ಲಿ ಪಡೆಯಬಹುದಾಗಿದೆ ಎಂದರು.

ಕೆಂಗೇರಿ: ಜಲಮಂಡಳಿಯಿಂದ ಪೈಪ್ ದುರಸ್ತಿ

ಬೆಂಗಳೂರು: ಕೆಂಗೇರಿ ಉಪನಗರದ ಎನ್.ಪಿ.ಎಸ್ ಶಾಲೆ ಬಳಿ ಶಿಥಿಲಗೊಂಡಿದ್ದ ಕಾವೇರಿ ನೀರು ಸರಬರಾಜು ಪೈಪ್ ಸರಿಪಡಿಸಲಾಗಿದೆ ಎಂದು ಜಲಮಂಡಳಿಯ ಮುಖ್ಯ ಎಂಜಿನಿಯರ್ (ಪಶ್ಚಿಮ) ತಿಳಿಸಿದ್ದಾರೆ.

ಈ ಸ್ಥಳದಲ್ಲಿ ಪೈಪ್ ಒಡೆದು ಬೃಹತ್ ಗಾತ್ರದ ಗುಂಡಿ ನಿರ್ಮಾಣಗೊಂಡಿತ್ತು. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ನೀರಿನ ಪೈಪ್‌ಗೆ ಹಾನಿ: ರಸ್ತೆಯಲ್ಲಿ ಕಂದಕ' 'ಶೀರ್ಷಿಕೆ ಅಡಿಯಲ್ಲಿ ಅ. 11ರಂದು ವರದಿ ಪ್ರಕಟವಾಗಿತ್ತು.

ಈ ಘಟನೆ ಕುರಿತು ಅನುಪಾಲನಾ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಕಚೇರಿಯಿಂದ ಸೂಚಿಸಲಾಗಿತ್ತು.

ಕೆಂಗೇರಿಯ ಶಿವನಪಾಳ್ಯ ಮುಖ್ಯರಸ್ತೆಯಲ್ಲಿ ನೀರು ಸೋರಿಕೆಯಾಗುತ್ತಿರುವುದನ್ನು ಪರಿಶೀಲಿಸಿ, ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಯಿತು. ಜಲಮಂಡಳಿ ವತಿಯಿಂದ ಕೊಳವೆಗಳ ದುರಸ್ತಿ ಕಾರ್ಯ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ರಸ್ತೆಯನ್ನು ಮತ್ತೆ ಯಥಾಸ್ಥಿತಿಯಂತೆ ದುರಸ್ತಿಗೊಳಿಸಲಾಗಿದೆ ಎಂದು ಮುಖ್ಯ ಎಂಜಿನಿಯರ್ ತಿಳಿಸಿದ್ದಾರೆ.

ಪೊಲೀಸರು ವಶಪಡಿಸಿಕೊಂಡಿದ್ದ ಸ್ವತ್ತುಗಳು

'ಮುನಿರತ್ನ ವಿರುದ್ಧದ ಸಾಕ್ಷ್ಯ ಹಾಜರು ಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ನಕಲಿ ಗುರುತಿನ ಚೀಟಿಗಳನ್ನು ಸೃಷ್ಟಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಮುನಿರತ್ನ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಪೊಲೀಸರು ವಶಪಡಿಸಿಕೊಂಡಿರುವ ಸ್ವತ್ತುಗಳನ್ನು ಹೈಕೋರ್ಟ್ ಮುಂದೆ ಹಾಜರುಪಡಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಮನವಿಯನ್ನು ಹೈಕೋರ್ಟ್ ಮಾನ್ಯ ಮಾಡಿದೆ.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಿಂದ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮುನಿರತ್ನ ವಿರುದ್ಧ ಪರಾಜಯ ಅನುಭವಿಸಿದ್ದ ಬಿಜೆಪಿ ಅಭ್ಯರ್ಥಿ ಹಾಗೂ ಈಗ ವಿಧಾನಪರಿಷತ್ ಸದಸ್ಯರೂ ಆದ ತುಳಸಿ ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಮುನಿರಾಜುಗೌಡ ಪರ ವಕೀಲರಾದ ಎಂ.ಶಿವಪ್ರಕಾಶ್, 'ತನಿಖೆ ವೇಳೆ ವಶಪಡಿಸಿಕೊಂಡಿರುವ ಸ್ವತ್ತುಗಳು ಕ್ರಿಮಿನಲ್ ಪ್ರಕರಣದಲ್ಲಿ ಸ್ವತ್ತು ಪಟ್ಟಿಗಳು ಎಂದೇ ಪರಿಗಣಿತವಾಗುತ್ತವೆ. ಈ ಸ್ವತ್ತುಗಳು ಮುನಿರತ್ನ ವಿರುದ್ಧದ ಆರೋಪಗಳನ್ನು ಸಾಬೀತಪಡಿಸಲು ಅತ್ಯಂತ ಅವಶ್ಯಕ ಸಾಕ್ಷ್ಯಗಳಾಗಿವೆ. ಆದ್ದರಿಂದ, ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಆದೇಶಿಸಬೇಕು. ಈ ಕುರಿತಂತೆ ಸಲ್ಲಿಸಲಾಗಿರುವ ಮಧ್ಯಂತರ ಮನವಿಯನ್ನು ಪುರಸ್ಕರಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಇದೊಂದು ಅರೆ ಕ್ರಿಮಿನಲ್ ನ್ಯಾಯಿಕ ಪ್ರಕ್ರಿಯೆ ಆಗಿರುವುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಸ್ವತ್ತುಗಳನ್ನು ವಿಚಾರಣೆಯಲ್ಲಿ ಹಾಜರುಪಡಿಸಲು ಮತ್ತು ನ್ಯಾಯದ ಇತ್ಯರ್ಥಕ್ಕೆ ಒಳಪಡಿಸಲು ಈ ನ್ಯಾಯಾಲಯಕ್ಕೆ ವಿಪುಲವಾದ ಅಧಿಕಾರವಿದೆ' ಎಂಬ ಅಭಿಪ್ರಾಯಪಟ್ಟಿತು.

'ಮುನಿರಾಜುಗೌಡ ಪರ ವಕೀಲರು ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹಾಜರಾಗಿ ಸ್ವತ್ತುಗಳನ್ನು ಪರಿಶೀಲಿಸಿ, ಯಾವ ಯಾವ ಸ್ವತ್ತುಗಳ ಅವಶ್ಯಕತೆ ಇದೆ ಎಂಬುದನ್ನು ನ್ಯಾಯಾಧೀಶರಿಗೆ ಮನವರಿಕೆ ಮಾಡಿಕೊಟ್ಟು, ನಂತರ ಅಗತ್ಯ ಸ್ವತ್ತುಗಳ ಪಟ್ಟಿ ನೀಡಿ ಪಡೆಯಬೇಕು' ಎಂದು ಆದೇಶಿಸಿತು. ಸ್ವತ್ತುಗಳನ್ನು ನ್ಯಾಯಾಲಯಕ್ಕೆ ತರಿಸಲು ಮುನಿರತ್ನ ಪರ ವಕೀಲರು ಬಲವಾದ ಆಕ್ಷೇಪ ವ್ಯಕ್ತಪಡಿಸಿ ತಕರಾರು ಸಲ್ಲಿಸಿದ್ದರು.

ಪ್ರಕರಣವೇನು?: 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಮುನಿರತ್ನ ವಿರುದ್ಧ ಸದಾಶಿವನಗರ ಪೊಲೀಸ್ ಠಾಣೆ, ನಂದಿನಿ ಲೇಔಟ್ ಪೊಲೀಸ್ ಠಾಣೆ, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಮತ್ತು ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ನಾಲ್ಕು ಕ್ರಿಮಿನಲ್ ಪ್ರಕರಣ ದಾಖಲಾಗಿವೆ. ಸ್ವತ್ತುಗಳ ಪಟ್ಟಿಯಲ್ಲಿ ಸಿಸಿಟಿವಿ ಫೂಟೇಜು ಗಳು, ಕುಕ್ಕರ್‌ಗಳು, ನಕಲಿ ವೋಟರ್ ಐಡಿಗಳು, ಸ್ಕ್ಯಾನರ್‌ಗಳು, ಜೆರಾಕ್ಸ್ ಯಂತ್ರಗಳು, ಫಾರಂ ನಂಬರ್–6 ಸೇರಿದಂತೆ ಇತರೆ ವಸ್ತುಗಳು ಸೇರಿವೆ ಎನ್ನಲಾಗಿದೆ.

'ಮುನಿರತ್ನ ಅವರ ಅಂದಿನ ಆಯ್ಕೆಯನ್ನು ಜನತಾ ಪ್ರತಿನಿಧಿ ಕಾಯ್ದೆ–1951ರ ಕಲಂ 123ರ ಅನುಸಾರ ಅನೂರ್ಜಿತ ಎಂದು ಸಾರಬೇಕು' ಎಂದು ಕೋರಿ, ಮುನಿರಾಜು ಗೌಡ ಈ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ಚಿತ್ರಾವಳಿ

ಮೇಡಹಳ್ಳಿಯಲ್ಲಿರುವ ಸತ್ಸಂಗ ದೇವಸ್ಥಾನಕ್ಕೆ ಮಂಗಳವಾರ ಠಾಕೂರ್ ಅನಕೂಲಚಂದ್ರ ಸ್ವಾಮೀಜಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಭಕ್ತಿಗೀತೆಗಳ ಗಾಯನ, ಆಧ್ಯಾತ್ಮಿಕ ಆಲೋಚನೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದ ಮುಂಭಾಗದಲ್ಲಿರುವ ಇಂದಿರಾ ಕ್ಯಾಂಟೀನ್ ಆವರಣದಲ್ಲಿ ಬುಧವಾರ ಊಟ ಮಾಡಲು ನಿಂತಿದ್ದ ಜನಸಂದಣಿ

—ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

VACANCY
Essjay Ericsson Pvt Ltd
Riggers
Salary: 15000-20000 PM
Qualification: 10th
Technicians
Salary: 15000-25000 PM
ITI & 10th
Engineers
Salary: 20000-35000 PM
Qualification: Diploma, B.Tech
Direct Walk-In Interview
12th Nov to 13th Nov 2022
Time: 10:00 AM to 4:00 PM
Experienced in Telecom Domain only
Contact: 9282109682, 9711596786, 9717795441
Email: latika.pandey.bo@essjayericsson.com
Add: Ericsson India Pvt. Ltd. Level 1 Ferns Icon, Survey No. 28 & 36/5, Doddanakundi, Next to Akme ballet, Off-Outer Ring Road, Bangalore

TOURS & TRAVEL

Resort

RESORT LIKE home Stay with Food Chickmagaluru www.residencyhomestay.in 9611099245, 9380208396, 8277199686.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

CHANGE OF NAME
I, FAYAZUDDIN Residing at #64, 75/61-1, 3rd cross, Near Masjid, Kaveri Nagar, Hongsandra, Bengaluru South, Benglauru-560068, have changed my name to FAIYAZUDDIN vide affidavit dated 08/11/2022 before Notary K.C. Shashikal, Bengaluru. Henceforth I shall be called FAIYAZUDDIN only

I, CHAITRA ANKALIKAR resident at No.7-E, Lake View Country App, Manipal County Road, Near Star Market, Singasandra, Bengaluru-560068 have changed my name to CHAITRA KULKARNI vide affidavit dated 07/11/2022 sworn before notary N.Peruvazhuthi, Bengaluru

CHANGE OF NAME
I, SHAMSHUDDIN SURYA, R/a No. 31/2, 8th cross, 5th main road, Opp to Shakti Corner, Malleshpalya, New Thippasandra Post, Bengaluru-560075, have changed my name to SURYA PERUMAL, vide affidavit dated 08.11.2022 before Notary S.I. Balaguru, Bangalore. Henceforth I shall be known as SURYA PERUMAL only.

CHANGE OF NAME
I, SK. SHOBHAMANI Spouse of No. 10359448, Ex-Hav, Shivashankar. SC Presently Residing at No. 35, C-Block, Austin Town, KSRP Police Qtrs, Bangalore- 560047, have changed my name to SHOBHAMANI SK & in my husband's service record my D.O.B is wrongly mentioned as 20/07/1972, correct D.O.B is 20/07/1969, vide affidavit dated 08/11/2022, before notary A.R. Muneer Ahmed., Bengaluru.

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಬಿಬಿಎಂಪಿ: ಸಿಅ್ಯಂಡ್‌ಆರ್ ನಿಯಮಗಳ ಉಲ್ಲಂಘಿಸಿ ವರ್ಗಾವಣೆ ಮಾರ್ಪಾಟು

ಸಿ.ಇಗಳ 'ಪ್ರಭಾವ': ಸಿ.ಎಂ ಆದೇಶ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಇಬ್ಬರು ಮುಖ್ಯ ಎಂಜಿನಿಯರ್‌ಗಳು 'ಪ್ರಭಾವ' ಬಳಸಿ ಮುಖ್ಯಮಂತ್ರಿ ಸೂಚನೆ ಮೇರೆಗೆ ಹೊರಡಿಸಲಾಗಿದ್ದ ಆದೇಶವನ್ನೂ ಬದಲಿಸಿ, ಹುದ್ದೆ ಪಡೆದುಕೊಂಡಿದ್ದಾರೆ.

ಬಿಬಿಎಂಪಿ ಯೋಜನೆ, ರಾಜ ಕಾಲುವೆ ವಿಭಾಗದಲ್ಲಿ ನಿರೀಕ್ಷಿತ ಕಾರ್ಯ ನಡೆಯುತ್ತಿಲ್ಲ. ರಾಜಕಾಲುವೆಗಳ ತೆರವು ಕಾರ್ಯಾಚರಣೆ ಸರಿಯಾಗಿ ನಡೆಯುತ್ತಿಲ್ಲ ಎಂದು ಮುಖ್ಯಮಂತ್ರಿಯವರ ಆದೇಶದ ಮೇರೆಗೆ ಮುಖ್ಯ ಎಂಜಿನಿಯರ್‌ಗಳನ್ನು ನ.2ರಂದು ವರ್ಗಾಯಿಸಲಾಗಿತ್ತು.

ಬಿಬಿಎಂಪಿ ಯೋಜನೆ ವಿಭಾಗ ಹಾಗೂ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ಎಂ. ಲೋಕೇಶ್ ಅವರನ್ನು ದಾಸರಹಳ್ಳಿ ವಲಯ ಮುಖ್ಯ ಎಂಜಿನಿಯರ್, ಮಹದೇವಪುರ ವಲಯದ ಅಧೀಕ್ಷಕ ಎಂಜಿನಿಯರ್ ಪ್ರವೀಣ್ ಲಿಂಗಯ್ಯ ಅವರಿಗೆ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆ ಹೆಚ್ಚುವರಿ, ಎರವಲು ಸೇವೆ ಮೇರೆಗೆ ಬೆಂಗಳೂರು ಸ್ಮಾರ್ಟ್ ಸಿಟಿಯ ಮುಖ್ಯ ಎಂಜಿನಿಯರ್ ವಿಯಾಯಕ ಸೂಗೂರು ಅವರನ್ನು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿ ವರ್ಗಾಯಿಸಲಾಗಿತ್ತು. ನ.7ರವರೆಗೂ ಈ ಆದೇಶ ಅನುಷ್ಠಾನಕ್ಕೇ ಬಂದಿರಲಿಲ್ಲ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನ.7ರಂದು ಕಚೇರಿ ಆದೇಶ ಹೊರಡಿಸಿ ನಗರಾಭಿವೃದ್ಧಿ ಇಲಾಖೆಯಿಂದ ಬಂದ ವರ್ಗಾವಣೆಯನ್ನು ಬದಲಾಯಿದ್ದಾರೆ. ಲೋಕೇಶ್ ಅವರನ್ನು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್, ಅಲ್ಲಿನ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಅವರನ್ನು ಬೃಹತ್ ನೀರುಗಾಲುವೆ ವಿಭಾಗಕ್ಕೆ ಹಾಗೂ ವಿನಾಯಕ ಸುಗೂರ್ ಅವರನ್ನು ಯೋಜನಾ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಬುಧವಾರ ಇವರೆಲ್ಲ ಅಧಿಕಾರ ವಹಿಸಿಕೊಂಡಿದ್ದಾರೆ.

ವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿಅ್ಯಂಡ್‌ಆರ್) ತಿದ್ದುಪಡಿ ಮಾಡಿ ಎರಡು ವರ್ಷಗಳಾಗಿದ್ದು, ಇದರಂತೆ ಬಿಬಿಎಂಪಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಅವರ ಮೇಲಿನ ಹುದ್ದೆಗಳ ವರ್ಗಾವಣೆ, ಬಡ್ತಿ ಪ್ರಕ್ರಿಯೆಗಳು ನಗರಾಭಿವೃದ್ಧಿ ಇಲಾಖೆಯಿಂದಲೇ ಆಗಬೇಕಿದೆ. ಆದರೆ, ಇದನ್ನು ಮೀರಿ ಈ ಕಚೇರಿ ಆದೇಶವಾಗಿದೆ.

'ಬಿಬಿಎಂಪಿ ಮುಖ್ಯ ಆಯುಕ್ತರೂ ಪ್ರಧಾನ ಕಾರ್ಯದರ್ಶಿಯವರ ದರ್ಜೆಯವರಾಗಿದ್ದು, ಅವರು ಕೆಲವೊಂದು ಆದೇಶ ಮಾಡಬಹುದಾಗಿದೆ. ಆದರೆ, ಇದು ಮುಖ್ಯ ಎಂಜಿನಿಯರ್‌ಗಳ ಮಟ್ಟದಲ್ಲಾಗಿರುವ ವರ್ಗಾವಣೆ. ಇದು ಸಿಅ್ಯಂಡ್‌ಆರ್‌ಗೆ ವಿರುದ್ಧವಾಗಿದೆ. ಮುಂದಿನ ದಿನಗಳಲ್ಲಿ ಇದು ಬೇರೆ ರೀತಿಯ ಮಟ್ಟಕ್ಕೆ ಹೋದರೆ ಸಾಕಷ್ಟು ಸಮಸ್ಯೆ ಉಂಟಾಗುತ್ತದೆ' ಎಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹೇಳಿದರು.

ಅಧಿಕಾರದ ದಾಹ!

ಮುಖ್ಯಮಂತ್ರಿ ಆದೇಶದಂತೆ ಆಗಿರುವ ವರ್ಗಾವಣೆಯನ್ನು ಅನುಷ್ಠಾನಕ್ಕೆ ತಾರದೆ, ಕಚೇರಿ ಆದೇಶದಲ್ಲಿ ಮುಖ್ಯ ಎಂಜಿನಿಯರ್‌ಗಳ ಹುದ್ದೆಯನ್ನು ಬದಲಿಸಲಾಗಿದೆ. ಇದಕ್ಕೆ ಇಬ್ಬರು ಮುಖ್ಯ ಎಂಜಿನಿಯರ್‌ಗಳು ಮುಖ್ಯ ಆಯುಕ್ತರ ಮೇಲೆ ಹಾಕಿರುವ 'ಪ್ರಭಾವ'ವೇ ಕಾರಣ. ಈ ಇಬ್ಬರು ಎಲ್ಲ ಅಧಿಕಾರ ನಮ್ಮಲ್ಲೇ ಇರಬೇಕು ಎಂಬ ದಾಹದಿಂದ ಮುಖ್ಯಮಂತ್ರಿ ಆದೇಶವನ್ನೇ ಕಡೆಗಣಿಸಿದ್ದಾರೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ದೂರುತ್ತಿದ್ದಾರೆ.

ಪ್ರತಿಕ್ರಿಯೆ ಇಲ್ಲ: ಮುಖ್ಯ ಎಂಜಿನಿಯರ್‌ಗಳ ಬದಲಿ ವರ್ಗಾವಣೆ ಬಗ್ಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಸಂಪರ್ಕಿಸಿದಾಗ 'ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

ಅಪಘಾತ: ಕಾರು ಚಾಲಕನಿಗೆ ಜೈಲು ಶಿಕ್ಷೆ

ಹೊನ್ನಾವರ (ಉತ್ತರ ಕನ್ನಡ): ಗೇರುಸೊಪ್ಪ ಮಾಸ್ತಿಮನೆ ಸಮೀಪ ರಾಷ್ಟ್ರೀಯ ಹೆದ್ದಾರಿ 69ರಲ್ಲಿ ನಡೆದಿದ್ದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿ ಕಾರು ಚಾಲಕ ಬೆಂಗಳೂರಿನ ಮತ್ತಿಕೆರೆಯ ಕಾರ್ತಿಕ್‌ಗೆ ಇಲ್ಲಿನ ಸಿವಿಲ್ ಮತ್ತು ಜೆಎಂಎಫ್ ನ್ಯಾಯಾಲಯವು 3 ವರ್ಷ ಜೈಲು ಶಿಕ್ಷೆ ಹಾಗೂ ₹7,500 ದಂಡ ವಿಧಿಸಿ ತೀರ್ಪು ನೀಡಿದೆ.

2016ರಲ್ಲಿ ಅಪಘಾತ ಸಂಭವಿಸಿತ್ತು. ಕಾರ್ತಿಕ್ ಚಾಲನೆ ಮಾಡುತ್ತಿದ್ದ ಕಾರು ಮಾರುತಿ ಓಮ್ನಿಯೊಂದಕ್ಕೆ ಡಿಕ್ಕಿ ಹೊಡೆದು ಅದರಲ್ಲಿದ್ದ ವ್ಯಕ್ತಿ ಮೃತಪಟ್ಟು ಆರು ಜನ ಗಾಯಗೊಂಡಿದ್ದರು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: ವರ್ಕ್ ಅವಿನ್ಯೂ ಕ್ಯಾಂಪಸ್, ನಂ.77, ಅಸೆಂಟ್ ಬಿಲ್ಡಿಂಗ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ

E-MAIL: corporateaffairs@teamlease.com

WEBSITE: https://group.teamlease.com/

ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	30.09.2022ಕ್ಕೆ ಕೊನೆಯಾದ 3 ತಿಂಗಳಿಗೆ	30.09.2021ಕ್ಕೆ ಕೊನೆಯಾದ 3 ತಿಂಗಳಿಗೆ	30.09.2022ಕ್ಕೆ ಕೊನೆಯಾದ 3 ತಿಂಗಳಿಗೆ	30.09.2021ಕ್ಕೆ ಕೊನೆಯಾದ 3 ತಿಂಗಳಿಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	170,816.82	133,315.25	195,505.34	152,355.65
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,698.14	2,285.68	3,216.07	2,703.26
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	2,589.13	(5,291.22)	3,162.27	(4,933.56)
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,611.10	(5,287.82)	3,238.67	(4,956.25)
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	66,141.89	63,728.97	67,611.24	63,492.89
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ)				
(ಎ) ಮೂಲ (ರೂ.)	15.14	(30.95)	18.67	(28.94)
(ಬಿ) ಡೈಲ್ಯೂಟೆಡ್ (ರೂ.)	15.14	(30.95)	18.67	(28.94)

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಸೆಪ್ಟೆಂಬರ್, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಸೆಪ್ಟೆಂಬರ್, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 9ನೇ ನವೆಂಬರ್, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ

ಸಹಿ/–

ಅಶೋಕ್ ಕುಮಾರ್ ನೆಡುರುಮಲ್ಲಿ

ವ್ಯವಸ್ಥಾಪಕ ನಿರ್ದೇಶಕರು

DIN: 00151814

ದಿನಾಂಕ: 9ನೇ ನವೆಂಬರ್, 2022

ಸ್ಥಳ: ಬೆಂಗಳೂರು

ರಾಮಯ್ಯ ಎವಲ್ಯೂಟ್ ಕಾರ್ಯಕ್ರಮ: 'ಸ್ಟಾರ್ ನವೋದ್ಯಮ ಪ್ರಶಸ್ತಿ' ಪ್ರದಾನ

'ನವೋದ್ಯಮದತ್ತ ಒಲವು: ಉತ್ತಮ ಬೆಳವಣಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂಜಿನಿಯರಿಂಗ್ ಪದವೀಧರರು ನವೋದ್ಯಮ ಸ್ಥಾಪಿಸಲು ಆಸಕ್ತಿ ವಹಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ' ಎಂದು ಸ್ಟಾರ್ಟ್‌ಅಪ್ ಎಕ್ಸೀಡ್ ವೆಂಚರ್ ಎಲ್‌ಎಲ್‌ಪಿ ಸಂಸ್ಥಾಪಕ ಬಿ.ಬಿ.ನಾಯ್ಡು ಹೇಳಿದರು.

ರಾಮಯ್ಯ ಎವಲ್ಯೂಟ್ ಬುಧವಾರ ಆಯೋಜಿಸಿದ್ದ 'ಸ್ಟಾರ್ ನವೋದ್ಯಮ ಪ್ರಶಸ್ತಿ-2022' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ನವೋದ್ಯಮದ ಬೆಳವಣಿಗೆಗೆ ಪೂರಕವಾದ ವಾತಾವರಣ ಇದೆ. ಇದರಿಂದ ಯಶಸ್ಸು ಕಾಣಲು ಸಾಧ್ಯವಿದೆ. ಈ ಮೊದಲು ಪದವಿ ಮುಗಿಸಿದ ವಿದ್ಯಾರ್ಥಿಗಳು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳುತ್ತಿದ್ದರು. ಇಂದು ಕಾಲ ಬದಲಾಗಿದೆ. ತಾವು ಬೆಳೆಯುವುದರ ಜತೆಗೆ ನವೋದ್ಯಮವನ್ನು ಬೆಳೆಸುತ್ತಿದ್ದಾರೆ' ಎಂದು ಹೇಳಿದರು.

'ರಾಜ್ಯ ಸರ್ಕಾರ ಸಹ ನವೋದ್ಯಮಗಳಿಗೆ ಉತ್ತಮ ಪ್ರೋತ್ಸಾಹ ನೀಡುತ್ತಿದೆ. ಪ್ರತಿ ವರ್ಷ ನವೋದ್ಯಮಿಗಳನ್ನು ಗುರುತಿಸಿ ಅವರಿಗೆ ಆರ್ಥಿಕ ಸಹಾಯ ನೀಡುತ್ತಿದೆ. ಇವರ ಆಯ್ಕೆಯನ್ನು ಸಹ ಕೈಗಾರಿಕೋದ್ಯಮಿಗಳಿಗೆ ನೀಡಿರುವುದು ಸರ್ಕಾರದ ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆಯನ್ನು ತೋರಿಸುತ್ತದೆ' ಎಂದರು.

ರಾಮಯ್ಯ ಎವಲ್ಯೂಟ್ ಬುಧವಾರ ಆಯೋಜಿಸಿದ್ದ 'ಸ್ಟಾರ್ ನವೋದ್ಯಮ ಪ್ರಶಸ್ತಿ– 2022' ಕಾರ್ಯಕ್ರಮದಲ್ಲಿ ರಾಮಯ್ಯ ತಾಂತ್ರಿಕ ಸಂಸ್ಥೆಯ ಪ್ರಾಂಶುಪಾಲ ಡಾ. ಎನ್‌ವಿಆರ್ ನಾಯ್ಡು, ರಾಮಯ್ಯ ಎವಲ್ಯೂಟ್ ಸಿಇಒ ಮುರಳಿಕೃಷ್ಣ ಗೋಪಾಲಕೃಷ್ಣ, ಸಮರ್ಥ ರಾಘವ್ ನಾಗಭೂಷಣಂ, ಆರ್‌ಐಟಿ ನಿರ್ದೇಶಕ ಮತ್ತು ಜಿಇಎಫ್ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಅಧ್ಯಕ್ಷ ಎಂ.ಆರ್. ಜಯರಾಮ್, ಬಿ.ವಿ. ನಾಯ್ಡು, ಆರ್‌ಐಟಿ ನಿರ್ದೇಶಕ ಎಂ.ಆರ್. ರಾಮಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎಸ್. ರಾಮಪ್ರಸಾದ್ ಪಾಲ್ಗೊಂಡಿದ್ದರು.

ರಾಮಯ್ಯ ಎವಲ್ಯೂಟ್‌ನ ಮುಖ್ಯಸ್ಥ ಸಮರ್ಥ ರಾಘವ ನಾಗಭೂಷಣಂ ಮಾತನಾಡಿ, 'ಈ ಬಾರಿಯ ಪ್ರಶಸ್ತಿಗೆ ದೇಶದ ವಿವಿಧ ಭಾಗಗಳಿಂದ 182 ಅರ್ಜಿಗಳು ಸಲ್ಲಿಕೆಯಾಗಿದ್ದವು. ಎರಡು ಹಂತದ ಪರಿಶೀಲನೆಗೆ ಒಳಪಡಿಸಿ 18 ಕಂಪನಿಗಳನ್ನು ಮಾತ್ರ ಆಯ್ಕೆ ಮಾಡಿದ್ದೇವೆ. ಈ ಕಂಪನಿಗಳಿಗೆ ಗರಿಷ್ಠ ₹1 ಕೋಟಿ ಆರ್ಥಿಕ ಸಹಾಯ ಮಾಡುವುದರ ಜತೆಗೆ ಅವಶ್ಯಕ ಸೌಲಭ್ಯವನ್ನು ಒದಗಿಸುತ್ತೇವೆ' ಎಂದು ತಿಳಿಸಿದರು.

ಗೋಕುಲ ಶಿಕ್ಷಣ ಫೌಂಡೇಷನ್ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಎಂ.ಆರ್.ಶ್ರೀನಿವಾಸ ಮೂರ್ತಿ, ಬಿ.ಎಸ್.ರಾಮಪ್ರಸಾದ್, ಪ್ರಾಂಶುಪಾಲ ಡಾ.ಎನ್. ವಿ.ಆರ್.ನಾಯ್ಡು ಇದ್ದರು.

> **ಭಾರತದಲ್ಲಿರುವ ಉದ್ಯಮದ ವಾತಾವರಣ ಬೇರೆ ದೇಶದಲ್ಲಿ ಇಲ್ಲ. ನಮ್ಮ ಸಂಸ್ಥೆ ಪ್ರಾಯೋಗಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ವಿದ್ಯಾರ್ಥಿಗಳು ಪರಿಶ್ರಮಪಟ್ಟರೆ ಯಶಸ್ಸು ಕಾಣಲು ಸಾಧ್ಯ**
>
> **ಜಯರಾಂ,** ಗೋಕುಲ ಶಿಕ್ಷಣ ಫೌಂಡೇಷನ್ ಅಧ್ಯಕ್ಷ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052.

ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/99/2022-23 **ಪ್ರಕಟಣೆ** **ದಿನಾಂಕ:** 09.11.2022

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ** ವಲಯದಿಂದ **ಕೈಗಾರಿಕೆ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಎಸ್.ವಿ. ವಿನೋದ್ ಕುಮಾರ್ ಬಿನ್ ವೀರಾರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	567/3 568/3	2–19 1–22	ವಸತಿ	ಕೈಗಾರಿಕೆ
2	ಶ್ರೀಮತಿ ನಾರಾಯಣಮ್ಮ ಕೋಂ. ಲೇಟ್ ಸಿ. ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	569/1	2–06	ವಸತಿ	ಕೈಗಾರಿಕೆ
3	ಶ್ರೀ ಕೆ.ಸಿ. ಜಯಪ್ರಕಾಶ್ ಬಿನ್ ಸಿ. ಚೌಡರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	574/3 574/4	0–12 0–16	ವಸತಿ	ಕೈಗಾರಿಕೆ
4	ಶ್ರೀಮತಿ ಬಿ. ನವ್ಯ ಬಿನ್ ಸಿ. ಬಾಬುರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	575/2	1–20	ವಸತಿ	ಕೈಗಾರಿಕೆ
5	ಶ್ರೀ ಎಂ. ಮುರಳೀಧರ ಬಿನ್ ಎಸ್. ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	576/3	2–12	ವಸತಿ	ಕೈಗಾರಿಕೆ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳು ಭೂಉಪಯೋಗ ಬದಲಾವಣೆಯಿಂದ ಉದ್ಯೋಗ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ಕೈಗಾರಿಕೆ ವಲಯ'**ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–

ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3026/ಆಕಾರ್/22–23

ನೆಟ್ಟಕಲ್ಲಪ್ಪ ಜನ್ಮದಿನ: ಖೇಲೊ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಎ. ನೆಟ್ಟಕಲ್ಲಪ್ಪ ಅವರ ಜನ್ಮದಿನಾಚರಣೆ ಅಂಗವಾಗಿ ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ವತಿಯಿಂದ ಖೇಲೊ ಯುವ ಬಿಎಸ್‌ಎನ್‌ಡಿಪಿ ಯೋಜನೆಗೆ ಚಾಲನೆ ನೀಡಲಾಯಿತು.

ಸಂಘದ ಕೇಂದ್ರ ಕಚೇರಿಯಲ್ಲಿ ನಡೆದ ಜನ್ಮದಿನ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಶ್ರೀನಿವಾಸ್ ಬಾಬು ಮಾತನಾಡಿ, 'ನೆಟ್ಟಕಲ್ಲಪ್ಪ ಜನ್ಮದಿನದ ಪ್ರಯುಕ್ತ ಈ ಯೋಜನೆಗೆ ಚಾಲನೆ ನೀಡುತ್ತಿರುವುದು ಸಂತಸದ ವಿಷಯ. ಹಿಂದುಳಿದ ವರ್ಗಗಳಿಗೆ ನೆಟ್ಟಕಲ್ಲಪ್ಪ ಅವರು ನೀಡಿದ ಕೊಡುಗೆ ಅಪಾರ' ಎಂದು ಸ್ಮರಿಸಿದರು.

ಬಿಎಸ್‌ಎನ್‌ಡಿಪಿ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಕೆ. ಗುತ್ತೇದಾರ್ ಮಾತನಾಡಿ, 'ಪ್ರಸ್ತುತ ದಿನಗಳಲ್ಲಿ ಕೆ.ಎ.ನೆಟ್ಟಕಲ್ಲಪ್ಪ ಅವರ ಆದರ್ಶಗಳು ಯುವ ಪೀಳಿಗೆ ತಲುಪಬೇಕಿದೆ. ಅವರ ಸಿದ್ಧಾಂತ ಹಾಗೂ ಉದ್ದೇಶಗಳನ್ನು ಹಂತಹಂತವಾಗಿ ಜಾರಿಗೆ ತರಲು ಸಂಘಟನೆ ಶ್ರಮಿಸುತ್ತಿದೆ' ಎಂದರು.

'ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಮೊಬೈಲ್ ಫೋನ್ ಅತಿಯಾದ ಬಳಕೆಯಿಂದ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಯುವ ಸಮೂಹ ದಾರಿ ತಪ್ಪದಂತೆ ಶಿಕ್ಷಣ ನೀಡಲು ಹಾಸ್ಟೆಲ್‌ಗಳನ್ನು ನೆಟ್ಟಕಲ್ಲಪ್ಪ ಸ್ಥಾಪಿಸಿದ್ದರು. ಮೊಟ್ಟ ಮೊದಲ ಬಾರಿಗೆ ಗಂಜಿ ಕೇಂದ್ರ ತೆರೆದು ವಿದ್ಯಾರ್ಥಿಗಳಿಗೆ ನೆರವಾಗಿದ್ದರು' ಎಂದು ಬಣ್ಣಿಸಿದರು.

'ಯುವಜನರು ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಲೆಂದು ಡೆಕ್ಕನ್ ಅಥ್ಲೆಟಿಕ್ ಫೌಂಡೇಶನ್ ಸ್ಥಾಪಿಸಿ ನಾಡಿನ ಅನೇಕ ಕ್ರೀಡಾಪಟುಗಳಿಗೆ ಉತ್ತೇಜನ ನೀಡಿದ್ದರು. ಅವರ ಚಿಂತನೆಗಳನ್ನು ಪ್ರಸಾರ ಮಾಡಲು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಕ್ರೀಡೆಗಳನ್ನು ಆಯೋಜಿಸಲಾಗುವುದು' ಎಂದರು.

ಖೇಲೊ ಯುವ ಬಿಎಸ್‌ಎನ್‌ಡಿಪಿ ಯೋಜನೆಗೆ ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಶ್ರೀನಿವಾಸ್ ಬಾಬು ಚಾಲನೆ ನೀಡಿದರು. ಬಿಎಸ್‌ಎನ್‌ಡಿಪಿ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಕೆ. ಗುತ್ತೇದಾರ್, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂತರಾಜ್ ಆರ್ಯ, ರಾಜ್ಯ ಖಜಾಂಚಿ ಕೆ.ವಿ.ರವಿದಾಸ್ ಮತ್ತಿತರರು ಇದ್ದರು

ಸಾಮೂಹಿಕ ವಿವಾಹ

ಬೆಂಗಳೂರು: ಬನಶಂಕರಿ ದೇವಸ್ಥಾನದ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ ವತಿಯಿಂದ ಉಚಿತ ಸಾಮೂಹಿಕ ವಿವಾಹವನ್ನು ಜ.26 ರಂದು ಆಯೋಜಿಸಲಾಗಿದೆ.

ಬನಶಂಕರಿ ದೇವಸ್ಥಾನದಲ್ಲಿ 24ನೇ ವರ್ಷ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರಾಜ್ಯದ ಯಾವುದೇ ಭಾಗದವರು ಜ.20ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಬನಶಂಕರಿ ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎ.ಎಚ್. ಬಸವರಾಜು ತಿಳಿಸಿದ್ದಾರೆ.

ಈವರೆಗೆ ದೇವಸ್ಥಾನದ ವೇದಿಕೆ ವತಿಯಿಂದ 1,315 ಜೋಡಿಗಳ ವಿವಾಹ ನೆರವೇರಿಸಲಾಗಿದೆ. ಜಾತಿ, ಮತಭೇದವಿಲ್ಲದೆ ಒಂದೇ ಮಂಟಪದಲ್ಲಿ ವಿವಾಹ ನಡೆಸಲಾಗುತ್ತದೆ. ವಧುವರರಿಗೆ ವಸ್ತ್ರ, ಬಾಸಿಂಗ, ಕಂಕಣದಾರ, ಹೂವಿನ ಹಾರ, ಮಾಂಗಲ್ಯ, ಕಾಲುಂಗುರ, ಪೇಟೆ ನೀಡಲಾಗುತ್ತದೆ. ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತದೆ ಎಂದು ಹೇಳಿದರು. ಮಾಹಿತಿಗೆ: 080-2671 2988.

ಜುಡೊ: ದಾನೇಶ್ವರಿಗೆ ಚಿನ್ನ

ಕೋಲಾರ: ಜಿಲ್ಲೆಯ ಎಂ.ದಾನೇಶ್ವರಿ ಬುಧವಾರ ಇಲ್ಲಿ ನಡೆದ ರಾಜ್ಯಮಟ್ಟದ ಪ್ರೌಢಶಾಲೆಯ 17ರ ವಯೋಮಿತಿಯ ಬಾಲಕಿಯರ ವಿಭಾಗದ ಜುಡೊ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಆಶ್ರಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನ 44 ಕೆ.ಜಿ ಒಳಗಿನವರ ವಿಭಾಗದಲ್ಲಿ ನಗರದ ಸಿದ್ಧಾರ್ಥ ಪ್ರೌಢಶಾಲೆಯ ಅವರು ಈ ಸಾಧನೆ ಮಾಡಿದರು.

ನಗರದಲ್ಲಿ ಇಂದು

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಮಧುಕುಮಾರ್ ಬಿ.ಎಂ., ಅತಿಥಿಗಳು: ಪಿ.ಎಲ್. ತಿಮ್ಮಣ್ಣ, ಶರ್ಲಿನ್, ಜೈನ್ ಬೆನಿಟ್ಟಾ, ಅಧ್ಯಕ್ಷತೆ: ರೆ.ಫಾ. ಜೋಸೆಫ್ ಡಿ'ಸೋಜಾ ಎಸ್.ಜೆ., ಸ್ಥಳ: ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರೈಮರಿ ಶಾಲೆಯ ಆಟದ ಮೈದಾನ, ವಿಠ್ಠಲ ಮಲ್ಯ ರಸ್ತೆ, ಬೆಳಿಗ್ಗೆ 8.30

ದಿ ರಿನೈಸ್ಸಾನ್ಸ್: ಚಿತ್ರಕಲೆ ಮತ್ತು ಛಾಯ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಡಿ.ಕೆ ಶಿವಕುಮಾರ್, ಅತಿಥಿಗಳು: ಪ್ರಿಯಾಂಕ್ ಖರ್ಗೆ, ಸಲೀಂ ಅಹ್ಮದ್, ಬಿ.ಎಲ್ ಶಂಕರ್, ಶಶಿಕಾಂತ್ ಸೆಂಥಿಲ್, ದೊಡ್ಡಿ ಪಾಳ್ಯ ನರಸಿಂಹಮೂರ್ತಿ, ಆಯೋಜನೆ: ಜನಸ್ಪಂದನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10

ಸೂರ್ಯಪ್ರಕಾಶ್ ಕೆ. ಅವರ 'ವೈಲ್ಡ್ ಮೂಮೆಂಟ್ಸ್' ಛಾಯಾಚಿತ್ರಗಳ ಪ್ರದರ್ಶನ: ಅತಿಥಿಗಳು: ಎಂ.ಎನ್. ಜಯಕುಮಾರ್, ರವೀಂದ್ರ ಭಟ್ಟ, ಡಾ. ಅಜಿತ್ ಹುಯಿಲಗೋಳ, ಬಿ. ಶ್ರೀನಿವಾಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಗಣಪತಿ ಪೂಜಾ ಕಾರ್ಯಕ್ರಮ: 'ಕಾಂತಾರ' ಚಲನಚಿತ್ರದ ಅನುಭವಗಳ ಕುರಿತು ವಕೀಲರೊಂದಿಗೆ ಚರ್ಚೆ: ರಿಷಬ್ ಶೆಟ್ಟಿ, ಸಪ್ತಮಿ ಗೌಡ, ಅತಿಥಿಗಳು: ಸಿ.ಸಿ. ಪಾಟೀಲ್, ಪಿ.ಸಿ. ಮೋಹನ್, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: 7ನೇ ಮಹಡಿಯ ಸಭಾಂಗಣ, ವಕೀಲರ ಭವನ, ಮಧ್ಯಾಹ್ನ 2

ಫೌಂಡೇಶನ್ ದಿನದ ಆಚರಣೆ: ಅತಿಥಿಗಳು: ಎಂ. ವೆಂಕಯ್ಯನಾಯ್ಡು, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಡಿ.ವಿ ಸದಾನಂದ ಗೌಡ, ಕೆ. ಆರ್ ರಮೇಶ ಕುಮಾರ್, ಕೆ. ಮುನಿಸ್ವಾಮಿ ರಾಜು, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾಮಂದಿರ, ವಯ್ಯಾಲಿ ಕಾವಲ್, ಸಂಜೆ 5

'ಬೈ ಟು ಕಾಫಿ' ನಾಟಕದ ದೃಶ್ಯ

'ಬೈ ಟು ಕಾಫಿ' ನಾಟಕ ಪ್ರದರ್ಶನ: ನಿರ್ದೇಶನ: ವಿನಯ್ ಧ್ರುವಕುಮಾರ್, ಸಹಾಯಕ ನಿರ್ದೇಶನ: ಮಧುರ ವೈದ್ಯ, ಬೆಳಕಿನ ವಿನ್ಯಾಸ: ಮಂಜು ನಾರಾಯಣ್, ಆಯೋಜನೆ: ಅಭಿಷೇಕ್ ಅಯ್ಯಂಗಾರ್, ಸ್ಥಳ: ರಂಗಶಂಕರ, ಸಂಜೆ 7.30

ಚನ್ನಬಸಯ್ಯ ಗುಬ್ಬಿ ಅವರ ಜನ್ಮ ಶತಮಾನೋತ್ಸವ ಸಮಾರಂಭ:



ಚನ್ನಬಸಯ್ಯ ಗುಬ್ಬಿ

ಚಾಲನೆ: ಎಸ್. ಟಿ. ಸೋಮಶೇಖರ್, ಅಧ್ಯಕ್ಷತೆ: ಎಸ್. ಶಾಂತರಾಜು, ಅತಿಥಿಗಳು: ಡಾ.ಎಸ್. ರಾಜು, ರಾಜಣ್ಣ, ಕೆ.ವಿ. ನಾಗರಾಜಮೂರ್ತಿ, ಮಲ್ಲಿಕಾರ್ಜುನ ಕಡಕೋಳ, ಬಾ.ಹ. ರಮಾಕುಮಾರಿ, ವೈ.ಕೆ. ಸಂಧ್ಯಾ ಶರ್ಮ, ಕೆ.ಎಂ. ಪ್ರಕಾಶ್, ಕೆ. ಎಂ. ತಿಪ್ಪೇಸ್ವಾಮಿ, ಎಸ್. ಜಯಣ್ಣ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.30

3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the quarter and half year ended 30 September 2022

(Rs. in Lakhs, except per share data, unless otherwise stated)

Particulars	Standalone				Consolidated			
	3 months ended 30 September 2022 (Unaudited)	6 months ended 30 September 2022 (Unaudited)	3 months ended 30 September 2021 (Unaudited)	12 months ended 31 March 2022 (Audited)	3 months ended 30 September 2022 (Unaudited)	6 months ended 30 September 2022 (Unaudited)	3 months ended 30 September 2021 (Unaudited)	12 months ended 31 March 2022 (Audited)
Total income from operations (including other income)	95,899.63	185,973.55	78,522.51	311,301.92	101,145.37	196,650.53	84,852.56	337,295.68
Net Profit for the period (before tax, Exceptional and / or Extraordinary items)	13,402.35	24,174.64	8,747.86	35,969.60	14,268.48	25,578.48	8,661.13	36,751.81
Net Profit for the period before tax (after Exceptional and / or Extraordinary items)	13,402.35	24,174.64	8,747.86	35,969.60	14,268.48	25,578.48	8,661.13	36,751.81
Net Profit for the period after tax	9,986.00	18,010.55	6,488.42	26,617.51	10,623.37	19,049.30	6,421.57	27,197.11
Total comprehensive income for the period [Comprising Profit / (Loss) for the period (after tax) and other comprehensive income (after tax)]	10,013.47	18,065.49	6,424.57	26,727.38	10,655.19	19,112.94	6,348.57	27,324.37
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)				247,751.61				217,230.77
Earnings per share (in Rs.) (of Rs. 10/- each)								
a) Basic (in Rs.)	88.65	159.88	57.60	236.28	94.30	169.10	57.00	241.43
b) Diluted (in Rs.)	88.65	159.88	57.60	236.28	94.30	169.10	57.00	241.43

Notes:

1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 09 November 2022.
2. The above is an extract of the detailed format for the unaudited financial results for the quarter ended 30 September 2022 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 30 September 2022 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

By Order of the Board
For 3M India Limited

Ramesh Ramadurai
Managing Director

Place: Bengaluru
Date: 09 November 2022

ಹೈಕೋರ್ಟ್ ಸೂಚನೆಯಂತೆ 2009ರಲ್ಲಿ ಮಾರ್ಗಸೂಚಿ ರಚನೆ • ಬಿಬಿಎಂಪಿ ನಿರ್ದೇಶನ ಪಾಲಿಸದ ಎಂಜಿನಿಯರ್‌ಗಳು

ರಸ್ತೆ ನಿರ್ವಹಣೆ: ಮಾರ್ಗಸೂಚಿ ಉಲ್ಲಂಘನೆ

• ಆರ್. ಮಂಜುನಾಥ್

ಬೆಂಗಳೂರು: ರಸ್ತೆ ನಿರ್ಮಾಣ ಹಾಗೂ ರಸ್ತೆಯಲ್ಲಿ ಉಂಟಾಗುವ ಗುಂಡಿ, ಬಿರುಕು, ಪಾದಚಾರಿ ಮಾರ್ಗದ ಸಮಸ್ಯೆಗಳಿಗೆ ದುರಸ್ತಿ ಕಾಮಗಾರಿ ನಡೆಸಲು ಹೈಕೋರ್ಟ್ ನಿರ್ದೇಶನದಂತೆ ರಚಿಸಲಾಗಿರುವ ಮಾರ್ಗಸೂಚಿಗಳನ್ನು ಬಿಬಿಎಂಪಿ ಎಂಜಿನಿಯರ್‌ಗಳು ಉಲ್ಲಂಘಿಸುತ್ತಿದ್ದಾರೆ.

ನಗರ ವ್ಯಾಪ್ತಿಯಲ್ಲಿ ನಿರ್ಮಿಸುವ ರಸ್ತೆ ಹಾಗೂ ಅದರ ನಿರ್ವಹಣೆಗೆ ಬಿಬಿಎಂಪಿ ಮಾರ್ಗಸೂಚಿಗಳ ಕೈಪಿಡಿ ಹೊಂದಿದೆ. ದುರಸ್ತಿಗೆ ಸಮಗ್ರ ತಾಂತ್ರಿಕ ಮಾಹಿತಿ, ಅನುಷ್ಠಾನದ ಕ್ರಮ ಇದರಲ್ಲಿದೆ. ಆದರೆ, ಇದನ್ನು ಎಂಜಿನಿಯರ್‌ಗಳು ಕಾಮಗಾರಿ ಅನುಷ್ಠಾನದ ಹಂತದಲ್ಲಿ ಪಾಲಿಸುತ್ತಿಲ್ಲ.

ಹೈಕೋರ್ಟ್ ಆದೇಶದಂತೆ, ತಾಂತ್ರಿಕ ಸಲಹಾ ಸಮಿತಿ ರಚಿಸಿರುವ ಮಾರ್ಗಸೂಚಿಯನ್ನು ಬಿಬಿಎಂಪಿ 2009ರಿಂದ ಅಳವಡಿಸಿಕೊಂಡಿದೆ. ಇದರಲ್ಲಿ ರಸ್ತೆ ಗುಂಡಿಗಳು ಬೀಳುವ ಸಂದರ್ಭದಲ್ಲಿ ಯಾವ ರೀತಿಯ, ಹೆಚ್ಚು ಕಾಲ ಬಾಳಿಕೆ ಬರುವಂತೆ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಬೇಕು ಎಂದು ಸಚಿತ್ರ, ತಾಂತ್ರಿಕ ಮಾರ್ಗೋಪಾಯಗಳನ್ನು ತಿಳಿಸಲಾಗಿದೆ.

ಪ್ರಜಾವಾಣಿ ವಿಶೇಷ

ದುರಸ್ತಿ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು (5.3.6, ಪುಟ 31ರಿಂದ 33) ಚಿತ್ರಸಹಿತ ವಿವರಿಸಲಾಗಿದೆ. ಗುಂಡಿ ಸುತ್ತಲು ಆಯತಾಕಾರದಲ್ಲಿ (ರೆಕ್ಟಾಂಗಲ್) ರಸ್ತೆ ಅಗೆದುಕೊಂಡು, ಮೂಲವಾಗಿ ಹಾಕಲಾಗಿರುವ ಪದರ ಕಾಣುವಂತಾಗಬೇಕು. ನಂತರ ಅಲ್ಲಿರುವ ಎಲ್ಲ ದೂಳು ಹಾಗೂ ಸಾಮಗ್ರಿ ತೆಗೆದು ಅದಕ್ಕೆ ಪದರಗಳಲ್ಲಿ ಯಾವ ಯಾವ ಸಾಮಗ್ರಿ ಹಾಕಬೇಕು ಎಂಬುದನ್ನು ಹೇಳಲಾಗಿದೆ. ಮಳೆ ಸಂದರ್ಭದಲ್ಲಿ, ಅತಿಹೆಚ್ಚು ವಾಹನ ಓಡಾಡುವ ರಸ್ತೆಗಳಲ್ಲಿ ಎಮಲ್ಸನ್ ಬಳಕೆಯನ್ನು ಸೂಚಿಸಲಾಗಿದೆ. ಆದರೆ, ರಸ್ತೆ ಗುಂಡಿ ದುರಸ್ತಿ ಸಂದರ್ಭದಲ್ಲಿ ಇದ್ಯಾವುದನ್ನೂ ಪಾಲಿಸಲಾಗುತ್ತಿಲ್ಲ ಎಂಬುದು ಕಣ್ಣಿಗೆ ಕಾಣುವ ಗುಂಡಿಗಳು ಸಾಬೀತುಪಡಿಸುತ್ತಲೇ ಇರುತ್ತವೆ.

ಪಾಲನೆಗೆ ಆಯುಕ್ತರ ಸೂಚನೆ: ರಸ್ತೆ ನಿರ್ಮಾಣ, ನಿರ್ವಹಣೆಗಾಗಿ ತಾಂತ್ರಿಕ ಸಲಹಾ ಸಮಿತಿ ರಚಿಸಿ, ಆ ಸಮಿತಿ ನೀಡಿರುವ ಮಾರ್ಗಸೂಚಿಗಳನ್ನು ಬಿಬಿಎಂಪಿ ಅನುಸರಿಸಬೇಕು ಎಂದು ಹೈಕೋರ್ಟ್ ಆದೇಶ ನೀಡಿತ್ತು. ಇದರಂತೆ, ಹೈಕೋರ್ಟ್ ರಚಿಸಿದ್ದ ತಾಂತ್ರಿಕ ಸಮಿತಿ ತನ್ನ ಸದಸ್ಯ ಹಾಗೂ ಲೋಕೋಪಯೋಗಿ ಇಲಾಖೆ ನಿವೃತ್ತ ಮುಖ್ಯ ಎಂಜಿನಿಯರ್ ಕೆ.ಎನ್.ಶಿವಶಂಕರ ರಾವ್ ಅವರಿಗೆ ಮಾರ್ಗಸೂಚಿ ರಚಿಸುವ ಜವಾಬ್ದಾರಿ ನೀಡಿತು.

ಶಿವಶಂಕರ್ ಅವರು ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಸೇರಿದಂತೆ ಎಲ್ಲ ರೀತಿಯ ಮಾನದಂಡಗಳ ಅಂಶಗಳನ್ನು ಪಡೆದು, ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ ಬಗ್ಗೆ ವರದಿಯನ್ನು ಸಲ್ಲಿಸಿದರು. ಇದನ್ನು ಪರಿಶೀಲಿಸಿದ ತಾಂತ್ರಿಕ ಸಲಹಾ ಸಮಿತಿ ಅವರನ್ನು ಶ್ಲಾಘಿಸಿತ್ತು. ಈ ಮಾರ್ಗಸೂಚಿಗಳನ್ನು ಪ್ರಕಟಿಸಿ, ಅದನ್ನು ಅನುಸರಿಸಲು ಬಿಬಿಎಂಪಿ ಆಯುಕ್ತರಿಗೆ ಸಮಿತಿ ಸೂಚಿಸಿತು. ಅದರಂತೆ, ಅಂದಿನ ಆಯುಕ್ತ ಎಸ್. ಸುಬ್ರಮಣ್ಯ ಅವರು 144 ಪುಟಗಳ ಮಾರ್ಗಸೂಚಿಯ ಪುಸ್ತಕವನ್ನು 2009ರಲ್ಲಿ ಪ್ರಕಟಿಸಿ, ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ ಸಂದರ್ಭದಲ್ಲಿ ಎಲ್ಲ ಎಂಜಿನಿಯರ್‌ಗಳು ಈ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದ್ದರು.

ಬಿಬಿಎಂಪಿ ಮಾರ್ಗಸೂಚಿಯಲ್ಲಿರುವ ರಸ್ತೆ ಗುಂಡಿ ದುರಸ್ತಿ ಕಾಮಗಾರಿಯ ವಿವರ



ಬಿಬಿಎಂಪಿ ಮಾರ್ಗಸೂಚಿಯಲ್ಲಿರುವ ರಸ್ತೆ ಗುಂಡಿ ದುರಸ್ತಿ ಕಾಮಗಾರಿಯ ವಿವರ

ಗಾಡಿ ಓಡಿಸುವುದು ಬಿಡುತ್ತಾರಾ...?

‘ನಗರದಲ್ಲಿ 13 ಸಾವಿರ ಕಿ.ಮೀ ರಸ್ತೆ ಇದೆ. ಕಿ.ಮೀಗೆ ತಲಾ ಎರಡು ಗುಂಡಿ ಎಂದರೂ 26 ಸಾವಿರ ಗುಂಡಿಗಳಿವೆ. ಸಂಖ್ಯೆ ದೊಡ್ಡದೆನಿಸುತ್ತದೆ. ರಸ್ತೆ ಗುಂಡಿಯನ್ನು ಮಾರ್ಗಸೂಚಿಯಂತೇ ದುರಸ್ತಿ ಮಾಡುತ್ತೇವೆ. ಆದರೆ ಮಳೆ ಬಂದಾಗ ಮತ್ತೊಂದೆಡೆ ಕಿತ್ತುಹೋಗುತ್ತದೆ. ಹೆಚ್ಚು ವಾಹನಗಳ ಓಡಾಟದಿಂದ ಹೀಗಾಗುತ್ತದೆ. ರಸ್ತೆಯ ಮೇಲೆ ಅತಿ ಒತ್ತಡ ಬೀಳುತ್ತದೆ. ಹೀಗಾಗಿ ಗುಂಡಿಗಳು ಉಂಟಾಗುತ್ತವೆ. ನಗರದ ಎಲ್ಲ ರಸ್ತೆಗಳು ಗುಂಡಿ ಆಗಿವೆ ಅನ್ನುತ್ತಾರೆ. ಹಾಗೆಂದು ಸವಾರರು ಓಡಾಡುವುದನ್ನು ಬಿಟ್ಟುಬಿಡುತ್ತಾರಾ’ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಪ್ರಶ್ನಿಸಿದರು.

ಸಾಕಷ್ಟು ದೂರುಗಳು

ರಸ್ತೆ ನಿರ್ಮಾಣ, ರಸ್ತೆ ಅಗೆತ, ಗುಂಡಿಗಳ ದುರಸ್ತಿ ಕಾಮಗಾರಿಗಳ ನಿಯಮ ಉಲ್ಲಂಘನೆ ಬಗ್ಗೆ ಬಿಬಿಎಂಪಿ ಆಯುಕ್ತರು, ಮುಖ್ಯಮಂತ್ರಿ ಅವರಿಗೆ ಸಂಘ–ಸಂಸ್ಥೆಗಳು, ವ್ಯಕ್ತಿಗಳು ಸಾಕಷ್ಟು ದೂರು ನೀಡಿದ್ದಾರೆ. ಆದರೆ, ಈ ಬಗ್ಗೆ ಈವರೆಗೂ ಯಾರೂ ನಿಯಮಾವಳಿಯಂತೆ ಕಾಮಗಾರಿ ನಡೆಸಲು ಕಟ್ಟುನಿಟ್ಟಿನ ಸೂಚನೆ ನೀಡಿಲ್ಲ.

‘ರಸ್ತೆ ನಿರ್ಮಾಣವೇ ಮಾರ್ಗಸೂಚಿಗಳಂತೆ ಇಲ್ಲ. ಹೀಗಾಗಿ ಮಳೆನೀರು ನಿಲ್ಲುವುದು, ಗುಂಡಿಗಳು ಬೀಳುವುದು ಇದೆ. ಐಆರ್‌ಸಿ, ಬಿಬಿಎಂಪಿ ಮಾರ್ಗಸೂಚಿ ಉಲ್ಲಂಘನೆಯಿಂದ ಸಂಕಷ್ಟಗಳು ಎದುರಾಗುತ್ತಿವೆ’ ಎಂದು 2017ರಲ್ಲಿ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೇ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಅಮರೇಶ್ ದೂರು ನೀಡಿದ್ದರು

ನಮ್ಮ ಬೆಂಗಳೂರು ಪ್ರತಿಷ್ಠಾನ, ಬೆಂಗಳೂರು ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆ ಕುರಿತಾದ ಸಮಗ್ರ ವರದಿಯನ್ನು ಸರ್ಕಾರಕ್ಕೆ 2015ರಲ್ಲಿ ನೀಡಲಾಗಿತ್ತು.

‘ರಸ್ತೆ ನಿರ್ಮಾಣ ಹಾಗೂ ರಸ್ತೆ ಗುಂಡಿಗಳಲ್ಲಿ ಐಆರ್‌ಸಿ ನಿಮಯಗಳನ್ನು ಪಾಲಿಸಲಾಗುತ್ತಿಲ್ಲ. ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ, ಬಿಎಸ್‌ಎನ್‌ಎಲ್ ಸೇರಿದಂತೆ ಹಲವು ಸರ್ಕಾರಿ ಇಲಾಖೆಗಳು, ಖಾಸಗಿಯವರು ಬೇಕಾಬಿಟ್ಟಿ ರಸ್ತೆಗಳನ್ನು ಅಗೆದು ಹಾಳುಮಾಡುತ್ತಿದ್ದಾರೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅಂಕಿ–ಅಂಶ, ದಾಖಲೆ ಮೂಲಕ ಮನವಿ ಮಾಡಿಕೊಳ್ಳಲಾಗಿತ್ತು’ ಎಂದು ಪ್ರತಿಷ್ಠಾನದ ಅಂದಿನ ಸಿಇಒ ಸುರೇಶ್ ಹೇಳಿದರು.

ಕಟ್ಟಡ ತ್ಯಾಜ್ಯ ತುಂಬುತ್ತಾರೆ...

‘ನಗರ ರಸ್ತೆಗಳಲ್ಲಿ ಗುಂಡಿ ಬಿದ್ದಾಗ ಅದನ್ನು ಮುಚ್ಚಲು ಯಾವುದೇ ಮಾರ್ಗಸೂಚಿ ಪಾಲಿಸುತ್ತಿಲ್ಲ. ಕಟ್ಟಡ ತ್ಯಾಜ್ಯವನ್ನು ತುಂಬಿರುತ್ತಾರೆ. ಇದರಲ್ಲಿ ಇಟ್ಟಿಗೆ, ಶಕ್ತಿ ಕಳೆದುಕೊಂಡ ಸಿಮೆಂಟ್, ಜೆಲ್ಲಿಗಳು ಇರುತ್ತದೆ. ಇದನ್ನು ತುಂಬುವುದರಿಂದ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಇದರ ಮೇಲೆ ಬಿಟಮನ್ ಹಾಕಿದರೆ ಅದು ಅಂಟಿಕೊಳ್ಳುವುದಿಲ್ಲ. ಎಲ್ಲವೂ ಸಡಿಲವಾಗಿ ಮತ್ತೆ ಗುಂಡಿ ಬೀಳುತ್ತದೆ’ ಎಂದು ಸರ್ಜಾಪುರದ ತಾಂತ್ರಿಕ ತಜ್ಞ ನಾಗೇಶ್ ಅರಸ್ ದೂರಿದರು.

ಸುದ್ದಿ 2 ನಿಮಿಷ

‘ಜೆಡಿಎಸ್‌ಗೆ ಮರಳುವ ಪ್ರಶ್ನೆಯೇ ಇಲ್ಲ’

ಗುಬ್ಬಿ(ತುಮಕೂರು): ‘ಜೆಡಿಎಸ್‌ನಿಂದ ಹೊರ ಬಂದಾಗಿದೆ. ಮತ್ತೆ ಆ ಪಕ್ಷಕ್ಕೆ ವಾಪಸ್ ಹೋಗುವ ಪ್ರಶ್ನೆಯೇ ಇಲ್ಲ’ ಎಂದು ಜೆಡಿಎಸ್ ಉಚ್ಚಾಟಿತ ಶಾಸಕ ಎಸ್.ಆರ್. ಶ್ರೀನಿವಾಸ್ ಸ್ಪಷ್ಟವಾಗಿ ಹೇಳಿದ್ದಾರೆ.

‘ಜೆಡಿಎಸ್‌ನಲ್ಲಿರುವ ಅನೇಕ ಶಾಸಕ ಮಿತ್ರರು ಮತ್ತು ಮುಖಂಡರು ಮತ್ತೆ ಜೆಡಿಎಸ್‌ಗೆ ವಾಪಸ್ ಬರುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ಗೌರವ ಇಲ್ಲದ ಕಡೆ ನಾನು ಇರಲು ಬಯಸುವುದಿಲ್ಲ’ ಎಂದು ಅವರು ಹೇಳಿದರು.

ಮಂಗಳವಾರ ಶ್ರೀನಿವಾಸ್ ಅವರ ನಿವಾಸಕ್ಕೆ ಭೇಟಿ ನೀಡಿದ್ದ ಶಾಸಕ ಸಾ.ರಾ.ಮಹೇಶ್ ಅವರು ಮತ್ತೆ ಜೆಡಿಎಸ್‌ಗೆ ಮರಳುವಂತೆ ಆಹ್ವಾನ ನೀಡಿದ್ದರು. ಅದಕ್ಕೆ ಬುಧವಾರ ಕಡಬದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಕ್ರಿಯಿಸಿದ ಶ್ರೀನಿವಾಸ್, ‘ಜೆಡಿಎಸ್ ಶಾಸಕರಾದ ಸಾ.ರಾ. ಮಹೇಶ್ ಮತ್ತು ಡಾ.ಕೆ.ಅನ್ನದಾನಿ ಅವರು ಜೆಡಿಎಸ್‌ಗೆ ಮರಳುವಂತೆ ವಿಶ್ವಾಸದಿಂದ ಕರೆದಿದ್ದಾರೆ. ಆದರೆ, ನನಗೆ ಅಂತಹ ಮನಸ್ಥಿತಿ ಇಲ್ಲ’ ಎಂದು ಸ್ಪಷ್ಟಪಡಿಸಿದರು.



‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ನನ್ನ ಬಳಿ ಬರುವ ಸಾಧ್ಯತೆಯೇ ಇಲ್ಲ. ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ಬಗ್ಗೆ ಗೌರವವಿದೆ. ಅವರು ಮನೆಗೆ ಬಂದರೆ ಸ್ವಾಗತಿಸುತ್ತೇನೆ. ಆದರೆ, ರಾಜಕೀಯ ವಿಚಾರದಲ್ಲಿ ಕ್ಷೇತ್ರದ ಕಾರ್ಯಕರ್ತರ ಹಾಗೂ ಅಭಿಮಾನಿಗಳ ತೀರ್ಮಾನದಂತೆ ನಡೆದುಕೊಳ್ಳುತ್ತೇನೆ’ ಎಂದರು.

ಜೂನ್‌ನಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ, ಅಡ್ಡ ಮತದಾನ ಮಾಡಿದ ಆರೋಪದ ಮೇಲೆ ಶ್ರೀನಿವಾಸ್ ಅವರನ್ನು ಜೆಡಿಎಸ್‌ನಿಂದ ಉಚ್ಚಾಟಿಸಲಾಗಿದೆ. ಅಧಿಕೃತವಾಗಿ ಅವರು ಇನ್ನೂ ಯಾವುದೇ ಪಕ್ಷ ಸೇರಿಲ್ಲ.

ಸತೀಶ ಜಾರಕಿಹೊಳಿ ವಿರುದ್ಧ ಖಾಸಗಿ ದೂರು

ಬೆಂಗಳೂರು: ‘ಹಿಂದು’ ಪದದ ಕುರಿತು ಹೇಳಿಕೆ ನೀಡಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ವಿರುದ್ಧ ನಗರದ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಕೆ. ದಿಲೀಪ್ ಕುಮಾರ್ ನಗರದ 8ನೇ ಎಸಿಎಂಎಂ ನ್ಯಾಯಾಲಯದಲ್ಲಿ ಬುಧವಾರ ಖಾಸಗಿ ದೂರು ದಾಖಲಿಸಿದ್ದು, ‘ಸತೀಶ್ ಜಾರಕಿಹೊಳಿ ವಿರುದ್ಧ ಗಲಭೆ ಮತ್ತು ಮಾನಹಾನಿ ಪ್ರಕರಣಗಳಡಿ ಸಂಜ್ಞೇಯ ಅಪರಾಧಗಳನ್ನು ಪರಿಗಣಿಸಿ ವಿಚಾರಣೆ ನಡೆಸಬೇಕು’ ಎಂದು ಮನವಿ ಮಾಡಿದ್ದಾರೆ. ನ್ಯಾಯಾಲಯ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದೆ.

ದೂರಿನಲ್ಲಿ ಏನಿದೆ?: ‘ ಸತೀಶ ಜಾರಕಿಹೊಳಿ ಅವರು ತಮ್ಮ ಹೇಳಿಕೆಯ ಮೂಲಕ ಜನರ ಭಾವನೆಗಳನ್ನು ಅವಮಾನಿಸಿ ಧರ್ಮದ ಗೌರವಕ್ಕೆ ಧಕ್ಕೆ ತರಲಾಗಿದೆ. ಇದು ಭಾರತೀಯ ದಂಡ ಸಂಹಿತೆ–1860ರ ಕಲಂ 500 (ಮಾನಹಾನಿ) ಮತ್ತು 159ರ ಅಡಿಯಲ್ಲಿ (ಗಲಭೆ ಕಾರಣವಾಗುವಂತೆ ಪ್ರಚೋದನೆ ಹೇಳಿಕೆ ನೀಡಿದ) ಅಪರಾಧ ಕೃತ್ಯವಾಗಿದೆ. ಆದ್ದರಿಂದ, ಆರೋಪಿ ವಿರುದ್ಧ ಸಂಜ್ಞೇಯ ಅಪರಾಧ ಕೃತ್ಯಗಳನ್ನು ಪರಿಗಣಿಸಬೇಕು’ ಎಂದು ಕೋರಲಾಗಿದೆ.

ಕನ್ನಡ ಭವನ ಉದ್ಘಾಟನೆ

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಘಟಕವು ಕೆಂಪಾಪುರದ ಕಾಫಿ ಬೋರ್ಡ್ ಲೇಔಟ್‌ನಲ್ಲಿ ನಿರ್ಮಿಸಿರುವ ಕನ್ನಡ ಭವನವನ್ನು ಸಂಸದ ಡಿ.ವಿ. ಸದಾನಂದಗೌಡ ಹಾಗೂ ಶಾಸಕ ಕೃಷ್ಣ ಬೈರೇಗೌಡ ಉದ್ಘಾಟಿಸಿದರು. ಕಸಾಪ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಪ್ರಕಾಶ್ ಮೂರ್ತಿ, ಪರಿಷತ್ತಿನ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ರೇಣುಕ ಹೆಗ್ಗಡೆ ಮತ್ತಿತರರು ಇದ್ದಾರೆ

₹ 2 ಲಕ್ಷ ಲಂಚ: ಬೆಸ್ಕಾಂ ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಟೆನ್ಷನ್ ವಿದ್ಯುತ್ ಮಾರ್ಗವನ್ನು ಲೋಟೆನ್ಷನ್ ಆಗಿ ಪರಿವರ್ತಿಸಲು ₹2 ಲಕ್ಷ ಲಂಚ ಪಡೆಯುತ್ತಿದ್ದ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿ.ನರೇಶ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಎಲೆಕ್ಟ್ರಿಕಲ್ ಗುತ್ತಿಗೆದಾರ ರವೀಂದ್ರ ಜೀತ್ ಸಿಂಗ್ ಎಂಬುವವರು ಕಗ್ಗದಾಸನಪುರದಲ್ಲಿ ವಿದ್ಯುತ್ ಮಾರ್ಗ ಪರಿವರ್ತನೆಗೆ ಕೆ.ಜಯಚಂದ್ರ ಅವರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಕೆಲಸಕ್ಕೆ ₹2 ಲಕ್ಷ ಲಂಚ ನೀಡಬೇಕೆಂದು ನರೇಶ್ ಬೇಡಿಕೆ ಇಟ್ಟಿದ್ದರು. ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿನ ಎಚ್‌ಎಎಲ್ ಬಳಿಯ ಬೆಸ್ಕಾಂ ಕಚೇರಿಯಲ್ಲಿ ಲಂಚ ಪಡೆಯುವಾಗ ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

₹50,000 ಲಂಚ: ಲೋಕಾಯುಕ್ತ ಬಲೆಗೆ ಎಫ್‌ಡಿಎ



ಸುಮಂತ್

ಬೆಂಗಳೂರು: ನಿವೃತ್ತಿ ವೇತನ ಮಂಜೂರು ಮಾಡುವ ಕಡತ ವರ್ಗಾಯಿಸಲು ₹50 ಸಾವಿರ ಲಂಚ ಪಡೆಯುತ್ತಿದ್ದ ಆರೋಗ್ಯ ಇಲಾಖೆ ಪ್ರಥಮ ದರ್ಜೆ ಸಹಾಯಕ ಸುಮಂತ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನಿವೃತ್ತಿ ವೇತನ ಮಂಜೂರು ಮಾಡುವ ಕಡತವನ್ನು ತಮ್ಮ ಕಚೇರಿಯಿಂದ ಅಕೌಂಟೆಂಟ್ ಜನರಲ್ ಕಚೇರಿಗೆ ವರ್ಗಾಯಿಸಲು ₹50 ಸಾವಿರ ಲಂಚಕ್ಕೆ ಸುಮಂತ್ ಬೇಡಿಕೆ ಇಟ್ಟಿದ್ದರು. ಮಾಗಡಿ ರಸ್ತೆಯಲ್ಲಿನ ಆರೋಗ್ಯ ಭವನದಲ್ಲಿ ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಿ ಬಂಧಿಸಲಾಗಿದೆ. ಮುಖ್ಯ ಆಡಳಿತಾಧಿಕಾರಿ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ನಿವೃತ್ತ ಸಹಾಯಕ ಆಡಳಿತಾಧಿಕಾರಿ ಸಂಗನ ಬಸಪ್ಪ ಕಲ್ಲಪ್ಪ ಕೊರಬು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ಲೋಕಾಯುಕ್ತ ಪೊಲೀಸರು ವಿವರಿಸಿದ್ದಾರೆ.

ಮಲ್ಲೇಶ್ವರದಲ್ಲಿ ಮೇಘನ್ ಶಾಪಿಂಗ್!

ಪ್ರಜಾವಾಣಿ ವಾರ್ತೆ

ಮೇಘನ್ ಶ್ರೀನಿವಾಸ್

ಬೆಂಗಳೂರು: ಅಮೆರಿಕದಲ್ಲಿ ಜನಪ್ರತಿನಿಧಿಗಳ ಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದಿಂದ ಜಯಗಳಿಸಿದ ಕರ್ನಾಟಕ ಮೂಲದ ಮೇಘನ್ ಶ್ರೀನಿವಾಸ್ ಅವರು ಇಲ್ಲಿಗೆ ಬಂದಾಗಲೆಲ್ಲ ಮಲ್ಲೇಶ್ವರದಲ್ಲಿ ಶಾಪಿಂಗ್ ನಡೆಸುತ್ತಿದ್ದರು.

ಅವರು ಲೋವಾ ಹೌಸ್ ಡಿಸ್ಟ್ರಿಕ್ 30ರಿಂದ ಸ್ಪರ್ಧಿಸಿದ್ದರು. ಶೇ 63ರಷ್ಟು ಮತ ಪಡೆಯುವ ಮೂಲಕ ಗೆಲುವು ಸಾಧಿಸಿದ್ದಾರೆ. ಅವರು ತಮ್ಮ ಎರಡನೇ ಪ್ರಯತ್ನದಲ್ಲಿ ಜಯ ಸಾಧಿಸಿದ್ದಾರೆ. ತುಮಕೂರಿನ ಕುಣಿಗಲ್ ತಾಲ್ಲೂಕಿನ ಶ್ರೀನಿವಾಸ್ ಹಾಗೂ ಗೀತಾ ದಂಪತಿಯ ಪುತ್ರಿಯಾಗಿರುವ ಅವರು, ಅಮೆರಿಕದಲ್ಲಿಯೇ ಹುಟ್ಟಿ, ಬೆಳೆದಿದ್ದಾರೆ. ಪಶುವೈದ್ಯಕೀಯ ವಿಜ್ಞಾನಿಯಾಗಿರುವ ಅವರ ತಂದೆ, 1982ರಲ್ಲಿಯೇ ಅಮೆರಿಕಕ್ಕೆ ತೆರಳಿ, ಅಲ್ಲಿಯೆ ವಾಸವಿದ್ದಾರೆ.

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರುವ ಮೇಘನ್, ಕನ್ನಡ ಸೇರಿ 7 ಭಾಷೆನ್ನು ಮಾತನಾಡುತ್ತಾರೆ. ವೃತ್ತಿಯಲ್ಲಿ ವೈದ್ಯರಾಗಿದ್ದಾರೆ.

‘ಮೇಘನ್ ಅವರು ಮೊದಲಿನಿಂದಲೂ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಬಡ ಮಕ್ಕಳ ಬಗ್ಗೆ ಕಾಳಜಿ ಹೊಂದಿದ್ದರು. ಒಟ್ಟು ಜನರಲ್ಲಿ ಶೇ 2ರಷ್ಟು ಏಷ್ಯಾದವರು ಇರುವ ಕ್ಷೇತ್ರದಲ್ಲಿ ಜಯ ಸಾಧಿಸಿದ್ದಾರೆ. ಗೆಲ್ಲುವ ನಿರೀಕ್ಷೆ ಇದ್ದರೂ ಸ್ವಲ್ಪ ಕಸಿವಿಸಿಯಿತ್ತು. ಅಂತಿಮವಾಗಿ ಗೆಲುವು ಸಾಧಿಸಿರುವುದು ಕುಟುಂಬದಲ್ಲಿ ಸಂತಸವನ್ನುಂಟು ಮಾಡಿದೆ’ ಎಂದು ಮೇಘನ್ ಅವರ ತಂದೆಯ ಸಹೋದರ ಡಾ. ನಾಗರಾಜ್ ಜವರಯ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೇಘನ್ ಅವರು ಹಲವು ಬಾರಿ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಅವರಿಗೆ ಬೆಂಗಳೂರಿನಲ್ಲಿಯೂ ಸಂಬಂಧಿ ಇದ್ದಾರೆ. ಬೆಂಗಳೂರಿಗೆ ಭೇಟಿ ನೀಡಿದಾಗಲೆಲ್ಲ ಮಲ್ಲೇಶ್ವರದಲ್ಲಿ ಶಾಪಿಂಗ್ ನಡೆಸುತ್ತಿದ್ದರು. ಅವರು ಶಾಪಿಂಗ್ ಪ್ರಿಯರಾಗಿದ್ದಾರೆ’ ಎಂದು ಹೇಳಿದರು.

ಕೆಂಪೇಗೌಡರ ಹೆಸರು ರಾಜಕೀಯಕ್ಕೆ ಬಳಕೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಹಾಗೂ ಬಿಜೆಪಿ ನಾಯಕರು ಕೆಂಪೇಗೌಡರ ಹೆಸರನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಬಸವನಗುಡಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜೆಡಿಎಸ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೆಂಪೇಗೌಡರ ಪ್ರತಿಮೆ ಸ್ಥಾಪನೆ ಮಾಡಿದರೆ ಒಕ್ಕಲಿಗರ ಮತ ಸೆಳೆಯಬಹುದು ಎಂದು ಬಿಜೆಪಿ ಲೆಕ್ಕಾಚಾರ ಮಾಡಿದೆ. ಬಿಜೆಪಿ ನಾಯಕರು ಭ್ರಮೆಯಲ್ಲಿದ್ದಾರೆ. ಚುನಾವಣೆ ಬಂದಾಗ ಜನರೇ ಅವರ ಭ್ರಮೆ ಕಳಚಲಿದ್ದಾರೆ. ಪ್ರತಿಮೆ ಸ್ಥಾಪನೆ ಅನಾವರಣ ಬಿಜೆಪಿ ಸರ್ಕಾರದ ನಿಯೋಜಿತ ಕಾರ್ಯಕ್ರಮ. ಪ್ರಧಾನಿ ನರೇಂದ್ರ ಮೋದಿ ಬರುತ್ತಾರೆ, ಹೋಗುತ್ತಾರೆ ಅಷ್ಟೇ. ಅದಕ್ಕೆ ಹೆಚ್ಚು ಮಹತ್ವ ಕೊಡುವ ಅಗತ್ಯವಿಲ್ಲ ಎಂದು ಕುಟುಕಿದರು.

ಬೆಂಗಳೂರು ದೊಡ್ಡಮಟ್ಟದಲ್ಲಿ ಬೆಳೆದಿದೆ. ನಿರುದ್ಯೋಗ ಸಮಸ್ಯೆಯೂ ಅಧಿಕವಾಗಿದೆ. ಎರಡು ರಾಷ್ಟ್ರೀಯ ಪಕ್ಷಗಳ ಆಡಳಿತಾವಧಿಯಲ್ಲಿ ಬೆಂಗಳೂರಲ್ಲಿ ಹಲವಾರು ರೀತಿಯ ಅನಾಹುತ ಕಂಡಿದೆ. ಅದನ್ನು ಸರಿಪಡಿಸುವ ಮೂಲಕ ಕೆಂಪೇಗೌಡರಿಗೆ ಗೌರವ ಕೊಡುವುದು ಎಲ್ಲರ ಕರ್ತವ್ಯ ಎಂದರು.

ಧರ್ಮ, ಜಾತಿ ಹೆಸರಿನಲ್ಲಿ ಕಾಂಗ್ರೆಸ್, ಬಿಜೆಪಿ ಜನರ ಮನಸ್ಸು ಕೆಡಿಸುತ್ತಿವೆ. ಎರಡೂ ಪಕ್ಷಗಳಿಗೆ ಅಭಿವೃದ್ಧಿ ಬೇಕಿಲ್ಲ. ಸೂಕ್ಷ್ಮ ವಿಚಾರ ಇಟ್ಟುಕೊಂಡು ಚುನಾವಣಾ ರಾಜಕೀಯ ಮಾಡುತ್ತಿವೆ ಎಂದು ದೂರಿದರು.

ಕಚೇರಿ ಉದ್ಘಾಟನೆಗೂ ಮೊದಲು ನೆಟ್ಟಕಲ್ಲಪ್ಪ ವೃತ್ತದ ಗಣಪತಿ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದರು. ನಂತರ ತೆರೆದ ವಾಹನದಲ್ಲಿ ಮೆರವಣಿಗೆ ಸಾಗಿದರು. ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಬಸವನಗುಡಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್, ಪಕ್ಷದ ಹಿರಿಯ ಮುಖಂಡ ಬಾಗೇಗೌಡ ಇದ್ದರು.

ತಾಕತ್ ಇದ್ದರೆ 15 ಪ್ರಶ್ನೆಗಳಿಗೆ ಮೋದಿ ಉತ್ತರಿಸಲಿ: ರಾಮಲಿಂಗಾ ರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಲ್ಕು ವರ್ಷಗಳಿಂದ ಮಳೆಯಿಂದ ನಲುಗಿರುವ ರಾಜ್ಯಕ್ಕೆ ಕೇಂದ್ರದಿಂದ ಬಂದ ಪರಿಹಾರವೆಷ್ಟು? ಸ್ಮಾರ್ಟ್ ಸಿಟಿ, ಜಲಜೀವನ ಮಿಷನ್, ಎರಡು ಕೋಟಿ ಉದ್ಯೋಗ, ರೈತರ ಆದಾಯ ಇಮ್ಮಡಿ, ಎಲ್ಲರಿಗೂ ಸ್ವಂತ ಸೂರು ಸೇರಿದಂತೆ ಯಾವುದು ಪೂರ್ಣಗೊಂಡಿದೆ? ಉಪನಗರ ರೈಲು ಯೋಜನೆಗೆ ಎಷ್ಟು ಹಣ ನೀಡಿದ್ದೀರಿ?’ ಸೇರಿದಂತೆ 15 ಪ್ರಶ್ನೆಗಳನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಡಬಲ್ ಎಂಜಿನ್ ಸರ್ಕಾರ ಕರ್ನಾಟಕದಲ್ಲಿ ಏನು ಸಾಧನೆ ಮಾಡಿ ಗುಡ್ಡೆ ಹಾಕಿದೆ ಎಂದು ಉತ್ತರಿಸುವ ದಮ್, ತಾಕತ್ತು 56 ಇಂಚಿನ ಎದೆಯ, ಮಾತಿನ ಮಲ್ಲ ಪ್ರಧಾನಿ ಮೋದಿ ಅವರಿಗಿದೆ ಎಂದು ಭಾವಿಸಿ ಈ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ’ ಎಂದರು.

‘ಕೆಂಪೇಗೌಡರ ಪ್ರತಿಮೆ ಅನಾವರಣಕ್ಕೆ ಇದೇ 11ರಂದು ರಾಜ್ಯಕ್ಕೆ ಮೋದಿ ಬರುತ್ತಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ ದೇಶದಲ್ಲಿ ಕರ್ನಾಟಕ ಎಂಬ ರಾಜ್ಯವಿದೆ ಎಂದು ಅವರಿಗೆ ಜ್ಞಾನೋದಯವಾಗಿದೆ. ಹೀಗಾಗಿ, 3–4 ತಿಂಗಳಿಂದ ರಾಜ್ಯದಲ್ಲಿ ಪ್ರದಕ್ಷಿಣೆ ಆರಂಭಿಸಿದ್ದಾರೆ’ ಎಂದರು.

‘ರಾಜ್ಯ ಬಿಜೆಪಿ ಸರ್ಕಾರ ನುಡಿದಂತೆ ನಡೆದಿಲ್ಲ. ಚುನಾವಣೆಗೂ ಮೊದಲು ಕೊಟ್ಟ ಭರವಸೆಗಳಲ್ಲಿ ಯಾವುದನ್ನು ಈಡೇರಿಸಿದ್ದೀರಿ ಎಂದು ನಾವು ನಿತ್ಯ ಪ್ರಶ್ನೆ ಕೇಳುತ್ತಲೇ ಇದ್ದೇವೆ. ಆದರೆ, ಉತ್ತರ ನೀಡುವ ತಾಕತ್ತು ಬಿಜೆಪಿಯವರಿಗಿಲ್ಲ’ ಎಂದರು.

‘ಜಿಎಸ್‌ಟಿ ಹಣದಲ್ಲಿ ಕರ್ನಾಟಕಕ್ಕೆ ಹಂಚಿಕೆಯಾಗುವ ಅನುದಾನ ಪಟ್ಟಿಯಲ್ಲಿ ರಾಜ್ಯಕ್ಕೆ ಎಷ್ಟನೇ ಸ್ಥಾನವಿದೆ? ₹ 23 ಕೋಟಿ ವೆಚ್ಚದಲ್ಲಿ ಹಾಕಿದ್ದ ಡಾಂಬರು ಕಿತ್ತು ಹೋಗಿರುವುದಕ್ಕೆ ನಿಮ್ಮ ಅಭಿಪ್ರಾಯವೇನು? ಶೇ 40 ಕಮಿಷನ್ ಕುರಿತ ದೂರು, ರುಪ್ಸಾ ಸಂಸ್ಥೆಯ ದೂರು, ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ, ಹುಬ್ಬಳ್ಳಿ ಗುತ್ತಿಗೆದಾರ ಬಸವರಾಜ್ ದಯಾಮರಣ ಅರ್ಜಿ ಬಗ್ಗೆ ಮೌನ ಯಾಕೆ’ ಎಂದೂ ಪ್ರಧಾನಿಯನ್ನು ರೆಡ್ಡಿ ಕೇಳಿದ್ದಾರೆ.

‘ಬೆಂಗಳೂರು ನಗರ ಗಾರ್ಬೇಜ್ ಸಿಟಿ ಆಗಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು? ರಸ್ತೆ ಗುಂಡಿಗಳ ಬಗ್ಗೆ ಏನು ಹೇಳುತ್ತೀರಿ? ಮೇಕೆದಾಟು, ಮಹದಾಯಿ ಯೋಜನೆ ಜಾರಿ ಯಾವಾಗ? ಕೋವಿಡ್‌ನಿಂದ ಸತ್ತವರಲ್ಲಿ ಎಷ್ಟು ಕುಟುಂಬಕ್ಕೆ ಪರಿಹಾರ ನೀಡಿದ್ದೀರಿ? ಜಾತಿ, ಧರ್ಮಗಳ ಹೆಸರಲ್ಲಿ ದ್ವೇಷ ಬಿತ್ತಿ, ಸಮಾಜ ಒಡೆಯುತ್ತಿರುವುದು ಎಷ್ಟರಮಟ್ಟಿಗೆ ಸರಿ’ ಎಂದೂ ಪ್ರಧಾನಿಯನ್ನು ಅವರು ಪ್ರಶ್ನಿಸಿದ್ದಾರೆ.

ಬಿಜೆಪಿಗೆ ಇಂಥ ದುರ್ಗತಿಯೇ?– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಬರುವುದಕ್ಕೆ ನಮ್ಮದು ಆಕ್ಷೇಪ ಇಲ್ಲ. ಆದರೆ, ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಕಾಲೇಜು ವಿದ್ಯಾರ್ಥಿಗಳನ್ನು ಕರೆತರಬೇಕೆಂದು ಸುತ್ತೋಲೆ ಹೊರಡಿಸಿದ್ದು ಖಂಡನೀಯ. ಬಿಜೆಪಿಯವರಿಗೆ ಇಂಥ ದುರ್ಗತಿ ಬಂದಿದೆಯೇ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿ ದಿವಾಳಿಯಾಗಿರುವುದಕ್ಕೆ ಇದೇ ಸಾಕ್ಷಿ. ಇದಕ್ಕೆ ಪ್ರಧಾನಿ ಉತ್ತರ ನೀಡಬೇಕು’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್ ಪಕ್ಷದಲ್ಲಿ ನೀವು ಮುಖ್ಯಮಂತ್ರಿ ಆಗುವುದಿಲ್ಲ, ಬಿಜೆಪಿಗೆ ಬನ್ನಿ’ ಎಂದು ಸಚಿವ ಮುನಿರತ್ನ ಆಹ್ವಾನ ನೀಡಿರುವ ಬಗ್ಗೆ ಕೇಳಿದಾಗ, ‘ಬಿಜೆಪಿಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಜನ ಇಲ್ಲ ಎಂಬುದು ಅವರ ಹೇಳಿಕೆಯಿಂದ ಸಾಬೀತಾಗಿದೆ’ ಎಂದರು.

‘ಹಿಂದೂ ಪದ ಕುರಿತು ನೀಡಿರುವ ತಮ್ಮ ಹೇಳಿಕೆಯ ಅಂಶ ಪುಸ್ತಕದಲ್ಲಿದೆ ಎಂದು ಶಾಸಕ ಸತೀಶ ಜಾರಕಿಹೊಳಿ ಸಮರ್ಥನೆ ಮಾಡಿಕೊಂಡಿದ್ದಾರೆ. ಆ ಬಗ್ಗೆ ನನಗೆ ಗೊತ್ತಿಲ್ಲ. ಆದರೆ, ನನ್ನ ಧರ್ಮ, ಸಂಸ್ಕೃತಿ ಸೇರಿ ಯಾವುದಕ್ಕೂ ಧಕ್ಕೆ ಆಗಬಾರದು ಎಂದು ನಾನು, ಸಿದ್ದರಾಮಯ್ಯ ಮತ್ತು ರಣದೀಪ್ ಸಿಂಗ್ ಸುರ್ಜೆವಾಲ ಸ್ಪಷ್ಟಪಡಿಸಿದ್ದೇವೆ. ನಮ್ಮ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಶಿವಕುಮಾರ್ ಹೇಳಿದರು.

‘ಸತೀಶ ಜಾರಕಿಹೊಳಿ ಹೇಳಿಕೆಯನ್ನು ಖಂಡಿಸುತ್ತೇವೆ. ಬಿಜೆಪಿಯವರು ಅದರಿಂದ ರಾಜಕೀಯ ಲಾಭ ಮಾಡಿಕೊಳ್ಳಲು ಏನು ಬೇಕಾದರೂ ಮಾಡಲಿ. ಪಕ್ಷದ ಅಧ್ಯಕ್ಷನಾಗಿ ಆ ಹೇಳಿಕೆ ತಪ್ಪು ಎಂದು ಹೇಳುತ್ತೇನೆ’ ಎಂದರು.

ಮೃತ್ತಿಕೆ ಸಂಗ್ರಹ ಅಭಿಯಾನಕ್ಕೆ ತೆರೆ

ದೇವನಹಳ್ಳಿ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆವರಣದಲ್ಲಿ ಶುಕ್ರವಾರ ಲೋಕಾರ್ಪಣೆಯಾಗಲಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟನೆಯ ಭಾಗವಾಗಿ 15 ದಿನ ರಾಜ್ಯದಾದ್ಯಂತ ಸಂಚರಿಸಿದ ಮೃತ್ತಿಕೆ (ಮಣ್ಣು) ಸಂಗ್ರಹ ಅಭಿಯಾನಕ್ಕೆ ಬುಧವಾರ ತೆರೆ ಬಿದ್ದಿದೆ.

ನಾಡಿನ 22 ಸಾವಿರಕ್ಕೂ ಹೆಚ್ಚು ಸ್ಥಳಗಳಿಂದ ಸಂಗ್ರಹಿಸಿ ತರಲಾಗಿದ್ದ ಮಣ್ಣನ್ನು ಸ್ವೀಕರಿಸಿ ಪ್ರತಿಮೆಯ ನಾಲ್ಕು ಗೋಪುರಗಳ ಪೈಕಿ ಒಂದಕ್ಕೆ ಸಾಂಕೇತಿಕವಾಗಿ ಸಮರ್ಪಿಸಲಾಯಿತು.

ನಾಡಪ್ರಭು ಕೆಂಪೇಗೌಡರ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ, ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಮತ್ತು ಸಚಿವರಾದ ಆರ್.ಅಶೋಕ, ಎಂ.ಟಿ.ಬಿ. ನಾಗರಾಜ್, ಸಂಸದರಾದ ಡಿ.ವಿ.ಸದಾನಂದಗೌಡ, ಬಿ.ಎನ್. ಬಚ್ಚೇಗೌಡ, ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕ ಎಸ್.ಆರ್. ವಿಶ್ವನಾಥ್ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಲತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜಿಆರ್‌ಟಿಯಿಂದ ದೇವಾಂಶಿ ಪೋಲ್ಕಿ ಸಂಗ್ರಹ

ಬೆಂಗಳೂರು: ರಾಜ ಮನೆತನದವರು ಬಳಸುವ ಪೋಲ್ಕಿ ವಜ್ರಗಳ ಹೊಸ ಸಂಗ್ರಹ ‘ದೇವಾಂಶಿ’ ಜಿಆರ್‌ಟಿ ಜುವೆಲರ್ಸ್‌ನಲ್ಲಿ ಲಭ್ಯವಿದೆ.

‘ದೇವಾಂಶಿ’ ಸಂಗ್ರಹವನ್ನು ಅನುಭವಿ ಕುಶಲಕರ್ಮಿಗಳು ರೂಪಿಸಿದ್ದು, ವಿಶೇಷ ವಿನ್ಯಾಸಗಳೊಂದಿಗೆ ಹಲವು ಬಗೆಯ ಆಭರಣಗಳು ಖರೀದಿಗೆ ಲಭ್ಯವಿವೆ. ಈ ಪೋಲ್ಕಿ ವಜ್ರಗಳ ಮೇಲೆ ಶೇ 15ರಷ್ಟು ರಿಯಾಯಿತಿಯೂ ಸಿಗುತ್ತದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪೋಲ್ಕಿ ವಜ್ರಗಳು ಕತ್ತರಿಸದ ವಜ್ರಗಳ ಹಳೆಯ ರೂಪಗಳಲ್ಲಿ ಒಂದಾಗಿದ್ದು, ಶತಮಾನಗಳಿಂದಲೂ ರಾಜ ಮನೆತನಗಳ ಆಯ್ಕೆಯಾಗಿವೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ‘ಆನಂದ್’ ಅನಂತ ಪದ್ಮನಾಭನ್ ಹೇಳಿದ್ದಾರೆ.

‘ಎರಡು ದೇಶಗಳ ಕೃಷಿ ಸಹಕಾರ ಕಾರ್ಯಕ್ರಮಗಳಿಗೆ ಉಜ್ವಲ ಭವಿಷ್ಯ’

ಬೆಂಗಳೂರು: ‘ಭಾರತ ಮತ್ತು ಅಮೆರಿಕ ದೇಶಗಳ ನಡುವಿನ ಕೃಷಿ ಸಹಕಾರ ಕಾರ್ಯಕ್ರಮಗಳಿಗೆ ಉಜ್ವಲ ಭವಿಷ್ಯವಿದೆ’ ಎಂದು ಭಾರತದಲ್ಲಿರುವ ಅಮೆರಿಕ ರಾಯಭಾರಿ ಕಚೇರಿಯ ಕೃಷಿ ವ್ಯವಹಾರಗಳ ಸಲಹೆಗಾರ ಡಾ. ಎನ್. ರಾನ್ ವರ್ಡೆಂಕ್ ವಿಶ್ವಾಸ ವ್ಯಕ್ತಪಡಿಸಿದರು.

‘ಜೀನೋಮ್ ಸೀಕ್ವೆನ್ಸಿಂಗ್, ನಿಖರವಾದ ಹವಾಮಾನ ಸ್ಮಾರ್ಟ್ ಅಡಾಪ್ಟಿವ್ ಅಗ್ರಿಕಲ್ಚರಲ್ ಟೆಕ್ನಾಲಜೀಸ್, ಡ್ರೋನ್ ಮತ್ತು ರೋಬೊಟಿಕ್ಸ್ ಆಧಾರಿತ ದೊಡ್ಡ ತಂತ್ರಜ್ಞಾನಗಳು, ಡೇಟಾ ಮುನ್ಸೂಚಕ ವಿಶ್ಲೇಷಣೆ ಮತ್ತು ಸಂಸ್ಕರಣೆ ಹಾಗೂ ಮೌಲ್ಯ ಸರಪಳಿ ಅಭಿವೃದ್ಧಿ ಕುರಿತು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಧ್ಯಯನ ನಡೆಸಲು ಅಮೆರಿಕ ಆಸಕ್ತಿ ಹೊಂದಿದೆ’ ಎಂದರು.

ರಾಗಿ, ಸಿರಿಧಾನ್ಯಗಳು ಮತ್ತು ವಿದೇಶಿ ತರಕಾರಿಗಳ ಬೆಳೆ ಪ್ರಾತ್ಯಕ್ಷಿಕೆಗಳು ಮತ್ತು ಮಣ್ಣು ರಹಿತ ಕೃಷಿ ಘಟಕಗಳಿಗೆ ಭೇಟಿ ನೀಡಿದ ಅವರು ಮಾಹಿತಿ ಪಡೆದುಕೊಂಡರು.

‘ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ. ಕೆ.ಬಿ ಉಮೇಶ ಕರ್ನಾಟಕದ ಕೃಷಿ ಸನ್ನಿವೇಶ ಮತ್ತು ಕೃಷಿ ವಿಶ್ವವಿದ್ಯಾಲಯದಲ್ಲಿರುವ ಸಂಶೋಧನಾ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ವಿಸ್ತರಣಾ ನಿರ್ದೇಶಕ ಡಾ. ಕೆ. ನಾರಾಯಣಗೌಡ, ಮತ್ತು ಡಾ. ಎನ್. ಬಿ. ಪ್ರಕಾಶ್ ಇದ್ದರು.

ನಟ ಲೋಹಿತಾಶ್ವ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹೆಬ್ಬೂರು ಹೋಬಳಿ ತೊಂಡಗೆರೆ ಗ್ರಾಮದ ತೋಟದ ಮನೆಯಲ್ಲಿ ನಟ ಲೋಹಿತಾಶ್ವ ಅವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನೆರವೇರಿತು.

ಬೆಂಗಳೂರಿನಿಂದ ಸ್ವಗ್ರಾಮ ತೊಂಡಗೆರೆಗೆ ಬೆಳಿಗ್ಗೆ ಮೃತದೇಹ ತರಲಾಯಿತು. ಗ್ರಾಮದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಗ್ರಾಮದಲ್ಲಿ ಮೆರವಣಿಗೆ ನಡೆಸಿ, ಲೋಹಿತಾಶ್ವ ಅವರ ತೋಟದ ಮನೆಯಲ್ಲಿ ಅಂತ್ಯ ಸಂಸ್ಕಾರ ಮಾಡಲಾಯಿತು. ಅವರ ಪುತ್ರ ಶರತ್ ಲೋಹಿತಾಶ್ವ ಅವರು ಲಿಂಗಾಯತ ಸಂಪ್ರದಾಯದಂತೆ ವಿಧಿವಿಧಾನಗಳನ್ನು ನೆರವೇರಿಸಿದರು.

ಕನಕಶ್ರೀ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳು, ಕುರುಬ ಸಮಾಜದ ಮುಖಂಡರ ಒತ್ತಾಯ

‘ಮಲ್ಕಾಪುರೆ ಮುಂದುವರಿಸಿ, ಈಶ್ವರಪ್ಪಗೆ ಸಚಿವ ಸ್ಥಾನ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸಭಾಪತಿಯಾಗಿ ರಘುನಾಥರಾವ್ ಮಲ್ಕಾಪುರೆ ಅವರನ್ನೇ ಮುಂದುವರಿಸಬೇಕು ಮತ್ತು ಶಾಸಕ ಕೆ.ಎಸ್. ಈಶ್ವರಪ್ಪ ಅವರನ್ನು ಮತ್ತೆ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಕನಕಶ್ರೀ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳು ಮತ್ತು ಕುರುಬ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ.

‘ಸಾಂವಿಧಾನಿಕ ಹುದ್ದೆಯಾದ ವಿಧಾನಸಭಾ ಅಧ್ಯಕ್ಷ ಸ್ಥಾನ ಮತ್ತು ವಿಧಾನ ಪರಿಷತ್ ಸಭಾಪತಿ ಹುದ್ದೆ ಇದುವರೆಗೂ ಕುರುಬ ಸಮಾಜದ ಮುಖಂಡರಿಗೆ ಲಭಿಸಿಲ್ಲ. ಹೀಗಾಗಿ, ಪ್ರಸ್ತುತ ವಿಧಾನ ಪರಿಷತ್ತಿನ ಹಂಗಾಮಿ ಸಭಾಪತಿಯಾಗಿರುವ ರಘುನಾಥರಾವ್ ಮಲ್ಕಾಪುರೆ ಅವರನ್ನೇ ಮುಂದುವರಿಸಬೇಕು’ ಎಂದು ಟ್ರಸ್ಟ್ ಅಧ್ಯಕ್ಷ ಟಿ.ಬಿ. ಬಳಗಾವಿ ಮತ್ತು ಹಿಂದುಳಿದ ದಲಿತ ಸಮುದಾಯಗಳ ಒಕ್ಕೂಟದ (ಹಿಂದ) ಅಧ್ಯಕ್ಷ ಕೆ. ಮುಕುಡಪ್ಪ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಬಿಜೆಪಿಯ ಹಿರಿಯ ಮುಖಂಡರಾಗಿರುವ ರಘುನಾಥ್‌ರಾವ್ ಮಲ್ಕಾಪುರೆ ಅವರ ಸದಸ್ಯತ್ವದ ಅವಧಿ ಮುಗಿಯುವವರೆಗೂ ಸಭಾಪತಿಯಾಗಿ ಮುಂದುವರಿಸಬೇಕು. ಜತೆಗೆ, ಆರೋಪಗಳಿಂದ ಮುಕ್ತರಾಗಿರುವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳಬೇಕು. ಈ ಮೂಲಕ ರಾಜ್ಯದ ಮೂರನೇ ಅತಿ ದೊಡ್ಡ ಸಮುದಾಯವಾದ ಕುರುಬ ಸಮಾಜವನ್ನು ಬಿಜೆಪಿಯತ್ತ ಸೆಳೆಯಲು ಸಾಧ್ಯವಾಗುತ್ತದೆ’ ಎಂದು ಪ್ರತಿಪಾದಿಸಿದರು.

‘ರಾಜ್ಯದಲ್ಲಿ ಬಿಜೆಪಿ ಕಟ್ಟುವಲ್ಲಿ ಈಶ್ವರಪ್ಪ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಈಶ್ವರಪ್ಪ ಸಚಿವ ಸ್ಥಾನ ನೀಡುವುದರಿಂದ ಪಕ್ಷಕ್ಕೆ ಬಲ ದೊರೆಯುತ್ತದೆ. 224 ಕ್ಷೇತ್ರಗಳಲ್ಲಿ 194 ಕ್ಷೇತ್ರಗಳಲ್ಲಿ ಕುರುಬ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದೆ. ಬಿಜೆಪಿ ಮತ್ತೆ ಅಧಿಕಾರ ಪಡೆಯಲು ಈ ಇಬ್ಬರು ನಾಯಕರಿಗೆ ಮಹತ್ವದ ಸ್ಥಾನಗಳನ್ನು ನೀಡಬೇಕು. ನಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿ ಮತ್ತು ಪಕ್ಷದ ಹಿರಿಯ ಮುಖಂಡರಿಗೆ ಸಲ್ಲಿಸುತ್ತೇವೆ. ಆದರೆ, ಪ್ರತಿಭಟನೆ ಮಾಡುವುದಿಲ್ಲ’ ಎಂದು ಮುಕುಡಪ್ಪ ಹೇಳಿದರು.

‘ಸಿದ್ದರಾಮಯ್ಯಗೆ ಸಮುದಾಯದ ಬೆಂಬಲ ಇಲ್ಲ’

‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹಿಂದೆ ಇಡೀ ಕುರುಬ ಸಮುದಾಯ ಇದೆ ಎನ್ನುವುದು ತಪ್ಪು ಕಲ್ಪನೆ’ ಎಂದು ಕೆ. ಮುಕುಡಪ್ಪ ತಿಳಿಸಿದರು.

‘ದಾವಣಗೆರೆಯಲ್ಲಿ ನಡೆದ ಸಮಾವೇಶಕ್ಕೆ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸಿದ ಮಾತ್ರಕ್ಕೆ ಕುರುಬ ಸಮುದಾಯ ಸಿದ್ದರಾಮಯ್ಯ ಜತೆ ಇದೆ ಎಂದು ಅರ್ಥೈಸಿಕೊಳ್ಳಬಾರದು. ಜನ ಸೇರಿಸುವುದರಿಂದ ಬಲ ಇದೆ ಎಂದರ್ಥವಲ್ಲ. ಬಹುಸಂಖ್ಯಾತ ಕುರುಬರು ಈಗ ಈಶ್ವರಪ್ಪ ಅವರ ಬೆನ್ನಿಗೆ ನಿಂತಿದ್ದಾರೆ’ ಎಂದು ಪ್ರತಿಪಾದಿಸಿದರು.

14ನೇ ಮಹಡಿಯಿಂದ ಜಿಗಿದಿದ್ದ ಮೋಹಿನ್

ಶಾಲೆಯಲ್ಲಿ ಮಂಗಳವಾರ ನಡೆದಿದ್ದ ಇಂಗ್ಲಿಷ್ ಭಾಷೆ ಪರೀಕ್ಷೆಗೆ ಹಾಜರಾಗಿದ್ದ ಮೋಹಿನ್, ನಕಲು ಮಾಡಲು ಯತ್ನಿಸಿದ್ದ. ಅದನ್ನು ನೋಡಿದ್ದ ಶಿಕ್ಷಕರು ಬೈದಿದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಆತ್ಮಹತ್ಯೆ: ಶಿಕ್ಷಕರ ವಿಚಾರಣೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯ-ವೊಂದರ 14ನೇ ಮಹಡಿಯಿಂದ ಜಿಗಿದು ಮೋಹಿನ್ (16) ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಶಿಕ್ಷಕರ ವಿರುದ್ಧ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ಮೋಹಿನ್, ನಾಗವಾರ ಬಳಿಯ ಶಾಲೆಯೊಂದರಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದ. ಮಂಗಳವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪರೀಕ್ಷೆಯಲ್ಲಿ ನಕಲು ಮಾಡಿದ್ದಕ್ಕೆ ಶಿಕ್ಷಕರು ಆತನನ್ನು ಕೊಠಡಿಯ ಹೊರಗೆ ನಿಲ್ಲಿಸಿದ್ದರು. ಸ್ಥಳದಲ್ಲಿ ಕೆಲ ನಿಮಿಷ ನಿಂತಿದ್ದ ಮೋಹಿನ್, ಯಾರಿಗೂ ಹೇಳದೇ ಶಾಲೆಯಿಂದ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಬಂದಿದ್ದ. ಶಾಲಾ ಸಮವಸ್ತ್ರದಲ್ಲೇ 14ನೇ ಮಹಡಿಗೆ ಹೋಗಿ, ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ' ಎಂದು ತಿಳಿಸಿದರು.

'ಪರೀಕ್ಷೆಯಲ್ಲಿ ನಕಲು ಮಾಡಿದನೆಂಬ ಕಾರಣಕ್ಕೆ ಶಿಕ್ಷಕರು ಬೈದು, ಹೊಡೆದಿದ್ದಾರೆ. ತರಗತಿಯ ಹೊರಗೆ ನಿಲ್ಲಿಸಿ ಕಿರುಕುಳ ನೀಡಿದ್ದಾರೆ. ಇದರಿಂದ ನೊಂದು ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಪೋಷಕರು ದೂರು ನೀಡಿದ್ದಾರೆ.'

'ಶಿಕ್ಷಕರನ್ನು ವಿಚಾರಣೆ ಮಾಡಲಾಗಿದ್ದು, 'ನಕಲು ಮಾಡಿದ್ದಕ್ಕೆ ಕೊಠಡಿ ಹೊರಗೆ ನಿಲ್ಲಿಸಲಾಗಿತ್ತು. ಕೆಲ ನಿಮಿಷ ಬಿಟ್ಟು ಒಳಗೆ ಕರೆಯಲು ಹೋದಾಗ, ಮೋಹಿನ್ ಸ್ಥಳದಲ್ಲಿ ಇರಲಿಲ್ಲ. ಹಲವೆಡೆ ಹುಡುಕಾಡಿದರೂ ಪತ್ತೆಯಾಗಲಿಲ್ಲ' ಎಂದಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಬಸವನಗುಡಿ ಠಾಣೆಯಲ್ಲಿ ಎಫ್‌ಐಆರ್ : ಶ್ರೀಲಂಕಾ ಪ್ರಜೆಗಳು ಸೇರಿ 9 ಮಂದಿ ಬಂಧನ

ನಕಲಿ ದಾಖಲೆ: ₹2 ಲಕ್ಷಕ್ಕೆ ಪಾಸ್‌ಪೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಪಾಸ್‌ಪೋರ್ಟ್ ಮಾಡಿಸಿಕೊಡುತ್ತಿದ್ದ ಜಾಲ ಭೇದಿಸಿರುವ ದಕ್ಷಿಣ ವಿಭಾಗದ ಪೊಲೀಸರು, ಶ್ರೀಲಂಕಾ ಪ್ರಜೆಗಳು ಸೇರಿದಂತೆ 9 ಆರೋಪಿಗಳನ್ನು ಬಂಧಿಸಿದ್ದಾರೆ.

ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ನಿವಾಸಿ ಅಮಿನ್ ಶೇತ್, ಮಂಗಳೂರಿನ ನವಾಲ್, ಹೈದರ್, ಪಾಸ್‌ಪೋರ್ಟ್ ಪಡೆದಿದ್ದ ಶ್ರೀಲಂಕಾ ಪ್ರಜೆಗಳಾದ ಸೆಲ್ವಿ, ರವಿಕುಮಾರ್, ಮಣಿವೇಲು, ಶೀಜು, ವಿಶಾಲ್ ನಾರಾಯಣ್, ನಿರೋಶಾ ಬಂಧಿತರು.

'ಕಳ್ಳತನ ಆರೋಪಿ ಸಾದಿಕ್ ಪಾಷಾ ಎಂಬಾತನಿಗೆ ಮೊಹಮ್ಮದ್ ಕರೀಂ ಹೆಸರಿನಲ್ಲಿ ಪಾಸ್‌ಪೋರ್ಟ್ ಮಂಜೂರಾಗಿತ್ತು. ಆದರೆ, ಈತನ ವಿರುದ್ಧ ಹಾಸನ ಹಾಗೂ ಇತರೆ ಜಿಲ್ಲೆಗಳ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಅ. 19ರಂದು ಬಸವನಗುಡಿ ಠಾಣೆಗೆ ಬಂದಿದ್ದ ಹಾಸನ ಪೊಲೀಸರು, ಸಾದಿಕ್ ಪಾಷಾ ಬಗ್ಗೆ ವಿಚಾರಿಸಿದ್ದರು. ಮಾಹಿತಿ ವಿನಿಮಯ ವೇಳೆಯಲ್ಲಿ ಪಾಸ್‌ಪೋರ್ಟ್ ಜಾಲದ ಸುಳಿವು ಲಭ್ಯವಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸಾದಿಕ್ ಪಾಷಾ ಹಾಗೂ ಇತರರ ವಿರುದ್ಧ ಬಸವನಗುಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡು ಮೂವರು ಇನ್‌ಸ್ಪೆಕ್ಟರ್ ನೇತೃತ್ವದ ತಂಡ, ಆರೋಪಿಗಳನ್ನು ಬಂಧಿಸಿದೆ. ನಕಲಿ ದಾಖಲೆಗಳನ್ನು ಜಪ್ತಿ ಮಾಡಿದೆ' ಎಂದರು.

ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ನಕಲಿ ದಾಖಲೆಗಳು

20 ಮಂದಿಗೆ ಪಾಸ್‌ಪೋರ್ಟ್: 'ವಿದೇಶಿ ಪ್ರಜೆಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳ 20 ಮಂದಿಗೆ ಪಾಸ್‌ಪೋರ್ಟ್ ಮಾಡಿಸಿಕೊಟ್ಟಿದ್ದಾರೆ. 50ಕ್ಕೂ ಹೆಚ್ಚು ಮಂದಿಗೆ ನಕಲಿ ದಾಖಲೆ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೀಲಂಕಾ ಪ್ರಜೆಗಳು, ತಲಾ ₹ 1.50 ಲಕ್ಷದಿಂದ ₹ 2 ಲಕ್ಷ ನೀಡಿದ್ದರು. ಅಪರಾಧ ಹಿನ್ನೆಲೆಯುಳ್ಳವರು, ₹ 2 ಲಕ್ಷಕ್ಕೂ ಹೆಚ್ಚು ಹಣ ನೀಡಿದ್ದರು' ಎಂದು ತಿಳಿಸಿವೆ.

ಉದ್ಯೋಗಕ್ಕಾಗಿ ಪಾಸ್‌ಪೋರ್ಟ್: 'ಶ್ರೀಲಂಕಾ ಪ್ರಜೆಗಳು, ಭಾರತೀಯರ ಹೆಸರಿನಲ್ಲಿ ಹೊರದೇಶಗಳಲ್ಲಿ ಉದ್ಯೋಗ ಮಾಡಲು ಮುಂದಾಗಿದ್ದರು. ಭಾರತೀಯ ಪಾಸ್‌ಪೋರ್ಟ್ ಪಡೆಯಲು ಅಮಿನ್ ಶೇತ್ ಹಾಗೂ ಇತರರನ್ನು ಸಂಪರ್ಕಿಸಿ ಹಣ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'36 ಕಡೆ ಕಳ್ಳತನ ಮಾಡಿದ್ದ ಆರೋಪಿ ಸಾದಿಕ್ ಪಾಷಾ, ಪಾಸ್‌ಪೋರ್ಟ್ ಬಳಸಿಕೊಂಡೇ ವಿದೇಶಕ್ಕೆ ಹೋಗಿ ತಲೆಮರೆಸಿಕೊಂಡಿದ್ದಾನೆ' ಎಂದು ತಿಳಿಸಿವೆ.

ಜೈಲಿಗೂ ಹೋಗಿ ಬಂದಿದ್ದ ಆರೋಪಿಗಳು: 'ಆರೋಪಿ ಅಮಿನ್ ಶೇತ್, ನಕಲಿ ದಾಖಲೆ ಸೃಷ್ಟಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದ. ಅನ್ನಪೂರ್ಣೇಶ್ವರಿ ನಗರ, ಜಯನಗರ, ಡಿ.ಜೆ.ಹಳ್ಳಿ, ಪುಲಿಕೇಶಿನಗರ, ಭಾರತಿ ನಗರ, ಸಿಟಿ ಮಾರ್ಕೆಟ್ ಹಾಗೂ ಮಾದನಾಯಕನ ಹಳ್ಳಿ ಠಾಣೆಯಲ್ಲಿ ಪ್ರಕರಣಗಳೂ ದಾಖಲಾಗಿದ್ದವು. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ' ಎಂದು ಮೂಲಗಳು ಹೇಳಿವೆ.

ಎಂಜಿನಿಯರ್ ಸಹಕಾರ: 'ಅಂಕಪಟ್ಟಿ, ಆಧಾರ್, ಮತದಾನ ಗುರುತಿನ ಚೀಟಿ, ಶಾಲಾ ವರ್ಗಾವಣಾ ಪ್ರಮಾಣಪತ್ರ, ಚಾಲನಾ ಪರವಾನಗಿ ಪತ್ರ, ವಿಳಾಸ ದೃಢೀಕರಣ ಪ್ರಮಾಣಪತ್ರ ಸೇರಿದಂತೆ ಎಲ್ಲ ದಾಖಲೆಗಳನ್ನು ಆರೋಪಿಗಳು ಸೃಷ್ಟಿಸುತ್ತಿದ್ದರು. ಈ ಕೃತ್ಯಕ್ಕೆ ಸಾಫ್ಟ್‌ವೇರ್ ಎಂಜಿನಿಯರೊಬ್ಬ ಸಹಕಾರ ನೀಡುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'ತಪ್ಪು ಗೊತ್ತಾದ ಮೇಲೆ ದೂರು ದಾಖಲಿಸಿದ್ದ ಕಾನ್‌ಸ್ಟೆಬಲ್'

'ಆರೋಪಿ ಸಾದಿಕ್ ಪಾಷಾ, ಮೊಹಮ್ಮದ್ ಕರೀಂ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಪಾಸ್‌ಪೋರ್ಟ್ ಪಡೆಯಲು ಅರ್ಜಿ ಸಲ್ಲಿಸಿದ್ದ. ಪಾಸ್‌ಪೋರ್ಟ್ ಸೇವಾ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸಿದ್ದ ಪ್ರಾದೇಶಿಕ ಕೇಂದ್ರ ಅಧಿಕಾರಿಗಳು, ಪರಿಶೀಲನೆಗಾಗಿ ಪೊಲೀಸರಿಗೆ ನಿರ್ದೇಶಿಸಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕಾನ್‌ಸ್ಟೆಬಲ್ ಮಧುಸೂದನ್, ಅರ್ಜಿದಾರರ ವಿಳಾಸಕ್ಕೆ ಹೋಗಿದ್ದರು. ಸ್ಥಳದಲ್ಲಿದ್ದ ಅಮಿನ್, ನವಾಬ್ ಹಾಗೂ ಹೈದರ್, ಪಕ್ಕದ ನಿವಾಸಿಗಳೆಂದು ಪರಿಚಯಿಸಿಕೊಂಡಿದ್ದರು. ಮೊಹಮ್ಮದ್ ಕರೀಂ ತಮಗೆ ಪರಿಚಯವೆಂದು ಹೇಳಿದ್ದರು. ಅದನ್ನು ನಿಜವೆಂದು ತಿಳಿದ ಮಧುಸೂದನ್, ಪಾಸ್‌ಪೋರ್ಟ್ ಮಂಜೂರು ಮಾಡಬಹುದೆಂದು ತಂತ್ರಾಂಶ ನಮೂದಿಸಿದ್ದರು. ನಂತರವೇ ಆರೋಪಿಗೆ ಪಾಸ್‌ಪೋರ್ಟ್ ಬಂದಿತ್ತು.'

'ಹಾಸನ ಪೊಲೀಸರು ಠಾಣೆಗೆ ಬಂದು ಸಾದಿಕ್ ಪಾಷಾ ಫೋಟೊ ತೋರಿಸಿದಾಗ, ಕಾನ್‌ಸ್ಟೆಬಲ್‌ಗೆ ತಪ್ಪು ಅರಿವಾಗಿತ್ತು. ಬಳಿಕವೇ ಎಫ್‌ಐಆರ್ ದಾಖಲಿಸಿದ್ದರು. ತನಿಖೆ ಕೈಗೊಂಡಾಗ, ಕಾನ್‌ಸ್ಟೆಬಲ್ ನಿರ್ಲಕ್ಷ್ಯವೂ ಎದ್ದು ಕಾಣಿಸಿತು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ನಿರ್ಲಕ್ಷ್ಯ: ಇಬ್ಬರು ಪೊಲೀಸರು ಅಮಾನತು

ಪಾಸ್‌ಪೋರ್ಟ್ ಪರಿಶೀಲನೆ ವೇಳೆ ನಿರ್ಲಕ್ಷ್ಯ ವಹಿಸಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಬಸವನಗುಡಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಧು ಹಾಗೂ ಕಾನ್‌ಸ್ಟೆಬಲ್ ಜೆ. ವಸಂತ್‌ಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಕಮಿಷನರ್ ಆದೇಶ ಹೊರಡಿಸಿದ್ದಾರೆ.

'ಆರೋಪಿಗಳು ಪಾಸ್‌ಪೋರ್ಟ್ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದರು. ವಿಳಾಸ ಪರಿಶೀಲನೆ ವೇಳೆ ಪೊಲೀಸರನ್ನು ಭೇಟಿಯಾಗುತ್ತಿದ್ದ ಆರೋಪಿಗಳು, ಯಾರದ್ದೂ ಮನೆ ತೋರಿಸಿ ತಮ್ಮದೇ ಮನೆ ಎಂದು ಫೋಟೊ ತೆಗೆಸಿಕೊಳ್ಳುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಸೂಕ್ತ ರೀತಿಯಲ್ಲಿ ದಾಖಲೆ ಪರಿಶೀಲನೆ ನಡೆಸದೇ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದರು. ವಿಳಾಸ ತಪ್ಪಿದ್ದರೂ ಸರಿ ಎಂಬುದಾಗಿ ಟ್ಯಾಬ್‌ನಲ್ಲಿ ನಮೂದಿಸಿದ್ದರು. ಅದು ನಿಜವೆಂದು ನಂಬಿ ಪಾಸ್‌ಪೋರ್ಟ್ ಅಧಿಕಾರಿಗಳು, ಆರೋಪಿಗಳಿಗೆ ಪಾಸ್‌ಪೋರ್ಟ್ ಮಂಜೂರು ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ರೇವಾ' ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ

ಹಿಂದಿ ಹೇರಬೇಡಿ: ವೆಂಕಯ್ಯ ನಾಯ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲವಂತವಾಗಿ ಯಾರ ಮೇಲೂ ಹಿಂದಿಯನ್ನು ಹೇರಬಾರದು. ಮಾತೃ ಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಬೇಕು ಎಂದು ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಪ್ರತಿಪಾದಿಸಿದರು.

ಪ್ರೀಮಿಯರ್ ಶಿಕ್ಷಣ ಸಂಸ್ಥೆಯ 'ರೇವಾ' ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ದೇಶದ ಜನರು ವಸಾಹತುಶಾಹಿ ಮನಸ್ಥಿತಿಯಿಂದ ಹೊರಬರಬೇಕು. ಶಿಕ್ಷಣ ವ್ಯವಸ್ಥೆಯನ್ನು ಭಾರತೀಕರಣಗೊಳಿಸಬೇಕು. ಮಕ್ಕಳಿಗೆ ನಮ್ಮ ಪೂರ್ವಜರ ಕಥೆಗಳನ್ನು ಹೇಳಬೇಕು. ಭಾರತೀಯ ಸಂಸ್ಕೃತಿಯ ಅರಿವು ಮೂಡಿಸಬೇಕು. ನಮ್ಮ ಪರಂಪರೆ ಸಂರಕ್ಷಿಸುವುದು ಯುವ ಪೀಳಿಗೆಯ ಕರ್ತವ್ಯ. ಪದವಿಗಾಗಿ ಶಿಕ್ಷಣ ಎಂದು ಭಾವಿಸದೆ, ಜ್ಞಾನೋದಯ, ವರ್ಧನೆ ಮತ್ತು ಸಬಲೀಕರಣಕ್ಕಾಗಿ ಎನ್ನುವ ಸತ್ಯ ಅರಿಯಬೇಕು. ಪ್ರಸ್ತುತ ಜಾರಿಗೆ ಬರುತ್ತಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಇಂತಹ ಎಲ್ಲ ಆಶಯಗಳನ್ನು ಸಾಕಾರಗೊಳಿಸುವ ನಿರೀಕ್ಷೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರೇವಾ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ಸಮಾರಂಭಕ್ಕೆ ಬಂದ ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ರಾಜ್ಯಪಾಲ ಥಾವರಚಂದ್ ಗೆಹಲೋತ್

ರೇವಾ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಶ್ಯಾಮ ರಾಜು, ಪದವಿಯ ಹಾದಿಯಲ್ಲಿ ವಿದ್ಯಾರ್ಥಿಗಳು ತೋರಿದ ದೃಢತೆ, ತಾಳ್ಮೆ ಮೆಚ್ಚುಗೆ ಪಾತ್ರವಾಗಿದೆ. ರೇವಾ ಕೀರ್ತಿ ಹೆಚ್ಚಿಸಿದ್ದಾರೆ. ವಿಶ್ವವಿದ್ಯಾಲಯ ಶಿಕ್ಷಣದ ಜತೆಗೆ, ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ. ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಿದೆ. ಹಳ್ಳಿಗಳನ್ನು ದತ್ತುಪಡೆಯುವ ಮೂಲಕ ಮಾದರಿ ಹೆಜ್ಜೆ ಇಟ್ಟಿದೆ. ಹವಾಮಾನ ವೈಪರೀತ್ಯ ತಡೆಗೆ ಹಸಿರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಘಟಿಕೋತ್ಸವಕ್ಕೆ ಚಾಲನೆ ನೀಡಿದರು. ಸಹ ಕುಲಪತಿ ಉಮೇಶ್ ಎಸ್.ರಾಜು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಕೈಮಗ್ಗದಿಂದ ತಯಾರಿಸಿದ ಬಟ್ಟೆಗಳನ್ನು ಧರಿಸಿ ಗಮನ ಸೆಳೆದರು. ವಿವಿಧ ವಿಭಾಗಗಳ 52 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 50 ವಿದ್ಯಾರ್ಥಿಗಳಿಗೆ ಪಿ.ಎಚ್‌ಡಿ, 3,487 ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ, 1,094 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು.

'ಹೆಸರಘಟ್ಟ ಹುಲ್ಲುಗಾವಲು: ಆತಂಕ ಬೇಡ'

ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುವುದಿಲ್ಲ: ವನ್ಯಜೀವಿ ಮಂಡಳಿ ಸದಸ್ಯರ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸುವುದರಿಂದ ಸ್ಥಳೀಯರಿಗೆ ಅಥವಾ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲ ಎಂದು ವನ್ಯಜೀವಿ ಮಂಡಳಿ ಸದಸ್ಯರು ಪ್ರತಿಪಾದಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವ ಎಂಟು ಸದಸ್ಯರು, ಜೀವ ವೈವಿಧ್ಯಕ್ಕೆ ಖ್ಯಾತಿಯಾಗಿರುವ ಹೆಸರಘಟ್ಟ ಪ್ರದೇಶವನ್ನು ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ದೃಷ್ಟಿಯಿಂದ ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಹೆಸರಘಟ್ಟ ಹುಲ್ಲುಗಾವಲು ಪ್ರಮುಖ ಜಲಾಯನ ಪ್ರದೇಶವಾಗಿದೆ. ಜೀವ ವೈವಿಧ್ಯದ ಈ ಪ್ರದೇಶದಿಂದ ಹಲವು ಪ್ರಯೋಜನಗಳಾಗಿವೆ. ಇದು ಸಂಶೋಧನೆಗೂ ಮಹತ್ವದ ಸ್ಥಳವಾಗಿದೆ. ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸುವುದರಿಂದ ಈಗಿರುವ ಜನರ ಬದುಕಿನ ಮೇಲೆ ಯಾವುದೇ ರೀತಿಯ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಾತಿನಿಧಿಕ ಚಿತ್ರ

ಹುಲ್ಲುಗಾವಲು ಪ್ರದೇಶವನ್ನು ವ್ಯರ್ಥವಾದ ಜಾಗ ಎಂದು ಪರಿಗಣಿಸಬಾರದು. ಹುಲ್ಲುಗಾವಲು ಪ್ರದೇಶವು ಅರಣ್ಯದಷ್ಟೇ ಮಹತ್ವ ಹೊಂದಿದ್ದು, ಕಾರ್ಬನ್ ಹೀರಿಕೊಳ್ಳುತ್ತದೆ. ಈ ಮೂಲಕ ತಾಪಮಾನ ಹೆಚ್ಚುವುದು ಮತ್ತು ಹವಾಮಾನ ಬದಲಾವಣೆ ಕಡಿಮೆ ಮಾಡಲು ನೆರವಾಗುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ಈ ಹುಲ್ಲುಗಾವಲು ಪ್ರದೇಶವು 100ಕ್ಕೂ ಹೆಚ್ಚು ಪಕ್ಷಿಗಳ ತಾಣವಾಗಿದೆ. ಕೆಲವು ಅಳಿವಿನ ಅಂಚಿನಲ್ಲಿರುವ ಪಕ್ಷಿಗಳಿವೆ. ಈ ಪ್ರದೇಶದ ಸಂರಕ್ಷಣೆಯಿಂದ ಸ್ಥಳೀಯ ಜನರನ್ನು ಒಕ್ಕಲೆಬ್ಬಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಡೀ 5100 ಎಕರೆ ಪ್ರದೇಶವು ರಾಜ್ಯ ಸರ್ಕಾರಕ್ಕೆ ಸೇರಿದೆ ಮತ್ತು 3500 ಎಕರೆ ಪ್ರದೇಶದಲ್ಲಿ ಸರ್ಕಾರಿ ಸಂಸ್ಥೆಗಳಿವೆ. ಉಳಿದಿರುವ ಪ್ರದೇಶವು ಕೆರೆಯನ್ನು ಒಳಗೊಂಡಿದೆ. ಹೀಗಾಗಿ ಯಾರನ್ನು ಒಕ್ಕಲೆಬ್ಬಿಸುವುದಿಲ್ಲ. ಈಗಿರುವ ಎಲ್ಲ ಬಳಕೆದಾರರು ಮುಕ್ತವಾಗಿ ಈ ಪ್ರದೇಶವನ್ನು ಬಳಸಲು ಅವಕಾಶ ಕಲ್ಪಿಸಬಹುದಾಗಿದೆ. ಈಗಿರುವಂತೆ ಈ ಪ್ರದೇಶವನ್ನು ಬಳಸಬಹುದಾಗಿದೆ ಎಂದು ವಿವರಿಸಿದ್ದಾರೆ.

ಈ ಪ್ರದೇಶವು ಬೆಂಗಳೂರಿಗೆ 'ಜಲ ಭದ್ರತೆ' ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಜತೆಗೆ, ಕೃಷಿ ಉತ್ಪನ್ನಗಳ ಇಳುವರಿ ಹೆಚ್ಚಲಿದೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ವನ್ಯಜೀವಿ ಮಂಡಳಿ ಸಭೆಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸುವಂತೆ ಸೂಚಿಸಲಾಗಿತ್ತು.

'ನಿರ್ಬಂಧಗಳನ್ನು ವಿಧಿಸುವುದಿಲ್ಲ'

'ಮೀಸಲು ಸಂರಕ್ಷಿತ ಪ್ರದೇಶ ಘೋಷಣೆಯಾಗುವುದರಿಂದ ಸ್ಥಳೀಯರನ್ನು ಒಕ್ಕಲೆಬ್ಬಿಸುವುದಿಲ್ಲ. ಸಂರಕ್ಷಿತ ಪ್ರದೇಶವನ್ನು ನಿರ್ವಹಿಸುವಲ್ಲಿ ಸ್ಥಳೀಯ ಸಮುದಾಯಗಳಿಗೆ ಅವಕಾಶಗಳಿರುತ್ತವೆ. ರಾಜ್ಯ ಸರ್ಕಾರ ಸಂರಕ್ಷಣಾ ಮೀಸಲು ನಿರ್ವಹಣೆ ಸಮಿತಿ (ಸಿಆರ್‌ಎಂಸಿ) ಅನ್ನು ರಚಿಸಲಿದೆ' ಎಂದು ವನ್ಯಜೀವಿ ಮಂಡಳಿ ಸದಸ್ಯ ಸಿದ್ಧಾರ್ಥ ಗೋಯೆಂಕ್ ತಿಳಿಸಿದ್ದಾರೆ.

'ಈ ಪ್ರದೇಶದಲ್ಲಿ ಬಫರ್ ವಲಯ ಅಥವಾ ಪರಿಸರ ಸೂಕ್ಷ್ಮ ವಲಯ ಇರುವುದಿಲ್ಲ ಮತ್ತು ಹೊಸದಾಗಿ ಯಾವುದೇ ವನ್ಯಜೀವಿಗಳ ಸಾಕಾಣಿಕೆಗೆ ಅವಕಾಶ ಕಲ್ಪಿಸುವುದಿಲ್ಲ. ಈಗಿರುವ ಸ್ಥಳೀಯ ವಿವಿಧ ಜಾತಿಯ ಪ್ರಾಣಿ ಪಕ್ಷಿಗಳಿಗೆ ಮಾತ್ರ ನೆಲೆಯಾಗಲಿದ್ದು, ಸಂರಕ್ಷಣೆಗೆ ಆದ್ಯತೆ ದೊರೆಯಲಿದೆ' ಎಂದು ವಿವರಿಸಿದ್ದಾರೆ.

'ಸ್ಥಳೀಯರಿಗೆ ಸಾರ್ವಜನಿಕ ರಸ್ತೆ ಮತ್ತು ಇತರ ಮಾರ್ಗಗಳ ಬಳಸಲು ಅವಕಾಶ ಸಿಗಲಿದೆ. ರೈತರು ಮತ್ತು ಮೀನುಗಾರರ ಬದುಕಿಗೂ ಭದ್ರತೆ ದೊರೆಯಲಿದೆ. ಜಾನುವಾರುಗಳನ್ನು ಮೇಯಿಸಲು ಮತ್ತು ಮೀನು ಹಿಡಿಯಲು ನಿರ್ಬಂಧ ವಿಧಿಸಲಾಗುತ್ತದೆ ಎನ್ನುವ ಸುಳ್ಳು ಸುದ್ದಿ ಹಬ್ಬಿಸಲಾಗಿದೆ. ಸಂರಕ್ಷಣೆ ಮೀಸಲು ಪ್ರದೇಶದಲ್ಲಿ ಈಗಿರುವಂತೆ ಎಲ್ಲ ಚಟುವಟಿಕೆಗಳು ನಡೆಯಲಿದೆ' ಎಂದು ಅವರು ತಿಳಿಸಿದ್ದಾರೆ.

ಜಾರಕಿಹೊಳಿ ಪ್ರತಿಕೃತಿ ದಹಿಸಿ ಪ್ರತಿಭಟನೆ

ಬೆಂಗಳೂರು: 'ಹಿಂದೂ ಧರ್ಮದ ಬಗ್ಗೆ ಸತೀಶ ಜಾರಕಿಹೊಳಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ನಾನು ಸ್ವಾಭಿಮಾನಿ ಹಿಂದೂ' ಎಂಬ ಬರಹವುಳ್ಳ ಫಲಕ ಪ್ರದರ್ಶಿಸಿದ ಪ್ರತಿಭಟನಕಾರರು, ಸತೀಶ ಜಾರಕಿಹೊಳಿ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ್ದ ಪ್ರತಿಭಟನಾಕಾರರು, ಸತೀಶ ಜಾರಕಿಹೊಳಿ ಪ್ರತಿಕೃತಿಗೆ ಬೆಂಕಿ ಹಚ್ಚಿ ದಹಿಸಲು ಮುಂದಾದರು. ಸ್ಥಳದಲ್ಲಿದ್ದ ಪೊಲೀಸರು, ಬೆಂಕಿ ನಂದಿಸಿದರು. ಪ್ರತಿಭಟನೆ ಹೆಚ್ಚಾಗುತ್ತಿದ್ದಂತೆ ಕೆಲ ಕಾರ್ಯಕರ್ತರನ್ನು ವಶಕ್ಕೆ ಪಡೆದು, ಕೆಲ ಹೊತ್ತಿನ ಬಳಿಕ ಬಿಡುಗಡೆ ಮಾಡಿದರು.

'ಹಿಂದೂ ಪದಕ್ಕೆ ಕೆಟ್ಟ ಅರ್ಥವಿದೆ' ಎಂದಿರುವ ಹೇಳಿರುವ ಸತೀಶ ಜಾರಕಿಹೊಳಿ, ಧಾರ್ಮಿಕ ವೈಷಮ್ಯಕ್ಕೆ ಪ್ರಚೋದನೆ ನೀಡಿದ್ದಾರೆ. ಸನಾತನ ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ, ಜನರ ನಂಬಿಕೆಗಳಿಗೆ ಧಕ್ಕೆ ತಂದಿದ್ದಾರೆ. ಸತೀಶ ಅವರು ಕೂಡಲೇ ಕ್ಷಮೆ ಕೇಳಬೇಕು. ಇವರ ವಿರುದ್ಧ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹಾಕಿ ರನ್ನರ್ಸ್ ಅಪ್...

ಬೆಂಗಳೂರು ದಕ್ಷಿಣ ವಲಯ ಬಾಲಕಿಯರ ಹಾಕಿ ಟೂರ್ನಿಯಲ್ಲಿ ಜಿಲ್ಲಾಮಟ್ಟದಲ್ಲಿ ರನ್ನರ್ಸ್‌ಅಪ್ ಸ್ಥಾನ ಗಳಿಸಿದ ಕೆ.ಆರ್.ಪುರಂನ ಟಿ.ಸಿ. ಪಾಳ್ಯದಲ್ಲಿರುವ ಸಂತ ಅಂತೋಣಿ ಪ್ರೌಢಶಾಲೆಯ ತಂಡ: ಎಡದಿಂದ– ನಿಂತವರು: ಸಂಜನಾ, ಸರೋಜಾ, ಮಧುರಾ, ಪ್ರಿಯದರ್ಶಿನಿ, ಬೇಬಿ, ಕೀರ್ತನಿ, ನಿಹಾರಿಕಾ. ಕುರ್ಚಿ ಮೇಲೆ ಕುಳಿತವರು: ಪ್ರಶಾಂತ್ ಕುಮಾರ್ (ಪ್ರಾಂಶುಪಾಲರು), ಜಿ. ಅಂತೋಣಿ (ದೈಹಿಕ ಶಿಕ್ಷಣ ಶಿಕ್ಷಕ). ಕುಳಿತವರು:ಪ್ರಮಿಳಾ, ಕಾವ್ಯಾ, ಅಂಕಿತಾ

ಅಪಘಾತ: ಕಾರು ಚಾಲಕನ ವಿರುದ್ಧ ಎಫ್‌ಐಆರ್

ಬೆಂಗಳೂರು: ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದ ಆರೋಪದಡಿ ಚಾಲಕ ಅಕ್ಷಯ್ ಎಂಬುವವರ ವಿರುದ್ಧ ಬನಶಂಕರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರೋಪಿ ಅಕ್ಷಯ್, ನಟಿ ತಾರಾ ಹಾಗೂ ಅವರ ಪತಿ ವೇಣುಗೋಪಾಲ್ ಬಳಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅ. 29ರಂದು ನಡೆದಿದ್ದ ಅಪಘಾತದ ಸಂಬಂಧ ಬಿ.ವಿ. ಗಿರೀಶ್ ಎಂಬುವರು ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಗಿರೀಶ್, ಬನಶಂಕರಿ 3ನೇ ಹಂತದ ಕತ್ರಿಗುಪ್ಪೆ ಸಿಗ್ನಲ್‌ನಲ್ಲಿ ತಮ್ಮ ಕಾರು (ಕೆಎ 03 ಎಂಸಿ 42378) ನಿಲ್ಲಿಸಿದ್ದರು. ಅದೇ ಮಾರ್ಗವಾಗಿ ಬಂದಿದ್ದ ಚಾಲಕ ಅಕ್ಷಯ್, ನಿರ್ಲಕ್ಷ್ಯದಿಂದ ಕಾರು (ಕೆಎ 05 ಎಂಎನ್ 6226) ಚಲಾಯಿಸಿದ್ದ. ಇದರಿಂದಾಗಿ ಅಕ್ಷಯ್ ಕಾರು, ಗಿರೀಶ್ ಕಾರಿಗೆ ಡಿಕ್ಕಿ ಹೊಡೆದಿತ್ತು' ಎಂದು ತಿಳಿಸಿವೆ.

ಇಬ್ಬರು ಮಹಿಳೆಯರಿಗೆ ಗಾಯ: ಪೀಣ್ಯ ಪೊಲೀಸ್ ಠಾಣೆಯಲ್ಲಿ ದೂರು

ಕಾಂಗ್ರೆಸ್ ತರಬೇತಿ ಶಿಬಿರದಲ್ಲಿ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕಾಂಗ್ರೆಸ್ ವಿಜಯ್ ಸಂಕಲ್ಪ ಶಿಬಿರ ಕಾರ್ಯಾಗಾರದಲ್ಲಿ ಎರಡು ಬಣಗಳ ನಡುವೆ ಮಾರಾಮಾರಿ ನಡೆದು, ಇಬ್ಬರು ಮಹಿಳೆಯರು ಸೇರಿದಂತೆ ಐದಾರು ಮಂದಿ ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿರುವುದಲ್ಲದೆ ಪ್ರಕರಣ ಪೀಣ್ಯ ಪೊಲೀಸ್ ಠಾಣೆ ಮೆಟ್ಟಲೇರಿದೆ.

ಪೀಣ್ಯ ಎನ್ ಟಿಟಿಎಫ್ ಸರ್ಕಲ್ ಬಳಿ ಇರುವ ಜಿಮ್‌ಖಾನ ಕ್ಲಬ್‌ನಲ್ಲಿ ಪ್ರದೇಶ ಕಾಂಗ್ರೆಸ್ ವತಿಯಿಂದ ತಳಮಟ್ಟದ ನಾಯಕತ್ವವನ್ನು ರೂಪಿಸಲು ಸಂಪನ್ಮೂಲ ಅಭಿವರ್ಧಕರ ಮೂರು ದಿನಗಳ ತರಬೇತಿ ಕಾರ್ಯಕ್ರಮ ದಾಸರಹಳ್ಳಿ ಕಾಂಗ್ರೆಸ್ ಉಸ್ತುವಾರಿ ಡಾ.ನಾಗಲಕ್ಷ್ಮಿ ಚೌಧರಿ ನೇತೃತ್ವದಲ್ಲಿ ಯೋಜನೆಗೊಂಡಿತ್ತು.

ತರಬೇತಿ ಸಭಾಂಗಣಕ್ಕೆ ಕೆಪಿಸಿಸಿ ಸದಸ್ಯ ಪಿ.ಎನ್.ಕೃಷ್ಣಮೂರ್ತಿ ಬೆಂಬಲಿಗರೆನ್ನಲಾದ ಸುಮಾರು 20 ಜನರಿದ್ದ ಗುಂಪು ನುಗ್ಗಿತು. ಕ್ಷೇತ್ರದ ಹಿಂದಿನ ಚುನಾವಣೆ ಅಭ್ಯರ್ಥಿಯಾಗಿರುವ ಕೃಷ್ಣಮೂರ್ತಿ ಅವರಿಗೆ ಆಹ್ವಾನ ನೀಡಿಲ್ಲ ಎಂದು ಗಲಾಟೆ ಮಾಡಿತು. ಈ ಸಂದರ್ಭದಲ್ಲಿ ನಾಗಲಕ್ಷ್ಮಿ ಹಾಗೂ ಕೃಷ್ಣಮೂರ್ತಿ ಅವರ ಗುಂಪುಗಳ ನಡುವೆ ಮಾರಾಮಾರಿ ನಡೆದು ಹಲವರು ಗಾಯಗೊಂಡರು.

ಕಾಂಗ್ರೆಸಿನ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿರುವುದು

ಗಾಯಗೊಂಡ ಮಹಿಳೆ ಭಾರತಿ ಮತ್ತು ಗೀತಮ್ಮ

ಭಾರತಿ ಎಂಬುವರಿಗೆ ಕೃಷ್ಣಮೂರ್ತಿ ಹಿಂಬಾಲಕರು ಕೈ ತಿರುಚಿ ಬೂಟು ಗಾಲಿನಿಂದ ಹೊಟ್ಟೆಗೆ ಒದ್ದ ಪರಿಣಾಮ ಹೊಟ್ಟೆನೋವು ಕಾಣಿಸಿಕೊಂಡು ಸಪ್ತಗಿರಿ ಆಸ್ಪತ್ರೆಗೆ ದಾಖಲಾಗಿದ್ದರು. ಸ್ಕ್ಯಾನಿಂಗ್ ಮಾಡಿಸಲಾಗಿ ಪೆಟ್ಟು ಬಿದ್ದಿರುವುದಾಗಿ ತಿಳಿದುಬಂದಿದೆ. ಗೀತಾ ಎಂಬಾಕೆಯ ಕಾಲು ಬೆರಳುಗಳನ್ನು ಜಜ್ಜಲಾಗಿದೆ. ರಮೇಶ್ ಎಂಬುವವರು ಗಾಯಗೊಂಡಿದ್ದಾರೆ.

ಕೆ.ಸಿ.ಅಶೋಕ್, ನಾಗಭೂಷಣ್, ನಾಗಲಕ್ಷ್ಮಿ, ಎಬಿಬಿ ಮಂಜುನಾಥ್, ರವಿಕುಮಾರ್, ಬಿ.ಎಂ. ಜಗದೀಶ್ ಸೇರಿ ಅನೇಕ ಸ್ಥಳೀಯ ಮುಖಂಡರು ಮೂಕವಿಸ್ಮಿತರಾಗಿ ಗಲಭೆಯನ್ನು ನೋಡುತ್ತಿದ್ದರು.

ಗಲಭೆ ನಂತರ ಕಾರ್ಯಕ್ರಮಕ್ಕೆ ಬಂದ ಪಿ.ಎನ್. ಕೃಷ್ಣಮೂರ್ತಿ, ಕೆಲ ನಿಮಿಷ ಕುಳಿತರು. ಆಮೇಲೆ ತರಬೇತಿ ನಡುವೆಯೇ ಹೊರಹೋಗಿ ತಮ್ಮ ಬೆಂಬಲಿಗರೊಂದಿಗೆ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದರು. ಪೊಲೀಸರ ಸೂಚನೆ ಮೇರೆಗೆ ಮುಖಂಡೆ ನಾಗಲಕ್ಷ್ಮಿ ಹಾಗೂ ಇತರರು ಠಾಣೆಗೆ ತೆರಳಿ ಸಹ ದೂರು ದಾಖಲಿಸಿದರು.

ಡ್ರಗ್ಸ್ ಮಾರಾಟ: ಪ್ಯಾಲೆಸ್ಟಿನ್ ಪ್ರಜೆ ಬಂಧನ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಪ್ಯಾಲೆಸ್ಟಿನ್ ಪ್ರಜೆ ಹಸನ್ ಹಶೀಮ್‌ನನ್ನು (25) ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹ 25 ಲಕ್ಷ ಮೌಲ್ಯದ 320 ಗ್ರಾಂ ಎಂಡಿಎಂಎ ಹಾಗೂ ಮೊಬೈಲ್ ಜಪ್ತಿ ಮಾಡಿದ್ದಾರೆ.

ಗೂಂಡಾ ಕಾಯ್ದೆ: ರೌಡಿ ಸಹೋದರರ ಬಂಧನಕ್ಕೆ ಒಪ್ಪಿಗೆ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ರೌಡಿ ಸಹೋದರರಾದ ಸಂಜಯ್ ಹಾಗೂ ಸಾಗರ್ ಅವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಿದ್ದ ಪೊಲೀಸ್ ಕಮಿಷನರ್ ಕ್ರಮಕ್ಕೆ ನ್ಯಾಯಾಲಯದ ಸಲಹಾ ಮಂಡಳಿ ಅನುಮೋದನೆ ನೀಡಿದೆ.

'ಕಾಮಾಕ್ಷಿಪಾಳ್ಯ 4ನೇ ಮುಖ್ಯ ರಸ್ತೆಯ ನಿವಾಸಿ ಸಂಜಯ್ (28) ಹಾಗೂ ತಮ್ಮ ಸಾಗರ್ ಅಲಿಯಾಸ್ ವೀರು (26), ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಗೆ ಬಂದಿದ್ದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೊಲೆ ಯತ್ನ, ಸುಲಿಗೆ, ಅಪಹರಣ, ಹಲ್ಲೆ ಪ್ರಕರಣಗಳ ಆರೋಪಿಗಳಾದ ಸಹೋದರರನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಪ್ರತಾಪ್ ರೆಡ್ಡಿ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಅದನ್ನು ಪರಿಶೀಲಿಸಿದ್ದ ಕಮಿಷನರ್, ಇಬ್ಬರನ್ನೂ ಬಂಧಿಸಲು ಅನುಮತಿ ನೀಡಿ ಸೆ. 23ರಂದು ಆದೇಶ ಹೊರಡಿಸಿದ್ದರು.

ಹೈಕೋರ್ಟ್‌ನ ಜಮೇದಾರ್ ವಿರುದ್ಧ ಕ್ರಮಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಉದ್ಯೋಗಿ ಜಯರಾಮ್ ಎಂಬುವವರಿಗೆ ಹನಿಟ್ರ್ಯಾಪ್ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಬೇಕು' ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಮನವಿ ಮಾಡಲಾಗಿದೆ.

ಈ ಕುರಿತಂತೆ ರಿಜಿಸ್ಟ್ರಾರ್ ಜನರಲ್ ಬಿ. ಮುರಳೀಧರ ಪೈ ಅವರಿಗೆ ವಕೀಲ ಎನ್.ಪಿ.ಅಮೃತೇಶ್ ಲಿಖಿತ ಮನವಿ ಸಲ್ಲಿಸಿದ್ದಾರೆ.

'ಹೈಕೋರ್ಟ್ ಉದ್ಯೋಗಿಯಾದ ಜಮೇದಾರ್ ಜಯರಾಮ್ ತಮ್ಮ ಮೇಲೆ ಹನಿಟ್ರ್ಯಾಪ್ ನಡೆಸಲಾಗಿದೆ ಎಂದು ಆರೋಪಿಸಿ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ' ಎಂಬ ಅಂಶವನ್ನು ಉಲ್ಲೇಖಿಸಿದ್ದಾರೆ.

ದೂರಿನಲ್ಲಿ ಏನಿದೆ?

'ಜಯರಾಮ್ ನೀಡಿರುವ ದೂರಿನ ಅನುಸಾರ ಪೊಲೀಸರು 10 ಮಂದಿಯನ್ನು ಬಂಧಿಸಿದ್ದಾರೆ. ತಾನು ನ್ಯಾಯಮೂರ್ತಿಗಳಿಗೆ ಜಮೇದಾರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂಬ ಪ್ರಭಾವದಲ್ಲಿ ದುಬಾರಿ ಬಡ್ಡಿ ವಿಧಿಸಿ ಹಣಕಾಸಿನ ಲೇವಾದೇವಿ ವ್ಯವಹಾರವನ್ನು ರಾಜಾರೋಷವಾಗಿ ನಡೆಸುತ್ತಿದ್ದಾರೆ. ಇವರ ವಿರುದ್ಧ ದನಿ ಎತ್ತಿದ ನ್ಯಾಯಾಲಯದ ಕೆಲ ನೌಕರರ ವಿರುದ್ಧ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿ ಅವರನ್ನು ಜೈಲಿಗೆ ಕಳುಹಿಸಿರುವ ಘಟನೆಗಳೂ ಇವೆ. ಇದರಿಂದಾಗಿ ಮೂರ್ನಾಲ್ಕು ಜನ ಹೈಕೋರ್ಟ್ ಉದ್ಯೋಗಿಗಳು ನೌಕರಿ ಕಳೆದುಕೊಂಡಿದ್ದಾರೆ. ಸದ್ಯದ ಪ್ರಕರಣ ನ್ಯಾಯಾಲಯದ ಘನತೆಗೆ ಧಕ್ಕೆ ಉಂಟು ಮಾಡಿದೆ. ಆದ್ದರಿಂದ, ಜಯರಾಮ್ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು' ಎಂದು ಅಮೃತೇಶ್ ಕೋರಿದ್ದಾರೆ.

ಮೂಗು, ಕಿವಿ, ಶ್ವಾಸನಾಳ, ಅನ್ನನಾಳ, ತುಟಿ, ಗದ್ದವನ್ನು ತಯಾರಿಸಬಹುದು

ತ್ರೀಡಿ ತಂತ್ರಜ್ಞಾನದಿಂದ ಕೃತಕ ಸ್ತನ ಅಭಿವೃದ್ಧಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಯೊಬ್ಬ ವ್ಯಕ್ತಿಯೂ ಅನನ್ಯ. ಹಾಗೆಯೇ ಆಕೆ ಅಥವಾ ಆತನ ದೇಹವೂ; ವ್ಯಕ್ತಿಯ ಸೌಂದರ್ಯದ ವೃದ್ಧಿಗೆ ಕೃತಕ ಅಂಗಾಂಗಗಳನ್ನು ತಯಾರಿಸುವ ಆಧುನಿಕ ತ್ರೀಡಿ ಪ್ರಿಂಟಿಂಗ್ ತಂತ್ರಜ್ಞಾನವೂ ನೆರವಿಗೆ ಬಂದಿದೆ.

ಸಿಲಿಕೋದಿಂದ ಮಾಡಿದ ಕೃತಕ ಅಂಗಗಳು ಮತ್ತು ಅಳವಡಿಕೆಗಳನ್ನು (ಇಂಪ್ಲಾಂಟ್) ಬೆಂಗಳೂರು ಮೂಲದ 'ಪ್ರಯಸ್ತ' ಎಂಬ ನವೋದ್ಯಮವು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಕೈ ಹಾಕಿದೆ. ಇದೇ ಮೊದಲ ಬಾರಿಗೆ ತ್ರೀಡಿ ಪ್ರಿಂಟರ್ ಮೂಲಕ ವೈಯಕ್ತೀಕರಿಸಿದ (ಪರ್ಸನಲೈಸ್ಡ್) ಕೃತಕ ಸ್ತನವನ್ನು ಅಭಿವೃದ್ಧಿಪಡಿಸಿದೆ. ಇದರ ಬಳಕೆಗೆ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಒಪ್ಪಿಗೆ ನೀಡಿದೆ.

ಮುಖ್ಯಾಂಶಗಳು

- 'ಪ್ರಯಸ್ತ' ಎಂಬ ನವೋದ್ಯಮದಿಂದ ಅಭಿವೃದ್ಧಿ
- ಇದರ ಬಳಕೆಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ (ಐಐಎಸ್‌ಸಿ) ಒಪ್ಪಿಗೆ

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ 'ಸೆಂಟರ್ ಫಾರ್ ಬಯೋಸಿಸ್ಟಮ್ಸ್ ಸೈನ್ಸ್ ಅಂಡ್ ಎಂಜಿನಿಯರಿಂಗ್' ವಿಭಾಗದಲ್ಲಿರುವ ಸಿಲಿಮ್ಯಾಕ್ ವಿಶೇಷ ಪ್ರಿಂಟರ್ ಮೂಲಕ ತ್ರೀಡಿ ಪ್ರಿಂಟೆಡ್ ಅಳವಡಿಕೆ ಮತ್ತು ಕೃತಕ ಅಂಗಗಳನ್ನು ತಯಾರಿಸಬಹುದಾಗಿದೆ. ವೈಯಕ್ತೀಕರಿಸಿದ ಕೃತಕ ಅಂಗದಲ್ಲಿ ಆಯಾ ವ್ಯಕ್ತಿಯ ಆಕಾರ, ಗಾತ್ರ, ಬಾಹ್ಯ ತಿರುವುಗಳು, ತೂಕ ಮತ್ತು ಸ್ಪರ್ಶಕ್ಕೆ ಅನುಗುಣವಾಗಿಯೇ ಇರುತ್ತದೆ.

'ಪ್ರಯಸ್ತ' ನವೋದ್ಯಮದ ಸಹ ಸಂಸ್ಥಾಪಕ ವಿಕಾಸ್ ಗರ್ಗ್ ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿ, ಮುಂದಿನ ಎರಡು ಅಥವಾ ಮೂರು ವರ್ಷಗಳಲ್ಲಿ ಕೃತಕ ಸ್ತನ ತಯಾರಿಕೆ ತಂತ್ರಜ್ಞಾನವನ್ನು ವಾಣಿಜ್ಯ ಉದ್ದೇಶಕ್ಕೆ ಬಿಡುಗಡೆ ಮಾಡಲಾಗುವುದು. ಕೃತಕ ಅಂಗಗಳ ತಯಾರಿಕೆ ಸೇರಿ ಇತರ ಅನ್ವಯಗಳಿಗೂ ಇನ್ನು ಒಂದು ವರ್ಷದಲ್ಲಿ ಬಳಸಬಹುದಾಗಿದೆ ಎಂದು ಹೇಳಿದರು.

ಸಾಂಪ್ರದಾಯಿಕ ವಿಧಾನದಲ್ಲಿ ಸಿಲಿಕಾನ್ ಅಳವಡಿಕೆ ಸಿದ್ಧಪಡಿಸಲು ಸಾಧ್ಯವಾಗದು ಎಂಬ ಕಾರಣಕ್ಕೆ 2017ರಲ್ಲಿ ತ್ರೀಡಿ ಪ್ರಿಂಟಿಂಗ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಯಿತು. ಮೊದಲಿಗೆ ಕೃತಕ ಸ್ತನ ತಯಾರಿಕೆ ಕೈಗೆತ್ತಿಕೊಳ್ಳಲಾಯಿತು. ದೇಹಕ್ಕೆ ಅಳವಡಿಸಿದ ಬಳಿಕ ಹರಿದು ಹೋಗದ ಮತ್ತು ಇತರ ಯಾವುದೇ ಸಮಸ್ಯೆಗಳು ಉದ್ಭವ ಆಗದಿರುವುದನ್ನು ಖಾತರಿಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಅಲ್ಲದೇ ಮೂಗು, ಕಿವಿ, ಶ್ವಾಸನಾಳ, ಅನ್ನನಾಳ, ತುಟಿ, ಗದ್ದವನ್ನೂ ತ್ರೀಡಿ ಪ್ರಿಂಟಿಂಗ್ ಮೂಲಕ ಕೃತಕವಾಗಿ ತಯಾರಿಸಿ ಅಳವಡಿಸುವ ಸಾಮರ್ಥ್ಯವನ್ನು ಈ ತಂತ್ರಜ್ಞಾನ ಹೊಂದಿದೆ ಎಂದರು.

ವೈಯಕ್ತೀಕರಿಸಿದ ಕೃತಕ ಅಂಗಗಳು ಮತ್ತು ಅಳವಡಿಕೆಗಳು ಆಯಾ ವ್ಯಕ್ತಿಯ ದೇಹ ರಚನೆಗೆ ತಕ್ಕಂತೆ ರೂಪಿಸಲಾಗುವುದು. ಇಲ್ಲವಾದರೆ, ವ್ಯಕ್ತಿಯ ಅಂಗರಚನೆಗೆ ಸರಿ ಹೊಂದದೇ ಸಮಸ್ಯೆ ಆಗುವ ಸಾಧ್ಯತೆಯೇ ಹೆಚ್ಚು. ತ್ರೀಡಿ ಪ್ರಿಂಟಿಂಗ್ ತಂತ್ರಜ್ಞಾನವು ಆ ಸಮಸ್ಯೆಯನ್ನು ನಿವಾರಿಸುತ್ತದೆ ಎಂದು ಅವರು ಹೇಳಿದರು.

ಬ್ಯಾಂಕ್‌ಗಳಿಗೆ ಬೇಕಾಗಿದ್ದಾರೆ ಸ್ಪೆಷಲ್ ಆಫೀಸರ್ಸ್

ದೇಶದ ವಿವಿಧ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ವಿಶೇಷ ಅಧಿಕಾರಿಗಳ ಹುದ್ದೆಗಳ ಭರ್ತಿಗಾಗಿ ಐಬಿಪಿಎಸ್ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆಯ ವಿವರ ಇಲ್ಲಿದೆ.

ಆರ್ ಕೆ ಬಾಲಚಂದ್ರ

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗಾಗಿ ಮೂರ್ನಾಲ್ಕು ತಿಂಗಳುಗಳಿಂದ ನಿರಂತರವಾಗಿ ಅರ್ಜಿ ಆಹ್ವಾನ ಮತ್ತು ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಈ ಸಂಬಂಧ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್) ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸುತ್ತಾ, ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ತೊಡಗಿದೆ.

ಈಗ ಅದೇ ಐಬಿಪಿಎಸ್ ಸಂಸ್ಥೆ ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳ ಆರು ವಿಭಾಗಗಳಲ್ಲಿ ಖಾಲಿಯಿರುವ 710 ವಿಶೇಷ ಅಧಿಕಾರಿಗಳ (ಸ್ಪೆಷಲ್ ಆಫೀಸರ್ಸ್) ಹುದ್ದೆಗಳ ಭರ್ತಿಗೆ ಚಾಲನೆ ನೀಡಿದೆ. ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಯಾವ ಬ್ಯಾಂಕ್, ಯಾವ ವಿಭಾಗ, ಎಷ್ಟು ಹುದ್ದೆಗಳು– ಈ ಕುರಿತ ಮಾಹಿತಿ ಇಲ್ಲಿದೆ.

ಕ್ರ.ಸಂ	ಯಾವ ವಿಭಾಗ	ಎಷ್ಟು ಹುದ್ದೆ
1	ಐಟಿ- ಆಫೀಸರ್	44
2	ಕೃಷಿ ಕ್ಷೇತ್ರಾಧಿಕಾರಿ	516
3	ರಾಜ್‌ಭಾಷಾ ಅಧಿಕಾರಿ	25
4	ಲಾ ಆಫೀಸರ್	10
5	ಎಚ್‌ಆರ್/ಪರ್ಸನಲ್ ಆಫೀಸರ್	15
6	ಮಾರ್ಕೆಟಿಂಗ್ ಆಫೀಸರ್	100
	ಒಟ್ಟು	710

ಅರ್ಜಿ ಸಲ್ಲಿಕೆ ವಿವರ

ಐಬಿಪಿಎಸ್ ಅಧಿಕೃತ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸಬೇಕು. ನವೆಂಬರ್ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ನ.21 ಅರ್ಜಿ ಸಲ್ಲಿಸಲು ಕೊನೇ ದಿನ.

ಅರ್ಜಿ ಸಲ್ಲಿಸುವ ಜೊತೆ ಶುಲ್ಕ ಪಾವತಿಸಬೇಕು. ಸಾಮಾನ್ಯ, ಒಬಿಸಿ ಹಾಗೂ ಇತರ ಅಭ್ಯರ್ಥಿಗಳಿಗೆ ₹850, ಪ.ಜಾ, ಪ.ಪಂ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹಾಗೂ ಮಾಜಿ ಯೋಧರಿಗೆ ₹ 175 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಕೆಗೆ ನೋಂದಣಿ ಮಾಡಿಕೊಂಡ ನಂತರ ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/ ಇಂಟರ್ನೆಟ್ ಬ್ಯಾಂಕಿಂಗ್ / ಆನ್‌ಲೈನ್ ಮೂಲಕ ಅರ್ಜಿ ಶುಲ್ಕ ಪಾವತಿಸಬೇಕು.

ವಯೋಮಿತಿ: ಕನಿಷ್ಠ 20 ವರ್ಷ ಹಾಗೂ ಗರಿಷ್ಠ 30 ವರ್ಷಗಳು. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು ಹಾಗೂ ಅಂಕವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳಷ್ಟು ವಯೋಮಿತಿ ಸಡಿಲಿಕೆ ಇದೆ.

ಪರೀಕ್ಷಾ ಪ್ರಕ್ರಿಯೆ

ಎರಡು ಹಂತಗಳ ಲಿಖಿತ ಪರೀಕ್ಷೆ ಇದೆ. ಆನ್‌ಲೈನ್ ಮೂಲಕ ಪರೀಕ್ಷೆ ನಡೆಯಲಿದೆ. ಡಿ.24 ಅಥವಾ 31ರಂದು ಪೂರ್ವಭಾವಿ ಪರೀಕ್ಷೆ, ಜ.29, 2023ರಂದು ಮುಖ್ಯ ಪರೀಕ್ಷೆ ನಡೆಯಲಿದೆ. ಮೂರನೇ ಹಂತವೇ ಸಂದರ್ಶನ. ಅದು 2023ರ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ನಿಗದಿಯಾಗಿದೆ.

ಪರೀಕ್ಷಾ ಕೇಂದ್ರಗಳು: ಪೂರ್ವಭಾವಿ ಪರೀಕ್ಷೆಯು ಬೆಳಗಾವಿ, ಬೆಂಗಳೂರು, ಬೀದರ್, ಕಲಬುರಗಿ, ಹುಬ್ಬಳ್ಳಿ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ನಡೆಯಲಿದೆ. ಮುಖ್ಯ ಪರೀಕ್ಷೆಯು ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಮಾತ್ರ ನಡೆಯುತ್ತದೆ.

ನೇಮಕಾತಿ ವಿಧಾನ ಹೇಗೆ ?

ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹರಾಗುವ ಅಭ್ಯರ್ಥಿಗಳನ್ನು ಶಾರ್ಟ್ ಲಿಸ್ಟ್ ಮಾಡಿ, ಮುಖ್ಯಪರೀಕ್ಷೆ ಬರೆಯಲು ಅನುಮತಿ ನೀಡಲಾಗುತ್ತದೆ. ಎರಡೂ ಪರೀಕ್ಷೆಗಳಲ್ಲೂ ಋಣಾತ್ಮಕ ಮೌಲ್ಯಮಾಪನವಿದೆ. ಪರೀಕ್ಷೆಗಳು ಇಂಗ್ಲಿಷ್/ ಹಿಂದಿ ಭಾಷೆಯಲ್ಲಿರಲಿದೆ.ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಒಬ್ಬ ಅಭ್ಯರ್ಥಿ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿರುತ್ತಾರೆ.

ಯಾವ್ಯಾವ ಬ್ಯಾಂಕ್‌ಗಳಲ್ಲಿ ಹುದ್ದೆ?

- ಬ್ಯಾಂಕ್ ಆಫ್ ಬರೋಡ
- ಬ್ಯಾಂಕ್ ಆಫ್ ಮಹಾರಾಷ್ಟ್ರ,
- ಬ್ಯಾಂಕ್ ಆಫ್ ಇಂಡಿಯಾ
- ಕೆನರಾ ಬ್ಯಾಂಕ್
- ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
- ಇಂಡಿಯನ್ ಬ್ಯಾಂಕ್
- ಇಂಡಿಯನ್ ಓವರಸೀಸ್ ಬ್ಯಾಂಕ್
- ಪಂಜಾಬ್ ನ್ಯಾಷನಲ್ ಬ್ಯಾಂಕ್
- ಪಂಜಾಬ್ ಆ್ಯಂಡ್ ಸಿಂದ್ ಬ್ಯಾಂಕ್
- ಯೂಕೋ ಬ್ಯಾಂಕ್
- ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಶೈಕ್ಷಣಿಕ ಅರ್ಹತೆಗಳೇನು?

ಸರ್ಕಾರದಿಂದ ಮಾನ್ಯತೆ ಪಡೆದಿರುವ ಯಾವುದೇ ವಿಶ್ವವಿದ್ಯಾಲಯ/ ಸಂಸ್ಥೆಯಲ್ಲಿ ಹುದ್ದೆಗಳಿಗೆ ಅನುಗುಣವಾಗಿ ಪದವಿ/ಸ್ನಾತಕೋತ್ತರ ಪದವಿ ಪಡೆದಿರಬೇಕು. ವಿವರ ಈ ಕೆಳಕಂಡಂತಿದೆ.

1. ಐಟಿ ಆಫೀಸರ್ ಹುದ್ದೆ: ಕಂಪ್ಯೂಟರ್ ಸೈನ್ಸ್/ ಕಂಪ್ಯೂಟರ್ ಅಪ್ಲಿಕೇಷನ್/ ಇನ್ಫರ್ಮೇಷನ್ ಟೆಕ್ನಾಲಜಿ/ ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿ ಕಮ್ಯುನಿಕೇಷನ್/ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್/ಎಲೆಕ್ಟ್ರಾನಿಕ್ಸ್ ಆ್ಯಂಡ್ ಇನ್‌ಸ್ಟ್ರುಮೆಂಟೇಷನ್‌ನಲ್ಲಿ ನಾಲ್ಕು ವರ್ಷಗಳ ಎಂಜಿನಿಯರಿಂಗ್ ಅಥವಾ ಟೆಕ್ನಾಲಜಿ ಪದವಿ ಪಡೆದಿರಬೇಕು ಅಥವಾ ಎಲೆಕ್ಟ್ರಾನಿಕ್ಸ್ / ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿಕಮ್ಯುನಿಕೇಷನ್ / ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್/ ಎಲೆಕ್ಟ್ರಾನಿಕ್ಸ್ ಆ್ಯಂಡ್ ಇನ್ಸ್ಟ್ರುಮೆಂಟೇಶನ್/ ಕಂಪ್ಯೂಟರ್ ಸೈನ್ಸ್/ ಇನ್ಫರ್ಮೇಶನ್ ಟೆಕ್ನಾಲಜಿ/ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

2. ಅಗ್ರಿಕಲ್ಚರ್ ಫೀಲ್ಡ್ ಆಫೀಸರ್: ಕೃಷಿ, ತೋಟಗಾರಿಕೆ /ಪಶುಸಂಗೋಪನೆ / ಪಶು ವಿಜ್ಞಾನ/ ಡೇರಿ ಸೈನ್ಸ್/ ಅಗ್ರಿ ಎಂಜಿನಿಯರಿಂಗ್/ ಮೀನುಗಾರಿಕೆ / ಮೀನು ಸಾಕಣೆ, ಅಗ್ರಿ ಮಾರ್ಕೆಟಿಂಗ್ ಆ್ಯಂಡ್ ಕೋ ಆಪರೇಷನ್/ ಕೋ ಆಪರೇಷನ್ ಆ್ಯಂಡ್ ಬ್ಯಾಂಕಿಂಗ್ / ಅಗ್ರೊ ಫಾರೆಸ್ಟ್ರಿಯಲ್ಲಿ ನಾಲ್ಕು ವರ್ಷಗಳ ಪದವಿ ಪಡೆದಿರಬೇಕು.

3. ಲಾ ಆಫೀಸರ್: ಕಾನೂನು ಪದವಿ ಪಡೆದಿರಬೇಕು ಮತ್ತು ಬಾರ್ ಕೌನ್ಸಿಲ್‌ನ ಸದಸ್ಯತ್ವ ಪಡೆದಿರಬೇಕು.

4. ರಾಜ್‌ಭಾಷಾ ಅಧಿಕಾರಿ: ಹಿಂದಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಜೊತೆಗೆ ಪದವಿಯಲ್ಲಿ ಇಂಗ್ಲಿಷ್ ಅನ್ನು ಒಂದು ವಿಷಯವಾಗಿ ಅಭ್ಯಾಸ ಮಾಡಿರಬೇಕು ಅಥವಾ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಜೊತೆಗೆ ಪದವಿಯಲ್ಲಿ ಇಂಗ್ಲಿಷ್ ಮತ್ತು ಹಿಂದಿಯನ್ನು ವಿಷಯವಾಗಿ ಅಭ್ಯಾಸ ಮಾಡಿರಬೇಕು.

5. ಎಚ್ ಆರ್ / ಪರ್ಸನಲ್ ಆಫೀಸರ್
ಪದವೀಧರರಾಗಿರಬೇಕು ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್/ಇಂಡಸ್ಟ್ರಿಯಲ್ ರಿಲೇಷನ್ಸ್ ಎಚ್‌ಆರ್/ ಎಚ್‌ಆರ್‌ಡಿ/ ಸೋಷಿಯಲ್ ವರ್ಕ್/ ಕಾರ್ಮಿಕ ಕಾನೂನು ಇದ್ಯಾವುದಾದರೂ ವಿಷಯದಲ್ಲಿ ಪೂರ್ಣಾವಧಿಯ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೊಮಾ ಮಾಡಿರಬೇಕು.

6. ಮಾರ್ಕೆಟಿಂಗ್ ಆಫೀಸರ್:
ಪದವೀಧರರಾಗಿರಬೇಕು ಮತ್ತು ಪೂರ್ಣಾವಧಿ ಎಂಎಂಎಸ್ (ಮಾರ್ಕೆಟಿಂಗ್) ಎಂಬಿಎ (ಮಾರ್ಕೆಟಿಂಗ್)/ಪಿಜಿಡಿಬಿಎ ಮಾಡಿರಬೇಕು.

ಅಧಿಸೂಚನೆಗಾಗಿ https://bit.ly/3frUh70 ಮಾಹಿತಿ ಹಾಗೂ ಅರ್ಜಿ ಸಲ್ಲಿಕೆಗೆ www.ibps.in ಭೇಟಿ ನೀಡಬಹುದು.

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು, ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

(ಮುಂದಿನವಾರ: ನೇಮಕಾತಿ ಪ್ರಕ್ರಿಯೆ, ಪರೀಕ್ಷಾ ಪಠ್ಯಕ್ರಮದ ವಿವರ)

ನ್ಯಾನೊ ಯೂರಿಯಾ ರಸಗೊಬ್ಬರ ಕ್ಷೇತ್ರದಲ್ಲೊಂದು ಹೊಸ ಹೆಜ್ಜೆ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ

ಯು.ಟಿ. ಆಯಿಶ ಫರ್ಝಾನ

ದ್ರವರೂಪಿ ನ್ಯಾನೊ ಯೂರಿಯಾವನ್ನು ಉತ್ಪಾದಿಸುವ ಮೂಲಕ ಭಾರತ, ರಸಗೊಬ್ಬರ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುವತ್ತ ವೇಗವಾಗಿ ಹೆಜ್ಜೆ ಹಾಕುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ತಿಳಿಸಿದ್ದಾರೆ.

ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ 'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಸಮ್ಮೇಳನ 2022'ರಲ್ಲಿ ಮಾತನಾಡಿದ ಅವರು, 'ನ್ಯಾನೊ ಯೂರಿಯಾ, ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆಗೆ ನೆರವಾಗುವ ರಸಗೊಬ್ಬರವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ದ್ರವರೂಪಿ ಗೊಬ್ಬರದ ಪ್ರಯೋಜನಗಳ ಕುರಿತ ಮಾತನಾಡಿರುವ ಅವರು 'ಹರಳು ರೂಪದಲ್ಲಿರುವ ಒಂದು ಚೀಲ ಯೂರಿಯಾದ ಜಾಗದಲ್ಲಿ ಒಂದು ಶೀಷೆಯಷ್ಟು (500 ಎಂ.ಎಲ್) ದ್ರವರೂಪದ ನ್ಯಾನೊ ಯೂರಿಯಾವನ್ನು ಬಳಸಬಹುದು. ಈ ಮೂಲಕ ಯೂರಿಯಾದ ಸಾಗಾಣಿಕಾ ವೆಚ್ಚವು ಗಣನೀಯವಾಗಿ ಕಡಿಮೆಯಾಗಲಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಏನಿದು ನ್ಯಾನೊ ಯೂರಿಯಾ ?

- ದೇಶದಲ್ಲಿ ನ್ಯಾನೊ ಯೂರಿಯಾ ಉತ್ಪಾದನೆಗೆ ಉತ್ತೇಜನ ನೀಡುವ ಸಲುವಾಗಿ ಗುಜರಾತ್‌ನ ಕಲೋಲ್‌ನ, ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋಆಪರೇಟಿವ್ ಲಿಮಿಟೆಡ್‌ನಲ್ಲಿ (IFFCO) ನಿರ್ಮಿಸಲಾದ ದೇಶದ ಮೊದಲ ನ್ಯಾನೊ ಯೂರಿಯಾ (ದ್ರವ) ಘಟಕವನ್ನು ಪ್ರಧಾನಿಯವರು ಇತ್ತೀಚೆಗೆ ಉದ್ಘಾಟಿಸಿದ್ದರು.
- ನೀರಿನಲ್ಲಿ ಕರಗುವ ಈ ನ್ಯಾನೊ ಯೂರಿಯಾದಲ್ಲಿ 20 ರಿಂದ 50 ಎನ್ ಎಂ ಗಾತ್ರದ ನ್ಯಾನೊ ಸಾರಜನಕ ಕಣಗಳಿರುತ್ತವೆ. 500 ಮಿಲಿ ಲೀಟರ್ ಒಂದು ಬಾಟಲಿ ನ್ಯಾನೊ ಯೂರಿಯಾದಲ್ಲಿ 40,000 ಪಿಪಿಎಂನಷ್ಟು ಸಾರಜನಕ ಅಂಶಗಳಿರುತ್ತವೆ. ಒಂದು ಚೀಲದಷ್ಟು ಯೂರಿಯಾದಿಂದ ಸಿಗಬಹುದಾದ ಸಾರಜನಕ ಪೋಷಕಾಂಶಕ್ಕೆ ಸಮನಾಗಿರುತ್ತದೆ.
- ಭಾರತ ಸರ್ಕಾರ, ಇಫ್ಕೊ ಸಂಸ್ಥೆಯ ಈ ದ್ರವರೂಪಿ ಯೂರಿಯಾವನ್ನು ಮಾತ್ರ ನ್ಯಾನೊ ಗೊಬ್ಬರ ಎಂದು ಅನುಮೋದಿಸಿದೆ. ಹಾಗೆಯೇ, ರಸಗೊಬ್ಬರ ನಿಯಂತ್ರಣ ಆದೇಶದಲ್ಲಿ ನ್ಯಾನೊ ಯೂರಿಯಾ ಸೇರ್ಪಡೆಯಾಗಿದೆ. ಇದೇ ಹೆಸರಿನಲ್ಲಿಯೇ 'ಪೇಟೆಂಟ್' ಕೂಡ ಇದೆ.
- ಭಾರತೀಯ ಕೃಷಿ ಸಂಶೋಧನಾ ಮಂಡಳಿ(ಐಸಿಎಆರ್), ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ವಿಶ್ವವಿದ್ಯಾಲಯಗಳು ಹಾಗೂ ದೇಶದ ಪ್ರಗತಿಪರ ರೈತರ ಸಹಯೋಗದೊಂದಿಗೆ ದೇಶದಾದ್ಯಂತ 90ಕ್ಕೂ ಹೆಚ್ಚು ಬೆಳೆಗಳ ಮೇಲೆ ಸುಮಾರು 11,000 ರೈತರ ಭೂಮಿಗಳಲ್ಲಿ ನ್ಯಾನೊ ಯೂರಿಯಾ ಬಳಕೆ ಮಾಡಿ ಪರೀಕ್ಷಿಸಲಾಗಿದೆ. ಇಳುವರಿಯಲ್ಲಿ ಸರಾಸರಿ ಶೇ 8ರಷ್ಟು ಹೆಚ್ಚಳವಾಗಿರುವುದು ಫಲಿತಾಂಶಗಳಿಂದ ತಿಳಿದು ಬಂದಿದೆ.
- ಎಲೆಗಳ ಮೇಲೆ ಸಿಂಪಡಿಸಿದ ದ್ರವರೂಪಿ ಗೊಬ್ಬರವು ಸಸ್ಯದ ಸ್ಟೊಮೆಟಾ ಹಾಗೂ ಇತರ ಭಾಗಗಳ ಮೂಲಕ ಸಸ್ಯವನ್ನು ಪ್ರವೇಶಿಸುತ್ತದೆ. ಬಳಕೆಯಾಗದ ಸಾರಜನಕವನ್ನು ಸಸ್ಯದ ಕೆಲ ಭಾಗದಲ್ಲಿ ಸಂಗ್ರಹಿಸಿ ನಂತರ ನಿಧಾನವಾಗಿ ಅಗತ್ಯ ಭಾಗಗಳಿಗೆ ಬಿಡುಗಡೆಯಾಗುತ್ತದೆ. ಶೇ 80 ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಾರಜನಕವು ಬೆಳೆಗೆ ತಲುಪುತ್ತದೆ.

ಪ್ರಯೋಜನಗಳು :

1. **ಬೆಳೆ ಇಳುವರಿ :** ನ್ಯಾನೊ ಯೂರಿಯಾ ಬಳಕೆಯಿಂದ ಬೆಳೆ ಇಳುವರಿ ಹೆಚ್ಚಾಗುತ್ತದೆ. ಪತ್ರಹರಿತ್ತು (ಕ್ಲೋರೊಫಿಲ್) ಹೆಚ್ಚಾಗಿ ಎಲೆಗಳಲ್ಲಿ ಸರಾಗವಾಗಿ ದ್ಯುತಿಸಂಶ್ಲೇಷಣೆ (ಆಹಾರ ತಯಾರಿಕೆ ಪ್ರಕ್ರಿಯೆ) ಕ್ರಿಯೆ ನಡೆಯಲು ಸಹಾಯವಾಗುತ್ತದೆ. ಇದು ಬೆಳೆಗಳಲ್ಲಿ ಇಳುವರಿ ಹೆಚ್ಚಲು ಕಾರಣವಾಗುತ್ತದೆ.
   - 2019-20ರ ಅವಧಿಯಲ್ಲಿ ಭಾರತದಾದ್ಯಂತ ನಡೆಸಿದ 11,000 ಕ್ಷೇತ್ರ ಪ್ರಯೋಗಗಳ ಫಲಿತಾಂಶದ ಪ್ರಕಾರ, ನ್ಯಾನೊ ಯೂರಿಯಾ ಬಳಸಿದ ಜಮೀನುಗಳಲ್ಲಿ ಸರಾಸರಿ ಶೇ 8 ವರೆಗೆ ಬೆಳೆ ಇಳುವರಿ ಹೆಚ್ಚಳವಾಗಿದೆ.
2. **ರೈತರ ಆದಾಯ :** ಕೃಷಿಯಲ್ಲಿ ಒಳಸುರಿಯ (input- ಗೊಬ್ಬರ ಇತ್ಯಾದಿ ವಸ್ತುಗಳು) ಮೇಲೆ ಹೂಡುವ ಬಂಡವಾಳ ಕಡಿಮೆಯಾಗುತ್ತದೆ. ಗುಣಮಟ್ಟದ ಬೆಳೆ ಉತ್ಪಾದನೆಯ ಜೊತೆಗೆ, ಇಳುವರಿಯೂ ಹೆಚ್ಚಾಗುತ್ತದೆ. ಈ ಕಾರಣಗಳಿಂದ ನ್ಯಾನೊ ಯೂರಿಯಾ ರೈತರಿಗೆ ಹೆಚ್ಚುವರಿ ಆದಾಯ ತಂದುಕೊಡುತ್ತದೆ. ಇತ್ತೀಚೆಗೆ ನಡೆಸಿರುವ ಪ್ರಯೋಗದ ಫಲಿತಾಂಶದ ಪ್ರಕಾರ, ನ್ಯಾನೊ ಯೂರಿಯಾ ಗೊಬ್ಬರ ಬಳಸಿದ ಬಳಿಕ ಪ್ರತಿ ಎಕರೆಗೆ ₹ 2000 ರಷ್ಟು ಹೆಚ್ಚು ಲಾಭವಾಗಿರುವುದನ್ನು ಗುರುತಿಸಲಾಗಿದೆ.
3. **ಉತ್ತಮ ಆಹಾರ :** ನ್ಯಾನೊ ಯೂರಿಯಾ ಬಳಸಿ ಬೆಳೆದ ಆಹಾರ ಧಾನ್ಯಗಳು ಉತ್ತಮ ಪೌಷ್ಟಿಕಾಂಶಗಳಿಂದ ಕೂಡಿವೆ. ಈ ಪೌಷ್ಟಿಕಾಂಶಗಳ ಗುಣಮಟ್ಟವು ಉತ್ತಮವಾಗಿದೆ ಎಂದು ಅಧ್ಯಯನದಿಂದ ಸಾಬೀತಾಗಿದೆ. ಆದ್ದರಿಂದ, ಪೌಷ್ಟಿಕಾಂಶಯುಕ್ತ ಆಹಾರವು ಮನುಷ್ಯನ ಆರೋಗ್ಯಕ್ಕೆ ಪೂರಕವಾಗಿವೆ.
4. **ಪರಿಸರಸ್ನೇಹಿ:** ನ್ಯಾನೊ ಯೂರಿಯಾ ಬಳಕೆಯಿಂದ ಪರಿಸರ ಮಾಲಿನ್ಯ ಮತ್ತು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುವ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ. ಪೋಷಕಾಂಶಗಳ ನಷ್ಟವನ್ನು ತಗ್ಗಿಸುತ್ತದೆ. ಇಂಗಾಲದ ಪರಿಣಾಮವನ್ನೂ (Carbon foot print) ಕಡಿಮೆ ಮಾಡಲು ನೆರವಾಗುತ್ತದೆ. ಮಣ್ಣು, ಗಾಳಿ ಮತ್ತು ನೀರು ಕಲುಷಿತವಾಗುವುದಿಲ್ಲ. ಯೂರಿಯಾದಂತೆ ಇದು ಮಣ್ಣಿನಲ್ಲಿ ಉಳಿಯದೆ ಸಂಪೂರ್ಣವಾಗಿ ಬೆಳೆಗಳಿಗೆ ಬಳಕೆಯಾಗುತ್ತದೆ.
5. **ಸಂಗ್ರಹಣೆ, ಸಾಗಣೆ ಸುಲಭ :** ಸಾರಜನಕಯುಕ್ತ ರಸಗೊಬ್ಬರಗಳಿಗೆ ಹೋಲಿಸಿದರೆ ನ್ಯಾನೊ ಯೂರಿಯಾ ಕಡಿಮೆ ಪ್ರಮಾಣದಲ್ಲಿ ಬೇಕಾಗುತ್ತದೆ. ಇದು ಹೆಚ್ಚಿನ ಸಾಗಾಣಿಕಾ ವೆಚ್ಚವನ್ನು ತಪ್ಪಿಸುತ್ತದೆ. ಶೀಷೆಗಳಲ್ಲಿರುವುದರಿಂದ ಸುಲಭವಾಗಿ ಸಾಗಿಸಬಹುದು.

EXAM DH ಪ್ರಜಾವಾಣಿ
MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು ಮಾಹಿತಿಗೆ
ನ್ಯಾನೊ ಯೂರಿಯಾ ಕುರಿತ ವಿಸ್ತೃತ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಪ್ರಚಲಿತ ವಿದ್ಯಮಾನಗಳು ಕುರಿತ ಮಾಹಿತಿ ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ' ಎಕ್ಸಾಮ್ ಮಾಸ್ಟರ್ ಮೈಂಡ್'
ಇ–ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ–4



ಬರವಣಿಗೆಯಲ್ಲಿ ಸ್ಪಷ್ಟತೆಯಿರಲಿ...

ಅಭ್ಯರ್ಥಿಗಳು ಪರೀಕ್ಷೆಗಳಲ್ಲಿ ಬರೆಯುವ ಉತ್ತರದಲ್ಲಿ ಸ್ಪಷ್ಟತೆ ಇರಬೇಕು. ಅದು ಅತ್ಯುತ್ತಮ ಸಂವಹನವಾಗಬೇಕು.

ಡಾ. ನಿರಂಜನ ವಾನಳ್ಳಿ

ಸಂವಹನ ತಜ್ಞ ಹೆರಾಲ್ಡ್ ಲಾಸ್ವೆಲ್ ಸಂವಹನವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ; 'ಯಾರು, ಯಾರಿಗೆ ಏನನ್ನು ಹೇಳುತ್ತಾರೆ, ಯಾವ ಮಾಧ್ಯಮದಲ್ಲಿ ಹೇಳುತ್ತಾರೆ ಹಾಗೂ ಅದು ಯಾವ ಪರಿಣಾಮ ಬೀರುತ್ತದೆ ಅದೇ ಸಂವಹನ'. ಇದು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನೀವು ಬರೆಯುವ ಉತ್ತರಕ್ಕೂ ನೇರವಾಗಿ ಸಂಬಂಧಪಡುತ್ತದೆ.

ನೀವು ಉತ್ತರ ಬರೆಯುವುದು ಯಾರಿಗೆ? ಅದೇನೂ ಸಾರ್ವಜನಿಕರಿಗಲ್ಲ. ಹತ್ತಾರು ಜನ ಅದನ್ನು ಓದಿ ಪ್ರತಿಕ್ರಿಯಿಸುವುದಕ್ಕೂ ಅಲ್ಲ. ಅದು ಕೇವಲ ಒಬ್ಬರಿಗಾಗಿ. ಆದರೆ ದುರಂತವೆಂದರೆ ನಿಮ್ಮ ಉತ್ತರಗಳನ್ನು ನೋಡುವವರು ಯಾರೆಂದು ನಿಮಗೆ ಗೊತ್ತಿರುವುದಿಲ್ಲ! ಅಂಥ ಅನಾಮಿಕ ಮೌಲ್ಯಮಾಪಕನಿಗಾಗಿ ನೀವು ಬರೆಯುವುದು.

ನೆನಪಿಡಿ; ಆ ಮೌಲ್ಯಮಾಪಕ ಕಂಪ್ಯೂಟರ್ ಅಲ್ಲ. ಮನುಷ್ಯ. ಎಲ್ಲಾ ಭಾವನೆಗಳಿಂದ ಪ್ರಭಾವಿತವಾಗುವ ಅಪ್ಪಟ ಮನುಷ್ಯ. ಹೀಗಾಗಿ ಅವನಿಂದ ಸೈ ಎನಿಸಿಕೊಳ್ಳುವುದು ಬಹಳ ಮುಖ್ಯ. ಅವನು ಅಂಕ ನೀಡುವಾಗ ಅರ್ಧ ಅಂಕ ಕಡಿಮೆ ಅಥವಾ ನಿಮ್ಮ ಬರವಣಿಗೆ ಮೆಚ್ಚಿ ಒಂದು ಅಂಕ ಹೆಚ್ಚು ನೀಡಿದರೆ, ಅದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಿಮ್ಮ ರ್‍ಯಾಂಕನ್ನು ಬುಡಮೇಲು ಮಾಡಬಲ್ಲದು!

ಪರಿಣಾಮಕಾರಿ ಸಂವಹನ

ಆದ್ದರಿಂದ ಪರೀಕ್ಷೆಯಲ್ಲಿ ಉತ್ತರ ಬರೆಯುವ ಕ್ರಿಯೆಯಲ್ಲಿ ಸಂವಹನದ ಮಹತ್ವವನ್ನು ಅರಿಯಬೇಕು. ನಾವು ಬರೆಯುವ ಉತ್ತರ, ಪರೀಕ್ಷಕನಿಗೆ ನಾವು ಬಯಸಿದ ರೀತಿಯಲ್ಲೇ ತಲುಪಬೇಕು. ಅದೇ ಅರ್ಥವನ್ನು ನೀಡಬೇಕು. ಅದರಲ್ಲಿ ಯಾವುದೇ ಗೊಂದಲವಿರಬಾರದು. ಯಶಸ್ವಿ ಸಂವಹನದ ಸೂತ್ರವೆಂದರೆ ಕಳಿಸಿದ ಸಂದೇಶವೇ ತಲುಪುವ ಸಂದೇಶವೂ ಆಗಿರುವುದು. ಅಂದರೆ ನೀವು ಯಾವ ಉದ್ದೇಶದಿಂದ ಏನನ್ನು ಉತ್ತರವಾಗಿ ಬರೆದಿದ್ದೀರೋ ಅದೇ ಅರ್ಥದಲ್ಲಿ ಉತ್ತರವು ಮೌಲ್ಯಮಾಪಕನಿಗೆ ತಲುಪಬೇಕು. ಈ ಸಂವಹನ ಕ್ರಿಯೆಯಲ್ಲಿ ನಿಮ್ಮ ಉತ್ತರ ಸಂದೇಶವಾದರೆ ಪರೀಕ್ಷೆಯ ಉತ್ತರ ಪತ್ರಿಕೆಗಳೇ ವಾಹಿನಿಗಳು ಅಥವಾ ಮಾಧ್ಯಮಗಳು. ನೀವು ಹೇಳಲು ಹೊರಟಿದ್ದನ್ನು ಅತ್ಯಂತ ಪರಿಣಾಮಕಾರಿಯಾಗಿ ಪರೀಕ್ಷಕನಿಗೆ ಅರ್ಥವಾಗಿಸುವುದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಿಮಗಿರುವ ಸವಾಲು.

ಯಾವುದೇ ಉತ್ತರ ನೇರವಾಗಿರಬೇಕು, ಸರಳವಾಗಿರಬೇಕು, ಮೊದಲ ನೋಟಕ್ಕೆ ಪರೀಕ್ಷಕನನ್ನು ಸೆಳೆಯಬೇಕು, ಅವನು/ಅವಳು ಅಹುದಹುದು ಎನ್ನುವಂತಿರಬೇಕು, ಪರೀಕ್ಷಕನಿಗೆ ಈ ಅಭ್ಯರ್ಥಿ ಉತ್ತರ ಗೊತ್ತಿಲ್ಲದೇ ಡಬ್ಬಿ ಬಡಿಯುತ್ತಿದ್ದಾನೆ, ತನ್ನನ್ನು ಯಾಮಾರಿಸಲು ಪ್ರಯತ್ನಿಸುತ್ತಿದ್ದಾನೆ ಎನಿಸಬಾರದು, ಇವು ಸಂವಹನದ ದೃಷ್ಟಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಪಾಲಿಸಬೇಕಾದ ನಿಯಮ.

ಅಂದರೆ ನೀವು ಬರೆಯುವ ಉತ್ತರ ನಿಮ್ಮ ಜಾಣ್ಮೆಯ ಪ್ರತೀಕವಾಗಬೇಕೇ ವಿನಾ ನಿಮ್ಮ ಪಾಂಡಿತ್ಯದ ಪ್ರದರ್ಶನವಾಗಬಾರದು. ಇಲ್ಲಿನ ಪ್ರಶ್ನೆಗಳು ಎಷ್ಟೋ ವೇಳೆ ನಿಮ್ಮ ನೇರ ಅಭಿಪ್ರಾಯವನ್ನು ಬಯಸುತ್ತವೆ. ಅದು ಪರೀಕ್ಷಕನ ಅಭಿಪ್ರಾಯಗಳಿಗೆ ತದ್ವಿರುದ್ಧವಾಗಿರುವ ಸಾಧ್ಯತೆಯೂ ಇರುತ್ತದೆ. ಹೀಗೆ ಅಭಿಪ್ರಾಯ ವ್ಯಕ್ತಪಡಿಸುವಾಗ ನಿಮ್ಮ ಉತ್ತರಗಳು ನಿಮ್ಮ ಚಿಂತನಾ ಕ್ರಮದ, ವಾದ ಸರಣಿಯ, ಪ್ರತಿನಿಧಿಯಾಗಿರಬೇಕು ಆದರೆ ಅಹಂಕಾರದ ಪ್ರದರ್ಶನವಾಗಬಾರದು. ನಿಮ್ಮ ವಾದ ಅವನಿಗೆ ಇಷ್ಟವಾಗದಿದ್ದಾಗಲೂ ನಿಮ್ಮ ಅಭಿಪ್ರಾಯವನ್ನು ಗೌರವಿಸುವ ಔದಾರ್ಯ ಪರೀಕ್ಷಕನಲ್ಲಿ ಹುಟ್ಟಲು ಕಾರಣವಾಗಬೇಕು. ಯಾವ ಕಾರಣಕ್ಕೂ ಉತ್ತರವು ಪರೀಕ್ಷಕನಿಗೆ ಮುಜುಗರ ಉಂಟುಮಾಡುವಂತಿರಬಾರದು.

ಉತ್ತರಿಸುವ ರೀತಿ

ಗಣಿತದ ಅಥವಾ ವಿಜ್ಞಾನದ ಪರೀಕ್ಷೆಗಳನ್ನು ಬಿಟ್ಟರೆ ಕಲೆ ಮತ್ತು ಮಾನವಿಕಗಳ ಪರೀಕ್ಷೆಗಳಲ್ಲಿ ಒಂದು ಪ್ರಶ್ನೆಗೆ ಒಂದೇ ಉತ್ತರವೆಂಬುದಿರುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಉತ್ತರಗಳು ಬದಲಾಗಬಹುದು. ಕೆಲವೊಮ್ಮೆ ಉತ್ತರ ಒಂದೇ ಇದ್ದಾಗಲೂ ಹೇಳುವ ರೀತಿಯಲ್ಲಿ ವ್ಯತ್ಯಾಸಗಳಿರಬಹುದು. ಹೇಳುತ್ತೇವೆ; ಗಣಿತದಲ್ಲಿ 2+2 ಸೇರಿದರೆ ನಾಲ್ಕು ಆಗುತ್ತದೆ ಎಂಬುದು ನಿಜ. ಆದರೆ ಕಲೆಯಲ್ಲಿ ಅಥವಾ ಮಾನವಿಕಗಳಲ್ಲಿ ಹಾಗೆ ಆಗಬೇಕಿಲ್ಲ. ಐದೂ ಆಗಬಹುದು ಮೂರೂ ಆಗಬಹುದು!

ಒಬ್ಬ ಕಲಾವಿದ ಬಿಡಿಸಿದ ಚಿತ್ರ ಅದು ಸರ್ವಶ್ರೇಷ್ಠ ಎನ್ನಲು ಸಾಧ್ಯವಿಲ್ಲ. ಅದಕ್ಕಿಂತ ಚೆನ್ನಾಗಿ ಬಿಡಿಸಬಲ್ಲ ಕಲಾವಿದ ಬರಬಹುದು. ಹಾಗೆಯೇ ವ್ಯಕ್ತಿನಿಷ್ಠ ಉತ್ತರಗಳನ್ನು ಬಯಸುವ ಪರೀಕ್ಷೆಗಳಲ್ಲಿ ಒಬ್ಬರು ಬರೆದುದೇ ಅತ್ಯುತ್ತಮ ಎನ್ನಲು ಸಾಧ್ಯವಿಲ್ಲ. ಒಂದು ಪ್ರಶ್ನೆಗೆ ಸ್ಥೂಲವಾಗಿ ಉತ್ತರ ಹೇಳಬಹುದೇ ವಿನಾ ಅದು ಇಷ್ಟು ಹಾಗೂ ಇಷ್ಟು ಮಾತ್ರ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ, ಹೀಗಾಗಿ ಇಂಥ ಪರೀಕ್ಷೆಗಳಲ್ಲಿ ಸರಿಯುತ್ತರ ಬರೆಯುವುದಷ್ಟೇ ಅಲ್ಲ, ಅದನ್ನು ಹೇಗೆ ಬರೆಯುತ್ತೀರಿ, ನಿಮ್ಮ ವಾದವನ್ನು ಹೇಗೆ ಸಮರ್ಥಿಸುತ್ತೀರಿ ಎಂಬುದು ಬಹಳ ಮುಖ್ಯವಾಗುತ್ತದೆ. ಸಂವಹನವೇ ಹಲವು ಅಭ್ಯರ್ಥಿಗಳ ಉತ್ತರಗಳಲ್ಲಿ ವ್ಯತ್ಯಾಸ ಉಂಟು ಮಾಡಿದಾಗ ಅಂಕಗಳಲ್ಲೂ ವ್ಯತ್ಯಾಸ ಉಂಟುಮಾಡುತ್ತದೆ ಎಂಬುದನ್ನು ಮರೆಯಬಾರದು.

ಅಂತಿಮವಾಗಿ ಹೇಳುವುದಾದರೆ ನಿಮ್ಮ ಉತ್ತರ ನಿಮ್ಮ ಅತ್ಯುತ್ತಮ ಸಂವಹನವಾಗಬೇಕು. ಅದು ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಪರೀಕ್ಷಕನ ಮನಸ್ಸಿನಲ್ಲಿ ಉಂಟುಮಾಡಬೇಕು. ಏನು ಬರೆಯುತ್ತಿದ್ದೀರೆಂಬ ಸ್ಪಷ್ಟತೆ ನಿಮಗಿರಬೇಕು. ನಿಮಗೇ ಸ್ಪಷ್ಟತೆಯಿಲ್ಲದಿದ್ದರೆ ಪರೀಕ್ಷಕನನ್ನು ಗೆಲ್ಲಲಾರದು. ಅದು ನಿಮ್ಮನ್ನು ಪ್ರಕಾಶಿಸಬೇಕು. ಕತ್ತಲ ಕೂಪಕ್ಕೆ ತಳ್ಳಬಾರದು.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ಬಹು ಆಯ್ಕೆಯ ಪ್ರಶ್ನೆಗಳು

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ 'ಬಹುಆಯ್ಕೆ ಮಾದರಿ ಪ್ರಶ್ನೋತ್ತರ'ಗಳನ್ನು ಇಲ್ಲಿ ಕೊಡಲಾಗಿದೆ.

ಸಾಮಾನ್ಯ ಜ್ಞಾನ

1. ಕೆಂಪೇಗೌಡರಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ
ಎ. ದಾಸನಪುರ ಶಾಸನವು ಕೆಂಪೇಗೌಡರ ಬಗೆಗಿನ ವಿವರವನ್ನು ನೀಡುತ್ತದೆ.
ಬಿ. ಪ್ರಜಾ ವತ್ಸಲ ಮತ್ತು ಅರಿಗಳಿಗೆ ಗಂಡ ಭೇರುಂಡ ಎಂಬ ಬಿರುದನ್ನು ಪಡೆದುಕೊಂಡಿದ್ದರು.
ಸಿ. ಇವರು ಕೆಂಪಾಂಬುಧಿ, ಧರ್ಮಾಂಬುಧಿ ಹಾಗೂ ಸಂಪಂಗಿ ಮುಂತಾದ ಕೆರೆಗಳನ್ನು ಕಟ್ಟಿಸಿದರು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿರಿ
1. ಎ, ಸಿ ಸರಿಯಾಗಿದೆ 2. ಬಿ, ಸಿ ಸರಿಯಾಗಿದೆ
3. ಎ,ಬಿ,ಸಿ ಸರಿಯಾಗಿದೆ 4. ಎಲ್ಲವೂ ತಪ್ಪಾಗಿದೆ.
ಉತ್ತರ. 3

2. ಯಲಹಂಕದ ನಾಡಪ್ರಭುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿರಿ
ಎ. ಈ ವಂಶದ ಒಂದನೇ ಕೆಂಪೇಗೌಡರನ್ನು ಬೆಂಗಳೂರು ನಗರದ ನಿರ್ಮಾತೃ ಎಂದು ಕರೆಯಲಾಗುತ್ತದೆ.
ಬಿ. ಇವರ ಕಾಲದ ದೇವಾಲಯಗಳಲ್ಲಿ ನಿರಂದಾರ ಮತ್ತು ಸಾಂದಾರ ಮಾದರಿಗಳನ್ನು ಕಾಣಬಹುದು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ. 4

3. ಪ್ರಥಮ ಆಂಗ್ಲೊ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಹೈದರ್ ವಿರುದ್ಧ ನಿಜಾಮ ಮತ್ತು ಮರಾಠರನ್ನು ಒಗ್ಗೂಡಿಸಿಯೂ ಅಂತಿಮವಾಗಿ ಹೈದರನ ಗೆಲುವಿಗೆ ಕಾರಣ ಯಾವುದು?
ಎ. ಹೈದರನು ನಿಜಾಮನೊಂದಿಗೆ ಮನವೊಲಿಸಿ ಒಪ್ಪಂದ ಮಾಡಿಕೊಂಡದ್ದು.
ಬಿ. ಮರಾಠರನ್ನು ಯುದ್ಧ ರಂಗದಿಂದ ವಿಮುಖರನ್ನಾಗುವಂತೆ ಮಾಡಿದ್ದು.
ಸಿ. ಇಂಗ್ಲಿಷರ ವಿರುದ್ಧ ಫ್ರೆಂಚರ ಸಹಾಯವನ್ನು ತೆಗೆದುಕೊಂಡದ್ದು.
ಡಿ. ಹೈದರನ ರಾಜತಾಂತ್ರಿಕ ನೈಪುಣ್ಯತೆ ಮತ್ತು ಯುದ್ಧದಲ್ಲಿ ಕ್ಷಿಪ್ರಗತಿಯ ಮುನ್ನಡೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿರಿ
1. ಎ, ಸಿ ಸರಿಯಾಗಿದೆ 2. ಬಿ, ಸಿ ಸರಿಯಾಗಿದೆ
3. ಎ, ಬಿ, ಡಿ ಸರಿಯಾಗಿದೆ 4. ಎಲ್ಲವೂ ಸರಿಯಾಗಿದೆ.
ಉತ್ತರ. 3

4. ಪನಾಮಾ ಕಾಡಿನಲ್ಲಿ ಪತ್ತೆಯಾದ ಹೊಸ ಜಾತಿಯ ಮಳೆಕಪ್ಪೆಗೆ ಈ ಕೆಳಗಿನ ಯಾವ ಹೆಸರನ್ನು ಇಡಲಾಗಿದೆ
ಎ) ಜೇನ್ ಗುಡಾಲ್ ಬಿ) ವಂಗಾರಿ ಮಾತೈ
ಸಿ) ಗ್ರೇಟಾ ಥನ್ ಬರ್ಗ್ ಡಿ) ಜಾನ್ ಮುಯಿರ್
ಉತ್ತರ : ಸಿ

5. ಕೆಳಗಿನ ಕ್ರಾಂತಿಗಳಲ್ಲಿ ಯಾವುದು 'ಗೊಬ್ಬರ'ಗಳಿಗೆ ಸಂಬಂಧಿಸಿದೆ?
ಎ) ಗುಲಾಬಿ ಕ್ರಾಂತಿ
ಬಿ) ಬೂದು ಕ್ರಾಂತಿ
ಸಿ) ಸುವರ್ಣ ಕ್ರಾಂತಿ
ಡಿ) ಪಿಂಕ್ ಕ್ರಾಂತಿ
ಉತ್ತರ: ಬಿ

6. ಒಲಿಂಪಸ್ ಮಾನ್ಸ್ ಈ ಕೆಳಗಿನ ಯಾವ ಗ್ರಹದ ಮೇಲೆ ಇದೆ ?
ಎ) ಗುರು ಬಿ) ಮಂಗಳ ಸಿ) ಶುಕ್ರ ಡಿ) ಶನಿ
ಉತ್ತರ: ಬಿ

7. ಲಂಡನ್‌ನಲ್ಲಿ ನಡೆದ ಮೂರು ದುಂಡು ಮೇಜಿನ ಸಭೆಗಳಲ್ಲಿ ಕೆಳಗೆ ಉಲ್ಲೇಖಿಸಿರುವ ವ್ಯಕ್ತಿಗಳಲ್ಲಿ ಯಾರು ಭಾಗವಹಿಸಿದ್ದರು ?
ಎ) ಮೋಹನದಾಸ್ ಕರಮಚಂದ ಗಾಂಧಿ
ಬಿ) ಜವಾಹರಲಾಲ್ ನೆಹರೂ
ಸಿ) ಡಾ ಬಿ ಆರ್ ಅಂಬೇಡ್ಕರ್
ಡಿ) ಮೊಹಮ್ಮದ್ ಅಲಿ ಜಿನ್ನಾ
ಉತ್ತರ : ಸಿ.

8. 'ಬಯೋಡೈವರ್ಸಿಟಿಸ್ ಬೈ 2030 ಇನಿಶಿಯೇಟಿವ್' (Biodiversity's by 2030 Initiative) ವರದಿಯು ಯಾವ ಸಂಸ್ಥೆಗೆ ಸಂಬಂಧಿಸಿದೆ?
ಎ) ವಿಶ್ವ ಬ್ಯಾಂಕ್
ಬಿ) ವಿಶ್ವ ಆರ್ಥಿಕ ವೇದಿಕೆ
ಸಿ) ಅಂತರಾಷ್ಟ್ರೀಯ ಹಣಕಾಸು ನಿಧಿ
ಡಿ) ನೀತಿ ಆಯೋಗ
ಉತ್ತರ: ಬಿ

9) ಕರ್ನಾಟಕ ರಾಜ್ಯ ಬಜೆಟ್ 2022-2023 ರಲ್ಲಿ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಸಹಯೋಗ ದೊಂದಿಗೆ 100 ಆಳ ಸಮುದ್ರ ಮೀನುಗಾರಿಕೆ ದೋಣಿಗಳನ್ನು ನೀಡುವ ಸಂಬಂಧ ಯಾವ ಯೋಜನೆಯನ್ನು ರೂಪಿಸಲಾಗಿದೆ?
ಎ) ಮತ್ಸ್ಯ ಸಿರಿ ಬಿ) ಬೆಸ್ತ ಸಿರಿ
ಸಿ) ಜಲಸಿರಿ ಡಿ) ಸಾಗರ ಸಿರಿ
ಉತ್ತರ: ಎ

10. ಹರಪ್ಪನ್ ಸಂಸ್ಕೃತಿಯ ಅತ್ಯಂತ ಪೂರ್ವಭಾಗ ಎಂದು ಈ ಕೆಳಗಿನ ಯಾವ ನಗರದ ಮೂಲಕ ಗುರುತಿಸಲಾಗಿದೆ ?
ಎ) ಅಲಂಗೀರ್ ಪುರ್ ಬಿ) ದೈಮಾಬಾದ್
ಸಿ) ಸಮಂಡಾ ಡಿ) ಸುಕ್ಕಾ ಜೆಂಡೋರ್
ಉತ್ತರ: ಎ

ಉಡಾವಣಾ ವಾಹನಗಳ ಲ್ಯಾಂಡಿಂಗ್ ಪರೀಕ್ಷೆಗೆ ಸಿದ್ಧತೆ

ಬೆಂಗಳೂರು: ರಾಕೆಟ್ ಉಡಾವಣೆಯ 'ಪುನರ್ ಬಳಕೆಯ ಉಡಾವಣಾ ವಾಹನ'ಗಳ (ಆರ್‌ಎಲ್‌ವಿ-ಎಲ್‌ಇಎಕ್ಸ್) ಲ್ಯಾಂಡಿಂಗ್ ಪರೀಕ್ಷೆಗಾಗಿ ಚಿತ್ರದುರ್ಗದ ರಕ್ಷಣಾ ಇಲಾಖೆಯ ಏರೋನಾಟಿಕಲ್ ಪರೀಕ್ಷಾ ವಲಯದಲ್ಲಿ ಪ್ರಥಮ ರನ್‌ವೇಯನ್ನು ಇಸ್ರೊ ಸ್ಥಾಪಿಸಿದ್ದು, ಲ್ಯಾಂಡಿಂಗ್ ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಂಡಿದೆ.

'ಲ್ಯಾಂಡಿಂಗ್‌ಗೆ ಸೂಕ್ತ ಹವಾಮಾನ ಇರಬೇಕು. ಪೂರಕ ವಾತಾವರಣ ನೋಡಿಕೊಂಡು ಪರೀಕ್ಷೆ ನಡೆಸಲಾಗುವುದು' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದ್ದಾರೆ. ಪರೀಕ್ಷೆಯ ವೇಳೆಯಲ್ಲಿ ಪುನರ್ ಬಳಕೆಯ ಉಡಾವಣಾ ವಾಹನದ ಕವಚವನ್ನು ಹೆಲಿ ಕಾಪ್ಟರ್ ಮೂಲಕ 3 ರಿಂದ 5 ಕಿ.ಮೀ ಎತ್ತರ ದಿಂದ ಸಮತಲ ವೇಗದಲ್ಲಿ ರನ್‌ವೇಗೆ ಇಳಿ ಬಿಡಲಾಗುವುದು. ಹೀಗೆ ಇಳಿ ಬಿಟ್ಟ ಬಳಿಕ ಕವಚವು ರನ್‌ವೇಯಲ್ಲಿ ಜಾರಿಕೊಂಡು ಚಲಿಸಲಿದೆ ಎಂದು ಇಸ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಕಾಶಿ ದರ್ಶನ ಯಾತ್ರೆ ನಾಳೆ ಶುರು

ಬೆಂಗಳೂರು: ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ 'ಕರ್ನಾಟಕ-ಭಾರತ್ ಗೌರವ್ ಕಾಶಿ ದರ್ಶನ' ರೈಲು ಯಾತ್ರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಇದೇ 11 ರಂದು ಚಾಲನೆ ನೀಡಲಿದ್ದಾರೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

'ಮೋದಿಯವರ ಪ್ರಯತ್ನದಿಂದ ಪುನರ್ ನಿರ್ಮಾಣವಾಗಿರುವ ಕಾಶಿ ಕಾರಿಡಾರ್ ಅನ್ನು ರಾಜ್ಯದ ಜನರು ಕಡಿಮೆ ವೆಚ್ಚದಲ್ಲಿ ನೋಡಲಿ ಎಂಬ ಉದ್ದೇಶದಿಂದ ಕಾಶಿ ದರ್ಶನ ಯಾತ್ರೆ ಆಯೋಜಿಸಲಾಗಿದೆ' ಎಂದರು.

ಇದೇ 23ರಂದು 2ನೇ ಟ್ರಿಪ್ ಹೊರಡಲಿದ್ದು, ಟಿಕೆಟ್ ಬುಕ್ಕಿಂಗ್ ಮಾಡಿದ ಎರಡೇ ದಿನಗಳಲ್ಲಿ ಎಲ್ಲ ಟಿಕೆಟ್‌ಗಳೂ ಮಾರಾಟವಾಗಿವೆ' ಎಂದು ಜೊಲ್ಲೆ ಹೇಳಿದರು.

ಸಿಇಟಿ: 14ರ ನಂತರ 2ನೇ ಸುತ್ತು ಆರಂಭ

ಬೆಂಗಳೂರು: ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆದ (ಯುಜಿ-ಸಿಇಟಿ) ಪ್ರಕ್ರಿಯೆಯ ಮೊದಲ ಸುತ್ತಿನ ಪ್ರಕ್ರಿಯೆ ಪೂರ್ಣಗೊಂಡಿದ್ದು, 58,958 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. 12,937 ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ವಿವಿಧ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

ನ.14ರ ನಂತರ ಎರಡನೇ ಸುತ್ತಿನ ಆಯ್ಕೆ ಪ್ರಕ್ರಿಯೆಗಳು ಆರಂಭವಾಗಲಿವೆ. ಹಾಗೆಯೇ ನ.9ರಂದು ರಾತ್ರಿ 1ನೇ ಸುತ್ತಿನ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ (ನೀಟ್) ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾಹಿತಿ ನೀಡಿದೆ.

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ–583 101
Ballari Urban Development Authority, Ballari. Ph 08392-273731

ಸಂಖ್ಯೆ:ಬ.ನ.ಪ್ರಾ/ನಾ.ಸೌನಿ./01/2022.23 ದಿನಾಂಕ: 08.11.2022

ತಿದ್ದುಪಡಿ ಪತ್ರಿಕಾ ಪ್ರಕಟಣೆ

ದಿನಾಂಕ:17.10.2022 ರಂದು ಪ್ರಾಧಿಕಾರದ ಪ್ರಕಟಣೆ ಸಂಖ್ಯೆ:ಬ.ನ.ಪ್ರಾ/ನಾ.ಸೌನಿ/01/2022.23 ದಿನಾಂಕ:15.10.2022 ರಲ್ಲಿ ನಾಗರೀಕ ಸೌಲಭ್ಯ ನಿವೇಶನಗಳನ್ನು 30 ವರ್ಷಗಳ ಗುತ್ತಿಗೆ ಅವಧಿಗೆ ವಿಸ್ತರಿಸಲು ಪ್ರಚುರಪಡಿಸಲಾಗಿದ್ದು, ಇದರಲ್ಲಿ ಕ್ರಮ ಸಂಖ್ಯೆ:98,ಕಾಲಂ ನಂ.11 ರಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ) ಮೀಸಲಿರಿಸಿರುವುದರ ಬದಲಾಗಿ ಕ್ರಮ ಸಂಖ್ಯೆ: 93 ಕ್ಕೆ ಪರಿಶಿಷ್ಟ ಜಾತಿ (ಎಸ್.ಸಿ) ಗೆ ಮೀಸಲಿರಿಸಿ ತಿದ್ದುಪಡಿ ಮಾಡಿರುವುದರಿಂದ ಸದರಿ ಪಟ್ಟಿಯಲ್ಲಿ ಓದಿಕೊಳ್ಳಲು ತಿಳಿಯಪಡಿಸಲಾಗಿದೆ.

ಸಹಿ/– ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/626/ಎಂಸಿಎ/2022–23

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ, ಚಿಕ್ಕಮಗಳೂರು – 577101
ದೂರವಾಣಿ: 08262-295513. CIN: U40109 KA 2002 SGC 030425

ಸಂಖ್ಯೆ: ಮೆಸ್ಕಾಂ/ಅ.ಇಂ(ವಿ)/ಕಾಪಾ/ಚಿವೃ/ಕಾನಿಇಂ/ಸಕಾಇಂ/ಸಇಂ/2022–23/10856 ದಿನಾಂಕ: 05.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಈ ಕೆಳಗಿನ ಕೆಲಸಗಳಿಗಾಗಿ ಟೆಂಡರ್ ಆಹ್ವಾನಿಸಿದೆ.

1) ಕಡೂರು ವಿಭಾಗ, ಅಜ್ಜಂಪುರ ಉಪವಿಭಾಗ ವ್ಯಾಪ್ತಿಯ ಎಫ್–8 ಶಿವನಿ ಆರ್.ಎಸ್. ಫೀಡರ್‌ಗೆ 110/11 ಕೆ.ವಿ. ಶಿವನಿ ವಿ.ವಿ. ಕೇಂದ್ರದಿಂದ ಶಿವನಿ ರೈಲು ನಿಲ್ದಾಣದ ವರೆಗೆ 11 ಕೆ.ವಿ. ಲಿಂಕ್ ಲೈನ್ ನಿರ್ಮಿಸುವ ಕಾಮಗಾರಿಯನ್ನು "ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ" ನಿರ್ವಹಿಸಲು (ಸಾಮಾನ್ಯ)
2) ಕಡೂರು ವಿಭಾಗ, ಕಡೂರು ಉಪವಿಭಾಗದ 110/11 ಕೆ.ವಿ. ಎಮ್ಮೆದೊಡ್ಡಿ ವಿ.ವಿ. ಕೇಂದ್ರದಿಂದ ಹೊರಹೊಮ್ಮುವ ಎಫ್–8 ಎಮ್ಮೆದೊಡ್ಡಿ ಫೀಡರ್‌ಗೆ 110/11 ಕೆ.ವಿ. ಎಮ್ಮೆದೊಡ್ಡಿ ವಿ.ವಿ. ಕೇಂದ್ರದಿಂದ ಬಿಸ್ಲೆಹಳ್ಳಿವರೆಗೆ ಹೊಸದಾಗಿ 11 ಕೆ.ವಿ. ಮಾರ್ಗ ನಿರ್ಮಿಸುವ ಕಾಮಗಾರಿಯನ್ನು "ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ" ನಿರ್ವಹಿಸಲು. (ಸಾಮಾನ್ಯ)

ಟೆಂಡರ್‌ನ್ನು ವಿದ್ಯುನ್ಮಾನ ಟೆಂಡರಿಂಗ್ (ಇ–ಟೆಂಡರ್) ಮೂಲಕ ಮಾತ್ರ ಸ್ವೀಕರಿಸಲಾಗುವುದು. ಬಿಡ್‌ದಾರರು ಇ–ಟೆಂಡರ್ ಬಗ್ಗೆ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನ್ನು ದಿನಾಂಕ: 15.11.2022 ರಂದು ಅಥವಾ ನಂತರ ಲಾಗಿನ್ ಮಾಡಿ ವಿವರ ಪಡೆಯಬಹುದು. ಈ ಬಗ್ಗೆ ಯಾವುದೇ ವಿವರಗಳು ಬೇಕಾಗಿದ್ದಲ್ಲಿ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ ಚಿಕ್ಕಮಗಳೂರು.

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2ರವರ ಕಚೇರಿ, (ಬೆಂ.ಘ.ತ್ಯಾ.ನಿ.ನಿ)
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ,
ಬೆಂಗಳೂರು – 560 052.

ಸಂಖ್ಯೆ:ಉಪ್ರವ್ಯ–2(ಬೆಂ.ಘ.ತ್ಯಾ.ನಿ.ನಿ)/ತಿದ್ದುಪಡಿ–08/2022–23 ದಿನಾಂಕ: 09.11.2022

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯ ವಿಸ್ತರಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂ: ಕಾಪಾಅ/ಬೆಂ.ಘ.ತ್ಯಾ.ನಿ.ನಿ/ಟೆಂಡರ್/08/2022–23, ದಿನಾಂಕ: 02.11.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್ ಪ್ರಕಟಣೆಯ ಟೆಂಡರ್ ವೇಳಾಪಟ್ಟಿಯನ್ನು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ವಿಸ್ತರಣೆ ಮಾಡಲಾಗಿದೆ.

ಸಮಯದ ವೇಳಾಪಟ್ಟಿ/ಟೆಂಡರ್‌ಗಳ ವೇಳಾಪಟ್ಟಿ

Sl No		ಟೆಂಡರ್ ಪ್ರಕಟಣೆ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ಕೆಳಕಂಡಂತೆ ಓದಿಕೊಳ್ಳತಕ್ಕದ್ದು
1	ಅರ್ಹತಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	14.11.2022ರ ಸಂಜೆ 4:00 ಗಂಟೆಯವರೆಗೆ	23.11.2022ರ ಸಂಜೆ 4:00 ಗಂಟೆಯವರೆಗೆ
2	ಬಿಡ್–ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	07.11.2022ರ ಮಧ್ಯಾಹ್ನ 3:00 ಗಂಟೆಗೆ	17.11.2022ರ ಮಧ್ಯಾಹ್ನ 3:00 ಗಂಟೆಗೆ
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	15.11.2022ರ ಸಂಜೆ 4:30 ಗಂಟೆಯವರೆಗೆ	24.11.2022ರ ಸಂಜೆ 4:30 ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂ.ಘ.ತ್ಯಾ.ನಿ.ನಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ–580025
ದೂರವಾಣಿ ಸಂಖ್ಯೆ : 0836–2322251
ಇ–ಮೇಲ್: apmchubli@gmail.com

ಸಂ: ಕೃಮಾಇ : ಕೃಉಮಾಸ(ಹು) : ಅಭಿ :1692–1700: 2022–23 ದಿ: 05/11/2022

ತಿದ್ದುಪಡಿ ಟೆಂಡರ್ ಪ್ರಕಟಣೆ

2022–23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆಗಳಿಗೆ ಕೋರಿಜೆಂಡಮ್ (corrigendum)ಹೊರಡಿಸಲಾಗಿರುತ್ತದೆ. ಸದರಿ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವ ಟೆಂಡರ್ ನಂಬರ್ ಈ ಕೆಳಗಿನಂತೆ ಇರುತ್ತದೆ.

Development Work(Package-1)	APMC/2022-23/OW/WORK_INDENT5262
Development Work(Package-2)	APMC/2022-23/RD/WORK_INDENT5267
Development Work(Package-3)	APMC/2022-23/RD/WORK_INDENT5291
Development Work(Package-4)	APMC/2022-23/RD/WORK_INDENT5269
Development Work(Package-5)	APMC/2022-23/RD/WORK_INDENT5270
Development Work(Package-6)	APMC/2022-23/RD/WORK_INDENT5271
Development Work(Package-7)	APMC/2022-23/RD/WORK_INDENT5272
Development Work(Package-8)	APMC/2022-23/RD/WORK_INDENT5290
Development Work(Package-9)	APMC/2022-23/RD/WORK_INDENT5274

ಈ ಮೇಲ್ಕಾಣಿಸಿದ ಟೆಂಡರ್‌ಗಳಿಗೆ ದಿನಾಂಕ : 05/11/2022 ರ ವಿಜಯ ಕರ್ನಾಟಕ, ಪ್ರಜಾವಾಣಿ ಹಾಗೂ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳಲ್ಲಿ ಸದರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿ. 18/11/2022 ಎಂದು ಪ್ರಕಟಿಸಲಾಗಿತ್ತು. ಅದರ ಬದಲಾಗಿ ದಿ. 05/12/2022 ರ ಸಾ:5:30 ಘಂಟೆಯೊಳಗಾಗಿ ಅರ್ಹರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವೆಂದು ತಿದ್ದುಪಡಿ ಮಾಡಿಕೊಂಡು ಓದುವುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ http://eprockarnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.

ಸಹಿ/– ಶ್ರೀ. ಮಂಜುನಾಥ ಹುಬ್ಬಳ್ಳಿ, ಕಾರ್ಯದರ್ಶಿ, ಕೃ.ಉ.ಮಾ.ಸ., ಹುಬ್ಬಳ್ಳಿ
ಸಹಿ/– ಶ್ರೀ. ಕೆ.ಎಚ್. ಗುರುಪ್ರಸಾದ, ಕೆ.ಎಮ್.ಎಸ್ ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹುಬ್ಬಳ್ಳಿ

ತಿಪಟೂರು ಯೋಜನಾ ಪ್ರಾಧಿಕಾರ, ತಿಪಟೂರು
1ನೇ ಮುಖ್ಯರಸ್ತೆ, 7ನೇ ಅಡ್ಡ ರಸ್ತೆ, ಅಂಚೆ ಕಛೇರಿ ಪಕ್ಕ, ಕೆ.ಆರ್.ಬಡಾವಣೆ, ತಿಪಟೂರು–572201
E-Mail-tipturplanning@gmail.com web:www.tiptur.tpa.gov.in
ಫೋ ನಂ.08134–253100

ಕ್ರಸಂ:ತಿಯೋಪ್ರಾ/ಅನಧಿಕೃತ ಬಡಾವಣೆ/2022–23/309 ದಿನಾಂಕ: 21.10.2022

ಸಾರ್ವಜನಿಕ ಪ್ರಕಟಣೆ

ವಿಷಯ: ತಿಪಟೂರು ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ಅಭಿವೃದ್ಧಿಪಡಿಸುತ್ತಿರುವ ಬಗ್ಗೆ.

ತಿಪಟೂರು ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿಗಳನ್ನು ಕೈಗೊಳ್ಳುವ ಮುನ್ನ ಈ ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14, 15 ಮತ್ತು 17 ರಂತೆ ಕ್ರಮವಾಗಿ ಭೂ ಉಪಯೋಗ ಬದಲಾವಣೆ, ಕಟ್ಟಡ ನಿರ್ಮಾಣ ಮತ್ತು ಬಡಾವಣೆ ರಚಿಸಲು ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಪ್ರಾಧಿಕಾರದ ಅನುಮೋದನೆಯಿಲ್ಲದೇ ಇತರೆ ಯಾವುದಾದರು ಅನುಮೋದನೆ ಆಧಾರದ ಮೇಲೆ ನಿರ್ಮಾಣ ಕೈಗೊಂಡಿದ್ದರೆ ಅಂತಹ ನಿರ್ಮಾಣ ಕಾರ್ಯಗಳು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 76–ಎಂ (2)(ಬಿ) ರಂತೆ ಊರ್ಜಿತವಾಗುವುದಿಲ್ಲ.

ಆದುದರಿಂದ, ಅನಧಿಕೃತ ಬಡಾವಣೆಗಳಲ್ಲಿ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಿದಲ್ಲಿ ಮೂಲಭೂತ ಸೌಲಭ್ಯಗಳು ಹಾಗೂ ನಿರ್ವಹಣೆಯಿಂದ ವಂಚಿತರಾಗುವುದಲ್ಲದೇ ಇಂತಹ ಅನಧಿಕೃತ ನಿವೇಶನಗಳಲ್ಲಿ ನಿಯಮಾನುಸಾರ ಕಟ್ಟಡ ನಕ್ಷೆ ಅನುಮೋದನೆ ಪಡೆಯಲು ಸಾಧ್ಯವಾಗುವುದಿಲ್ಲ. ಆದ ಕಾರಣ, ಮುಂದಿನ ತೊಂದರೆ/ಅಡಚಣೆ ಆಗು–ಹೋಗುಗಳಿಗೆ ಸಾರ್ವಜನಿಕರೇ ಸ್ವತಃ ಜವಾಬ್ದಾರರಾಗಿರುತ್ತಾರೆ ಹಾಗೂ ಸದರಿ ಸಮಸ್ಯೆಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲವೆಂದು ಸಾರ್ವಜನಿಕರಿಗೇ ಈ ಮೂಲಕ ತಿಳಿಯಪಡಿಸಿ ಅನಧಿಕೃತ ಬಡಾವಣೆಯಲ್ಲಿ ನಿವೇಶನಗಳನ್ನು ಖರೀದಿಸಬಾರದೆಂದು ಮತ್ತು ಅನಧಿಕೃತ ಬಡಾವಣೆಯಲ್ಲಿನ ನಿವೇಶನಗಳನ್ನು ಖರೀದಿಸಿ ಮೊಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ/ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲ.

ಸಹಿ/–ಸದಸ್ಯ ಕಾರ್ಯದರ್ಶಿ
ತಿಪಟೂರು ಯೋಜನಾ ಪ್ರಾಧಿಕಾರ
ತಿಪಟೂರು.

DIPR/TUM/675/MCA/2022-23

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ.6/13/1, ಕೆ.ಆರ್.ಇ.ಡಿ.ಎಲ್. ಕಚೇರಿ ಕಟ್ಟಡ, 10ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು–72

ಉಲ್ಲೇಖ ಸಂಖ್ಯೆ: ಕೆಆರ್‌ಇಡಿಎಲ್/12/ಎಸ್‌ಡಿ/ಎಸ್‌ಡಿಪಿ/ಎಫ್–01/2022–23 ದಿನಾಂಕ: 10.11.2022

ಅಧಿಸೂಚನೆ

KREDL ಸಂಸ್ಥೆಯ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ SSLC+ITI/Diploma ಅಭ್ಯರ್ಥಿಗಳಿಗೆ ತರಬೇತಿ ನೀಡಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್‌ಗಾಗಿ EoI (Expression of Interest) ನ್ನು ಆಹ್ವಾನಿಸಲಾಗಿದೆ. EoI ವಿವರಗಳನ್ನು ದಿನಾಂಕ: 10.11.2022 ರಿಂದ www.kredl.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಇಡಿಎಲ್

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–580 005
Fax:+91-836-2441188 Epabx:+91-836-2214332/216,444,214
Phone :+ 91-836-2214214 E mail: estateofficer@rediffmail.com

No.EO/DB/TN/e-Proc.T-78/2022-23 Date: 09.11.2022

ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮುಖ್ಯ ಆವರಣದಲ್ಲಿ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಅಹ್ವಾನಿಸಲಾಗಿದೆ. ಸದರಿ ಟೆಂಡರಗಳನ್ನು e-procurement portal ಪದ್ಧತಿಯಂತೆ http://eproc.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836–2214214/332 ಸಂಪರ್ಕಿಸಬಹುದು.

e-procurement ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 080–46010000.

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ	12.11.2022	Up to	16.00 Hrs
2	ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	16.11.2022	Up to	16.00 Hrs
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	17.11.2022	At	16.15 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/– ಆಸ್ತಿ ಅಧಿಕಾರಿಗಳು

ವಾ.ಸಾ.ಇ./ಧಾ/738/2022–23/ದೇಶಪಾಂಡೆಪಬ್ಲಿಸಿಟಿ

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ಸಂಖ್ಯೆ: ದಾಮಪಾ/ಆಶಾ/15th Fin MRF/ಸಿ.ಆರ್/2022–23 ದಿ:07/11/2022

ದರಪಟ್ಟಿ ಪ್ರಕಟಣೆ

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ ಒಣ ತ್ಯಾಜ್ಯದ ವೈಜ್ಞಾನಿಕವಾಗಿ ನಿರ್ವಹಣೆಗಾಗಿ ಮೆಟೀರಿಯಲ್ ರಿಕವರಿ ಸೌಲಭ್ಯ (Material Recovery Facility) ಅಭಿವೃದ್ಧಿ ಪಡಿಸುವ ಸಲುವಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಅರ್ಹ ಯೋಜನಾ ಸಮಾಲೋಚಕರ ಸೇವೆ ಪಡೆಯಲು ಉದ್ದೇಶಿಸಿದ್ದು, ಆಸಕ್ತಿಯುಳ್ಳ ಯೋಜನಾ ಸಮಾಲೋಚಕರು ಈ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವ ಕಾರ್ಯಕ್ಕೆ ತಗಲುವ ಒಟ್ಟು ದರವನ್ನು ನಮೂದಿಸಿ ಸೀಲ್ ಮಾಡಿದ ಲಕೋಟೆಯೊಂದಿಗೆ ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ ಇವರಿಗೆ ದಿನಾಂಕ:14/11/2022 ರ ಸಾಯಂಕಾಲ 4.00 ರೊಳಗೆ ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಬಂದಂತಹ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪಾಲಿಕೆಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದು. **Particulars:-** Providing consulting services for preparation of Detailed Project Report (DPR) for establishment of Material Recovery Facility for dry waste management in corporation limits. Scope of the work includes quantification & characterization of dry waste generated, data compilation & analysis, survey of processing site, MRF layout plan, components of MRF, Standard Operating Procedure, detailed estimate for civil & equipment components & any other work/services relevant to above subject. (Price quoted should be inclusive of all taxes)

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ

ವಾಸಾಇ/ದಾವಣಗೆರೆ/601/ಎಂಸಿಎ/2022–23

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಪರ್ಕಸೌಧ, ಸರ್ವೆ ನಂ.8, ಡಾ|| ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010 ಟೆಲಿಫ್ಯಾಕ್ಸ್ : 080–22024000
ಇ–ಮೇಲ್: cekrdcl@gmail.com

ಸಂಖ್ಯೆ: ಕರಅನಿನಿ/ಐಎಫ್‌ಬಿ/2022–23/29 ದಿನಾಂಕ: 30.10.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಕರ್ನಾಟಕ ರಾಜ್ಯದ (a) ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ–ರಾಮನಗರ ಜಿಲ್ಲಾ ಮುಖ್ಯ ರಸ್ತೆ ಕಿ.ಮೀ.1.35 ನಲ್ಲಿ ಸೇತುವೆ ನಿರ್ಮಾಣ, ರಾಜ್ಯ ಹೆದ್ದಾರಿ–148 ರಲ್ಲಿನ ಕುಪ್ಪಳ್ಳಿ–ಹಿರೇಕೆರೂರು ರಸ್ತೆಯ ಸರಪಳಿ 91.17 ಕಿ.ಮೀ ನಲ್ಲಿ ಸೇತುವೆ ನಿರ್ಮಾಣ ಕಾಮಗಾರಿ ಹಾಗೂ (b) ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಮಲ್ಲಾಪುರ–ಕಲ್ಲಗುಂಡಿ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 3.60, 4.50, 6.90, 7.60 ಮತ್ತು 9.40 ರಲ್ಲಿ ಮತ್ತು ಶ್ಯಾನೇಗೆರೆ–ಸಿಂಗಟಗೆರೆ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ 0.100 ಮತ್ತು 0.350 ರಲ್ಲಿ ಸೇತುವೆಗಳ ನಿರ್ಮಾಣ ಕಾಮಗಾರಿಗೆ ಪ್ರಜೆಕ್ಟ್ ಮ್ಯಾನೇಜ್‌ಮೆಂಟ್, ಕನ್‌ಸ್ಟ್ರಕ್ಷನ್ ಸೂಪರ್‌ವಿಷನ್ ಮತ್ತು ಕ್ವಾಲಿಟಿ ಕಂಟ್ರೋಲ್ ಸೇವೆಗಾಗಿ ಸಮಾಲೋಚಕರನ್ನು ನೇಮಿಸಲು QCBS ಆಧಾರದ ಮೇಲೆ ಪ್ಯಾಕೇಜ್ ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ http://eproc.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 28.11.2022 ರ 17.30 ಗಂಟೆವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 30.11.2022 ರ 11.30 ಗಂಟೆಗೆ ತೆರೆಯಲಾಗುತ್ತದೆ.

ಗಮನಿಸಿ ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಇ–ಪೋರ್ಟಲ್/ಕರಅನಿನಿ ವೆಬ್‌ಸೈಟ್ http://www.krdcl.in. ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು
ಕ.ರ.ಅ.ನಿ.ನಿ. ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3013/ಆಕಾರ್/22–23

ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.

ಸಂಖ್ಯೆ:ಅಬಿವಾಮೃ/ಟೆ.ಕಾ.ಓಹೆಚ್‌ಟಿ/102/2022–23 ದಿನಾಂಕ: 08.11.2022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯದಲ್ಲಿ **2.50 ಲಕ್ಷ ಲೀಟರಿನ ಓವರ್ ಹೆಡ್ ಟ್ಯಾಂಕ್ ನಿರ್ಮಾಣ** ಮಾಡುವ ಸಂಬಂಧ ಕಾಮಗಾರಿಗಳಿಗೆ ಕರ್ನಾಟಕ ಅರಣ್ಯ ಇಲಾಖೆ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮ 2000 ಮತ್ತು ಕಾಯ್ದೆ 1999ರ ಇ–ಪೋರ್ಟಲ್ ಪ್ರಕಾರ ಟೆಂಡರ್ ಕರೆಯಲಾಗಿದೆ.

ಇಂಡೆಂಟ್ ಸಂಖ್ಯೆ: 1.ZAK/2022-23/OW/WORK_INDENT478/Call-3. **ಅಂದಾಜು ಮೊತ್ತ (ರೂ. ಗಳಲ್ಲಿ):** Rs. 86,00,000.00. **ಇ.ಎಂ.ಡಿ ಮೊತ್ತ (ರೂ.):** Rs.1,72,000.00

ಈ ಟೆಂಡರ್ ಪ್ರಕಟಣೆ ಪ್ರತಿಯು www.eproc.karnataka.gov.in ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: 08.11.2022, ಕೊನೆಯ ದಿನಾಂಕ: 18.11.2022 ಸಾಯಂಕಾಲ 4.45 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.11.2022 ಸಾಯಂಕಾಲ 05.00 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.11.2022 ಬೆಳಿಗ್ಗೆ 11.30 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ–ಪಾಪಿನಾಯಕನಹಳ್ಳಿ ಮುಖ್ಯರಸ್ತೆ (ಜಂಗಲ್ ರೆಸಾರ್ಟ್ ಹತ್ತಿರ) ಕಮಲಾಪುರ ಇವರ ಕಛೇರಿಯಿಂದ ಅಥವಾ ದೂರವಾಣಿ ಸಂಖ್ಯೆ : 08394–295289 ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಹೊಸಪೇಟೆ ತಾಲ್ಲೂಕು ವಿಜಯನಗರ ಜಿಲ್ಲೆ

ಡಿಐಪಿಆರ್/ವಿಜಯನಗರ/226/ಎಂಸಿಎ/2022–23

ಕೆನರಾ ಬ್ಯಾಂಕ್ Canara Bank
Together We Can
ಸಿಂಡಿಕೇಟ Syndicate
ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಹುಬ್ಬಳ್ಳಿ
2ನೇ ಮಹಡಿ, ಸೆಂಟ್ರಮ್ ಬಿಲ್ಡಿಂಗ್, ಏರ್‌ಪೋರ್ಟ ರಸ್ತೆ, ಹುಬ್ಬಳ್ಳಿ – 580030.
ಫೋ: 0836–2239424/433/434

ಹುಬ್ಬಳ್ಳಿ ವೃತ್ತ ಕಛೇರಿ ಒಳಪಡುವ ಶಾಖೆಗಳಿಗೆ 'ಬಿಬಿ' ವರ್ಗದ ಟಿಆರ್‌ಟಿಎಲ್ ಜ್ಯುವೆಲ್ ಸೇಫಗಳ ಪೂರೈಕೆ ಮತ್ತು ಅನುಸ್ಥಾಪನೆಗೆ ಟೆಂಡರ

ಕೆನರಾ ಬ್ಯಾಂಕನ ವೃತ್ತ ಕಛೇರಿ ಒಳಪಡುವ ಶಾಖೆಗಳಿಗೆ 'ಬಿಬಿ' ವರ್ಗದ TRTL ಜ್ಯುವೆಲ್ ಸೇಫಗಳ ಪೂರೈಕೆ ಮತ್ತು ಅನುಸ್ಥಾಪನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರ ಮತ್ತು ಟೆಂಡರ ಫಾರ್ಮ್‌ಗಾಗಿ ನಮ್ಮ ವೆಬ್ ಸೈಟ್ www.canarabank.com, www.eprocure.gov.in ಅಥವಾ ಮೇಲ್ಕಾಣಿಸಿದ ವಿಳಾಸದಲ್ಲಿರುವ ನಮ್ಮ ಕಚೇರಿಯನ್ನು ಸಂಪರ್ಕಿಸಬಹುದು.

ಮುಚ್ಚಿದ ಲಕೋಟೆಯಲ್ಲಿ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ 01–12–2022 ಮಧ್ಯಾಹ್ನ 3:00ರ ವರೆಗೆ. ಟೆಂಡರ ಪ್ರತಿಕ್ರಿಯೆಯನ್ನು ಸರ್ಕಾರಿ ಇ ಮಾರುಕಟ್ಟೆ (GeM) ಪೋರ್ಟಲ್ https://gem.gov.in/ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ 01–12–2022 ಮಧ್ಯಾಹ್ನ 3–00 ಘಂಟೆಯವರೆಗೆ, ಮುಂದಿನ ಯಾವುದೇ ಮಾಹಿತಿ, ತಿದ್ದುಪಡಿ ಏನೇ ಇದ್ದರೂ ಬ್ಯಾಂಕ್ ವೆಬ್ ಸೈಟ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಅಪೂರ್ಣ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಸ್ಥಳ: ಹುಬ್ಬಳ್ಳಿ ದಿನಾಂಕ : 09–11–2022
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ GOVERNMENT OF KARNATAKA
VIJAYANAGAR INSTITUTE OF MEDICAL SCIENCES, CANTONMENT, BALLARI-583 104
Telephones: Director No.8147796529, CAO No.8147796526 & PA No.8147796539
e-mail :directorvimsbelllary@gmail.com
website: https://vims.karnataka.gov.in

No.VIMS/GNL-I/TENDER/02/2021-22/Call-2 DATE: 07.11.2022

ಮರು–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆ, ಬಳ್ಳಾರಿಗೆ ಆಸ್ಪತ್ರೆಯ ಸ್ವಚ್ಛತೆ & ನೈರ್ಮಲ್ಯ ನಿರ್ವಹಣೆಗೆ ಸಾಮಾಗ್ರಿಗಳನ್ನು ಹಾಗು ಅವಶ್ಯಕ ವಸ್ತುಗಳನ್ನು ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ 1999–2000 ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್:https://eproc.karnataka.gov.in ಮೂಲಕ ಅರ್ಹ ಬಿಡ್‌ದಾರರಿಂದ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ 22/11/2022ರ ಸಂಜೆ 5.00 ಗಂಟೆ ಇರುತ್ತದೆ, ಆಸಕ್ತಿಯುಳ್ಳ ಸರಬರಾಜುದಾರರು ಟೆಂಡರ್ ಸಲ್ಲಿಸಲು ಕೋರಿದೆ ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿದ ವೆಬ್‌ಸೈಟ್ ಮತ್ತು website:https://vims.karnataka.gov.in ಗಳಲ್ಲಿ ಪಡೆಯಲು ಕೋರಿದೆ. ಸದರಿ ಟೆಂಡರಿನ ಒಟ್ಟು ಅಂದಾಜು ಮೊತ್ತ ರೂ.146.00 ಲಕ್ಷಗಳು ಇರುತ್ತದೆ.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/625/ಎಂಸಿಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–31/ಜೆಇ/2022–23/2152 ದಿನಾಂಕ:– 07.11.2022

ಇ– ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ–2ನೇ ಕರೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–31/2022–23 ದಿನಾಂಕ: 07.11.2022

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ತಾಲ್ಲೂಕು ಮಾಯಕೊಂಡ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲೂ– 4ರಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ದಾವಣಗೆರೆ ತಾಲ್ಲೂಕು ಮಾಯಕೊಂಡ ಕ್ಷೇತ್ರ ದಾವಣಗೆರೆ–ಲೋಕಿಕೆರೆ ರಸ್ತೆಯ (ಜಿಮುರ) ಕಿ.ಮೀ. 10.10ರಲ್ಲಿ ಹರಿಯುವ ಹಳ್ಳಕ್ಕೆ ಸೇತುವೆ ನಿರ್ಮಾಣ. ಅಂದಾಜು ಮೊತ್ತ ರೂ. 120.00 ಲಕ್ಷ , ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 17.11.2022 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ 18.11.2022 ಸಂಜೆ 4.30 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/594/ಎಂಸಿಎ/2022–23
ಸಹಿ/– ಕಾರ್ಯಪಾಲಕ ಅಭಿಯಂತರರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ, ನಂ.1 ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ, ದೂರವಾಣಿ: 08176–252204

ಟೆಂಡರ್ ಪ್ರಕಟಣೆ – 13/2022–23 ದಿನಾಂಕ :09.11.2022/ ಐಟಂವಾರು ಟೆಂಡರ್ (ಇ–ಪ್ರ್ಯೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) Two tender System

ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಕೆಪಿಡಬ್ಲ್ಯುಡಿ/ಸಿಪಿಡಬ್ಲ್ಯುಡಿ ಹಾಗೂ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ಸಂಖ್ಯೆ 1 ಕಾಮಗಾರಿ. ಕಾಮಗಾರಿಗಳ ವಿವರ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳು, ಟೆಂಡರ್‌ಗಿಟ್ಟ ಕಾಮಗಾರಿಗಳ ಮೊತ್ತ ರೂ. 186.13 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ.280000/– ಇ–ಪ್ರೊಕ್ಯೂರ್‌ಮೆಂಟ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:09.11.2022 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:25.11.2022 ರ 16.00 ಘಂಟೆಯವರೆಗೆ, ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28.11.2022 ರಂದು 11.00 ಗಂಟೆಗಳು, ಅರ್ಹತೆ ಪಡೆದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1,
ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/708/2022–23

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22864212/080–22863618, ಸಹಾಯವಾಣಿ: 8277799990
Email:directorgokdom@gmail.com Website: https://dom.karnataka.gov.in

ಸಂಖ್ಯೆ: ಅಸಂನಿ/ಅ/ಬಿಎಡ್ & ಡಿಎಡ್/ಸಿಆರ್– 01(1)/2022–23 ದಿನಾಂಕ: 07.11.2022

ಪ್ರಕಟಣೆ

2022–23ನೇ ಸಾಲಿನಲ್ಲಿ ಬಿ.ಎಡ್ & ಡಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ದಿನಾಂಕ: 10–11–2022 ರಿಂದ 10–12–2022 ರವರೆಗೆ ಸಂಜೆ 5.30 ಗಂಟೆಯೊಳಗೆ.

2022–23ನೇ ಸಾಲಿನಲ್ಲಿ ಬಿ.ಎಡ್ & ಡಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ) ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಹಾಗೂ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಪ್ರೋತ್ಸಾಹಿಸಿ ಕಲಿಕಾ ಮತ್ತು ಭೋಧನಾ ಸಾಮಗ್ರಿಗಳನ್ನು ಖರೀದಿಸಲು ಆರ್ಥಿಕ ಸಹಾಯ ಮಾಡುವ ಹಿತದೃಷ್ಟಿಯಿಂದ, National Council for Teacher Education ನಿಂದ ಮಾನ್ಯತೆ ಪಡೆದಿರುವ ಬಿ.ಎಡ್ ಹಾಗೂ Department of state Educational Research and Training ನಿಂದ ಮಾನ್ಯತೆ ಪಡೆದಿರುವ ಡಿ.ಎಡ್ ಕೋರ್ಸ್‌ಗಳನ್ನು ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಬಿ.ಎಡ್ & ಡಿ.ಎಡ್ ಕೋರ್ಸ್‌ಗಳಲ್ಲಿ ದಾಖಲಾತಿ ಹೊಂದಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ರೂ. 25,000/–ಗಳ ವಿಶೇಷ ಪ್ರೋತ್ಸಾಹಧನವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ಬ್ಯಾಂಕ್‌ಖಾತೆಗೆ ಆನ್‌ಲೈನ್ ಮುಖಾಂತರ ಜಮಾ ಮಾಡಲಾಗುವುದು. ಈ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಅಲ್ಪಸಂಖ್ಯಾತರ ಸಮುದಾಯದ ಬಿ.ಎಡ್ & ಡಿ.ಎಡ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಲ್ಲಾ ದಾಖಲೆಗಳ ಸಹಿತ ಸೇವಾಸಿಂಧು ಪೋರ್ಟಲ್ (https://sevasindhu.karnataka.gov.in) ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ:–8277799990 ಇಲಾಖಾ Website:-https://dom.karnataka.gov.in ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

DIPR/CP/3029/Zen/2022-23

ಕರ್ನಾಟಕ ಸರ್ಕಾರ
ನಿರ್ದೇಶಕರ ಕಾರ್ಯಾಲಯ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ
1ನೇ ಅಡ್ಡರಸ್ತೆ, ಮಾಗಡಿ ಮುಖ್ಯರಸ್ತೆ, ಬೆಂಗಳೂರು - 560023.
ದೂರವಾಣಿ: 080-23206125/6, ಇ-ಮೇಲ್: directorsihfw.bg@gmail.com

ಸಂಖ್ಯೆ:ರಾಆಕುಕಸಂ/ಎಸ್.ಹೆಚ್.ಎಂ/ವಾಹನ ಸೇವೆ/06/2022-23 ದಿನಾಂಕ: 09-11-2022

ಟೆಂಡರ್ ಪ್ರಕಟಣೆ

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು ಇಲ್ಲಿಗೆ 2022–23ನೇ ಸಾಲಿಗೆ ಖಾಸಗಿ ವಾಹನಗಳನ್ನು ಬಾಡಿಗೆ ಒದಗಿಸುವ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್‌ಗಳನ್ನು ದಿನಾಂಕ: 09–11–2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ದಿನಾಂಕ: 30–11–2022ರಂದು ಸಂಜೆ 5.30 ರ ಒಳಗಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: http://eproc.karnataka.gov.in ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು
ರಾ.ಆ.ಕು.ಕ.ಸಂಸ್ಥೆ, ಬೆಂಗಳೂರು

ವಾಸಾಸಂಇ/ವಾ.ಪ್ರ/3030/ಅಡ್ವರ್ಟೋರ್/2022–23

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268 E.Mail : eepwdgad@gmail.com

ನಂ:ಕಾನಿಇಂಗಃಲೋಇಃಪಿಬಿ– :ವಿವಿಧ: 2022–23/3813 ದಿನಾಂಕ: 07.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 361.05 ಲಕ್ಷ ಮೊತ್ತದಲ್ಲಿ ಒಟ್ಟು 7 ಕಾಮಗಾರಿಗಳಿಗೆ (ಕನಿಷ್ಟ ಮೊತ್ತ ರೂ: 7.59 ಲಕ್ಷ ಗರಿಷ್ಟ ಮೊತ್ತ ರೂ: 96.11 ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ– ಪ್ರೊಕ್ಯೂರಮೆಂಟ್ (ಇ-Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 2 ಹಾಗೂ 3 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. eproc. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- 160457,160534,160368,160607,160596 160586 & 158992-SC

ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕಃ– 15-11-2022, ಟೆಂಡರ್ ಸಲ್ಲಿಸುವ ದಿನಾಂಕಃ– 21-11-2022 ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕಃ– 22-11-2022 ಆರ್ಥಿಕ ಬಿಡ್ ತೆರೆಯುವ ದಿನಾಂಕಃ– 23-11-2022 ಜಿ ಎಸ್ ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಅದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರಲೇ ಭರಿಸತಕ್ಕದ್ದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ, ವಿಭಾಗ ಗದಗ

ವಾ.ಸಾ.ಇ/ಗದಗ/420/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ: ಮೈಸೂರು

ಸಂ: ಕರಾಸಾ/ಕಾನಿಅ/ಮೈ/ಕಿಅ/478/2022–23 ದಿನಾಂಕ:09.11.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ:19/2022–23

ಕರ್ನಾಟಕ ಲೋಕೋಪಯೋಗಿ ಇಲಾಖೆ/ ಸಿ.ಪಿ.ಡಬ್ಲ್ಯೂಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ. 19ಕ್ಕೆ ಐಟಂವಾರು ಟೆಂಡರ್ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕೆಲಸದ ಹೆಸರು: ಬೆಳ್ತಂಗಡಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿ. **ಟೆಂಡರ್ ಅಂದಾಜು ಮೊತ್ತ:** ರೂ. 1006.27 ಲಕ್ಷಗಳು. **ಭದ್ರತಾ ಠೇವಣಿ:** ರೂ. 15,00,000/–.

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.12.2022.** 2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು **ದಿನಾಂಕ: 18.11.2022ರ** ನಂತರ ಪಡೆಯಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕ.ರಾ.ರ.ಸಾ. ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿಮಂಟಪ, ಮೈಸೂರು ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂ: 0821–2498828.

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಮೈಸೂರು.

ವಾಸಾಸಂಇ/ವಾಪ್ರ/ಜಿಎ/3022/2022–23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ವೆಂಟ್ ಪೋರ್ಟಲ್‌ನಲ್ಲಿ CONSTRUCTION OF UNDERPASS AT CH 221.377 KM OF YETTINAHOLE GRAVITY CANAL 2ನೇ ಕರೆಯ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.511.42 ಲಕ್ಷಗಳಿಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್ ನಲ್ಲಿ ದಿ: 10.11.2022 ರಿಂದ ದಿ:. 25.11.2022ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ ಪ್ರೀಬಿಡ್ ಸಭೆ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: 25.11.2022ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ–eeypd2tmk@gmail.com

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
ದೂರವಾಣಿ :– 08182-226268 ಇ–ಮೇಲ್ : dudc_smg@yahoo.co.in

ನಂ:SMGDC.DUDC/PLAN/15/89862/2022 ದಿನಾಂಕ : 07.11.2022

ಟೆಂಡರ್ ಅಧಿಸೂಚನೆ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಸಭೆಯ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ : 1. ಕಾಮಗಾರಿಗಳ ವಿವರ : **Development of Roads, Drain and Other Works for the Urban Local Body CMC Bhadravathi Limits Under Amruth Nagarothana (Municipality) Phase - 4 Project (DMA/2022-23/OW/WORK_INDENT 133579/CALL-2)** ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **1912.37** (ಜಿ.ಎಸ್.ಟಿ ಹೊರತುಪಡಿಸಿ) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) : **19.12** ಗುತ್ತಿಗೆ ಅವಧಿ: **18 ತಿಂಗಳು (ಮಳೆಗಾಲ ಹೊರತುಪಡಿಸಿ).**

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.eproc.karnataka.gov.in** ನಲ್ಲಿ ಸಲ್ಲಿಸುವುದು, ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು.

(1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ : **08.11.2022** (2) ಪೂರ್ವಭಾವಿ (PRE-BID MEETING) : **16.11.2022 ರ ಪೂರ್ವಾಹ್ನ 11.00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ, ಶಿವಮೊಗ್ಗ** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **25.11.2022 ರ ಸಂಜೆ 5.30 ಗಂಟೆಗೆ** (4) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **28.11.2022 ರ ಪೂರ್ವಾಹ್ನ 11.00 ಗಂಟೆಗೆ.** (5) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ : **09.12.2022** ರ ಬೆಳಗ್ಗೆ **11.00 ಗಂಟೆಗೆ ಅಥವಾ ಮುಂದೆ ಸೂಚಿಸಿದ ದಿನದಂದು.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.65-11 ಝೇಂಕಾರ್/2022-23

ಸುಭಾಷಿತ

ನಾನು ನನ್ನೊಂದಿಗೆ ವಿನಾ ಬೇರೆ ಯಾರೊಂದಿಗೂ ಸ್ಪರ್ಧೆಗೆ ಇಳಿದಿಲ್ಲ. ನಿರಂತರವಾಗಿ ನನ್ನನ್ನು ಸುಧಾರಿಸಿಕೊಳ್ಳುವುದೇ ನನ್ನ ಗುರಿ.

-ಬಿಲ್ ಗೇಟ್ಸ್

ಇಡಬ್ಲ್ಯುಎಸ್ ಕೋಟಾ: ಮೀಸಲಾತಿಯ ವ್ಯಾಪ್ತಿ ಹಿಗ್ಗಿಸಿದ ಸುಪ್ರೀಂ ಕೋರ್ಟ್

ಸಂವಿಧಾನದ 103ನೆಯ ತಿದ್ದುಪಡಿ ಮೂಲಕ ಜಾರಿಗೆ ತಂದಿರುವ, ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸುವ ಕ್ರಮವು 'ಮೀಸಲಾತಿ'ಯನ್ನು ಇದುವರೆಗೆ ಅರ್ಥ ಮಾಡಿಕೊಂಡಿದ್ದ ರೀತಿಯನ್ನು ಬದಲಾಯಿಸಿದೆ. 2019ರ ಲೋಕಸಭಾ ಚುನಾವಣೆಗೂ ಮೊದಲು ಕೇಂದ್ರ ಸರ್ಕಾರ ಕೈಗೊಂಡ ರಾಜಕೀಯ ತೀರ್ಮಾನವೊಂದಕ್ಕೆ ಸುಪ್ರೀಂ ಕೋರ್ಟ್‌ನ ಈ ತೀರ್ಪು ಸಾಂವಿಧಾನಿಕ ಬೆಂಬಲ ಒದಗಿಸಿದೆ. ಈ ತಿದ್ದುಪಡಿಯು ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಆರ್ಥಿಕ ನೆಲೆಯಲ್ಲಿ ಹೊಸ ಬಗೆಯ ಮೀಸಲಾತಿ ಕಲ್ಪಿಸಿತು. ಈ ರೀತಿಯ ಮೀಸಲಾತಿಯನ್ನು ಸಂವಿಧಾನವು ಕಲ್ಪಿಸಿಕೊಂಡಿರಲಿಲ್ಲ. ಈ ಮೀಸಲಾತಿಯು ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತಂದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದಲ್ಲಿದ್ದ ಐವರು ನ್ಯಾಯಮೂರ್ತಿಗಳ ಪೈಕಿ ಮೂವರು ನ್ಯಾಯಮೂರ್ತಿಗಳು ಹೇಳಿದ್ದಾರೆ. ಸಂವಿಧಾನದಲ್ಲಿ ಹೇಳಿರುವ ಮೀಸಲಾತಿಯು, ಶತಮಾನಗಳಿಂದ ಆಚರಿಸಿಕೊಂಡು ಬಂದಿರುವ ಹಾಗೂ ಇಂದಿಗೂ ನಡೆದಿರುವ ತಾರತಮ್ಯದ ಕಾರಣದಿಂದಾಗಿ ನೋವು ಅನುಭವಿಸಿರುವ ವರ್ಗಗಳಿಗೆ ಸರ್ಕಾರಿ ಹುದ್ದೆಗಳು ಹಾಗೂ ಶಿಕ್ಷಣದಲ್ಲಿ ಪ್ರಾತಿನಿಧ್ಯ ಕೊಡುವ ಉದ್ದೇಶ ಹೊಂದಿದೆ. ಹಾಗಾಗಿ, ಸಾಮಾಜಿಕ ಹಿಂದುಳಿದಿರುವಿಕೆ ಮತ್ತು ಅದರ ಪರಿಣಾಮವಾಗಿ ಆಗುವ ಆರ್ಥಿಕ ಹಿಂದುಳಿದಿರುವಿಕೆಯು ಮೀಸಲಾತಿ ಕಲ್ಪಿಸುವುದಕ್ಕೆ ಅರ್ಹವಾಗುವ ಮಾನದಂಡ ಎಂದು ಅದು ಹೇಳಿದೆ. 1992ರಲ್ಲಿ ಬಂದ ಇಂದಿರಾ ಸಹಾನಿ ಪ್ರಕರಣದ ತೀರ್ಪಿನಲ್ಲಿ ಕೂಡ ಸುಪ್ರೀಂ ಕೋರ್ಟ್, ಆರ್ಥಿಕ ಮಾನದಂಡವನ್ನು ಮಾತ್ರ ಆಧರಿಸಿದ ಮೀಸಲಾತಿಗೆ ಅವಕಾಶ ಇಲ್ಲ ಎಂದು ಸ್ಪಷ್ಟವಾಗಿ ಹೇಳಿತ್ತು. ಆದರೆ ಈಗ ಬಂದಿರುವ ತೀರ್ಪು, ಸಾಮಾಜಿಕ ತಾರತಮ್ಯಕ್ಕೆ ಗುರಿಯಾಗಿರದ ಪ್ರಭಾವಿ ಜಾತಿಗಳಲ್ಲಿನ ಆರ್ಥಿಕವಾಗಿ ಹಿಂದುಳಿದಿರುವವರ ಅಭಿವೃದ್ಧಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಅನುಮತಿ ಒದಗಿಸಿದೆ. ಇಡಬ್ಲ್ಯುಎಸ್ ವರ್ಗಕ್ಕೆ ಮೀಸಲಾತಿ ಕಲ್ಪಿಸುವುದಕ್ಕೆ ಅವಕಾಶ ನೀಡುವ ಮೂಲಕ ಮೀಸಲಾತಿಯ ಮೂಲ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್ ಹಿಗ್ಗಿಸಿದೆ. ಹೀಗೆ ಮಾಡಿದ್ದರಿಂದ ಕೆಲವು ಅನಿರೀಕ್ಷಿತ ಪರಿಣಾಮಗಳು ಎದುರಾಗಬಹುದು.

ಮೀಸಲಾತಿಯ ಮೂಲ ವ್ಯಾಪ್ತಿಯನ್ನು ಹಿಗ್ಗಿಸಿರುವುದರಿಂದ ಕೆಲವು ಅನಿರೀಕ್ಷಿತ ಪರಿಣಾಮಗಳು ಎದುರಾಗಬಹುದು

ಮೀಸಲಾತಿ ಒದಗಿಸುವುದಕ್ಕೆ ಆರ್ಥಿಕವಾಗಿ ಹಿಂದುಳಿದಿರುವಿಕೆ ಕೂಡ ಒಂದು ಮಾನದಂಡ ಆಗಬಹುದು ಎಂಬ ವಿಚಾರದಲ್ಲಿ ಸಂವಿಧಾನ ಪೀಠ ದಲ್ಲಿದ್ದ ಐವರು ನ್ಯಾಯಮೂರ್ತಿಗಳಲ್ಲಿಯೂ ಸಹಮತ ವ್ಯಕ್ತವಾಗಿದೆ. ಆದರೆ, ಭಿನ್ನಮತದ ತೀರ್ಪು ಬರೆದಿರುವ ನ್ಯಾಯಮೂರ್ತಿಗಳು, ಈಗ ಜಾತಿಯ ಮಾನದಂಡದ ಅಡಿಯಲ್ಲಿ ಮೀಸಲಾತಿ ಪಡೆಯುತ್ತಿರುವ ವರ್ಗಗಳಲ್ಲಿನ ಬಡವರನ್ನು ಇಡಬ್ಲ್ಯುಎಸ್ ಕೋಟಾದಿಂದ ಹೊರಗೆ ಇರಿಸುವುದು ತಾರತಮ್ಯದ ನಡೆ, ಹಾಗಾಗಿ ಅದು ಸಂವಿಧಾನದ ಮೂಲ ಸ್ವರೂಪಕ್ಕೆ ಹೊಂದುವುದಿಲ್ಲ ಎಂದು ಹೇಳಿದ್ದಾರೆ. ಭಿನ್ನಮತದ ತೀರ್ಪು ಬರೆದಿರುವ ನ್ಯಾಯಮೂರ್ತಿಗಳ ಪೈಕಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸ್ಥಾನದಿಂದ ಈಗಷ್ಟೇ ನಿರ್ಗಮಿಸಿರುವ ನ್ಯಾಯಮೂರ್ತಿ ಯು.ಯು. ಲಲಿತ್ ಅವರೂ ಒಬ್ಬರು. ಅವರ ಭಿನ್ನಮತದ ತೀರ್ಪಿನಲ್ಲಿರುವ ಮಾತುಗಳಲ್ಲಿ ಹುರುಳಿದೆ. ಏಕೆಂದರೆ, ಇಡಬ್ಲ್ಯುಎಸ್ ಕೋಟಾ ಸೃಷ್ಟಿಯ ಹಿಂದಿರುವ ರಾಜಕೀಯ ಲೆಕ್ಕಾಚಾರವು ಸಂವಿಧಾನದ ಮೂಲ ಆಶಯವಾಗಿರುವ ಸಮಾನತೆಯ ಪರಿಕಲ್ಪನೆಗೆ ವಿರುದ್ಧವಾದುದು. ಆರ್ಥಿಕ ಮಾನದಂಡದ ಆಧಾರದಲ್ಲಿ ಒಂದು ವರ್ಗಕ್ಕೆ ಕೊಡಲು ಉದ್ದೇಶಿಸಿರುವ ಪ್ರಯೋಜನವನ್ನು, ಅದೇ ಮಾನದಂಡದ ಅಡಿಯಲ್ಲಿ ಅರ್ಹವಾಗುವ ಇನ್ನೊಂದು ವರ್ಗಕ್ಕೆ ನಿರಾಕರಿಸುವುದು ಸರಿಯಲ್ಲ.

ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಎಲ್ಲ ಬಗೆಯ ಮೀಸಲಾತಿಗಳ ಒಟ್ಟು ಪ್ರಮಾಣವು ಶೇ 50ಕ್ಕಿಂತ ಹೆಚ್ಚಿರಬಾರದು ಎಂದು ಹೇಳಿತ್ತು. ಈ ನಿಯಮವನ್ನು ಇಡಬ್ಲ್ಯುಎಸ್ ಕೋಟಾ ಉಲ್ಲಂಘಿಸಿದೆಯೇ ಎಂಬುದು ಈ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಕೋರ್ಟ್ ಮುಂದೆ ಇದ್ದ ಇನ್ನೊಂದು ಪ್ರಶ್ನೆಯಾಗಿತ್ತು. ಶೇ 50ರ ಮಿತಿಯು ಈಗಾಗಲೇ ಇರುವ ಮೀಸಲಾತಿಗಳಿಗೆ ಅನ್ವಯ ಆಗುತ್ತದೆ, ಇಡಬ್ಲ್ಯುಎಸ್‌ಗೆ ಇದು ಅನ್ವಯಿಸದು ಎಂದು ಬಹುಮತದ ತೀರ್ಪು ಹೇಳಿದೆ. ಆದರೆ ಭಿನ್ನಮತದ ತೀರ್ಪಿನಲ್ಲಿ, ಶೇ 50ರ ನಿಯಮದ ಉಲ್ಲಂಘನೆಯು ಮುಂದೆ ಇನ್ನಷ್ಟು ಉಲ್ಲಂಘನೆಗಳಿಗೆ ದಾರಿ ಮಾಡಿಕೊಡಬಹುದು ಎಂದು ಹೇಳಲಾಗಿದೆ. ಪ್ರತಿಭೆ ಹಾಗೂ ಮೀಸಲಾತಿ ನಡುವಿನ ಸಮತೋಲನಕ್ಕೆ ಒಮ್ಮೆ ಧಕ್ಕೆ ಬಂದರೆ, ಮುಂದೆ ಮತ್ತಷ್ಟು ಇಂತಹ ಸಂದರ್ಭಗಳು ಎದುರಾಗಬಹುದು. ಶೇ 50ರ ಗಡಿಯನ್ನು ಮೀರುವ ವಿಶೇಷ ಸಂದರ್ಭ ಇರಬಹುದು ಎಂದು 1992ರ ತೀರ್ಪಿನಲ್ಲಿ ಕೋರ್ಟ್ ಹೇಳಿತ್ತು. ಆದರೆ, ಇಡಬ್ಲ್ಯುಎಸ್ ಮಾದರಿಯಲ್ಲಿ ನಿಯಮವನ್ನು ಮೀರುವ ಸಂದರ್ಭ ಬರಬಹುದು ಎಂದು ಅದು ಊಹಿಸಿರಲಿಕ್ಕಿಲ್ಲ. ಇಡಬ್ಲ್ಯುಎಸ್ ಕೋಟಾದ ಅಡಿಯಲ್ಲಿ ವ್ಯಾವಹಾರಿಕವಾಗಿಯೂ ಒಂದಿಷ್ಟು ಸಮಸ್ಯೆಗಳು ಇವೆ. ಇಡಬ್ಲ್ಯುಎಸ್ ಅಡಿ ಮೀಸಲಾತಿ ಸೌಲಭ್ಯ ಪಡೆಯಲು ವಾರ್ಷಿಕ ಆದಾಯ ಮಿತಿ ₹ 8 ಲಕ್ಷ ಎಂದು ಹೇಳಿರುವ ಕಾರಣದಿಂದಾಗಿ, ವಾಸ್ತವದಲ್ಲಿ ಮೀಸಲಾತಿ ಅಗತ್ಯವಿಲ್ಲದವರೂ ಇದರ ಪ್ರಯೋಜನ ಪಡೆಯಲು ಮುಂದಾಗಬಹುದು. ಇಡಬ್ಲ್ಯುಎಸ್ ಅಡಿಯಲ್ಲಿ ಹೊಸ ಬಗೆಯ ಮೀಸಲಾತಿ ಕಲ್ಪಿಸಲು ಹೊಸ ಕಾರಣ ನೀಡಿದ್ದರಿಂದಾಗಿ ಹಾಗೂ ಶೇ 50ರ ಮಿತಿಯನ್ನು ಮೀರಿದ್ದರಿಂದಾಗಿ ಮುಂದೆ ಹಲವು ಸಮಸ್ಯೆಗಳು ಸೃಷ್ಟಿಯಾಗಬಹುದು. ಮುಂದಿನ ಸರ್ಕಾರಗಳು ಇತರ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಹೊಸ ಕಾರಣಗಳನ್ನು ಅನ್ವೇಷಿಸಬಹುದು. ಇದು ಮುಂದೆ ಮತ್ತೆ ನ್ಯಾಯಾಲಯದ ಮೆಟ್ಟಿಲೇರಬಹುದು.

ದಿನದ ಟ್ವೀಟ್

ಮಹಿಳಾ ಶಕ್ತಿಗೆ ನಮನ

ಇಂದು ಬೆಳಿಗ್ಗೆ ನಾನು ಪ್ರಯಾಣಿಸಿದ ವಿಮಾನದಲ್ಲಿ ಇದ್ದ ಎಲ್ಲ ಸಿಬ್ಬಂದಿಯೂ ಮಹಿಳೆಯರೇ ಆಗಿದ್ದರು. ಭಾರತದಲ್ಲಿ ಮಹಿಳಾ ಪೈಲಟ್‌ಗಳ ಅನುಪಾತವು ಶೇ 12.4ರಷ್ಟು ಇದ್ದು, ಇದು ಜಗತ್ತಿನಲ್ಲೇ ಅತ್ಯಂತ ಹೆಚ್ಚು ಎಂಬುದು ನಿಮಗೆ ಗೊತ್ತಿದೆಯೇ? ಅಮೆರಿಕದಲ್ಲಿ ಈ ಅನುಪಾತ ಶೇ 5.5ರಷ್ಟು ಇದ್ದರೆ, ಯು.ಕೆ.ಯಲ್ಲಿ ಶೇ 4.7ರಷ್ಟು ಇದೆ. ಭಾರತದ ವಾಯುಯಾನಕ್ಕೆ ಬಲ ತುಂಬಿರುವ ಮಹಿಳಾ ಶಕ್ತಿಗೆ ನನ್ನ ನಮನ (ಹೌದು, ನೆಲದ ಮೇಲಿನ ಕಾರ್ಯಗಳಲ್ಲಿನ ಅವರ ಸಾಮರ್ಥ್ಯ ಸಹ ಗೊತ್ತಿರುವಂಥದ್ದೇ!)

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ 'ಅಸ್ಪೃಶ್ಯತಾ ತಪಾಸಣಾ ಶಿಬಿರ'ಗಳನ್ನು ಏರ್ಪಡಿಸಬೇಕಿದೆ.

ರಘೋತ್ತಮ ಹೊ.ಬ., ಬರಹಗಾರ

25 ವರ್ಷಗಳ ಹಿಂದೆ

ಸೋಮವಾರ, 10-11-1997

• ಸೋಮಶೇಖರ್ ಪ್ರಕರಣ: 'ನಿಖರವಾದ ಆಧಾರಗಳಿಲ್ಲ'

ಬೆಂಗಳೂರು, ನ. 9– 'ಮಾಜಿ ಉನ್ನತ ಶಿಕ್ಷಣ ಸಚಿವ ಬಿ. ಸೋಮಶೇಖರ್ ಅವರು ಕಾನೂನು ಪದವಿ ಪರೀಕ್ಷೆಯಲ್ಲಿ ಕಾಪಿ ಮಾಡಿ ಸಿಕ್ಕಿಬಿದ್ದು ಡಿಬಾರ್ ಆಗಿದ್ದರು ಎಂಬ ಆರೋಪಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ನಿಖರವಾಗಿ ಹೇಳಲು ಸಾಧ್ಯವಿಲ್ಲ' ಎಂದು, ಆರೋಪದ ಬಗ್ಗೆ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಕೆ. ಶಿವಶಂಕರ್ ಭಟ್ ವಿಚಾರಣಾ ಆಯೋಗ ತಿಳಿಸಿದೆ.

ಒಂದು ವೇಳೆ ಕಾಪಿ ಮಾಡಿದ್ದಾರೆ ಎಂದು ಭಾವಿಸಿದರೂ ಅವರು ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಿರುತ್ತಾರೆ ಎಂದು ಆಯೋಗ ತನ್ನ ವರದಿಯಲ್ಲಿ ಸ್ಪಷ್ಟಪಡಿಸಿದೆ.

• ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರಕ್ಕೆ ಸಿದ್ಧ: ಬಿ.ಎಸ್. ಯಡಿಯೂರಪ್ಪ

ಹುಬ್ಬಳ್ಳಿ, ನ. 9– ರಾಜ್ಯ ಜನತಾದಳ ಸರ್ಕಾರದ ಆಂತರಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ 'ಸಂದರ್ಭ ಬಂದಾಗ ಇತರ ಪಕ್ಷಗಳ ಜತೆಗೆ ಸಮ್ಮಿಶ್ರ ಸರ್ಕಾರ ರಚಿಸಲು ಬಿಜೆಪಿ ಸಿದ್ಧ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಅವರು ಇಂದು ಇಲ್ಲಿ ಪ್ರಕಟಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಸರ್ಕಾರ ಅಸ್ಥಿರಗೊಂಡಿದೆ. ರಾಜಕೀಯ ಧ್ರುವೀಕರಣದ ಸಂದರ್ಭ ಈಗ ಬಂದಿದೆ. ಅಂಥ ಪರಿಸ್ಥಿತಿ ಬಂದರೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಗೆ ಸಿದ್ಧ' ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 10-11-1972

• ಬಸ್ ಮಾರ್ಗಗಳ ರಾಷ್ಟ್ರೀಕರಣಕ್ಕೆ ಕ್ರಮ

ಬೆಂಗಳೂರು, ನ. 9– ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಬಸ್ಸು ಮಾರ್ಗಗಳನ್ನು ರಾಷ್ಟ್ರೀಕರಿಸುವ ದಿಸೆಯಲ್ಲಿ ಪ್ರಥಮ ಹೆಜ್ಜೆಯಾಗಿ ರಾಜ್ಯ ಸಾರಿಗೆ ಸಂಸ್ಥೆಯ ಹಾಸನ ವಿಭಾಗವನ್ನು ಹಾಸನ ಮತ್ತು ಮಂಗಳೂರು ವಿಭಾಗಗಳಾಗಿ ವಿಭಜಿಸಲು ನಿರ್ಧರಿಸಲಾಗಿದೆ.

ಹೊಸ ವಿಭಾಗದ ಕಚೇರಿ ಹಾಗೂ ರಾಷ್ಟ್ರೀಕೃತ ಬಸ್ಸುಗಳ ಡಿಪೋಗಳಿಗಾಗಿ ಮಂಗಳೂರಿನಲ್ಲಿ ನಿವೇಶನವನ್ನು ಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಠ್ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

• ಹತ್ತು ತಿಂಗಳಲ್ಲಿ ರಾಜ್ಯ ಸಾರಿಗೆ ಸಂಸ್ಥೆಗಳಿಕೆ 3 ಕೋಟಿ ರೂ ಹೆಚ್ಚು

ಬೆಂಗಳೂರು, ನ. 9– ದಕ್ಷ ಆಡಳಿತದ ಗಾಳಿ ಬೀಸಿದ ಪರಿಣಾಮವಾಗಿ, ಮೈಸೂರು ರಾಜ್ಯ ಸಾರಿಗೆ ಸಂಸ್ಥೆಯು ಕಳೆದ ಹತ್ತು ತಿಂಗಳುಗಳ ಅವಧಿಯಲ್ಲಿ ಕಳೆದ ವರ್ಷಕ್ಕಿಂತ ಸುಮಾರು 3 ಕೋಟಿ ರೂಪಾಯಿಗಳಷ್ಟು ಹೆಚ್ಚು ಆದಾಯ ಕಂಡಿದೆ.

ಕಳೆದ ವರ್ಷ ಜನವರಿಯಿಂದ ಅಕ್ಟೋಬರ್ 21ರವರೆಗೆ ಬಂದಿದ್ದ ವರಮಾನ 19.65 ಕೋಟಿ ರೂ., ಈ ವರ್ಷ ಇದು 22.54 ಕೋಟಿ ರೂಪಾಯಿಗಳಿಗೆ ಏರಿದೆ.

ಪೃಥ್ವೀರಕ್ಷಣೆಯ ಈ ಸಭೆಯಲ್ಲೂ ಮಾತಿನ ಅತಿವೃಷ್ಟಿ, ಕೆಲಸದ ಕಡುಬರ

ಕುದಿಕೊಪ್ಪರಿಗೆಯ ಕಡೆ ದೌಡು

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಬಿಸಿ ಪ್ರಳಯದಿಂದ ಬಚಾವಾಗುವುದು ಹೇಗೆಂಬ ಬಗ್ಗೆ ಈಜಿಪ್ಟಿನ ಶರ್ಮ್-ಎಲ್-ಶೇಖ್ ನಗರದಲ್ಲಿ ಇದೀಗ 27ನೇ ಜಾಗತಿಕ ಸಭೆ ನಡೆಯುತ್ತಿದೆ. 'ಕುದಿಕೊಪ್ಪರಿಗೆಯ ಕಡೆ ಇಡೀ ಜಗತ್ತು ಧಾವಿಸುತ್ತಿದೆ: ಕೈಕೈ ಹಿಡಿದುಕೊಂಡು ಬಚಾವಾಗಬೇಕು ಇಲ್ಲವೆ ಕಮರಿಗೆ ಒಟ್ಟಾಗಿ ಧುಮುಕಿ ಕರಕಲಾಗಬೇಕು' ಎಂಬರ್ಥದ ಉಗ್ರ ಮಾತುಗಳೊಂದಿಗೆ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಆರಂಭದ ಬ್ಯಾಟಿಂಗ್ ಮಾಡಿದ್ದಾರೆ.

ಕಳೆದ ವರ್ಷ ಇಂಗ್ಲೆಂಡಿನ ಗ್ಲಾಸ್ಗೊ ನಗರದಲ್ಲಿ ನಡೆದ ಕಾಪ್ 26ರ ಸಭೆಗೆಂದು ವಿಶ್ವಸಂಸ್ಥೆಯೇ ಸಿನಿಮೀಯ ದೃಶ್ಯಗಳನ್ನು ಸಿದ್ಧಪಡಿಸಿತ್ತು. ದೈತ್ಯ ಡೈನೊಸಾರ್ ಪ್ರಾಣಿಯೊಂದು ಸಭೆಗೆ ನುಗ್ಗಿ, ವಿಶ್ವ ನಾಯಕರಿಗೆ ಬದುಕುಳಿಯುವ ಪಾಠ ಹೇಳಿತ್ತು. 'ಬಾಹ್ಯಾಕಾಶದಿಂದ ಉಲ್ಕಾಶಿಲೆಗಳು ಬಿದ್ದಿದ್ದರಿಂದ ನಾವಂತೂ ನಾಮಾವಶೇಷ ಆದೆವು; ಬುದ್ಧಿವಂತ ಜೀವಿ ಎನ್ನಿಸಿಕೊಂಡ ನಿಮಗೇನಾಗಿದೆ ಧಾಡಿ? ಈಗಲಾದರೂ ಎದ್ದು ಬಚಾವು ಮಾಡಿಕೊಳ್ಳಿ' ಎಂದು ಹೂಂಕರಿಸಿ ಹೊರಟು ಹೋಗಿತ್ತು.

ಈ ಬಾರಿ ಅಂಥ ಸಿನಿಮೀಯ ದೃಶ್ಯ ಇರಲಿಲ್ಲ. ಆದರೆ ವ್ಯಂಗ್ಯ, ವಾಗ್ವಾದಗಳಿಗೆ ಬರವಿಲ್ಲ. ಮೊದಲ ವ್ಯಂಗ್ಯ ಏನೆಂದರೆ, ಎರಡು ವಾರಗಳ ಇಡೀ ಅಧಿವೇಶನದ ಪ್ರಾಯೋಜಕತ್ವವನ್ನು ಕೊಕಾಕೋಲಾ ಕಂಪನಿಯೇ ವಹಿಸಿಕೊಂಡಿದೆ. ತಂಪು ಪೇಯದ ಬಾಟಲಿಗಳಿಗೆಂದೇ ವರ್ಷಕ್ಕೆ 32 ಲಕ್ಷ ಟನ್ ಪ್ಲಾಸ್ಟಿಕ್ ದ್ರವ್ಯವನ್ನು ಬಳಸುವ ಈ ಕಂಪನಿ 'ಜಗತ್ತಿನ ಅತಿ ದೊಡ್ಡ ಪ್ಲಾಸ್ಟಿಕ್ ಕೊಳಕುಗಾರ' ಎಂಬ ಕುಖ್ಯಾತಿಯನ್ನು ಕಳೆದ ವರ್ಷವಷ್ಟೇ ಮುಡಿಗೇರಿಸಿಕೊಂಡಿತ್ತು. ಗ್ರೀನ್ ಪೀಸ್ ಸಂಘಟನೆಯ ದಾಖಲೆ ಪ್ರಕಾರ, ಈ ಕಂಪನಿಯಿಂದಾಗಿ ಪ್ರತಿವರ್ಷ 120 ಶತಕೋಟಿ ಪ್ಲಾಸ್ಟಿಕ್ ಬಾಟಲಿಗಳು ಪರಿಸರಕ್ಕೆ ಸೇರುತ್ತಿವೆ.

ತಾನು ಬದಲಾಗಲಿದ್ದೇನೆಂದು ಕೊಕಾಕೋಲಾ ಕಂಪನಿ ಹೇಳುತ್ತಿದೆ. ಸಸ್ಯಮೂಲಗಳಿಂದಲೇ ಅದು ಹೊಸ ಬಗೆಯ ಪ್ಲಾಸ್ಟಿಕ್ ದ್ರವ್ಯವನ್ನು, ಪೇಯದ ಬಾಟಲಿಗಳನ್ನು ಸಿದ್ಧಪಡಿಸುತ್ತಿದೆಯಂತೆ. ಈಗಾಗಲೇ 900 (ಕೋಟಿ ಅಲ್ಲ, ಬರೀ 900) ಪೆಟ್ ಬಾಟಲಿಗಳನ್ನು ತಯಾರಿಸಿದೆಯಂತೆ. ಇನ್ನು ಮೂರು ವರ್ಷಗಳೊಳಗೆ ತಾನು 30 ಲಕ್ಷ ಟನ್ ಕಮ್ಮಿ ಪ್ಲಾಸ್ಟಿಕ್ ಬಳಸುವುದಾಗಿ ಹೇಳಿಕೊಂಡಿದೆ. ಮಾರುಕಟ್ಟೆಗೆ ಬಿಡುವ ಪ್ರತೀ ಬಾಟಲಿಯನ್ನೂ ಹಿಂದಕ್ಕೆ ಪಡೆದು ಅದನ್ನೇ ಮರುಬಳಕೆ ಮಾಡುವುದಾಗಿ ತನ್ನ ಜಾಲತಾಣದಲ್ಲಿ ಹೇಳಿದೆ.

ಸಸ್ಯಮೂಲಗಳಿಂದಲೇ ಪರಿಸರಸ್ನೇಹಿ ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸುವ ತಂತ್ರಜ್ಞಾನ ಈಗಲ್ಲ, 1992ರಲ್ಲಿ ಬ್ರೆಝಿಲ್‌ನ ರಿಯೊ ನಗರದಲ್ಲಿ ನಡೆದ ಮೊದಲ ಶೃಂಗಸಭೆಯಲ್ಲೇ ಪ್ರದರ್ಶನಕ್ಕೆ ಬಂದಿತ್ತು. ಆದರೆ ಪೆಟ್ರೋತೈಲದಿಂದ ಪ್ಲಾಸ್ಟಿಕ್ ತಯಾರಿಸುವ ವಿಧಾನ ತೀರಾ ಅಗ್ಗದ್ದಾಗಿರುವುದರಿಂದ ಪೇಯ ತಯಾರಿಸುವ ಯಾವ ಕಂಪನಿಗೂ ಅದನ್ನು ಕೈಬಿಡಲು ಮನಸ್ಸಿಲ್ಲ. ಕೊಕಾಕೋಲಾವನ್ನು ಯಾರೂ ನಂಬಲು ತಯಾರಿಲ್ಲ. ಅದರದ್ದು ಜನರ ಕಣ್ಣಿಗೆ 'ಹಸಿರು' ಮಣ್ಣೆರಚುವ, ಹುಸಿ ಮಾತಿನ ಭರವಸೆಗಳೇ ಆಗಿವೆ ಎಂದು ಪರಿಸರ ಸಂಸ್ಥೆಗಳು ವಾದಿಸುತ್ತಿವೆ. ಈ ಬಹುರಾಷ್ಟ್ರೀಯ ಕಂಪನಿ ಕಾಲಿಟ್ಟ ಬಹಳಷ್ಟು ದೇಶಗಳಲ್ಲಿ ಪರಿಸರಕ್ಕೆ ಹಾನಿ, ಆರೋಗ್ಯಕ್ಕೆ ಹಾನಿ, ಪ್ರಾಣಿಪರೀಕ್ಷೆಯ ಅನೈತಿಕ ಸಂಶೋಧನೆ ಮತ್ತು ಹಣಕಾಸು ಅವ್ಯವಹಾರಗಳ ಖಟ್ಲೆಗಳನ್ನು ಎದುರಿಸುತ್ತಿದೆ. ಭಾರತದಲ್ಲಿ ಅದು ಅಂತರ್ಜಲವನ್ನು ಕೊಳಕು ಮಾಡಿದ್ದು, ಕೊಳಕು ನೀರನ್ನು ಪೇಯದಲ್ಲಿ ಸೇರಿಸಿದ್ದರ ಬಗ್ಗೆ ಭಾರೀ ರಾದ್ಧಾಂತ ಆಗಿತ್ತು. ಕೇರಳದ ಪ್ಲಾಚಿಮಾಡಾ ಎಂಬಲ್ಲಿ ಆದಿವಾಸಿಗಳ ಭತ್ತದ ಗದ್ದೆಯ ಪರಿಸರದಲ್ಲಿ ಅದು ಫ್ಯಾಕ್ಟರಿ ಆರಂಭಿಸಿ ಒಂದೆರಡೇ ವರ್ಷಗಳಲ್ಲಿ ಅಂತರ್ಜಲವನ್ನು ಖಾಲಿ ಮಾಡಿ, ಕೊಳಕು ಮಾಡಿ ಜನರ ಪ್ರತಿರೋಧವನ್ನು ಎದುರಿಸಿತ್ತು. ತನ್ನ ತ್ಯಾಜ್ಯವನ್ನೇ ಸಾವಯವ ಗೊಬ್ಬರವೆಂದು ಗ್ರಾಮೀಣ ಜನರಿಗೆ ಮಾರುತ್ತಿತ್ತು. ಬಿಬಿಸಿ ವರದಿಗಾರ ಆ ಗೊಬ್ಬರದ ಸ್ಯಾಂಪಲ್ಲನ್ನು ಬ್ರಿಟನ್ನಿನ ಎಕ್ಸೆಟರ್ ವಿ.ವಿ.ಯ ಲ್ಯಾಬಿಗೆ ಒಯ್ದು ಪರೀಕ್ಷೆ ಮಾಡಿದಾಗ ಅದರಲ್ಲಿ ಆರೋಗ್ಯಕ್ಕೆ ಮಾರಕವಾದ ಸೀಸ ಮತ್ತು ಕ್ಯಾಡ್ಮಿಯಂ ವಿಷ ಇರುವುದು ಕಂಡುಬಂತು. ಆಮೇಲೆ ಅಂಥದೇ ಪರೀಕ್ಷೆಯನ್ನು ಕೇರಳ ಮಾಲಿನ್ಯ ನಿಯಂತ್ರಣ ಮಂಡಳಿಯೂ ನಡೆಸಿ, ಕಂಪನಿಗೆ 216 ಕೋಟಿ ರೂಪಾಯಿ ದಂಡ ಹಾಕಿ, ಎತ್ತಂಗಡಿ ಮಾಡಲಾಗಿತ್ತು.

ದಂಡ, ಪರಿಹಾರ ಮೊತ್ತ ವಸೂಲಾಯಿತೆ? ಆ ಮಾತನ್ನು ಕೇಳಬೇಡಿ. ಇಲ್ಲಷ್ಟೇ ಅಲ್ಲ, ಇಡೀ ದೇಶದಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಕೊಕಾಕೋಲಾಕ್ಕೆ ವಿಧಿಸಿದ ಯಾವ ದಂಡವೂ ಇದುವರೆಗೆ ವಸೂಲಿ ಆಗಿಲ್ಲ. ಕತೆ ಅಷ್ಟಕ್ಕೇ ಮುಗಿದಿಲ್ಲ. ದಿಲ್ಲಿಯ 'ಡೌನ್ ಟು ಅರ್ಥ್' ಪತ್ರಿಕೆ ಈಚೆಗೆ ಹೊರಗೆಳೆದ ಮಾಹಿತಿಯ ಪ್ರಕಾರ, ಕೊಕಾಕೋಲಾ, ಪೆಪ್ಸಿಕೋಲಾ, ರಿಲಯನ್ಸ್, ಅದಾನಿ ಗ್ರೂಪ್ ಇತ್ಯಾದಿಗಳ ಮೇಲೆ 1990ರೀಚೆ ನ್ಯಾಯಾಲಯಗಳು ವಿಧಿಸಿದ ಯಾವ ದಂಡವೂ ವಸೂಲಾಗಿಲ್ಲ! ಪ್ಲಾಸ್ಟಿಕ್ ಕಚಡಾಗಳನ್ನು ಎಲ್ಲೆಂದರಲ್ಲಿ ಬಿಸಾಡಿದ್ದಕ್ಕೆ ಕೊಕಾಕೋಲಾ ಕಂಪನಿಗೆ ₹ 51.6 ಕೋಟಿ, ಪೆಪ್ಸಿಕೋ ಕಂಪನಿಗೆ ಅದೇ ಕಾರಣಕ್ಕೆ ₹ 8.9 ಕೋಟಿ, ಕಲ್ಲಿದ್ದಲ ಗಣಿಯ ಸುತ್ತ ರಾಡಿ ಎಬ್ಬಿಸಿದ್ದಕ್ಕೆ ರಿಲಯನ್ಸ್ ಮತ್ತು ಸಹಭಾಗಿ ಕಂಪನಿಗಳಿಗೆ ₹ 79 ಕೋಟಿ, ಉಡುಪಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರದ ಸುತ್ತ ಮಾಲಿನ್ಯ ಹಬ್ಬಿಸುತ್ತಿರುವುದಕ್ಕೆ ಅದಾನಿ ಕಂಪನಿಗೆ ಐದು ಕೋಟಿ ರೂಪಾಯಿ ದಂಡ ವಿಧಿಸಲಾಗಿತ್ತು. ಯಾವುದೂ ವಸೂಲಾಗಿಲ್ಲ. ವಕೀಲರಿಗೆ ಹಣ, ನ್ಯಾಯಾಲಯಗಳಲ್ಲಿ ಬರೀ ಕಾಲಹರಣ.

ಈಜಿಪ್ಟಿನ ಶೃಂಗಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಸಚಿವ ಭೂಪೇಂದ್ರ ಯಾದವ್ ಕಳಕಳಿಯ ಮಾತಾಡಿದರು. ನೈಸರ್ಗಿಕ ವಿಕೋಪಗಳ ಸಂಖ್ಯೆ ಹಿಂದಿಗಿಂತ ಐದು ಪಟ್ಟು ಹೆಚ್ಚಾಗಿದೆಯೆಂದೂ ಅಂಥ ವಿಪತ್ತುಗಳ ಮುನ್ಸೂಚನೆ ಬಹಳಷ್ಟು ಮೊದಲೇ ಸಿಗುವಂತೆ ಸೂಕ್ತ ತಂತ್ರಜ್ಞಾನ ಆದಷ್ಟು ಬೇಗ ರೂಪುಗೊಳ್ಳಬೇಕು ಎಂದೂ ಕರೆ ನೀಡಿದರು. ಅಲ್ಲೊಂದು ವ್ಯಂಗ್ಯವಿತ್ತು. ಎರಡು ವಾರಗಳ ಹಿಂದಷ್ಟೇ ಇದೇ ಭೂಪೇಂದ್ರರ ಅರಣ್ಯ ಮತ್ತು ಪರಿಸರ ಇಲಾಖೆ ಅಂಡಮಾನ್ ನಿಕೊಬಾರ್‌ನಲ್ಲಿ ಅರಣ್ಯನಾಶದ ಭಾರೀ ಯೋಜನೆಗೆ ಅಸ್ತು ಎಂದಿದೆ. ಗ್ರೇಟ್ ನಿಕೊಬಾರ್ ದ್ವೀಪದ ದಟ್ಟ ಅರಣ್ಯದಲ್ಲಿ ಎಂಟೂವರೆ ಲಕ್ಷ ಮರಗಳನ್ನು ಕಡಿದು ಅಭಿವೃದ್ಧಿಯ ರತ್ನಗಂಬಳಿಯನ್ನು ಹಾಸಲು ಹಸಿರು ನಿಶಾನೆಯನ್ನು ತೋರಿಸಿದೆ. ಇಲಾಖೆಯದೇ ದಾಖಲೆಗಳ ಪ್ರಕಾರ, ಭಾರತದ ಈ ಭೂಭಾಗ ಪ್ರಪಂಚದ ಅತ್ಯಂತ ಸಂರಕ್ಷಿತ ಅರಣ್ಯ ಕ್ಷೇತ್ರವಾಗಿದ್ದು ಇಲ್ಲಿ 350 ಬಗೆಯ ವಿಶಿಷ್ಟ ಪ್ರಾಣಿಪಕ್ಷಿಗಳೂ 650 ಬಗೆಯ ಸಸ್ಯಗಳೂ ಇವೆ. ಬೇರೆಲ್ಲೂ ಕಾಣಲಾಗದ, ನಿಕೊಬಾರ್‌ನಲ್ಲೇ ವಿಕಾಸಗೊಂಡ ತುರಾಯಿ ಹದ್ದು, ಉದ್ದಬಾಲದ ಲಂಗೂರ, ಭೀಮಪಾದದ ಕೋಳಿ, ಶ್ರೂ ಮುಂತಾದ ಜೀವಿಗಳ ನೆಲೆವೀಡಾಗಿದೆ. ಆ ಅರಣ್ಯವನ್ನು ಚೊಕ್ಕ ಮಾಡಿದ ಜಾಗದಲ್ಲಿ ಒಂದು ವಿಮಾನ ನಿಲ್ದಾಣ, ಅತ್ಯಾಧುನಿಕ ಬಂದರು, (ಕಲ್ಲಿದ್ದಲ) ಶಕ್ತಿಸ್ಥಾವರ ಮತ್ತು ಹೊಸ ನಗರವನ್ನು ಸೃಷ್ಟಿಸಲಾಗುತ್ತದಂತೆ.

ವ್ಯಂಗ್ಯ ಇಷ್ಟಕ್ಕೇ ಮುಗಿದಿಲ್ಲ. ಅಂಡಮಾನ್ ಇಕಾಲಜಿ ಕುರಿತ ಅನೇಕ ಗ್ರಂಥಗಳನ್ನು ಬರೆದಿರುವ ಐಐಟಿ ವಿಜ್ಞಾನಿ ಪ್ರೊ. ಪಂಕಜ್ ಸೇಖ್‌ಸಾರಿಯಾ ನಿನ್ನೆ 'ದಿ ಹಿಂದೂ' ಪತ್ರಿಕೆಯಲ್ಲಿ ಬಹಿರಂಗಪಡಿಸಿದ ಮಾಹಿತಿಯ ಪ್ರಕಾರ, ನಿಕೊಬಾರ್ ಅರಣ್ಯನಾಶಕ್ಕೆ ಪ್ರತಿಯಾಗಿ 970 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹರಿಯಾಣದಲ್ಲಿ ಬದಲೀ ಅರಣ್ಯ ಬೆಳೆಸಬೇಕೆಂದು ಆದೇಶ ನೀಡಲಾಗಿದೆ. ಹರಿಯಾಣ ರಾಜ್ಯದಲ್ಲಿ 2014ರಿಂದೀಚೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆಂದು ಇದ್ದಬದ್ದ 80 ಚ.ಕಿ.ಮೀ ಅರಣ್ಯವನ್ನು ಸ್ವಾಹಾ ಮಾಡಿದ್ದು, ಅದಕ್ಕೆ ಪರಿಹಾರ ರೂಪಿ ಅರಣ್ಯದ ಹೇಳಹೆಸರಿಲ್ಲ. ಈಗ ನಿಕೊಬಾರ್‌ನ ದಟ್ಟ ಮಳೆಕಾಡಿಗೆ ಬದಲಿಯಾಗಿ ಅಲ್ಲಿ ಅಲ್ಲಲ್ಲಿ ತುಂಡು ತುಂಡು ಜಾಗದಲ್ಲಿ ಅರಣ್ಯ ಬೆಳೆಸಲಾಗುತ್ತದಂತೆ.

ಕಳೆದ ವರ್ಷ ಗ್ಲಾಸ್ಗೊದಲ್ಲಿ ನರೇಂದ್ರ ಮೋದಿಯವರ ಭಾಷಣ ಮೋಹಕವಾಗಿತ್ತು. 2015ರ ಪ್ಯಾರಿಸ್ ಸಮ್ಮೇಳನದ ತಮ್ಮದೇ ಭಾಷಣವನ್ನು ನೆನಪಿಸಿಕೊಂಡ ಅವರು, ವೇದಕಾಲೀನ ಶ್ಲೋಕವೊಂದನ್ನು ಉದ್ಧರಿಸುತ್ತ 'ನಾವೆಲ್ಲ ಸಂಘಟಿತರಾಗಿ, ಏಕೋಭಾವದಿಂದ ಶ್ರಮಿಸಿದರೆ ಪೃಥ್ವಿಯನ್ನು ಈ ಸಂಕಟದಿಂದ ಪಾರುಮಾಡಲು ಸಾಧ್ಯ' ಎಂದು ಹೇಳಿದ್ದರು. ಈ ವರ್ಷದ ಸಮ್ಮೇಳನದಲ್ಲಿ ಅವರ ಅನುಪಸ್ಥಿತಿ ಎದ್ದು ಕಾಣುವಂತಾಗಿದೆ.

ಚುರುಮುರಿ

₹ 39 ಕೋಟಿ ಪೆನ್!

• ಆನಂದ

'ಒಂದು ಪೆನ್ನಿನ ಬೆಲೆ ಎಷ್ಟಾಗುತ್ತೇರಿ?' ಮಡದಿ ಕೇಳಿದಳು.

ಇದು ಕೀ ಬೋರ್ಡ್ ಯುಗ. 'ಐ ಲವ್ ಯೂ' ಎಂದು ನಮ್ಮ ಕಾಲದಲ್ಲಿ ಪೆನ್ನಿನಲ್ಲಿ ಬರೆದು ಕಳಿಸೋರು. ಈಗ ಎಸ್‌ಎಂಎಸ್ ಮತ್ತಿನ್ನೇನೋ ಕಳಿಸ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮೇಡಂ ಪೆನ್ನಿನ ಬೆಲೆ ಕೇಳ್ತಿದ್ದಾರ!

ಗೂಗಲ್ ಸರ್ಚ್ ಮಾಡಿದೆ. ಗರಿಷ್ಠ ಬೆಲೆ ನೋಡಿದಾಗ ತಲೆ ಸುತ್ತಿದಂತಾಯಿತು.

'ಯಾಕ್ರೀ ಏನಾಯಿತು?'

'ರೇಟ್ ನೋಡಿ ಗಾಬರಿಯಾಯಿತು' ಎಂದೆ. ಏಕೆಂದರೆ ಪಾರ್ಕರ್ ಡಿಲಕ್ಸ್ ಪೆನ್ ಬೆಲೆ ₹ 23,405 ಆಗಿದ್ದರೆ ಸೈಲರ್ ಫೌಂಟನ್ ಎಂಬ ಪೆನ್ನಿನ ಬೆಲೆ ಕೇವಲ ₹ 2.15 ಲಕ್ಷ!

'ಅದು ಹೋಲ್‌ಸೇಲ್ ರೇಟ್ 12 ಡಝನ್‌ಗೊ ಅಥವಾ ಸಾವಿರಕ್ಕೋ ಇರಬೇಕು. ಕನ್ನಡಕ ಹಾಕಿಕೊಂಡು ನೋಡಿ' ಎಂದಳು. ನೋಡಿದೆ. 'ಇಲ್ಲಮ್ಮ, ಒಂದೊಂದು ಪೆನ್ನಿನ ಬೆಲೆ ಕೇವಲ ಅಷ್ಟೇ, ಪ್ಲಸ್ ಜಿಎಸ್‌ಟಿ' ಎಂದು ಖಾತರಿ ಮಾಡಿದೆ.

'ಅದಿರಲಿ, ಪೆನ್ನಿನ ಬೆಲೆ ಯಾಕೆ ಬೇಕು? ನಿನಗೆ ರಂಗೋಲಿ ಹಾಕೋದಿಕ್ಕೆ ಚಾಕ್‌ಪೀಸ್ ಇದ್ದರೆ ಸಾಕು...'

'ನಾನು ಹೇಳೋ ಪೆನ್ನಿನ ಬೆಲೆ ಕೇಳಿದರೆ ನಿಮಗೆ ಅಟ್ಯಾಕ್ಕೇ ಆಗಬಹುದು' ಎಂದಳು. ಸಂಕೋಚದಿಂದ ಹಾರ್ಟ್ ಪದ ಎಡಿಟ್ ಮಾಡಿದ್ದಳು.

'ಅದ್ಯಾವುದಮ್ಮ?'

'ನಮ್ಮ ಸ್ಟಾಲಿನ್ ಸಾಹೇಬ್ರು 42 ಮೀಟರ್ ಎತ್ತರದ ಪೆನ್ ಖರೀದಿಸುತ್ತಿದ್ದಾರೆ. ಬೆಲೆ ಬರೀ 39 ಕೋಟಿ ರೂಪಾಯಿ'.

'ಸ್ಟಾಲಿನ್ನರಿಗೇಕೆ ಪೆನ್ನು? ಅವರಪ್ಪ ಕರುಣಾನಿಧಿ ಪೆನ್ ಉಪಯೋಗಿಸುತ್ತಿದ್ದರು. ಇವರು ಕೀ ಬೋರ್ಡ್, ಡ್ಯಾಶ್ ಬೋರ್ಡ್ ಸಿಎಮ್ಮು'.

'ಅದು ಅವರಿಗಲ್ಲ. ಅಪ್ಪನಿಗೆ ಸ್ಮಾರಕವಾಗಲಿದೆ ಆ ಪೆನ್ನು. ಚೆನ್ನೈ ಸಮುದ್ರ ತೀರದಲ್ಲಿ ಎರಡು ಎಕರೆ ಜಾಗದಲ್ಲಿ ಅದನ್ನು ಸ್ಥಾಪಿಸಲಿದ್ದಾರೆ'.

'ಹಾಗಿದ್ದರೆ ಇದು ಹೊಸ ಐಡಿಯಾ. ನಮ್ಮ ದೇವರಾಜ ಅರಸರಿಗೆ ಅವರು ಉಪಯೋಗಿಸುತ್ತಿದ್ದ ಪೈಪ್ ತರಹ ಮೆಮೋರಿಯಲ್ ಕಟ್ಟಬಹುದಿತ್ತು. ಯಾರಿಗೂ ಹೊಳೆಯಲೇ ಇಲ್ಲ'.

ಈ ಪೆನ್ನು ಖಡ್ಗಕ್ಕಿಂತ ಮೊನಚೇ?

ಚರ್ಚೆ

ಹಿಂದೂ ಪದ: ವೃಥಾ ಗೊಂದಲ

ಹಿಂದೂ ಪದಕ್ಕೆ ಬೇರೆ ಭಾಷೆಯಲ್ಲಿ ಯಾವುದೇ ಅರ್ಥ ಇದ್ದರೂ ನಮ್ಮಲ್ಲಿ ಅದರ ಸರಿಯಾದ ಅರ್ಥ ಏನು, ಅದರ ಮೂಲ ಯಾವುದು ಎಂಬುದು ಖಚಿತವಾಗಬೇಕಿದೆ

'ಹಿಂದೂ' ಎಂಬ ಪದದ ಮೂಲದ ಬಗ್ಗೆ ಸ್ವಾಮಿ ಹರ್ಷಾನಂದ ತಮ್ಮ ಮೂರು ಸಂಪುಟಗಳ 'ಎ ಕನ್ಸೈಸ್ ಎನ್‌ಸೈಕ್ಲೊಪೀಡಿಯ ಆಫ್ ಹಿಂದೂಯಿಸಂ' ಎಂಬ ಬೃಹತ್ ವಿಶ್ವಕೋಶದಲ್ಲಿ ಹೀಗೆ ದಾಖಲಿಸುತ್ತಾರೆ: 'ಹಾಗೆ ನೋಡಿದರೆ, 'ಹಿಂದೂ' ಮತ್ತು 'ಹಿಂದೂಯಿಸಂ' ಎಂಬ ಪದಗಳು ಭೌಗೋಳಿಕವಾಗಿವೆ. ಸಿಂಧೂ ನದಿಯ ಪ್ರದೇಶ ಮತ್ತು ಅಲ್ಲಿ ವಾಸಿಸುವ ಜನರನ್ನು ಪ್ರಾಚೀನ ಪರ್ಷಿಯನ್ನರು 'ಹಿಂದೂ' ಎಂದು ಕರೆಯುತ್ತಿದ್ದರು. ಅವರ ಭಾಷೆಯಲ್ಲಿ ಸಂಸ್ಕೃತದ 'ಸ' ಎಂಬುದು 'ಹ' ಅಕ್ಷರವಾಯಿತು. ನಂತರ, ಹೇಗೋ ಅದೇ ಹೆಸರು ಉಳಿದುಬಂದಿದೆ' (ಅನುವಾದಿತ, ಸಂ. 2, ಪುಟ 24).

ಇನ್ನು, ಆನ್‌ಲೈನ್ ವಿಶ್ವಕೋಶವಾದ 'ವಿಕಿಪೀಡಿಯ' ಹೀಗೆ ಹೇಳುತ್ತದೆ: 'ಮೂಲತಃ, ಪರ್ಷಿಯನ್ ಭಾಷೆಯಿಂದ ಬಂದಿರುವ ಈ ಪದವು ಭೌಗೋಳಿಕ ನೆಲೆಯಲ್ಲಿದೆ. ಕ್ರಿ.ಪೂ. ಆರನೆಯ ಶತಮಾನದ ಡೇರಿಯಸ್‌ನ ಶಾಸನದಲ್ಲಿಯೂ ಕಂಡುಬರುತ್ತದೆ. ಆದರೆ ಈ ಪದವು ಹಿಂದೂ ಧರ್ಮಕ್ಕೆ ಅನ್ವಯಿಸುತ್ತಿರಲಿಲ್ಲ. 'ಹಿಂದೂ' ಪದಕ್ಕೆ ಧಾರ್ಮಿಕ ಆಯಾಮವು ಸುಮಾರು ಕ್ರಿ.ಶ. 13ನೆಯ ಶತಮಾನದಿಂದ ಪ್ರಾರಂಭವಾಯಿತು.'

ಕಲೆ ಮತ್ತು ವಿನ್ಯಾಸದ ಪುಸ್ತಕ ಪ್ರಕಾಶನ ಸಂಸ್ಥೆಯಾದ 'ವಿಕ್ಷನರಿ'ಯು ಹಿಂದೂ ಪದದ ಬಗ್ಗೆ ಹೀಗೆ ಹೇಳುತ್ತದೆ: 'ಈ ಪದವು ಪರ್ಷಿಯನ್ ಮೂಲದ್ದು. ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿದ್ದ 'hndn' ಪದವು 'ಸಿಂಧೂ' ಎಂಬ ಪದದ ರೂಪಾಂತರ.

'ಕೋರಾ' (Quora) ಮತ್ತು ಇತರ ಕೆಲವು ಜಾಲತಾಣಗಳು 'ಪರ್ಷಿಯನ್ ಭಾಷೆಯಲ್ಲಿ 'ಹಿಂದೂ' ಎಂಬ ಪದಕ್ಕೆ ಸೋತವನು, ಗುಲಾಮ, ಕಳ್ಳ ಎಂಬಂಥ ಅರ್ಥಗಳಿವೆಯೆಂದು, ಈ ಅರ್ಥಗಳು ಲಖನೌನಲ್ಲಿ 1964ರಲ್ಲಿ ಪ್ರಕಟವಾದ ಪರ್ಷಿಯನ್ ಡಿಕ್ಷನರಿಯಲ್ಲಿ ಇವೆ ಎಂದು ಹೇಳುತ್ತವೆ. ಆದರೆ, ಈ ಜಾಲತಾಣಗಳು ಎಷ್ಟರ ಮಟ್ಟಿಗೆ ವಿಶ್ವಸನೀಯ ಎಂಬುದು ಗೊತ್ತಿಲ್ಲ.

ಕೊನೆಯದಾಗಿ, ಯಾವ ಭಾಷೆಯ ಪದಗಳಿಗೂ ಸಾರ್ವಕಾಲಿಕ ಅರ್ಥ ಎಂಬುದು ಇರುವುದಿಲ್ಲ. ಎಲ್ಲಾ ಭಾಷೆಗಳ ಪದಗಳೂ ಕಾಲಕಾಲಕ್ಕೆ ತಮ್ಮ ಅರ್ಥವನ್ನು ವಿಸ್ತರಿಸಿಕೊಳ್ಳುತ್ತವೆ, ಹೊಸ ಅರ್ಥಗಳನ್ನು ಪಡೆಯುತ್ತವೆ, ತಮ್ಮ ಹಳೆಯ ಅರ್ಥಗಳನ್ನು ಕಳೆದುಕೊಳ್ಳುತ್ತವೆ. ಉದಾಹರಣೆಗೆ, ಸರ್ವಜ್ಞನು 'ಕನ್ನಡ' ಪದವನ್ನು 'ಮಾಯೆ' ಎಂಬ ಅರ್ಥದಲ್ಲಿ ಉಪಯೋಗಿಸುತ್ತಾನೆ. ಹಳಗನ್ನಡದಲ್ಲಿ 'ರಾವ' ಎಂಬ ಪದವು ಇಂದು 'ರವ' (ಗಲಾಟೆ/ ಕೋಲಾಹಲ) ಎಂಬ ಅರ್ಥವನ್ನು ಕೊಡುತ್ತದೆ.

ಸಿ.ಎನ್.ರಾಮಚಂದ್ರನ್, ಬೆಂಗಳೂರು

ಹಂಸಕ್ಷೀರ ನ್ಯಾಯವಿರಲಿ

ಯಾವುದೇ ಭಾಷೆಯ ಕೆಲವೊಂದು ಪದಗಳನ್ನು ಹೋಲುವ ಪದ ಜಗತ್ತಿನ ಇನ್ನಾವುದೋ ಭಾಷೆಯಲ್ಲೂ ಇರುವುದು ಅಚ್ಚರಿಯೂ ಅಲ್ಲ, ಆಕಸ್ಮಿಕವೂ ಅಲ್ಲ. ಬರೀ ಹೋಲಿಕೆ ಇದ್ದಾಕ್ಷಣ ಅರ್ಥವೂ ಸಮಾನವಾಗಿ ಇರಬೇಕೆಂಬ ನಿಯಮವೇನೂ ಇಲ್ಲ. 'ಅವಸರ' ಎಂಬುದಕ್ಕೆ ಕನ್ನಡದಲ್ಲಿ ಒಂದು ಅರ್ಥವಾದರೆ ಹಿಂದಿ, ಸಂಸ್ಕೃತದಲ್ಲಿ ಬೇರೆಯದೇ ಅರ್ಥವಾಗುತ್ತದೆ. ಕನ್ನಡದಲ್ಲಿಯೇ 'ನಾತ' ಎಂಬುದಕ್ಕೆ ಮೂಲದ ಅರ್ಥ ವಾಸನೆ, ಪರಿಮಳ ಎಂದು ಇತ್ತು. ಇಂದು ಅದು ಗಬ್ಬು ವಾಸನೆ ಎಂಬ ಹೀನಾರ್ಥ ಪಡೆದುಕೊಂಡಿದೆ. 'ಸೀರೆ' ಎಂದರೆ ಮಹಿಳೆಯರು ಉಡುವ ಉಡುಗೆ ಎಂದು ಮಾತ್ರ ಈಗ ಅರ್ಥ. ಹಳಗನ್ನಡ ಕಾಲದಲ್ಲಿ ಗಂಡಸರು, ಹೆಂಗಸರು ಯಾರು ಬೇಕಾದರೂ ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ ಎಂದಾಗಿತ್ತು. ಆಗ ಅದಕ್ಕೆ ಲಿಂಗಭೇದ ಇರಲಿಲ್ಲ. ಭಾಷಾ ವಿಜ್ಞಾನಿಗಳು ಇಂಥ ಸೂಕ್ಷ್ಮಗಳನ್ನು ತಿಳಿಸಿಕೊಟ್ಟಿದ್ದಾರೆ.



ಹಿಂದೂ ಎಂಬುದು ಭಾರತೀಯ ಪದವಲ್ಲ, ಅದು ಪರ್ಷಿಯನ್ ನೆಲಕ್ಕೆ ಸೇರಿದ ಪದ ಎಂಬ ಶಾಸಕ ಸತೀಶ ಜಾರಕಿಹೊಳಿ ಅವರ ಮಾತಿನ ವಿರುದ್ಧ ತಿಳಿವಿನ ಸೂಕ್ಷ್ಮತೆ ಇಲ್ಲದ ಕೆಲವರು ಗಲಾಟೆ ಎಬ್ಬಿಸುತ್ತಿರುವುದು ಅಚ್ಚರಿ ಏನಲ್ಲ. ಆ ಶಾಸಕರು ತಮ್ಮದೇ ಪಕ್ಷದವರಾಗಿದ್ದರೆ ಅನೇಕರು ಅದು ಅವರ ವೈಯಕ್ತಿಕ ಅಭಿಪ್ರಾಯ ಎಂದಷ್ಟೇ ಹೇಳಿ ವಿಷಯಾಂತರ ಮಾಡುತ್ತಿದ್ದರು.

ಸತೀಶ ಅವರ ಹೇಳಿಕೆಯಲ್ಲಿ ಅವರದ್ದೆನ್ನುವ ಹೊಸದೇನೂ ಇಲ್ಲ. ಹಳೇ ಗ್ರಂಥಗಳಲ್ಲಿ, ನಿಘಂಟುಗಳಲ್ಲಿ ಇದ್ದದ್ದೇ ಅಥವಾ ಹಿಂದಿನ ಮಹನೀಯರು ಹಲವಾರು ಬಾರಿ ಹೇಳಿದ್ದೇ. ಎಲ್ಲರ ಮಾತನ್ನು ಎಲ್ಲರೂ ಒಪ್ಪಬೇಕಿಲ್ಲ. ನಮ್ಮ ಜ್ಞಾನಿಗಳು ಬೋಧಿಸಿದ ಹಂಸಕ್ಷೀರ ನ್ಯಾಯದಂತೆ ಬೇಕಾದ್ದನ್ನು ಮಾತ್ರ ತೆಗೆದುಕೊಳ್ಳಬೇಕು.

'ಹಿಂದೂ' ಎಂಬುದು ಧರ್ಮ ಅಲ್ಲ, ಅದೊಂದು ಜೀವನ ಕ್ರಮ' ಎಂದು ಡಾ. ಎಸ್.ರಾಧಾಕೃಷ್ಣನ್ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ಇದನ್ನು ತಿಳಿಯುವ ಅಗತ್ಯ ಬಹಳವಾಗಿದೆ. ಹಿಂದೂಗೆ ಬೇರೆ ಭಾಷೆಯ ಅರ್ಥವೇನೇ ಇರಲಿ. ನಮ್ಮಲ್ಲಿ ಅದರ ಸರಿಯಾದ ಅರ್ಥ ಏನು, ಅದು ಸಂಸ್ಕೃತ ಮೂಲದಿಂದ ಬಂದಿರುವ ಪದವೋ, ಹಿಂದಿಯದೋ, ಕನ್ನಡದ್ದೋ ಅಥವಾ ಇವೆಲ್ಲಕ್ಕಿಂತ ಹೊರತಾದ ಅನ್ಯ ಭಾಷಾ ಮೂಲದ್ದೋ ಖಚಿತ ಮಾಡಬೇಕಿದೆ.

ಡಾ. ಟಿ.ಗೋವಿಂದರಾಜು, ಬೆಂಗಳೂರು

ವಿವರ ನೀಡಲಿ

'ಹಿಂದೂ' ಪದದ ಅರ್ಥದ ಬಗೆಗಿನ ವಿವಾದ ಕುರಿತಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ವೇದ ಪುರಾಣಗಳಿಂದ ಇಲ್ಲಿಯವರೆಗೆ ಹಿಂದೂಸ್ಥಾನ ಹಿಂದೂಗಳಿಗೆ ಸೇರಿದ್ದು ಎಂದು ಎಲ್ಲರೂ ಹೇಳಿಕೊಂಡು ಬಂದಿದ್ದಾರೆ' ಎಂದಿದ್ದಾರೆ. ಯಾವ ವೇದದಲ್ಲಿ, ಯಾವ ಪುರಾಣದಲ್ಲಿ ಹೀಗೆ ಹೇಳಲಾಗಿದೆ ಎಂಬುದರ ವಿವರವನ್ನು ಅವರು ನೀಡುವುದು ಲೇಸು. ಆಗ ಈ ಗೊಂದಲಕ್ಕೆ ತೆರೆ ಬೀಳಬಹುದು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ವಾಚಕರ ವಾಣಿ

ಹೀಗೂ ಮಾಡಬಹುದು ನೇತಾರರ ಸ್ಮರಣೆ...

ಉತ್ತರಪ್ರದೇಶದ ಅಂಬೇಡ್ಕರ್ ನಗರ ಜಿಲ್ಲೆಯಲ್ಲಿ ಕಿಡಿಗೇಡಿಗಳು ಡಾ. ಅಂಬೇಡ್ಕರ್ ಪ್ರತಿಮೆಯನ್ನು ವಿರೂಪಗೊಳಿಸಿದ್ದನ್ನು ಪ್ರತಿಭಟಿಸುತ್ತಿದ್ದ ಭೀಮ್ ಆರ್ಮಿ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದನ್ನು ಓದಿ ಹಿಂದಿನಂತೆ ಮನಸ್ಸು ಖೇದಗೊಳ್ಳಲಿಲ್ಲ. ಏಕೆಂದರೆ ಪದೇ ಪದೇ ನಡೆಯುತ್ತಿರುವ ಇಂಥ ಘಟನೆಗಳನ್ನು ಕೇಳಿ ಕೇಳಿ ಮನಸ್ಸು ಕಲ್ಲಾಗಿದೆ. ಅವಿಸ್ಮರಣೀಯರ ನೆನಪಿಗಾಗಿ ಪರ್ಯಾಯ ವ್ಯವಸ್ಥೆಯ ಕುರಿತು ಸರ್ಕಾರಗಳಾಗಲೀ ಸಾರ್ವಜನಿಕರಾಗಲೀ ಏಕೆ ಯೋಚಿಸುತ್ತಿಲ್ಲ ಎಂಬುದೇ ವಿಷಾದದ ಸಂಗತಿ.

ಗಾಂಧಿ, ಅಂಬೇಡ್ಕರ್ ಅವರಂಥ ಅಪ್ರತಿಮ ದೇಶಭಕ್ತರ ಸ್ಮಾರಕಗಳು ಜಗತ್ತಿನ ಎಲ್ಲೆಡೆಯಲ್ಲಿ ವಿರೂಪಗೊಳ್ಳುತ್ತಿದ್ದು, ಇದನ್ನು ಎಸಗಿದವರು ತಮ್ಮ ಯಾವುದೋ ಸಿಟ್ಟನ್ನು ಇಂಥ ಸ್ಮಾರಕಗಳ ಮೇಲೆ ತೀರಿಸಿಕೊಳ್ಳುತ್ತಿರುವ ಅವಿವೇಕಿಗಳು. ಇಂಥವರಿಗೆ ದೇಶಭಕ್ತಿಗಿಂತ ವೈಯಕ್ತಿಕ ಕಾರಣಗಳೇ ಮುಖ್ಯವಾಗುತ್ತಿರಬಹುದು. ಇಂಥವರನ್ನು ಪತ್ತೆ ಹಚ್ಚುವುದಾದರೂ ಹೇಗೆ? ವಿರೂಪಗೊಳಿಸಿದ ಸುದ್ದಿಯನ್ನು ಕೇಳಿದ ಯಾರಿಗಾದರೂ ಆಗುವ ನೋವು ತೀವ್ರವಾದದ್ದು. ಜನರ ನೋವಿಗೆ ಸ್ಪಂದಿಸಿ ಪರ್ಯಾಯ ವ್ಯವಸ್ಥೆಯನ್ನು ಮಾಡುವಷ್ಟು ಸ್ಪಂದನಶೀಲ ಸರ್ಕಾರಗಳಾಗಲೀ ಸಾರ್ವಜನಿಕ ಸಂಘಸಂಸ್ಥೆಗಳಾಗಲೀ ನಮ್ಮಲ್ಲಿ ಇವೆಯೇ? ವಿರೂಪಗೊಳಿಸುವಂಥ ಕುಕೃತ್ಯಗಳಿಗೆ ಪರಿಹಾರೋಪಾಯಗಳು ಇವೆ. ಕೋಟಿಗಟ್ಟಲೆ ಖರ್ಚು ಮಾಡಿ ಅವಿಸ್ಮರಣೀಯರ ಪ್ರತಿಮೆಯನ್ನು ನಿಲ್ಲಿಸುವುದರ ಬದಲು, ಅವರ ಹೆಸರಿನಲ್ಲಿ ಶಾಲೆಗಳನ್ನು ಕಟ್ಟಬಹುದು, ಗ್ರಂಥಾಲಯಗಳನ್ನು ಸ್ಥಾಪಿಸಬಹುದು, ಸಾರ್ವಜನಿಕ ತೋಟಗಳನ್ನು ನಿರ್ಮಿಸಬಹುದು ಹಾಗೂ ಆಟದ ಮೈದಾನಗಳನ್ನು ಅನಾವರಣಗೊಳಿಸಬಹುದು ಅಲ್ಲವೇ? ಇಂಥ ಕ್ರಮಗಳಿಂದ ಸಾರ್ವಜನಿಕರಿಗೆ ಆಗುವ ಪ್ರಯೋಜನಗಳು ಅಪಾರ. ಈ ದಿಸೆಯಲ್ಲಿ ನಾವೆಲ್ಲ ಗಂಭೀರವಾಗಿ ಯೋಚಿಸಬೇಕಿದೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಪಠ್ಯಪುಸ್ತಕ: ಪಿಡಿಎಫ್ ಪ್ರತಿ ಲಭ್ಯವಾಗಲಿ

ಪ್ರಥಮ ಮತ್ತು ದ್ವಿತೀಯ ಪಿ.ಯು ವಿಜ್ಞಾನ ವಿಭಾಗದ ಪಿ.ಸಿ.ಎಂ.ಬಿ ವಿಷಯಗಳ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳು ಸಿದ್ಧವಾಗಿದ್ದು, ಪ್ರಥಮ ವರ್ಷದ ಒಂದು ಸೆಟ್ ಪುಸ್ತಕದ ಬೆಲೆ ₹ 1,370, ದ್ವಿತೀಯ ವರ್ಷದ ಒಂದು ಸೆಟ್ ಪುಸ್ತಕದ ಬೆಲೆ ₹ 1,690 ಎಂದು ವರದಿಯಾಗಿದೆ (ಪ್ರ.ವಾ., ನ. 9). ಶಿಕ್ಷಣ ಎಂಬುದು ಲಾಭ ಗಳಿಕೆಯ ಸಲುವಾಗಿ ಮಾಡುವ ವ್ಯಾಪಾರವಲ್ಲ ಎಂಬ ಮಹತ್ವದ ಮಾತನ್ನು ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹೇಳಿರುವುದು ಇನ್ನೊಂದು ವರದಿಯಲ್ಲಿದೆ. ಇಲ್ಲಿ ಪಠ್ಯಪುಸ್ತಕಗಳನ್ನು ಮಾರಾಟಕ್ಕೆ ಇಟ್ಟಿರುವುದು ಯಾವುದೇ ಖಾಸಗಿ ಸಂಸ್ಥೆಯಲ್ಲ, ಬದಲಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಎಂಬುದು ಗಮನಾರ್ಹ.

ಮುದ್ರಿತ ಪ್ರತಿಗಳನ್ನು ಇಷ್ಟೊಂದು ಹಣಕ್ಕೆ ಮಾರಾಟ ಮಾಡುವ ಬದಲು, ವರದಿಯಲ್ಲಿ ಉಲ್ಲೇಖಿಸಿರುವಂತೆ, ಅವರ ಬಳಿಯಿರುವ ರೆಡಿ-ಟು-ಪ್ರಿಂಟ್ ಸಿ.ಡಿಯಿಂದ ಪಿಡಿಎಫ್ ಪ್ರತಿಯನ್ನು ಸಿದ್ಧಪಡಿಸಿ, ಮಂಡಳಿಯ ಜಾಲತಾಣದಲ್ಲಿ ಹಾಕಿದರೆ, ಅಗತ್ಯ ಇರುವವರೆಲ್ಲರೂ ಅದನ್ನು ಪಡೆಯಲು ಅನುಕೂಲವಾಗುತ್ತದೆ. ಈಗ ಬಹುತೇಕ ಎಲ್ಲರ ಬಳಿಯೂ ಫೋನ್ ಮತ್ತು ಕಾಲೇಜುಗಳಲ್ಲಿ ಕಂಪ್ಯೂಟರ್ ವ್ಯವಸ್ಥೆ ಇರುವುದರಿಂದ ಯಾರಿಗೂ ಹೊರೆಯಾಗುವುದಿಲ್ಲ. ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಅನುಕೂಲವಾಗುವುದರ ಜೊತೆಗೆ, ಅಷ್ಟು ಪ್ರಮಾಣದ ಕಾಗದದ ಬಳಕೆಯೂ ಕಡಿಮೆಯಾಗುತ್ತದೆ.

ಡಾ. ಬಿ.ಆರ್.ಸತ್ಯನಾರಾಯಣ, ಬೆಂಗಳೂರು

ಇತರರ ಸಂದೇಶಕ್ಕೂ ಇರಲಿ ಆದ್ಯತೆ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ನಿರ್ಮಿಸುವ ಶಾಲಾ ಕೊಠಡಿಗಳಿಗೆ 'ವಿವೇಕ' ಎಂದು ಹೆಸರಿಡುವ ಶಿಕ್ಷಣ ಇಲಾಖೆಯ ಆಲೋಚನೆ ಒಳ್ಳೆಯದು.

ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಚಿಂತನೆ, ಅವರ ಜಾತ್ಯತೀತ ತತ್ವ, ಸಿದ್ಧಾಂತಗಳ ಸಂದೇಶಗಳನ್ನು ಒಳಗೊಂಡ ಬರಹವು ಕೊಠಡಿಗಳ ಗೋಡೆಯಲ್ಲಿ ಇರಲಿ. ಅದೇ ರೀತಿ ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಚಿಂತಕರ ಸಂದೇಶವನ್ನೂ ಬರೆಸಲಿ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಮಾದರಿ ಅಂಗನವಾಡಿ: ಸುಧಾರಣೆ ಮುಖ್ಯ

ರಾಜ್ಯದ ಕೆಲವು ಅಂಗನವಾಡಿಗಳಲ್ಲಿ 65 ಇಂಚಿನ ಸ್ಮಾರ್ಟ್ ಟಿ.ವಿ.ಯನ್ನು ನೀಡಲಾಗಿದೆ. ಜೊತೆಗೆ ಅದಕ್ಕೆ ವೆಬ್‌ಕ್ಯಾಮೆರಾವನ್ನೂ ಅಳವಡಿಸಲಾಗಿದೆ. ಮಾರುಕಟ್ಟೆಯಲ್ಲಿ ಇದರ ಬೆಲೆ ₹ 2 ಲಕ್ಷಕ್ಕಿಂತ ಅಧಿಕ. ಕಲಿ– ನಲಿ ಕಾರ್ಯಕ್ರಮದ ಕೆಲವು ಪಠ್ಯಗಳನ್ನು ಸೇರಿಸಿ, ಕನ್ನಡ- ಇಂಗ್ಲಿಷ್ ಅನುವಾದದ ಬೋಧನಾ ಪರಿಕರಗಳನ್ನು ಡಿಜಿಟಲ್ ರೂಪದಲ್ಲಿ ನೀಡಲಾಗಿದೆ. ಶಿಕ್ಷಕಿಯರೇ ಇಲ್ಲದ ಕೆಲವು ಅಂಗನವಾಡಿಗಳಲ್ಲಿ ಆಯಾಗಳೇ ಟಿ.ವಿಯನ್ನು ಮಕ್ಕಳಿಗೆ ತೋರಿಸುತ್ತಾ ಸಮಯ ಕಳೆಯುತ್ತಾರೆ. ಅಂಗನವಾಡಿಗೆ ಮೊದಲು ಬೇಕಿರುವುದು ನುರಿತ ಶಿಕ್ಷಕಿಯರು. ಮಕ್ಕಳ ಎಳೆ ಬೆರಳುಗಳ ಮೂಲಕ ಅವರ ಬುದ್ಧಿಯನ್ನು ಪ್ರಚೋದಿಸುವ ಶೈಕ್ಷಣಿಕ ಪದ್ಧತಿ. ಒಂದೆಡೆ, ನಿವೃತ್ತ ಶಿಕ್ಷಕಿಯರನ್ನೇ ಎರಡು ಮೂರು ಶಾಲೆಗಳಿಗೆ ಬಳಸಿಕೊಳ್ಳುತ್ತಿದ್ದರೆ, ಇನ್ನೊಂದೆಡೆ, ಹೊಸಬರಿಗೆ ಸಕಾಲದಲ್ಲಿ ಸಂಬಳವೇ ಇಲ್ಲದಂತಾಗಿದೆ.

ಟಿ.ವಿ., ಮೊಬೈಲ್ ಬಳಕೆಯಿಂದ ಮಕ್ಕಳ ಮೇಲಾಗುವ ಮಾನಸಿಕ, ದೈಹಿಕ ದುಷ್ಪರಿಣಾಮಗಳ ಬಗೆಗೆ ಅಸಂಖ್ಯ ಸಂಶೋಧನೆಗಳು ನಡೆದಿವೆ. ಆದಾಗ್ಯೂ ಮನೆ, ಶಾಲೆ ಎರಡೂ ಕಡೆ ಮತ್ತೆ ಟಿ.ವಿ ಪರದೆ ಬಳಕೆ ಅವೈಜ್ಞಾನಿಕ. ಬುದ್ಧಿ ಬಲಿಯುತ್ತಿರುವ ವಯಸ್ಸಿನ ಮಕ್ಕಳ ಕೌಶಲವೃದ್ಧಿಗೆ ಅನುವಾಗಬೇಕಾದ ಅಂಗನವಾಡಿಯನ್ನು ಸಮರ್ಥವಾಗಿ ಬಳಸಿದರೆ, ಮಕ್ಕಳ ಮುಂದಿನ ಶೈಕ್ಷಣಿಕ ಕಲಿಕೆ ಉತ್ತಮಗೊಳ್ಳುತ್ತದೆ. ಕಾರ್ಪೊರೇಟ್ ದೇಣಿಗೆ ಸಹಾಯದಿಂದ ಮಾದರಿ ಅಂಗನವಾಡಿ ಸೃಷ್ಟಿಸುವುದು ಸ್ಮಾರ್ಟ್ ಟಿ.ವಿ ನೀಡಿಕೆಗಷ್ಟೇ ಸೀಮಿತವಾಗದೆ, ಒಟ್ಟಾರೆ ಅಂಗನವಾಡಿ ವ್ಯವಸ್ಥೆಯ ಸುಧಾರಣೆಗೆ ಗಮನ ಹರಿಸುವಂತೆ ಇರಬೇಕು. ಆಗಷ್ಟೇ ಭವ್ಯ ಭಾರತದ ಉತ್ತಮ ಪ್ರಜೆಗಳನ್ನು ರೂಪಿಸಲು ಸಾಧ್ಯ.

ಡಾ. ಶಾಂತರಾಜು ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಗತಿ ಪ್ರತಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಲಾಗಿರುವ ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಮತ್ತು 22 ಎಕರೆಯ ಥೀಂ ಪಾರ್ಕ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇದೇ ಶುಕ್ರವಾರ ಲೋಕಾರ್ಪಣೆ ಮಾಡಲಿದ್ದಾರೆ. ಕಂಚಿನ ಈ ಪ್ರತಿಮೆಗೆ 'ಪ್ರಗತಿ ಪ್ರತಿಮೆ' ಎಂದು ನಾಮಕರಣ ಮಾಡಲಾಗಿದೆ. ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಪ್ರತಿಮೆ ನಿರ್ಮಿಸಲಾಗಿದೆ ಎಂದು ರಾಜ್ಯ ಸರ್ಕಾರವು ಹೇಳಿದೆ.

ಇಂತಹ ಪ್ರಮುಖ ನಾಯಕರ ಪ್ರತಿಮೆಗಳನ್ನು ನಿರ್ಮಿಸುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಆರಂಭಿಸಿತ್ತು. ಗುಜರಾತ್‌ನಲ್ಲಿ ಏಕತಾ ಪ್ರತಿಮೆ ನಿರ್ಮಿಸಲಾಯಿತು. ಮುಂಬೈ ಸಮೀಪ ಶಿವಾಜಿ ಪ್ರತಿಮೆ ನಿರ್ಮಾಣಕ್ಕೆ ಸಿದ್ಧತೆ ನಡೆಸಲಾಗಿತ್ತು. ಈ ಪ್ರತಿಮೆಗಳ ನಿರ್ಮಾಣಕ್ಕೆ ಭಾರಿ ಮೊತ್ತದ ಹಣ ವೆಚ್ಚ ಮಾಡಿದ ಕಾರಣಕ್ಕೆ ವಿರೋಧ ಪಕ್ಷಗಳು, ಜನಸಾಮಾನ್ಯರು ಕೇಂದ್ರ ಸರ್ಕಾರವನ್ನು ಟೀಕಿಸಿದ್ದರು. ಆದರೆ, ಸರ್ಕಾರವು ನಿರ್ಮಿಸಿದ ಈ ಪ್ರತಿಮೆಗಳು ಪ್ರವಾಸಿ ಕೇಂದ್ರಗಳಾಗಿ ಅಭಿವೃದ್ಧಿಯಾಗುತ್ತಿವೆ. ಕೇಂದ್ರದ ಮೋದಿ ಸರ್ಕಾರವು ತುಳಿದ ಹಾದಿಯನ್ನೇ ರಾಜ್ಯದ ಬಿಜೆಪಿ ಸರ್ಕಾರವೂ ಅನುಸರಿಸುತ್ತಿದೆ. ಪ್ರಗತಿಯ ಪ್ರತಿಮೆಯ ಜತೆಯಲ್ಲಿಯೇ ರಾಜ್ಯದ ಹಲವು ಪ್ರಮುಖ ಸುಧಾರಕರು ಮತ್ತು ನಾಯಕರ ಪ್ರತಿಮೆಗಳನ್ನು ರಾಜ್ಯದ ಹಲವೆಡೆ ಸ್ಥಾಪಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ.

ನ್ಯಾಯ ಸಲ್ಲಿಸುವ ಕೆಲಸ

ಕೆಂಪೇಗೌಡರು ಪಾಳೇಗಾರರಲ್ಲ. ವಿಜಯನಗರದ ಸಾಮಂತ ರಾಜರಾಗಿದ್ದರು. ಅವರು ಕಟ್ಟಿದ ಬೆಂಗಳೂರಿನಲ್ಲಿ ನಾವೆಲ್ಲಾ ಇದ್ದೇವೆ. ಅವರು ಒಳ್ಳೆಯ ಉದ್ದೇಶದಿಂದ ಸಾಮಾಜಿಕ ನ್ಯಾಯ ಕಲ್ಪಿಸಿ ಕಟ್ಟಿದ ಬೆಂಗಳೂರು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಇನ್ನೂ ಬೆಳೆಯುತ್ತಲೇ ಇದೆ. ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕೆಂಪೇಗೌಡರಿಗೆ ನ್ಯಾಯ ಸಿಕ್ಕಿರಲಿಲ್ಲ. ಇಂದು ನಮ್ಮ ಸರ್ಕಾರ ಆ ಕೆಲಸ ಮಾಡುತ್ತಿದೆ

ಆರ್.ಅಶೋಕ, ಕಂದಾಯ ಸಚಿವ

ವಿಶ್ವ ದಾಖಲೆ

ಪ್ರಪಂಚದ ಯಾವ ನಗರದಲ್ಲೂ, ಆ ನಗರದ ಸಂಸ್ಥಾಪಕರ ಇಷ್ಟು ಎತ್ತರದ ಪ್ರತಿಮೆ ಇಲ್ಲ. ಈ ಮೂಲಕ ಕೆಂಪೇಗೌಡರ ಪ್ರತಿಮೆಯು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದೆ. ಪ್ರತಿಮೆ ಮತ್ತು 22 ಎಕರೆ ಥೀಂ ಪಾರ್ಕ್‌ಗೆ ಒಟ್ಟು 84 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ

ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ ಹಾಗೂ ಕೆಂಪೇಗೌಡ ಪ್ರಾಧಿಕಾರದ ಉಪಾಧ್ಯಕ್ಷ

108 ಅಡಿ
ಕೆಂಪೇಗೌಡರ ಕಂಚಿನ ಪ್ರತಿಮೆಯ ಎತ್ತರ

92 ಟನ್
ಪ್ರತಿಮೆಗೆ ಬಳಸಲಾಗಿರುವ ಕಂಚಿನ ತೂಕ

120 ಟನ್ ಉಕ್ಕನ್ನು
ಪ್ರತಿಮೆಯ ಪೀಠ ಮತ್ತು ಥೀಂ ಪಾರ್ಕ್ ಅಭಿವೃದ್ಧಿಯಲ್ಲಿ ಬಳಸಲಾಗಿದೆ

4 ಟನ್
ಪ್ರತಿಮೆಯಲ್ಲಿರುವ ಖಡ್ಗದ ತೂಕ

18 ಅಡಿ
ಪ್ರತಿಮೆಯ ಪೀಠದ ಎತ್ತರ

22,000
ಹಳ್ಳಿ/ಪಟ್ಟಣ ಮತ್ತು ನಗರಗಳ ಮಣ್ಣನ್ನು ಥೀಂ ಪಾರ್ಕ್‌ನಲ್ಲಿ ಬಳಸಲಾಗಿದೆ

₹64 ಕೋಟಿ
ಪ್ರತಿಮೆ ನಿರ್ಮಾಣಕ್ಕೆ ತಗುಲಿದ ವೆಚ್ಚ

₹20 ಕೋಟಿ
ಥೀಂ ಪಾರ್ಕ್ ಅಭಿವೃದ್ಧಿಗೆ ತಗುಲಿದ ವೆಚ್ಚ

22 ಎಕರೆ
ಥೀಂ ಪಾರ್ಕ್‌ನ ವಿಸ್ತೀರ್ಣ



ಪ್ರಮುಖ ಸವಲತ್ತುಗಳು
- ಬಯಲು ರಂಗಮಂದಿರ
- ಡಿಜಿಟಲ್ ಪ್ರದರ್ಶನ ಮಂದಿರ
- 3ಡಿ ಪ್ರದರ್ಶನ ಮಂದಿರ
- ಶೌಚಾಲಯಗಳು
- ವಿಶ್ರಾಂತಿ ಗೃಹ
- ಕಾಲು ಹಾದಿ
- ಹುಲ್ಲುಹಾಸು
- ಹೂವಿನ ಉದ್ಯಾನ
- ಕೊಳ
- ಕಾರಂಜಿ

ಪ್ರಜಾವಾಣಿ ಗ್ರಾಫಿಕ್ಸ್: ವಿಜಯಕುಮಾರಿ ಆರ್.

ಸುಧಾರಕರಿಗೆ ಪ್ರತಿಮೆಯ ರೂಪ



ಸಮಾಜ ಸುಧಾರಕರು, ರಾಜಕೀಯ ನಾಯಕರ ನೂರಾರು ಪ್ರತಿಮೆಗಳು ದೇಶದ ಉದ್ದಗಲಕ್ಕೂ ಕಾಣಸಿಗುತ್ತವೆ. ಗಾಂಧೀಜಿ, ತಿರುವಳ್ಳುವರ್, ಸ್ವಾಮಿ ವಿವೇಕಾನಂದ, ಸುಭಾಷ್‌ಚಂದ್ರ ಬೋಸ್, ಅಂಬೇಡ್ಕರ್ ಮೊದಲಾದವರ ಪುತ್ಥಳಿಗಳನ್ನು ನಿರ್ಮಿಸಲಾಗಿದೆ. ರಾಮ, ಹನುಮಂತ, ಶಿವನ ವಿಗ್ರಹಗಳೂ ಅಧಿಕವಾಗಿವೆ. ಆದರೆ ಕೆಲವು ಪ್ರತಿಮೆಗಳು 100 ಅಡಿಗಿಂತಲೂ ಹೆಚ್ಚು ಎತ್ತರವಿದ್ದು, ಪ್ರವಾಸಿ ತಾಣವಾಗಿ ಮಾರ್ಪಟ್ಟಿವೆ

- **ಏಕತಾ ಪ್ರತಿಮೆ:** ದೇಶದ ಮೊದಲ ಗೃಹಸಚಿವ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆಯನ್ನು 'ಏಕತಾ ಪ್ರತಿಮೆ' ಹೆಸರಿನಲ್ಲಿ ಗುಜರಾತ್‌ನಲ್ಲಿ ನಿರ್ಮಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2018ರಲ್ಲಿ ಪ್ರತಿಮೆ ಉದ್ಘಾಟಿಸಿದರು. ಇದು ಸುಮಾರು 600 ಅಡಿ ಎತ್ತರವಿದ್ದು, ದೇಶದ ಅತಿದೊಡ್ಡ ಪ್ರತಿಮೆ ಎನಿಸಿದೆ. ಸರ್ದಾರ್ ಸರೋವರ ಜಲಾಶಯದ ತಟದಲ್ಲಿ ಇದು ನಿರ್ಮಾಣವಾಗಿದ್ದು, ಮ್ಯೂಸಿಯಂ ಮೊದಲಾದ ಪ್ರವಾಸಿ ಆಕರ್ಷಣೆಗಳನ್ನೂ ಹೊಂದಿದೆ. ಪ್ರವಾಸಿಗರನ್ನು ಸೆಳೆಯಲು ಕೇವಡಿಯಾ ಜಿಲ್ಲೆಗೆ ದೇಶದ ವಿವಿಧ ಭಾಗಗಳಿಂದ ರೈಲುಗಳ ಸೌಕರ್ಯ ಕಲ್ಪಿಸಲಾಗಿದೆ. ಗುತ್ತಿಗೆ, ಪರಿಸರ ಹಾಗೂ ಟಿಕೆಟ್ ಹಣ ದುರ್ಬಳಕೆ ವಿಚಾರಗಳಲ್ಲಿ ಈ ಪ್ರತಿಮೆಯು ವಿವಾದಕ್ಕೂ ಕಾರಣವಾಗಿತ್ತು
- **ರಾಮಾನುಜರ ಪುತ್ಥಳಿ:** ಹೈದರಾಬಾದ್ ಸಮೀಪದ ಮುಂಚಿತಾಲ್ ಎಂಬಲ್ಲಿ ರಾಮಾನುಜಾಚಾರ್ಯರ ಹೆಸರಿನಲ್ಲಿ ಸಮಾನತೆಯ ಪುತ್ಥಳಿ ನಿರ್ಮಿಸಲಾಗಿದೆ. ಇದು 216 ಅಡಿ ಎತ್ತರವಿದೆ. 34 ಎಕರೆ ವಿಸ್ತೀರ್ಣದಲ್ಲಿ ಸುಮಾರು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಮೂರ್ತಿ ತಲೆ ಎತ್ತಿದೆ. ಸುತ್ತಲೂ 108 ದೇವಸ್ಥಾನಗಳು ಹಾಗೂ ಗ್ಯಾಲರಿ ಇವೆ. ಇದೇ ಫೆಬ್ರುವರಿಯಲ್ಲಿ ಪ್ರಧಾನಿ ಮೋದಿ ಅವರು ಪ್ರತಿಮೆಯನ್ನು ಉದ್ಘಾಟಿಸಿದ್ದರು
- **ಗದಗ್‌ನಲ್ಲಿ ಬಸವೇಶ್ವರ:** ಗದಗ್‌ನಲ್ಲಿ ಜಗತ್ತಿನ ಅತಿ ಎತ್ತರದ ಬಸವೇಶ್ವರ ಮೂರ್ತಿ ಸ್ಥಾಪಿಸಲಾಗಿದೆ. ಇದು 116.7 ಅಡಿ ಎತ್ತರವಿದೆ. ಕೆರೆ ಹಾಗೂ ಉದ್ಯಾನಗಳು ಈ ಜಾಗವನ್ನು ಪ್ರವಾಸಿ ತಾಣವನ್ನಾಗಿಸಿವೆ. ಬಸವಣ್ಣನವರ ಸಾಮಾಜಿಕ ಸುಧಾರಣೆ ಹಾಗೂ ಜೀವನದ ಬಗ್ಗೆ ಮಾಹಿತಿ ನೀಡುವ ಕಲಾ ಗ್ಯಾಲರಿಯೂ ಇಲ್ಲಿ ಮೈದಳೆದಿದೆ
- **ಬಸವಕಲ್ಯಾಣದ ಬಸವಣ್ಣ:** ವಚನಕಾರ ಬಸವೇಶ್ವರರ ಪ್ರತಿಮೆಯನ್ನು ಬೀದರ್‌ನ ಬಸವ ಕಲ್ಯಾಣದಲ್ಲಿ ಸ್ಥಾಪಿಸಲಾಗಿದೆ. 108 ಅಡಿ ಎತ್ತರದ ಈ ಪ್ರತಿಮೆಯನ್ನು 2012ರಲ್ಲಿ ನಿರ್ಮಿಸಲಾಯಿತು

ಸಿದ್ಧತೆ ಹಂತದಲ್ಲಿ ಶ್ರೀರಾಮ, ಶಿವಾಜಿ ಪ್ರತಿಮೆ...

- **ಅತಿ ಎತ್ತರದ ಶಿವಾಜಿ ಪ್ರತಿಮೆ:** ಏಕತಾ ಪ್ರತಿಮೆಯ ಎತ್ತರವನ್ನೂ ಮೀರಿಸುವ ಛತ್ರಪತಿ ಶಿವಾಜಿ ಮೂರ್ತಿ ಮುಂಬೈ ಸಮೀಪ ನಿರ್ಮಾಣವಾಗಲಿದೆ. ಇದರ ಎತ್ತರ 690 ಅಡಿ. ₹3,600 ಕೋಟಿ ವೆಚ್ಚವಾಗಲಿದೆ. ಸುರಕ್ಷತೆ ಮತ್ತು ಪರಿಸರ ಕಾರಣಗಳಿಗೆ ಈ ಯೋಜನೆ ವಿವಾದದಲ್ಲಿದೆ
- **ಆದಿ ಶಂಕರಾಚಾರ್ಯರು:** ಮಧ್ಯಪ್ರದೇಶ ಸರ್ಕಾರವು ನರ್ಮದಾ ನದಿ ತೀರದಲ್ಲಿ 108 ಅಡಿ ಎತ್ತರದ ಆದಿ ಶಂಕರಾಚಾರ್ಯರ ಮೂರ್ತಿ ಸ್ಥಾಪನೆಗೆ ಮುಂದಾಗಿದೆ. ₹2,000 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. 'ವಿಶ್ವವೇ ಒಂದು ಕುಟುಂಬ' ಎಂದು ಸಾರುವುದು ಈ ಪ್ರತಿಮೆಯ ಉದ್ದೇಶ
- **ಅಯೋಧ್ಯೆಯಲ್ಲಿ ಶ್ರೀರಾಮ:** ಅಯೋಧ್ಯೆಯಲ್ಲಿ ಶ್ರೀರಾಮನ ಅತಿ ಎತ್ತರದ ಪ್ರತಿಮೆ ನಿರ್ಮಾಣವಾಗಲಿದೆ. ₹2,500 ವೆಚ್ಚದಲ್ಲಿ 823 ಅಡಿ ಎತ್ತರಕ್ಕೆ ತಲೆ ಎತ್ತಲಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ, ಇದು ಅತಿ ಎತ್ತರದ ಪ್ರತಿಮೆ ಎನಿಸಿಕೊಳ್ಳಲಿದೆ
- **ಬಸವಣ್ಣನ ಪ್ರತಿಮೆ:** ಚಿತ್ರದುರ್ಗದ ಮುರುಘಾ ಮಠದ ಸಮೀಪ ಬಸವೇಶ್ವರರ ಪುತ್ಥಳಿ ತಲೆ ಎತ್ತಲಿದೆ. 210 ಅಡಿ ಎತ್ತರದ ಮೂರ್ತಿ ನಿರ್ಮಾಣ ಕಾಮಗಾರಿ 2024ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. 80 ಎಕರೆಯಲ್ಲಿ ಥೀಂ ಪಾರ್ಕ್ ಇರಲಿದೆ

ಮತ್ತಷ್ಟು ಪ್ರತಿಮೆಗಳು...

- ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಿಸಿದ್ದಾರೆ
- ವಿಧಾನಸೌಧದ ಮುಂಭಾಗದಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪಿಸುವುದಾಗಿ ಸರ್ಕಾರ ಹೇಳಿದೆ
- ಶಾಸಕರ ಭವನದಲ್ಲಿ ಈಗಾಗಲೇ ವಾಲ್ಮೀಕಿ ಪ್ರತಿಮೆ ಇದ್ದು, ಕನಕದಾಸರ ಪ್ರತಿಮೆ ಸ್ಥಾಪಿಸಲಾಗಿದೆ. ಕನಕದಾಸರ ಪ್ರತಿಮೆ ಇನ್ನಷ್ಟೇ ಲೋಕಾರ್ಪಣೆ ಯಾಗಬೇಕಿದೆ
- ದೆಹಲಿಯ ಸಂಸತ್ ಭವನದ ಆವರಣದಲ್ಲಿ ಕೆಂಪೇಗೌಡ ಪುತ್ಥಳಿ ಸ್ಥಾಪಿಸುವಂತೆ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಆಗ್ರಹಿಸಿದ್ದಾರೆ





ಆಧಾರ: Statue of prosperity.com ಜಾಲತಾಣ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರದ ಪ್ರಕಟಣೆಗಳು, ಪಿಟಿಐ

ಪ್ರಜಾವಾಣಿ **ಪ್ರಜಾಧ್ವನಿ** ಜನರ ಮನದಾಳದ ಮಾತು

ವಿಶ್ವವಿದ್ಯಾಲಯಗಳ ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರನ್ನು ತೆಗೆಯುವ ಕೇರಳ ಸರ್ಕಾರದ ಕ್ರಮ ಸರಿಯೆ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 271

ವರಪೂಜೆ ಮಾಡಿದ ಹಿಮವಂತ

ಮೇನಾದೇವಿ ಶಂಕರನಿಗೆ ಆರತಿ ಬೆಳಗಿ ಅರಮನೆಯೊಳಗೆ ಸ್ವಾಗತ ನೀಡಿದ್ದನ್ನು ನೋಡಿ ದೇವತೆಗಳು ಹರ್ಷಗೊಂಡರು. ಹಿಮವಂತ ದಂಪತಿಗಳು ಸಕಲ ಗೌರವ ಮತ್ತು ಶಾಸ್ತ್ರದೊಂದಿಗೆ ಶಿವನಿಗೆ ವರಪೂಜೆಯ ಕಾರ್ಯವನ್ನು ನೆರವೇರಿಸಿದರು.

ವರಪೂಜೆ ಸ್ವೀಕರಿಸಿದ ನಂತರ ದೇವತೆಗಳು ಮತ್ತು ಗಣಪರಿವಾರದೊಂದಿಗೆ ಶಿವ ತನಗಾಗಿ ಕಲ್ಪಿಸಿದ್ದ ವಾಸಸ್ಥಾನಕ್ಕೆ ತೆರಳುತ್ತಿದ್ದ. ಈ ಸಂದರ್ಭದಲ್ಲಿ ಮೇನಾದೇವಿ ತನ್ನ ಅರಮನೆಗೆ ಬಂದಾಗ ಅಂತಃಪುರಸ್ತ್ರೀಯರು ಕುಲದೇವತೆಯನ್ನು ಪೂಜಿಸಲು ಗಿರಿಜೆಯನ್ನು ಹೊರಗೆ ಕರೆದುಕೊಂಡು ಹೋದರು. ಸರ್ವಾಲಂಕಾರ ಭೂಷಿತಳಾಗಿದ್ದ ಗಿರಿಜೆ ಮಂದಹಾಸವನ್ನು ಬೀರುತ್ತಾ ತುಂಬಾ ಮನೋಹರಳಾಗಿ ಕಾಣಿಸುತ್ತಿದ್ದಳು. ನೀಳವಾದ ಕೇಶರಾಶಿ ಗಿರಿಜೆಯ ಮುಖಾರವಿಂದವನ್ನು ಮತ್ತಷ್ಟು ಸುಂದರವಾಗಿಸಿದ್ದವು. ರಮ್ಯವಾದ ಕರ್ಣಪತ್ರವೆಂಬ ಕರ್ಣಾಭರಣವನ್ನು ಕೊರಳಿಗೆ ಧರಿಸಿದ್ದರೆ, ಕಸ್ತೂರೀ ಮಿಶ್ರಿತವಾದ ಕುಂಕುಮವನ್ನು ಹಣೆಗೆ ಇಟ್ಟುಕೊಂಡಿದ್ದಳು. ಅತ್ಯಮೂಲ್ಯವಾದ ರತ್ನಹಾರವು ಅವಳ ಎದೆಯಲ್ಲಿ ಮಿರುಗುತ್ತಿತ್ತು. ಅವಳ ಕೈಗಳನ್ನು ರತ್ನಖಚಿತವಾದ ಕಡಗ ಮತ್ತು ಕಂಕಣಗಳು ಅಲಂಕರಿಸಿದ್ದವು.

ಅವಳ ರತ್ನದೋಲೆಗಳ ಪ್ರಭೆಯು ಅವಳ ಸುಂದರವಾದ ಕಪೋಲಗಳಲ್ಲಿ ಹರಡಿ, ಆಕರ್ಷಕವಾಗಿ ಕಾಣಿಸುತ್ತಿತ್ತು. ದಾಳಿಂಬೆಯಂಥ ದಂತಪಂಕ್ತಿಗಳು ಬಹು ಸುಂದರವಾಗಿ ಅವಳ ಮುಖಕ್ಕೆ ಹೊಂದುತ್ತಿದ್ದವು. ಅಪೂರ್ವವಾದ ದಂತಕಾಂತಿಯಿಂದ ಪಾರ್ವತಿ ಮುಖ ಬೆಳಗುತ್ತಿದ್ದರೆ, ಅವಳ ಕೆಳದುಟಿಯು ಬಿಂಬಫಲದಂತೆ ಶೋಭಿಸುತ್ತಿತ್ತು. ಅವಳು ರತ್ನ ಕಂಚುಕವನ್ನು ತೊಟ್ಟು, ಒಂದು ಕೈಯಲ್ಲಿ ರತ್ನಗನ್ನಡಿಯನ್ನು, ಮತ್ತೊಂದು ಕೈಯಲ್ಲಿ ವಿನೋದಕ್ಕಾಗಿ ಕಮಲವನ್ನು ಹಿಡಿದಿದ್ದಳು.

ಚಂದನ, ಅಗರು, ಕಸ್ತೂರಿಗಳಿಂದ ಮಿಶ್ರಿತವಾದ ಅರಿಶಿನವನ್ನು ಪಾರ್ವತಿ ಲೇಪಿಸಿಕೊಂಡಿದ್ದಳು. ಅವಳ ಕಾಲಿನಲ್ಲಿ ತೊಟ್ಟಿದ್ದ ಕಡಗವು ಸುಂದರವಾಗಿ ಮೂಡಿತ್ತು. ಪಾರ್ವತಿ ಹೆಜ್ಜೆ ಇಟ್ಟಾಗೆಲ್ಲ ಅದು ಕಿವಿಗೆ ಇಂಪಾಗುವಂತೆ ಧ್ವನಿ ಮಾಡುತ್ತಿತ್ತು. ಅವಳ ಅಂಗಾಲಿಗೆ ಕೆಂಬಣ್ಣ ಹಚ್ಚಲಾಗಿತ್ತು. ಅವಳ ಒಡ್ಯಾಣ ಮನೋಹರವಾಗಿ ಕಾಣಿಸುತ್ತಿತ್ತು.

ಹೀಗೆ ಅತಿಲೋಕಸುಂದರಿಯಂತೆ ಕಂಗೊಳಿಸುತ್ತಿದ್ದ ಜಗನ್ಮಾತೆ ಗಿರಿಜಾದೇವಿಯನ್ನು ತಾಯಿ ಮೇನಾದೇವಿಯೊಡನೆ ನೋಡಿದ ದೇವತೆಗಳೆಲ್ಲರೂ ಭಕ್ತಿಯಿಂದ ನಮಿಸಿದರು. ತನ್ನ ಕಣ್ಣ ಮುಂದೆಯೇ ಕುಲದೇವತಾ ಪೂಜೆಗೆ ಹೋಗುತ್ತಿದ್ದ ಸೌಂದರ್ಯದ ಖನಿ ಗಿರಿಜೆಯನ್ನು ಓರೆಗಣ್ಣಿನಿಂದ ನೋಡಿದ ಪರಶಿವ ಸಂತುಷ್ಟನಾದ. ಸತೀದೇವಿಯಂತೆಯೇ ಇರುವ ಪಾರ್ವತಿಯನ್ನು ನೋಡಿ, ಅವನು ಹಿಂದಿನ ತನ್ನ ವಿರಹದುಃಖವನ್ನು ಮರೆತು ಉಲ್ಲಸಿತನಾದ. ಗಿರಿಜೆಯನ್ನು ನೋಡುತ್ತಾ ಪರಶಿವ ಪರವಶನಾದಂತೆ ಮೈಮರೆತು ನಿಂತ.

ಅತ್ತ ಪಾರ್ವತಿ ಅಂತಃಪುರದ ಸ್ತ್ರೀಯರೊಡನೆ ಬಂದು ಕುಲಾಚಾರದಂತೆ ನಗರದ ಹೊರಗಿರುವ ಕುಲದೇವತೆಯನ್ನು ಪೂಜಿಸಿದಳು. ನಂತರ ಸುಮಂಗಲಿಯರೊಡನೆ ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದಳು. ಶಂಕರ ಸಹ ವರಪೂಜೆಯ ನಂತರ ಹಿಮವಂತನು ಕಲ್ಪಿಸಿದ ತನ್ನ ಸ್ಥಾನಕ್ಕೆ ವಿಷ್ಣು, ಬ್ರಹ್ಮ, ಇಂದ್ರಾದಿ ದೇವತೆಗಳು, ವಸಿಷ್ಠ ಮತ್ತಿತರ ಮುನಿಗಳು ಹಾಗೂ ಸಿದ್ಧಪುರುಷರೊಂದಿಗೆ ತೆರಳಿದ.

ವರ ಶಂಕರನ ಬಿಡಾರದಲ್ಲಿ ಎಲ್ಲ ದೇವತೆಗಳು ಮತ್ತು ಶಿವಗಣಗಳು ತಂಗಿದ್ದರು. ಅಲ್ಲಿ ಹಿಮವಂತ ಅತಿಥಿಗಳಿಗೆ ಸಕಲ ಅನುಕೂಲಗಳನ್ನೂ ಕಲ್ಪಿಸಿಕೊಟ್ಟಿದ್ದ.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ನಲವತ್ತಾರನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ #StopLandJihad ಎಂಬ ಹ್ಯಾಷ್‌ಟ್ಯಾಗ್ ಸಾಕಷ್ಟು ಟ್ರೆಂಡಿಂಗ್‌ನಲ್ಲಿದೆ. ಸಾರ್ವಜನಿಕ ಸ್ಥಳಗಳನ್ನು ಮುಸ್ಲಿಮರ ಧಾರ್ಮಿಕ ಕೇಂದ್ರಗಳು ಅತಿಕ್ರಮಣ ಮಾಡಿಕೊಂಡಿವೆ ಎಂದು ಆರೋಪಿಸಲಾಗುತ್ತಿದೆ. ಒತ್ತುವರಿ ನಡೆದಿದೆ ಎನ್ನಲಾದ ಹಲವು ಚಿತ್ರಗಳ ಪೈಕಿ ಹೆದ್ದಾರಿಯ ಮೇಲೆ ಮಜಾರ್ (ಮುಸ್ಲಿಂ ಧಾರ್ಮಿಕ ಮುಖಂಡರ ಸಮಾಧಿ) ಇರುವ ಚಿತ್ರ ಸಾಕಷ್ಟು ಹರಿದಾಡುತ್ತಿದೆ. 'ಹೆದ್ದಾರಿಯನ್ನೇ ಮಜಾರ್ ಒತ್ತುವರಿ ಮಾಡಿದೆ. ಸಮಾಧಿ ಮೇಲೆ ಹೊದಿಸಲಾಗಿರುವ ಹೊದಿಕೆಯನ್ನು ಬಡವರಿಗಾದರೂ ನೀಡಬಹುದು' ಎಂದು ಕೆಲವರು ಸಲಹೆ ನೀಡಿದ್ದಾರೆ. ಆದರೆ ಇದು ತಿರುಚಲಾದ ಚಿತ್ರ.

ಹೆದ್ದಾರಿಯ ಮೇಲೆ ಮಜಾರ್ ಇದೆ ಎನ್ನಲಾಗುವ ಚಿತ್ರವನ್ನು ಪರಿಶೀಲಿಸಲಾಗಿದ್ದು, ಅದನ್ನು ತಿರುಚಲಾಗಿದೆ ಎಂದು 'ಇಂಡಿಯಾಟುಡೇ' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಹೆದ್ದಾರಿಯ ಮೂಲ ಚಿತ್ರವನ್ನು ಪಿಟಿಐ ಸುದ್ದಿಸಂಸ್ಥೆ ಸೆರೆಹಿಡಿದಿದೆ. ಈ ಚಿತ್ರವನ್ನು 2016ರಿಂದಲೂ ಹಲವು ಮಾಧ್ಯಮಸಂಸ್ಥೆಗಳು ಪ್ರಕಟಿಸಿವೆ. ಮೂಲ ಚಿತ್ರದಲ್ಲಿ ಮಜಾರ್ ಇಲ್ಲ. ಅದನ್ನು ಕೃತಕವಾಗಿ ಸೇರಿಸಲಾಗಿದ್ದು, ಜನರನ್ನು ತಪ್ಪು ದಾರಿಗೆ ಎಳೆಯಲಾಗಿದೆ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಕ್ತಿಯ ಗುಟ್ಟು

ಬ್ರಹ್ಮಾನುಸಂಧಾನ ಲೋಕಸಂಧಾನದಲಿ |
ಬ್ರಹ್ಮದರ್ಶನವೆಲ್ಲ ಜೀವರೂಪದಲಿ ||
ಬ್ರಹ್ಮಾನುಭವ ದೇಹಕರಣಾನುಭವಗಳಲಿ |
ಮರ್ಮವಿದು ಮುಕ್ತಿಗೆಲೊ – ಮಂಕುತಿಮ್ಮ ||
753 ||

ಪದ-ಅರ್ಥ: ಬ್ರಹ್ಮಾನುಸಂಧಾನ = ಬ್ರಹ್ಮನ + ಅನುಸಂಧಾನ (ಪರಿಶೀಲನೆ, ಧ್ಯಾನ), ಲೋಕಸಂಧಾನದಲಿ = ಲೋಕ + ಸಂಧಾನದಲಿ(ಸೇರುವಿಕೆಯಲ್ಲಿ), ಬ್ರಹ್ಮಾನುಭವ = ಬ್ರಹ್ಮನ + ಅನುಭವ, ದೇಹಕರಣಾನುಭವಗಳಲಿ = ದೇಹ + ಕರಣ(ಇಂದ್ರಿಯ) + ಅನುಭವಗಳಲಿ, ಮರ್ಮ = ಗುಟ್ಟು.

ವಾಚ್ಯಾರ್ಥ: ಬ್ರಹ್ಮವಸ್ತುವಿನ ಧ್ಯಾನ, ಲೋಕ ವ್ಯವಹಾರಗಳಲ್ಲಿ, ಬ್ರಹ್ಮದರ್ಶನವು ಸಕಲ ಜೀವಗಳಲ್ಲಿ, ಬ್ರಹ್ಮನ ಅನುಭವ ನಮಗೆ ದೊರಕುವುದು ನಮ್ಮ ದೇಹ, ಇಂದ್ರಿಯಗಳ ಅನುಭವಗಳಲ್ಲೇ. ಮುಕ್ತಿಗೆ ಇದೇ ಗುಟ್ಟು.

ವಿವರಣೆ: ಬ್ರಹ್ಮವಸ್ತುವನ್ನು ಎಲ್ಲಿ ಹುಡುಕುವುದು? ಅದರ ಅನುಸಂಧಾನವನ್ನು ದೇವಸ್ಥಾನಗಳಲ್ಲಿ, ಚರ್ಚುಗಳಲ್ಲಿ, ಮಸೀದಿಗಳಲ್ಲಿ ಮಾಡಬಹುದೆ? ದೇವರಿರುವುದು ಅಲ್ಲಿ ಮಾತ್ರವೆ? ನಿಸರ್ಗದಲ್ಲಿ ಭಗವಂತನಿಲ್ಲವೆ? ಜೀವಸಂಕುಲದಲ್ಲಿ ದೇವನನ್ನು ಕಾಣಲಾರೆವೆ? ಭಗವಂತ ಅನಿಕೇತ. ಅವನಿಗೆ ಮನೆಯಿಲ್ಲ. ಅಂದರೆ ಅವನಿಗೆ ಒಂದು ಮನೆ ಎಂಬುದಿಲ್ಲ. ನಾವು ಕಣ್ಣಾಡಿಸಿದಲ್ಲೆಲ್ಲ ಅವನ ಬೆರಳ ಮುದ್ರೆ ಕಾಣುತ್ತವೆ. ಅಣು ರೇಣು ತೃಣಕಾಷ್ಠಗಳಲ್ಲಿ ಭಗವಂತನಿದ್ದಾನೆಂದು ಶಾಸ್ತ್ರಗಳು ಸಾರುತ್ತವೆ. ಆದ್ದರಿಂದ ಭಗವಂತನ ಧ್ಯಾನ ಮಾಡಬೇಕಾದರೆ ಲೋಕದ ಪ್ರತಿಯೊಂದು ವಸ್ತುಗಳಲ್ಲಿ ಅವನನ್ನು ಕಾಣಲು ಪ್ರಯತ್ನಿಸಬೇಕು. ಪುಟ್ಟ ಹುಡುಗನೊಬ್ಬ ದೇವನನ್ನು ಬೆಟ್ಟದ ಮೇಲಿನ ಗುಡಿಯಲ್ಲಿ ಕಾಣಲು ಮನೆಯಿಂದ ಹೊರಟ. ದಾರಿಗೆ ಬೇಕೆಂದು ಆಹಾರ ಕಟ್ಟಿಕೊಂಡಿದ್ದಾನೆ. ಸುಮಾರು ದಾರಿ ನಡೆದ. ಆಯಾಸವಾದಾಗ ಮರದ ಕೆಳಗೆ ಕುಳಿತು ಊಟ ಮಾಡಲು ಯೋಚಿಸಿದ. ಹಿಂದೆ ಯಾರೋ ನರಳಿದಂತಾಯಿತು. ತಿರುಗಿ ನೋಡಿದರೆ ವೃದ್ಧೆಯೊಬ್ಬಳು ನೆಲದಲ್ಲಿ ಮಲಗಿ ಹೊರಳುತ್ತಿದ್ದಾಳೆ. ಹಸಿವಿನಿಂದ ಕಂಗಾಲಾಗಿದ್ದಾಳೆ. ಹುಡುಗನ ಮನ ಕರಗಿತು. ಆಕೆಯನ್ನು ಎಬ್ಬಿಸಿದ. ತಾನು ತಂದ ಊಟವನ್ನು ಆಕೆಗೆ ಕೊಟ್ಟು ಉಪಚರಿಸಿದ. ಸ್ವಲ್ಪ ಹೊತ್ತಿಗೆ ಆಕೆ ಗೆಲುವಾದಳು. ಹುಡುಗನನ್ನು ನೋಡಿ ಪ್ರೀತಿಯಿಂದ ಗಲ್ಲ ಸವರಿ ನಕ್ಕಳು. ಹುಡುಗ ಗುಡಿಗೆ ಹೋಗದೆ ಮನೆಗೆ ಮರಳಿ ತಾಯಿಗೆ ಹೇಳಿದ, "ಅಮ್ಮಾ, ನನಗೆ ದೇವರು ದಾರಿಯಲ್ಲೇ ಸಿಕ್ಕ. ಆದರೆ ಆತ ಮುದುಕಿಯ ರೂಪದಲ್ಲಿದ್ದ. ಆಕೆಯ ನಗು, ಪ್ರೀತಿ ಎಷ್ಟುಸುಂದರ ಗೊತ್ತೇ? ಮುದುಕಿ ತನ್ನ ಮೊಮ್ಮಗಳಿಗೆಹೇಳಿದಳು, "ಇಂದು ದೇವರು ಮಗುವಿನ ರೂಪದಲ್ಲಿ ಬಂದುಕಾಪಾಡಿದ. ಅವನ ನಗು ಏನು ಚಂದ ಗೊತ್ತೇ? ಥೇಟ್ ಆತ ಬಾಲಕೃಷ್ಣನೇ?" ಇಬ್ಬರೂ ಮತ್ತೊಬ್ಬರಲ್ಲಿ ಭಗವಂತನನ್ನು ಕಂಡಿದ್ದರು. ಇದೇ ಜೀವರೂಪದಲ್ಲಿ ಭಗವಂತನನ್ನು ಕಾಣುವುದು. ಇನ್ನು ನಮಗೆ ಪರಸತ್ವದ ಅನುಭವವಾಗುವುದು ಹೇಗೆ? ನಮಗೆ ಪ್ರತಿಯೊಂದು ಅನುಭವವೂ ನಮ್ಮ ದೇಹದಿಂದಲೇ ದಕ್ಕಬೇಕು. ಆ ದೇಹಕ್ಕೆ ಅನುಭವಗಳನ್ನು ತಂದು ತುಂಬುವುವು, ನಮ್ಮ ಇಂದ್ರಿಯಗಳು. ಅದಕ್ಕೇ ಕಗ್ಗ ತಿಳಿಸುತ್ತದೆ, ಬ್ರಹ್ಮದ ಅನುಭವ ನಮಗೆ ದೊರಕುವುದು ನಮ್ಮ ದೇಹ ಮತ್ತು ಕರಣಗಳಿಂದಲೇ. ಇದೇ ಬಿಡುಗಡೆಯ, ಮುಕ್ತಿಯ ಗುಟ್ಟು. ಹಾಗೆಂದರೆ, ಬ್ರಹ್ಮವಸ್ತುವನ್ನು ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ, ಬ್ರಹ್ಮದರ್ಶನವನ್ನು ಪ್ರತಿಯೊಂದು ಜೀವದಲ್ಲಿ ಮತ್ತು ಬ್ರಹ್ಮದ ಅನುಭವವನ್ನು ನಮ್ಮ ಇಂದ್ರಿಯಗಳಿಂದಲೇ ಪಡೆಯುತ್ತೇವೆಂಬ ತಿಳುವಳಿಕೆಯೇ ಮುಕ್ತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ನವೆಂಬರ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಿತೀಯ ಗಂ. 18-33 ನಕ್ಷತ್ರ: ರೋಹಿಣಿ ಗಂ. 29-08 ಯೋಗ: ಪರಿಘ ಗಂ. 21-12, ಕರಣ: ಗರಜೆ ಗಂ. 18-33, ತುಲಾ ಮಾಸದ 23 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 14 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 3, 12

ಮೇಷ: ಕೇವಲ ವ್ಯಾವಹಾರಿಕವಾಗಿ ಅಲ್ಲದೆ ಪಾರಮಾರ್ಥಿಕ ದೃಷ್ಟಿಯಲ್ಲಿಯೂ ಯೋಚನೆ ಮಾಡುವುದು ಉತ್ತಮ. ಸಂತಾನದ ಅಪೇಕ್ಷಿಗಳಿಗೆ ಶುಭ ಫಲ ಪ್ರಾಪ್ತಿಯಾಗುತ್ತದೆ. ವೃತ್ತಿಗೆ ಹೊರತಾದ ಕೆಲಸ ಮಾಡುವುದರಲ್ಲಿ ಆಸಕ್ತಿ ಹೆಚ್ಚಲಿದೆ.

ವೃಷಭ: ಈ ದಿನ ನಿಮಗೆ ಯಾವುದೇ ಅನುಮಾನಗಳಿಲ್ಲದೇ ಏಕಮುಖವಾದ ನಿರ್ಧಾರ ತೆಗೆದುಕೊಳ್ಳುವುದು ಅಸಾಧ್ಯ. ಪ್ರಭಾವಿ ವ್ಯಕ್ತಿಗಳ ಜತೆಗಿನ ಒಡನಾಟ ಮತ್ತು ಓಡಾಟ ನಿಮಗೆ ಹೆಚ್ಚಿನ ಸ್ಥಾನಮಾನ ತಂದು ಕೊಡಲಿದೆ.

ಮಿಥುನ: ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿ ನಡೆದು ಸಂತೋಷ ಉಂಟಾಗಲಿದೆ. ಟ್ರಾವೆಲ್ ಏಜೆಂಟ್‌ಗಳಿಗೆ ಹೆಚ್ಚಿನ ಅವಕಾಶಗಳು ಲಭ್ಯ. ಶ್ರೀರಾಮ ನಾಮ ಭಜನೆಯಿಂದ ಕಾರ್ಯಗಳ ಅಭಿವೃದ್ಧಿಯಾಗುವುದು.

ಕರ್ಕಾಟಕ: ಹೊಂದಾಣಿಕೆಯ ಮನೋಭಾವ ಕಡಿಮೆಯಾಗುವುದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯ ಉಂಟಾಗದಂತೆ ಜಾಗ್ರತೆ ವಹಿಸಿ. ಕೆಲಸಕ್ಕೆ ಸೋಮಾರಿತನ ಅಥವಾ ಸಮಯದ ಅಭಾವದಂತಹ ಸಮಸ್ಯೆ ಎದುರಾಗುತ್ತದೆ.

ಸಿಂಹ: ಇನ್ನೊಬ್ಬರ ಮಾತುಗಳನ್ನು ಆಲಿಸಿ ವಿಚಾರ ತೀರ್ಮಾನಿಸುವುದಕ್ಕಿಂತ ಸ್ವತಃ ಪರೀಕ್ಷೆ ನಡೆಸಿ ತೀರ್ಮಾನಕ್ಕೆ ಬರುವುದು ಸರಿ. ಹಠದಿಂದ ಕಾರ್ಯ ಸಾಧಿಸಿಕೊಳ್ಳುವ ಪ್ರಯತ್ನವಿರಲಿ.

ಕನ್ಯಾ: ಕಬ್ಬಿಣದ ಅಥವಾ ಸಿಮೆಂಟ್ ವ್ಯವಹಾರದ ನಿರ್ವಹಣೆಗೆ ಸಾಲ ಮಾಡುವುದು ಅನಿವಾರ್ಯ. ಕೈ ಕಟ್ಟಿ ಕೂರುವುದಕ್ಕಿಂತ ಧೈರ್ಯಮಾಡಿ ಕಾರ್ಯೋನ್ಮುಖರಾದರೆ ಅಭಿವೃದ್ಧಿ ಹೊಂದುವಿರಿ.

ತುಲಾ: ರಾಸಾಯನಿಕ ವಸ್ತುಗಳ ರಫ್ತು ವ್ಯವಹಾರ ನಡೆಸುವವರು ನಿಯಮಕ್ಕೆ ಬದ್ಧರಾಗಿರುವುದು ಉತ್ತಮ. ಸರ್ಕಾರದ ಕಂಟ್ರಾಕ್ಟ್ ಕೆಲಸ ದೊರೆತು ಬಹಳ ಸಂತೋಷವಾಗುವುದು. ಮಕ್ಕಳ ಆರೋಗ್ಯದ ಕಡೆ ಗಮನವಹಿಸಿ.

ವೃಶ್ಚಿಕ: ವೃತ್ತಿಯಲ್ಲಿ ನಿಮ್ಮ ಮೇಲಧಿಕಾರಿಗಳಿಗೂ ನಿಮಗೂ ಹೊಂದಾಣಿಕೆ ಮೂಡುವುದು ಕಷ್ಟ. ಲೆಕ್ಕಾಚಾರದ ಜವಾಬ್ದಾರಿ ಹೊತ್ತಿರುವವರು ಹೆಚ್ಚಿನ ಗಮನದಿಂದ ಕೆಲಸ ನಿರ್ವಹಿಸಿ, ಸಮಸ್ಯೆಗೆ ಸಿಲುಕುವಂತಾಗುವುದು.

ಧನು: ನಿಮ್ಮ ಗುರಿ ಸಾಧನೆಯತ್ತ ಹೆಚ್ಚಿನ ಆಸಕ್ತಿಯಿಂದ ಕೆಲಸ ಕಾರ್ಯ ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ವಕೀಲರು ಈ ದಿನ ಕೋರ್ಟ್ ಕೆಲಸಗಳಲ್ಲಿ ಅಧಿಕ ವರಮಾನ ಗಳಿಸುವರು. ಅನಿರೀಕ್ಷಿತ ಅಧಿಕಾರ ನಿಮ್ಮನ್ನು ಅರಸಿ ಬರಲಿದೆ.

ಮಕರ: ಜನ ಸಂಪರ್ಕ ಬೆಳಸಿಕೊಳ್ಳುವುದನ್ನು ಅಭ್ಯಸಿಸಿಕೊಳ್ಳುವುದು ಉತ್ತಮ. ನಿರುದ್ಯೋಗಿಗಳಿಗೆ ಬಯಸಿದ ಉದ್ಯೋಗ ಲಭಿಸಲಿದೆ. ಬಂಧು ಬಾಂಧವರೊಡನೆ ಒಡನಾಟ ಹೆಚ್ಚಲಿದೆ. ವಾಹನ ಕೊಳ್ಳುವ ಯೋಗವಿದೆ.

ಕುಂಭ: ಹೆಚ್ಚಿನ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಸಂತಸವಿದ್ದು, ಹೊಸ ಸಂಸ್ಥೆಯಲ್ಲಿನ ಕೆಲಸಗಳು ಸುಲಭ ಮತ್ತು ಸಂತೋಷಮಯ ಎನಿಸುವುದು. ಸಹೋದ್ಯೋಗಿಯ ನೆರವಿನಿಂದ ಕೆಲಸ ಶೀಘ್ರ ಪೂರ್ಣಗೊಳ್ಳಲಿದೆ.

ಮೀನ: ವ್ಯವಹಾರದಲ್ಲಿನ ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಿಂದ ವಿಚಾರ ತಿಳಿದುಕೊಳ್ಳುವುದು ಉತ್ತಮ. ಅನಿಸಿಕೆಗಳನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು ಕಷ್ಟವೆನಿಸುತ್ತದೆ.

ಪದಬಂಧ 5134

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಭಸ್ಮವಿಟ್ಟು ಮಹಾಪುರುಷನಿಗೆ ಮಾಡುವ ಆದರ (5)
3. ಕನ್ನಡಿಗ ಹಿಡಿದಿರುವ ಸ್ಪೂನ್! (3)
5. ಗುಂಪು ಗುಂಪಾಗಿ ವರ್ಗೀಕರಿಸುವುದು (5)
7. ಕಟ ಕಟ ಸದ್ದು ಮಾಡುವ ಬಾಗಿಲು (3)
8. ಪ್ರಣಯಿಗಳ ಸುಳ್ಳು ಕೋಪ (5)
11. ಬೆಂದಕ್ಕಿ ಕಾಳು (3)
12. ಹೆಸರಿಡುವ ಶಾಸ್ತ್ರ (5)
14. ಕೊಡತಕ್ಕ ಹಣ (3)
15. ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ
1. ಕವಿಕಲ್ಪನೆಯ ನಡುವೆ ಅಕ್ಕನ ಗಂಡ ನುಸುಳಿದ್ದಾನೆ (4)
2. ಈತ ತಿರುಪೆ ಬೇಡುವವನು (3)
4. ಒರಟ ಹಿಡಿದಿದ್ದು ನಿಸ್ಸಾರವಾದ ಗಸಿ (3)
6. ಸಿಕ್ಕದಿರುವ ರಾಕ್ಷಸಿ (3)
7. ಇನ್ನೂ ಕರು ಹಾಕದ ಎಮ್ಮೆ (3)
8. ಹುಳುವಿನಲ್ಲಿರುವ ಸತ್ವ ಕಾಣುತ್ತಿದೆಯೇ? (3)
9. ಯಮನಿದ್ದಾಗಿನ ಸೂತ್ರ (3)
10. ಬುದ್ಧಿವಂತಿಕೆ ಇಲ್ಲಿದೆ (4)
11. ಸೊಡರು ಹಿಡಿದುಕೊಂಡು ಹೀಗೆ ಮೇಲಕ್ಕೆ ಹತ್ತು (3)
13. ದನಕ್ಕಾಗಿ ನಡೆದ ಹೋರಾಟ (3)



5133ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮುಲಾಮು 4.ಗಿಟಕು
5.ಜವಾಹಿರಿ 6.ಟಕ್ಕುತನ
7.ಗಣಿತ 9.ನಸರಿ
13.ಗುಡಿಕಾರ 14.ಹಣಾಹಣಿ
15.ಸಿಂಧೂರ 16.ಪ್ರವಾಹ

ಮೇಲಿಂದ ಕೆಳಕ್ಕೆ:
1.ಇಂಗಿತಜ್ಞ 2.ಮುಕುಟಮಣಿ
3.ಅಹಿತ 5.ಜನಮನ
8.ತಡಗುಣಿ 10.ಸಮರಸಿಂಹ
11.ಹಗರಣ 12.ಗುಣಾಢ್ಯ

ಸುಡೊಕು 5520

		4	9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5519 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,203
ಇಂದಿನ ಅಂತ್ಯ	18,157
▼	46
ದಿನದ ಕನಿಷ್ಠ	18,117

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹525

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹301-665
ದ್ವಿತಳಿ (ಬಿ.ವಿ)
₹432-821

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1510 (1540)
ಸೋಯಾ (ರಿಫೈನ್ಡ್)	₹1380 (1410)
ಸೂರ್ಯಕಾಂತಿ (ರಿಫೈನ್ಡ್)	₹1600 (1620)
ಪಾಮೋಲಿನ್	₹1005 (1025)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹147.50
ಆರ್‌ಎಸ್‌ಎಸ್-5 ₹138
ಗುಡ್ ಲಾಟ್ ₹132
(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1200-2000
ಸಣ್ಣ	₹500-1200

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 250-300
ನಡುಗೋಲು 450-480
ರಾಶಿ 480-500
ರಾಶಿ ಉತ್ತಮ 550-600
ಜರಡಿ 700-750
ಹೆರಕಿದ್ದು 1000-1100
ಹಸಿರು ಸಾಧಾರಣ 600-700
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1250-1350
ಕಾಳು ಮೆಣಸು 480
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-38000
ಕುಮಟ
ಚಿಪ್ಪು 26089-33019
ಕೋಕ 16089-30001
ಹಳೆಚಾಲಿ 37609-41099
ಹೊಸಚಾಲಿ 28099-32199
ಶಿವಮೊಗ್ಗ
ಬೆಟ್ಟೆ 47200-52019
ಗೊರಬಲು 17000-36509

ಹೊಸತು 44809-46899
ರಾಶಿ 44599-47509
ಸರಕು 60006-77700
ಸಿದ್ದಾಪುರ
ಬಿಳಿಗೋಟು 27499-34099
ಚಾಲಿ 37099-41099
ಕೋಕ 26119-33109
ಕೆಂಪುಗೋಟು 32519-33499
ರಾಶಿ 42309-46289
ತಟ್ಟಿಬೆಟ್ಟೆ 37769-42809
ಶಿರಸಿ
ಬೆಟ್ಟೆ 38899-44099
ಬಿಳಿಗೋಟು 22089-36400

ಚಾಲಿ 37199-42456
ರಾಶಿ 43569-46919
ಯಲ್ಲಾಪುರ
ಬಿಳಿಗೋಟು 26899-35000
ಚಾಲಿ 36800-42099
ಕೋಕ 18099-29011
ಕೆಂಪುಗೋಟು 31742-35899
ರಾಶಿ 45899-52170
ತಟ್ಟಿಬೆಟ್ಟೆ 36342-44999
ತಿಪಟೂರು ಕೊಬ್ಬರಿ
ಕನಿಷ್ಠ 11000
ಗರಿಷ್ಠ 13126
ಮಾದರಿ 13000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14300	14000	13800	175.55 ಸೆಂಟ್ಸ್
ಎಸಿ	7000	7300	6900	
ಆರ್‌ಪಿ	8500	8000	8400	ಲಂಡನ್
ಆರ್‌ಸಿ	4530	4000	4000	1851 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

9–11–2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1540)
ಒಂದು ವಾರದ ಡೆಲಿವರಿ	1515 (1535)
ಸೋಯಾ ಕಚ್ಚಾ	1350 (1350)
ಪಾಮ್ ವಾರದ ಡೆಲಿವರಿ	1003 (1023)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,350 (50,550)
ಬೆಳ್ಳಿ ಕೆ.ಜಿ 61,500 (60,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಅನರಾಕ್ ಸಂಸ್ಥೆಯ ಅಧ್ಯಯನ • ಮನೆ ಮಾರುಕಟ್ಟೆಗೆ ತಂತ್ರಜ್ಞಾನ ವಲಯದ ಆಸರೆ

ಬಡ್ಡಿ ಹೆಚ್ಚಿದರೂ ಜಿಗಿದ ಮನೆ ಮಾರಾಟ

• ವಿಜಯ್ ಜೋಷಿ

ಬೆಂಗಳೂರು: ಬ್ಯಾಂಕ್ ಬಡ್ಡಿ ಹೆಚ್ಚುತ್ತಿದ್ದರೂ, ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ ದೇಶದ ಏಳು ಪ್ರಮುಖ ನಗರಗಳಲ್ಲಿ ಮನೆಗಳ ಮಾರಾಟ ಪ್ರಮಾಣವು ಮೌಲ್ಯದ ಲೆಕ್ಕದಲ್ಲಿ ಶೇಕಡ 119ರಷ್ಟು ಏರಿಕೆ ಕಂಡಿದೆ. ಬೆಂಗಳೂರಿನಲ್ಲಿ ಮನೆಗಳ ಮಾರಾಟವು ಈ ಅವಧಿಯಲ್ಲಿ ಮೌಲ್ಯದ ಲೆಕ್ಕದಲ್ಲಿ ಶೇ 114ರಷ್ಟು ಹೆಚ್ಚಳ ಆಗಿದೆ.

ಆಸ್ತಿ ಸಲಹಾ ಸಂಸ್ಥೆ ಅನರಾಕ್ ಪ್ರಾಪರ್ಟಿ ಕನ್ಸಲ್ಟೆಂಟ್ಸ್ ನಡೆಸಿರುವ ಅಧ್ಯಯನವು ಇದನ್ನು ಹೇಳಿದೆ. ಹಿಂದಿನ ಆರ್ಥಿಕ ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಏಳು ಮಹಾನಗರಗಳಲ್ಲಿ ಅಂದಾಜು ಒಟ್ಟು ₹ 71,295 ಕೋಟಿ ಮೌಲ್ಯದ ಮನೆಗಳ ಮಾರಾಟ ಆಗಿತ್ತು.

ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳುಗಳಲ್ಲಿ ಆಗಿರುವ ಮನೆಗಳ ಮಾರಾಟದ ಒಟ್ಟು ಮೌಲ್ಯವು ಅಂದಾಜು ₹ 1.55 ಲಕ್ಷ ಕೋಟಿ ಎಂದು 'ಅನರಾಕ್' ತಿಳಿಸಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಆರ್‌ಬಿಐ ಈ ವರ್ಷದ ಮೇ ತಿಂಗಳಿನಿಂದ ಈಚೆಗೆ ರೆಪೊ ದರವನ್ನು ಹೆಚ್ಚಿಸುತ್ತ ಬಂದಿದೆ. ಮೇ ತಿಂಗಳಿನಿಂದ ಇದುವರೆಗೆ ರೆಪೊ ದರವು ಶೇ 1.9ರಷ್ಟು ಹೆಚ್ಚಳವಾಗಿದೆ. ಬ್ಯಾಂಕ್‌ಗಳು ಗೃಹ ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿವೆ. ಬಡ್ಡಿ ದರ ಹೆಚ್ಚಳವು ಮನೆಗಳ ಮಾರಾಟದ ಮೇಲೆ ಪರಿಣಾಮ ಬೀರಬಹುದು ಎಂಬ ವಾದ ಇತ್ತು.

'ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ ಮನೆಗಳ ಮಾರಾಟವು ಏಳು ನಗರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿದೆ ಎಂಬುದನ್ನು ಅಂಕಿ–ಅಂಶಗಳು ಸ್ಪಷ್ಟವಾಗಿ ತಿಳಿಸುತ್ತಿವೆ. ಮನೆಗಳ ಬೆಲೆ ಹೆಚ್ಚಳ ಹಾಗೂ ಬಡ್ಡಿ ದರ ಏರಿಕೆಯ ಪರಿಣಾಮವಾಗಿ ಮಾರಾಟ ಕಡಿಮೆ ಆಗಬಹುದು ಎಂಬ ಆತಂಕವನ್ನು ಇದು ದೂರ ಮಾಡಿದೆ' ಎಂದು ಅನರಾಕ್ ಸಮೂಹದ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ನಗರ	ಈ ವರ್ಷದ ಆರು ತಿಂಗಳಲ್ಲಿ ಮನೆಗಳ ಮಾರಾಟ	ಹಿಂದಿನ ವರ್ಷದ ಮಾರಾಟ
ಬೆಂಗಳೂರು	24,195	12,110
ಚೆನ್ನೈ	7,305	4,995
ಹೈದರಾಬಾದ್	22,840	9,980
ಪುಣೆ	26,580	13,490
ಕೋಲ್ಕತ್ತ	9,750	4,740
ಮುಂಬೈ (ಎಂಎಂಆರ್)	52,185	28,370
ದೆಹಲಿ (ಎನ್‌ಸಿಆರ್)	30,300	13,690
ಒಟ್ಟು	1,73,155	87,375

(ಆಧಾರ: ಅನರಾಕ್ ಪ್ರಾಪರ್ಟಿ ಕನ್ಸಲ್ಟೆಂಟ್ಸ್)

ಈ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಅಂತ್ಯದವರೆಗಿನ ಅವಧಿಯಲ್ಲಿ ಏಳು ಮಹಾನಗರಗಳಲ್ಲಿ ಒಟ್ಟು 1.73 ಲಕ್ಷ ಮನೆಗಳ ಮಾರಾಟ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಒಟ್ಟು 87 ಸಾವಿರ ಮನೆಗಳ ಮಾರಾಟ ದಾಖಲಾಗಿತ್ತು ಎಂದು ಅನರಾಕ್ ಹೇಳಿದೆ.

'ತಂತ್ರಜ್ಞಾನ ಉದ್ಯಮ ವಲಯದಲ್ಲಿ ಒಂದೆರಡು ವರ್ಷಗಳಲ್ಲಿ ಕಂಡುಬಂದ ಬೆಳವಣಿಗೆಯ ಕಾರಣದಿಂದಾಗಿ ವಸತಿ ಮಾರುಕಟ್ಟೆಯಲ್ಲಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ. ತಂತ್ರಜ್ಞಾನ ವಲಯದಲ್ಲಿ ದೊಡ್ಡ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಆಗಿದೆ, ಅಲ್ಲಿ ನೌಕರರ ವೇತನವು ಒಂದು ವರ್ಷದಲ್ಲಿ ಶೇ 18ರಿಂದ ಶೇ 26ರಷ್ಟು ಹೆಚ್ಚಾಗಿದೆ. ಇದು ವಸತಿ ಮಾರುಕಟ್ಟೆಗೆ ಇಂಬು ಕೊಟ್ಟಿದೆ' ಎಂದು ಪುರವಂಕರ ಲಿಮಿಟೆಡ್‌ನ ಅಂಗಸಂಸ್ಥೆ ಪ್ರಾವಿಡೆಂಟ್ ಹೌಸಿಂಗ್‌ನ ಸಿಒಒ ಮಲ್ಲಣ್ಣ ಸಾಸಲು 'ಪ್ರಜಾವಾಣಿ'ಗೆ ತಿಳಿಸಿದರು.

ವಾಸ್ತವದಲ್ಲಿ ಬ್ಯಾಂಕ್ ಬಡ್ಡಿ ದರವು ಕೋವಿಡ್ ಅವಧಿಯಲ್ಲಿ ಅತ್ಯಂತ ಕಡಿಮೆ ಮಟ್ಟದಲ್ಲಿ ಇತ್ತು. ಈಗ ಅದು ಸಹಜ ಮಟ್ಟಕ್ಕೆ ಬಂದಿದೆ ಎಂದು ಅವರು ಹೇಳಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಿಇಎಂಎಲ್ ಲಾಭ ಶೇ 52ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬಿಇಎಂಎಲ್, ಜುಲೈ– ಸೆಪ್ಟೆಂಬರ್ ತ್ರೈಮಾಸಿಕ ಅವಧಿಯಲ್ಲಿ ₹ 16.26 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿ ₹ 10.66 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 52.5ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯ ಒಟ್ಟು ವರಮಾನವು ₹ 1,013 ಕೋಟಿಯಿಂದ ₹ 806 ಕೋಟಿಗೆ ಇಳಿಕೆ ಆಗಿದೆ. ವೆಚ್ಚವು ₹ 1,002 ಕೋಟಿಯಿಂದ ₹ 789 ಕೋಟಿಗೆ ಇಳಿಕೆ ಕಂಡಿದೆ.

ವಿತ್ತೀಯ ಕೊರತೆ ಶೇ 6.5ರಲ್ಲಿ ನಿಯಂತ್ರಿಸುವ ಪ್ರಯತ್ನ

ಸರ್ಕಾರದಿಂದ ವೆಚ್ಚ ಕಡಿತ ಸಾಧ್ಯತೆ

ನವದೆಹಲಿ (ರಾಯಿಟರ್ಸ್): ಪ್ರಸಕ್ತ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಮಾಡಲಿರುವ ವೆಚ್ಚವು ಬಜೆಟ್ ಅಂದಾಜಿಗಿಂತಲೂ ಕಡಿಮೆ ಇರುವ ಸಾಧ್ಯತೆ ಇದೆ. ಹೀಗೆ ಆದಲ್ಲಿ ಮೂರು ವರ್ಷಗಳಲ್ಲಿ ಮೊದಲ ಬಾರಿಗೆ ಸರ್ಕಾರವು ವೆಚ್ಚ ತಗ್ಗಿಸಿದಂತಾಗಲಿದೆ ಎಂದು ಮೂಲಗಳು ಹೇಳಿವೆ.

ವಿತ್ತೀಯ ಕೊರತೆಯನ್ನು ಶೇಕಡ 6.5ರಲ್ಲಿ ನಿಯಂತ್ರಿಸುವ ಸಲುವಾಗಿ ವೆಚ್ಚ ತಗ್ಗಿಸಲು ಸರ್ಕಾರ ಮುಂದಾಗಿದೆ ಎಂದು ತಿಳಿಸಿವೆ.

2022-23ನೇ ಹಣಕಾಸು ವರ್ಷಕ್ಕೆ ಒಟ್ಟು ವೆಚ್ಚವು ಗರಿಷ್ಠ ₹ 80,524 ಕೋಟಿಯಷ್ಟು ಕಡಿಮೆ ಆಗುವ ಅಂದಾಜು ಮಾಡಲಾಗಿದೆ ಎಂದು ಗೊತ್ತಾಗಿದೆ. ಒಟ್ಟು ವೆಚ್ಚವು ₹ 39.45 ಲಕ್ಷ ಕೋಟಿ ಆಗುವ ಅಂದಾಜನ್ನು ಬಜೆಟ್‌ನಲ್ಲಿ ಮಾಡಲಾಗಿದೆ.

ಇಂಧನ ತೆರಿಗೆ ಕಡಿತವು ಸರ್ಕಾರದ ವರಮಾನವನ್ನು ₹ 1 ಲಕ್ಷ ಕೋಟಿಯಷ್ಟು ಕಡಿಮೆ ಮಾಡುವ ಸಾಧ್ಯತೆ ಇದೆ ಎಂದು ಮೂಲವೊಂದು ತಿಳಿಸಿದೆ. ಹೀಗಿದ್ದರೂ, ಈ ವರ್ಷ ಒಟ್ಟು ವರಮಾನವು ₹ 1.5 ಲಕ್ಷ ಕೋಟಿಯಿಂದ ₹ 2 ಲಕ್ಷ ಕೋಟಿಯಷ್ಟು ಹೆಚ್ಚಾಗುವ ನಿರೀಕ್ಷೆ ಇದೆ.

ವರಮಾನದಲ್ಲಿ ಆಗುವ ಹೆಚ್ಚಳದಿಂದ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಸರ್ಕಾರವು ಆಹಾರ ಮತ್ತು ರಸಗೊಬ್ಬರಕ್ಕೆ ಹೆಚ್ಚುವರಿಯಾಗಿ ₹ 1.5 ಲಕ್ಷ ಕೋಟಿಯಿಂದ ₹ 1.8 ಲಕ್ಷ ಕೋಟಿ ಸಬ್ಸಿಡಿ ನೀಡಬೇಕಿದೆ. ಈ ರೀತಿಯ ಒತ್ತಡಗಳ ನಡುವೆಯೂ ಸರ್ಕಾರವು ವಿತ್ತೀಯ ಕೊರತೆಯನ್ನು ನಿಯಂತ್ರಿಸುವ ಉದ್ದೇಶ ಹೊಂದಿದೆ.

ವೆಚ್ಚದ ಕುರಿತು ಪರಿಷ್ಕೃತ ಅಂದಾಜು ಸಿದ್ಧಪಡಿಸುವ ಚರ್ಚೆಗಳು ನಡೆಯುತ್ತಿವೆ. ಡಿಸೆಂಬರ್ ಅಂತ್ಯದ ವೇಳೆಗೆ ಅಂತಿಮ ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಈ ಕುರಿತು ಪ್ರತಿಕ್ರಿಯೆ ನೀಡಲು ಹಣಕಾಸು ಸಚಿವಾಲಯ ನಿರಾಕರಿಸಿದೆ.

ಸಿಟಿ, ಕೋಟಕ್ ಮತ್ತು ಐಸಿಆರ್‌ಎ ಸಂಸ್ಥೆಗಳ ಆರ್ಥಿಕ ತಜ್ಞರ ಪ್ರಕಾರ ವಿತ್ತೀಯ ಕೊರತೆಯನ್ನು ಶೇ 6.4ರಲ್ಲಿ ನಿಯಂತ್ರಿಸುವುದು ಕಷ್ಟ. ವೆಚ್ಚದಲ್ಲಿ ಯಾವುದೇ ಕಡಿತ ಮಾಡದೇ ಇದ್ದರೆ, ವಿತ್ತೀಯ ಕೊರತೆಯು ಶೇ 6.6ರಷ್ಟು ಆಗುವ ನಿರೀಕ್ಷೆ ಇದೆ ಎಂದು ಕೋಟಕ್ ಹೇಳಿದೆ. ಸರ್ಕಾರವು ವಿತ್ತೀಯ ಕೊರತೆ ಗುರಿಯನ್ನು ಮೀರಲಿದೆ ಎಂದು ಐಸಿಆರ್‌ಎ ಹೇಳಿದೆ.

ಮುಖ್ಯಾಂಶಗಳು
- ಡಿಸೆಂಬರ್ ವೇಳೆಗೆ ವೆಚ್ಚದ ಪರಿಷ್ಕೃತ ಅಂದಾಜು?
- ಇಂಧನದ ತೆರಿಗೆ ಕಡಿತದಿಂದ ವರಮಾನ ತಗ್ಗುವ ಸಂಭವ

ರಿಕ್ಟರ್ ಮಾಪಕದಲ್ಲಿ 6.6 ತೀವ್ರತೆ: ರಕ್ಷಣಾ ಕಾರ್ಯಾಚರಣೆ ಚುರುಕು

ನೇಪಾಳದಲ್ಲಿ ಭೂಕಂಪ: 6 ಸಾವು

ನವದೆಹಲಿ/ಡೆಹರಾಡೂನ್/ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಬುಧವಾರ ನಸುಕಿನಲ್ಲಿ ರಿಕ್ಟರ್ ಮಾಪಕದಲ್ಲಿ 6.6 ತೀವ್ರತೆಯ ಭೂಕಂಪ ಸಂಭವಿಸಿದ್ದು, ಕನಿಷ್ಠ 6 ಜನರು ಮೃತಪಟ್ಟಿದ್ದಾರೆ.

ನವದೆಹಲಿ ಸಹಿತ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಭೂಮಿ ಕಂಪಿಸಿದೆ. ನಗರ ಪ್ರದೇಶ ಮತ್ತು ಹಳ್ಳಿಗಳಲ್ಲೂ ಜನರು ನಿದ್ರೆಯಿಂದ ಎದ್ದು ಮನೆಯಿಂದ ಹೊರಗೆ ಓಡಿ ಬಂದು ಆತಂಕದಲ್ಲಿ ದಿನ ದೂಡಿದ್ದಾರೆ.

ದೆಹಲಿ ಮತ್ತು ಸುತ್ತಲಿನ ಪ್ರದೇಶಗಳಾದ ಗಾಜಿಯಾಬಾದ್, ಗುರುಗ್ರಾಮ ಮತ್ತು ಲಖನೌ ಹಾಗೂ ಉತ್ತರಾಖಂಡದ ಹಲವು ಪ್ರದೇಶಗಳಲ್ಲಿ ಜನರು ಬೆಳಗಾಗುವವರೆಗೂ ಕಣ್ಣುಚ್ಚದೇ ಆತಂಕದಲ್ಲೇ ಸಮಯ ಕಳೆದಿದ್ದಾರೆ.

ಹಿಮಾಲಯದ ಕೆಳಗಿನ ಪ್ರದೇಶದ ವ್ಯಾಪ್ತಿಯಲ್ಲಿ ಸಂಭವಿಸಿದ ಭೂಕಂಪದಿಂದ ಪಶ್ಚಿಮ ನೇಪಾಳದ ದೋತಿ ಜಿಲ್ಲೆಯಲ್ಲಿ ಹೆಚ್ಚಿನ ಅನಾಹುತಗಳು ಆಗಿವೆ. ಹಲವು ಮನೆ ಮತ್ತು ಕಟ್ಟಡಗಳು ಕುಸಿದು ಬಿದ್ದಿವೆ. ಹಲವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕುಸಿದ ಕಟ್ಟಡಗಳ ಅವಶೇಷಗಡಿ ಸಿಲುಕಿದ್ದವರ ಪೈಕಿ ಐವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಮುಂದುವರಿದಿದೆ ಎಂದು ನೇಪಾಳದ ಗೃಹ ಸಚಿವಾಲಯದ ವಕ್ತಾರ ಫಣೀಂದ್ರ ಪೋಖರೆಲ್ ತಿಳಿಸಿದ್ದಾರೆ.

ನೇಪಾಳದ ಗಡಿಗೆ ಹೊಂದಿಕೊಂಡಿರುವ ಉತ್ತರಾಖಂಡದ ಪಿತೋರಗಢದ ಆಗ್ನೇಯದಲ್ಲಿ ಭೂಮಿಯ 90 ಕಿ.ಮೀ. ಆಳದಲ್ಲಿ ಭೂಕಂಪದ ಕೇಂದ್ರಬಿಂದು ದಾಖಲಾಗಿದೆ ಎಂದು ರಾಷ್ಟ್ರೀಯ ಭೂಕಂಪ ಮಾಪನ ಕೇಂದ್ರ ಹೇಳಿದೆ. 2015ರಲ್ಲಿ ನೇಪಾಳದಲ್ಲಿ ಸಂಭವಿಸಿದ್ದ ಎರಡು ಭೀಕರ ಭೂಕಂಪದಲ್ಲಿ ಸುಮಾರು 9 ಸಾವಿರ ಜನರು ಮೃತಪಟ್ಟಿದ್ದರು.

ಭೂಕಂಪದಿಂದಾಗಿ ನೇಪಾಳದ ದೋತಿ ಜಿಲ್ಲೆಯಲ್ಲಿ ಮನೆಗಳು ಕುಸಿದಿರುವುದು –ಪಿಟಿಐ ಚಿತ್ರ

ಇಟಲಿಯಲ್ಲೂ ಕಂಪಿಸಿದ ಭೂಮಿ: ಮಧ್ಯಮ ಭೂಕಂಪವು ಬುಧವಾರ ನಸುಕಿನಲ್ಲಿ ಇಟಲಿಯ ಈಶಾನ್ಯ ಕರಾವಳಿಯನ್ನೂ ನಡುಗಿಸಿತು. 5.7 ರಿಕ್ಟರ್ ಮಾಪಕದ ತೀವ್ರತೆಯ ಭೂಕಂಪದಿಂದ ಕಟ್ಟಡಗಳಲ್ಲಿ ಬಿರುಕುಗಳು ಉಂಟಾಗಿವೆ. ಪ್ರಧಾನಿ ಜಾರ್ಜಿಯಾ ಮೆಲೊನಿ ಪರಿಹಾರ ಕಾರ್ಯಾಚರಣೆಗೆ ಸೂಚನೆ ನೀಡಿದ್ದಾರೆ.

ಅಮೆರಿಕ ಸಂಸತ್‌ಗೆ ಭಾರತ ಮೂಲದ ನಾಲ್ವರ ಆಯ್ಕೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಭಾರತೀಯ ಮೂಲದ ನಾಲ್ವರು ಹೌಸ್ ಆಫ್ ರೆಪ್ರಸೆಂಟಿಟೀವ್ಸ್‌ಗೆ (ಕೆಳಮನೆ) ಆಯ್ಕೆಯಾಗಿದ್ದಾರೆ ಹಾಗೂ ಹಲವು ರಾಜ್ಯಗಳ ಶಾಸನಸಭೆಗಳಿಗೂ ಭಾರತೀಯ ಮೂಲದವರು ಆಯ್ಕೆಯಾಗಿದ್ದಾರೆ.

ಆಡಳಿತಾರೂಢ ಡೆಮಾಕ್ರಟಿಕ್ ಪಕ್ಷದ ರಾಜಾ ಕೃಷ್ಣಮೂರ್ತಿ, ರೋ ಖನ್ನಾ, ಪ್ರಮೀಳಾ ಜಯಪಾಲ್ ಹಾಗೂ ಉದ್ಯಮಿ ಶ್ರೀ ಥಾಣೇದಾರ್ ಅವರು ಆಯ್ಕೆಯಾಗಿದ್ದಾರೆ. ಮಿಷಿಗನ್ ಕ್ಷೇತ್ರದಲ್ಲಿ ರಿಪಬ್ಲಿಕನ್ ಪಕ್ಷದ ಮಾರ್ಟೆಲ್ ಬಿವಿಂಗ್ಸ್ ಅವರನ್ನು ಸೋಲಿಸುವ ಮೂಲಕ ಥಾಣೇದಾರ್ (67) ಈ ಕ್ಷೇತ್ರದಲ್ಲಿ ಆಯ್ಕೆಯಾದ ಪ್ರಥಮ ಭಾರತೀಯ ಮೂಲದವರು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ರಾಜಾ ಕೃಷ್ಣಮೂರ್ತಿ(49) ಇಲಿನಾಯ್ಸ್ ಕ್ಷೇತ್ರದಿಂದ ಸತತ ನಾಲ್ಕನೇ ಬಾರಿಗೆ ಅಮೆರಿಕ ಸಂಸತ್ ಪ್ರವೇಶಿಸಿದ್ದಾರೆ. ಕ್ಯಾಲಿಫೋರ್ನಿಯಾದಿಂದ ವಿಜೇತರಾದ ರೋ ಖನ್ನಾ (46) ಇದೀಗ 3ನೇ ಬಾರಿಗೆ ಸಂಸತ್ ಪ್ರವೇಶಿಸಿದ್ದಾರೆ. ಪ್ರಮೀಳಾ ಜಯಪಾಲ್ (57) ವಾಷಿಂಗ್ಟನ್‌ನಿಂದ ಆಯ್ಕೆಯಾಗಿದ್ದಾರೆ.

ರಾಜ್ಯಗಳ ಶಾಸನ ಸಭೆಗಳಿಗೂ ಹಲವಾರು ಮಂದಿ ಭಾರತೀಯ ಮೂಲದವರು ಆಯ್ಕೆಯಾಗಿದ್ದಾರೆ. ಮೇರಿಲ್ಯಾಂಡ್‌ನಲ್ಲಿ ಅರುಣಾ ಮಿಲ್ಲರ್ ಲೆಫ್ಟಿನೆಂಟ್ ಗವರ್ನರ್ ಸ್ಪರ್ಧೆಯಲ್ಲಿ ಗೆದ್ದ ಮೊದಲ ಭಾರತೀಯ ಮೂಲದವರು ಎನಿಸಿಕೊಂಡಿದ್ದಾರೆ. ಆದರೆ ಭಾರತೀಯ ಮೂಲದ ಇನ್ನೊಬ್ಬ ಅಭ್ಯರ್ಥಿ ಸಂದೀಪ್ ಶ್ರೀವಾತ್ಸವ್ ಟೆಕ್ಸಾಸ್‌ನಲ್ಲಿ ಸೋತಿದ್ದಾರೆ.

ಅಮೆರಿಕದ ಒಟ್ಟು ಜನಸಂಖ್ಯೆಯ ಶೇ1ರಷ್ಟಿರುವ ಭಾರತೀಯ ಮೂಲದವರು ಈ ಮಧ್ಯಂತರ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, 2024ರ ಅಧ್ಯಕ್ಷ ಚುನಾವಣೆಯಲ್ಲಿ ತಮ್ಮ ಪ್ರಭಾವ ಬೀರುವ ಅವಕಾಶ ಪಡೆದಿದ್ದಾರೆ. ಈ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಮತ್ತೆ ಸ್ಪರ್ಧಿಸುವ ಇಂಗಿತವನ್ನು ಈಗಾಗಲೇ ವ್ಯಕ್ತಪಡಿಸಿದ್ದು, ಇದೇ 15ರಂದು ದೊಡ್ಡ ಘೋಷಣೆ ಮಾಡಲು ಸಜ್ಜಾಗಿದ್ದಾರೆ. ಇದೇ ಕಾರಣಕ್ಕೆ ನ.8ರಂದು ನಡೆದ ಚುನಾವಣೆಗೆ ಮೊದಲಾಗಿ ಭಾರತೀಯ ಮೂಲದ ಮತದಾರರನ್ನು ಓಲೈಸುವ ಯತ್ನವನ್ನು ಎರಡೂ ಪಕ್ಷಗಳು ನಡೆಸಿದ್ದವು.

ಮಧ್ಯಂತರ ಚುನಾವಣೆ: ನಿರೀಕ್ಷೆ ಹುಸಿ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಸಂಸತ್ತಿಗೆ (ಹೌಸ್ ಆಫ್ ರೆಪ್ರಸೆಂಟಿಟೀವ್ಸ್) ನಡೆದ ಮಧ್ಯಂತರ ಚುನಾವಣೆಗೆ ಸಂಬಂಧಿಸಿದಂತೆ ನಡೆಸಿದ ಸಮೀಕ್ಷೆಗಳೆಲ್ಲಾ ಹುಸಿ ಆಗುವ ಸಾಧ್ಯತೆಗಳಿದ್ದು, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಿಪಬ್ಲಿಕನ್ ಪಾರ್ಟಿ ಮುನ್ನಡೆಗೆ ಬರುವ ಸಾಧ್ಯತೆ ಇದೆ.

ಡೆಮಾಕ್ರಟಿಕ್ ಮತ್ತು ರಿಪಬ್ಲಿಕ್ ಪಕ್ಷದ ಮಧ್ಯೆ ನಿಕಟ ಪೈಪೋಟಿ ಏರ್ಪಟ್ಟಿದ್ದು, ಒಟ್ಟು 435 ಬಲ ಹೊಂದಿದೆ. 371 ಕ್ಷೇತ್ರಗಳಲ್ಲಿ ಚುನಾವಣೆ ನಡೆದಿತ್ತು. ಡೆಮಾಕ್ರಟಿಕ್ ಪಕ್ಷ 172 ಕ್ಷೇತ್ರಗಳಲ್ಲಿ ಜಯಗಳಿಸಿದರೆ, ರಿಪಬ್ಲಿಕ್ ಪಕ್ಷ 200 ಕ್ಷೇತ್ರಗಳಲ್ಲಿ ಜಯಗಳಿಸಿ ಮುನ್ನಡೆ ಸಾಧಿಸಿದೆ. ಬಹುಮತಕ್ಕೆ 218 ಸ್ಥಾನಗಳನ್ನು ಗೆಲ್ಲಬೇಕಿದೆ.

ಯುದ್ಧಕ್ಕೆ ಸನ್ನದ್ಧರಾಗಿ: ಸೇನೆಗೆ ಚೀನಾ ಅಧ್ಯಕ್ಷ ಸೂಚನೆ

ಬೀಜಿಂಗ್ (ಪಿಟಿಐ): ಚೀನಾದ ರಾಷ್ಟ್ರೀಯ ಭದ್ರತೆ ಅಸ್ಥಿರತೆಯನ್ನು ಎದುರಿಸುತ್ತಿದೆ. ಯುದ್ಧದ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹಾಗೂ ಸನ್ನದ್ಧತೆಯನ್ನು ಕಾಪಾಡಿಕೊಳ್ಳಲು ತನ್ನ ಎಲ್ಲ ಶಕ್ತಿ ವಿನಿಯೋಗಿಸುವಂತೆ ಪೀಪಲ್ಸ್ ಲಿಬರೇಷನ್ ಆರ್ಮಿಗೆ (ಪಿಎಲ್‌ಎ) ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸೂಚಿಸಿದ್ದಾರೆ.

3ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅವರು ಮಂಗಳವಾರ ಕೇಂದ್ರೀಯ ಸೇನಾ ಆಯೋಗದ(ಸಿಎಂಸಿ) ಜಂಟಿ ಕಾರ್ಯಾಚರಣೆಗಳ ಕಮಾಂಡ್ ಸೆಂಟರ್‌ಗೆ ಭೇಟಿ ನೀಡಿ ಮಾತನಾಡಿದ ಜಿನ್‌ಪಿಂಗ್, ಯುದ್ಧಕ್ಕೆ ಬೇಕಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದ್ದು, ಅದಕ್ಕೆ ಬೇಕಿರುವ ಎಲ್ಲ ಸಹಕಾರವನ್ನು ನೀಡಲಾಗುವುದು. ಇದಕ್ಕೆ ಸೇನೆ ತನ್ನ ಶಕ್ತಿಯನ್ನು ವಿನಿಯೋಗಿಸಬೇಕು ಎಂದು ತಿಳಿಸಿದ್ದಾರೆ.

ಬ್ರಿಟನ್ ಸಚಿವ ರಾಜೀನಾಮೆ, ಇಕ್ಕಟ್ಟಿನಲ್ಲಿ ಪ್ರಧಾನಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಆಪ್ತರಲ್ಲಿ ಒಬ್ಬರಾದ ಸಚಿವ ಸರ್ ಗೆವಿನ್ ವಿಲಿಯಮ್ಸನ್ ಬುಧವಾರ ರಾಜೀನಾಮೆ ನೀಡಿದ್ದಾರೆ. ಇದರಿಂದ ಸುನಕ್ ಪ್ರತಿಪಕ್ಷಗಳ ವಾಗ್ದಾಳಿಯ ಒತ್ತಡಕ್ಕೆ ಸಿಲುಕಿದ್ದಾರೆ.

ಪಕ್ಷದ ಮುಖ್ಯ ಸಚೇತಕಿ ವೆಂಡಿ ಮೋರ್ಟನ್ ಅವರಿಗೆ ಬೆದರಿಕೆ ಸಂದೇಶ ಕಳುಹಿಸಿದ ಪ್ರಕರಣದ ವಿಚಾರಣೆ ಬಾಕಿ ಇರುವಾಗಲೇ ಗೆವಿನ್ ವಿಲಿಯಮ್ಸನ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ಸುನಕ್ ಅವರಿಗೆ ರಾಜೀನಾಮೆ ಸಲ್ಲಿಸಿದ ನಂತರ ವಿಲಿಯಮ್ಸನ್ ಈ ವಿಷಯವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಸುನಕ್ ಸಂಪುಟದಲ್ಲಿ ಖಾತೆರಹಿತ ಸಚಿವರಾಗಿದ್ದ ವಿಲಿಯಮ್ಸನ್ ವಿರುದ್ಧ ಕನ್ಸರ್ವೇಟಿವ್ ಪಕ್ಷದ ಸಹೋದ್ಯೋಗಿಗಳು ಮತ್ತು ಪೌರಕಾರ್ಮಿಕರು ಅಸಭ್ಯ ವರ್ತನೆಯ ಆರೋಪ ಹೊರಿಸಿದ್ದರು. ಈ ಪ್ರಕರಣದ ವಿಚಾರಣೆ ಬಾಕಿ ಇದೆ.

ಸರ್ ಗೆವಿನ್ ವಿಲಿಯಮ್ಸನ್ –ಟ್ವಿಟರ್ ಚಿತ್ರ

'ಬಹಳ ದುಃಖದಿಂದ ರಾಜೀನಾಮೆ ಸ್ವೀಕರಿಸಿದೆ. ಅವರು ನೀಡುತ್ತಿರುವ ವೈಯಕ್ತಿಕ ಬೆಂಬಲ ಮತ್ತು ನಿಷ್ಠೆಗಾಗಿ ನಾನು ಧನ್ಯವಾದ ಅರ್ಪಿಸುವೆ. ಕನ್ಸರ್ವೇಟಿವ್ ಸರ್ಕಾರಗಳ ಸತತ ಯಶಸ್ಸಿನಲ್ಲಿ ಅವರ ಬದ್ಧತೆ ಮತ್ತು ಪಕ್ಷ ನಿಷ್ಠೆ ಅಚಲವಾಗಿದೆ' ಎಂದು ಸುನಕ್ ಹೇಳಿದರು.

ಕನ್ಸರ್ವೇಟಿವ್ ಪಕ್ಷದ ರಾಜೀನಾಮೆ ಸರಣಿಯನ್ನು ಸುನಕ್ ಅವರ ಕಳಪೆ ತೀರ್ಮಾನ ಮತ್ತು ನಾಯಕತ್ವಕ್ಕೆ ತಳುಕು ಹಾಕಿ ಟೀಕಾಪ್ರಹಾರ ನಡೆಸಲು ಪ್ರತಿಪಕ್ಷ ಲೇಬರ್ ಪಕ್ಷದ ನಾಯಕ ಸರ್ ಕೀರ್ ಸ್ಟಾರ್‌ಮರ್ ಸಜ್ಜಾಗಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
General
SUYAMB MANAGEMENT, Genuine Share Market Trading Company offers Genuine and Principle Safe Returns for your investment. 6% Month Fixed Returns. 26 Years of Market Knowledge. Investors looking for Good and Steady profit, 90709 90709. Successful 5th Year. All Investments supported with Legal Document. Office 113, 3rd Floor, Novel Business Park, 57 Salapuria Triton, Gajendra Nagar 13th Cross, Koramangala, Bangalore

ಉದ್ಯೋಗಾವಕಾಶ
General
Multiple Vacancy
Part-Time Jobs
Office Boys/ Peon

ಪ್ರವಾಸ
Travel
Pilgrimage Tours

ಭವಿಷ್ಯ
Astrology

ನಿರುದ್ಯೋಗಿ ಮಹಿಳೆಯರಿಗೆ ಚುನಾವಣೆ ಬಗ್ಗೆ ಮಾಹಿತಿ

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರತಿಜ್ಞಾ ವಿಧಿ ಬೋಧನೆ

ಸಿಜೆಐ ಚಂದ್ರಚೂಡ್ ಪ್ರಮಾಣ ಸ್ವೀಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 50ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ನ್ಯಾ. ಧನಂಜಯ ಯಶವಂತ್ ಚಂದ್ರಚೂಡ್ (ಡಿ.ವೈ. ಚಂದ್ರಚೂಡ್) ಬುಧವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಂದ್ರಚೂಡ್ ಅವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಅವರ ಅಧಿಕಾರಾವಧಿ 2024ರ ನವೆಂಬರ್ 10ರ ವರೆಗೆ ಇರಲಿದೆ.

ದೇಶದ 16ನೇ ಸಿಜೆಐ ನ್ಯಾ. ಯಶವಂತ ವಿಷ್ಣು ಚಂದ್ರಚೂಡ್ (ವೈ.ವಿ.ಚಂದ್ರಚೂಡ್) ಅವರ ಪುತ್ರರಾಗಿರುವ ಡಿ.ವೈ.ಚಂದ್ರಚೂಡ್ ಅವರು, 44 ವರ್ಷಗಳ ಬಳಿಕ ತಂದೆ ನಿರ್ವಹಿಸಿದ್ದ ಸ್ಥಾನಕ್ಕೆ ಏರಿದ್ದಾರೆ. 1978ರ ಫೆ. 22ರಿಂದ ಸಿಜೆಐಯಾಗಿ ಅಧಿಕಾರ ವಹಿಸಿಕೊಂಡಿದ್ದ ವೈ.ವಿ. ಚಂದ್ರಚೂಡ್ ಅವರು 1985ರ ಜುಲೈ 11ರಂದು ನಿವೃತ್ತರಾಗಿದ್ದರು. ಆ ಮೂಲಕ ಸುದೀರ್ಘ ಅವಧಿಯವರೆಗೆ ಸಿಜೆಐ ಆಗಿ ಕೆಲಸ ಮಾಡಿದ ಹಿರಿಮೆಗೆ ಭಾಜನರಾಗಿದ್ದರು.

2016ರ ಮೇ 13ರಂದು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿ ಚಂದ್ರಚೂಡ್ ನೇಮಕವಾಗಿದ್ದರು. ಅದಕ್ಕೂ ಹಿಂದೆ ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ, ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದರು.

ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಬಿಎ ಪದವಿ ಪಡೆದಿದ್ದ ಅವರು ದೆಹಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ಲಾ ಸೆಂಟರ್‌ನಲ್ಲಿ ಎಲ್‌ಎಲ್‌ಬಿ ವ್ಯಾಸಂಗ ಪೂರ್ಣಗೊಳಿಸಿದ್ದರು. ಅಮೆರಿಕದ ಹಾರ್ವರ್ಡ್ ಕಾನೂನು ಶಾಲೆಯಲ್ಲಿ ಎಲ್‌ಎಲ್‌ಎಂ ಪದವಿ ಹಾಗೂ ನ್ಯಾಯ ವಿಜ್ಞಾನ ವಿಷಯದಲ್ಲಿ ಡಾಕ್ಟರೇಟ್ ಪೂರೈಸಿದ್ದರು. ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಹೆಚ್ಚುವರಿ ಸಾಲಿಸಿಟರ್ ಜನರಲ್ (1998ರಿಂದ 2000) ಆಗಿ ಕೆಲಸ ಮಾಡಿದ್ದರು.

ಚಂದ್ರಚೂಡ್ ಅವರು ಅಯೋಧ್ಯೆ ತೀರ್ಪು, ಶಬರಿಮಲೆ ಪ್ರಕರಣ, ಆಧಾರ್‌ಗೆ ಮಾನ್ಯತೆ ಮುಂತಾದ ಪ್ರಮುಖ ತೀರ್ಪುಗಳನ್ನು ನೀಡಿದ್ದ ನ್ಯಾಯಪೀಠದ ಭಾಗವಾಗಿದ್ದರು.

ಜನರ ಸೇವೆಯೇ ನನ್ನ ಆದ್ಯತೆ: ಸಿಜೆಐ

‘ನ್ಯಾಯಾಂಗದ ಸುಧಾರಣೆ, ತಂತ್ರಜ್ಞಾನ ಅಳವಡಿಕೆ ಅಥವಾ ನ್ಯಾಯಾಲಯದ ರಿಜಿಸ್ಟ್ರಿ ಹೀಗೆ ಎಲ್ಲಾ ವಿಷಯದಲ್ಲೂ ದೇಶದ ಸಾಮಾನ್ಯ ಜನರ ಸೇವೆ ಮಾಡುವುದೇ ನನ್ನ ಆದ್ಯತೆ’ ಎಂದು ನೂತನ ಸಿಜೆಐ ಡಿ.ವೈ.ಚಂದ್ರಚೂಡ್ ಹೇಳಿದರು.

‘ಭಾರತದ ನ್ಯಾಯಾಂಗ ವ್ಯವಸ್ಥೆಯನ್ನು ಮುನ್ನಡೆಸುವುದು ದೊಡ್ಡ ಅವಕಾಶ ಹಾಗೂ ಜವಾಬ್ದಾರಿ. ಮಾತನಾಡುವುದಷ್ಟೇ ಅಲ್ಲ ಆ ದಿಸೆಯಲ್ಲಿ ಕೆಲಸ ಮಾಡುವ ಮೂಲಕ ಜನರಲ್ಲಿ ನ್ಯಾಯಾಂಗದ ಬಗ್ಗೆ ವಿಶ್ವಾಸ ಮೂಡಿಸುತ್ತೇನೆ’ ಎಂದರು.

ಗಾಂಧಿ ಪ್ರತಿಮೆಗೆ ನಮನ

ನ್ಯಾಯಪೀಠದ ಮೇಲೆ ಆಸೀನರಾಗುವ ಮುನ್ನ ಡಿ.ವೈ.ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಹೂಮಾಲೆ ಹಾಕಿ ಕೈಮುಗಿದು ನಮಿಸಿದರು. ಅವರ ಜೊತೆ ಪತ್ನಿ ಕಲ್ಪನಾ ದಾಸ್ ಕೂಡ ಇದ್ದರು.

ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಂಡಿದ್ದ ತಮ್ಮ ಕುಟುಂಬದ ಹಿರಿಯರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಬೆಳ್ಳಿ ಕುಸುರಿಯ ಬಿದರಿ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

2023ರ ಏಪ್ರಿಲ್‌ನಲ್ಲಿ ನಡೆಯುವ ‘ನೀಟ್’ ಕೊನೆಯದ್ದು?

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಮುಂದಿನ ವರ್ಷ ಏಪ್ರಿಲ್–ಮೇನಲ್ಲಿ ನಡೆಯಲಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯೇ (ನೀಟ್) ಕೊನೆಯ ನೀಟ್ ಆಗುವ ಸಾಧ್ಯತೆ ಇದೆ.

ನಂತರ, ನೀಟ್ ಬದಲಿಗೆ ‘ನಾಷನಲ್ ಎಕ್ಸಿಟ್ ಟೆಸ್ಟ್’ (ಎನ್‌ಇಎಕ್ಸ್‌ಟಿ) ನಡೆಯಲಿದೆ. ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಎನ್‌ಇಎಕ್ಸ್‌ಟಿಯಲ್ಲಿ ಪಡೆಯುವ ಅಂಕಗಳ ಆಧಾರದಲ್ಲಿ ಅವರಿಗೆ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ.

‘ಸೋಮವಾರ ನಡೆದ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಉನ್ನತಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ. ಮುಂದಿನ ವರ್ಷ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ನಿರ್ಗಮನ ಪರೀಕ್ಷೆ ನಡೆಸಲು ಉದ್ದೇಶಿಸಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಎನ್‌ಎಂಸಿ ಮಾಹಿತಿ ನೀಡಿದೆ.

ಮುಂದಿನ ಡಿಸೆಂಬರ್‌ನಲ್ಲಿ ಎನ್‌ಇಎಕ್ಸ್‌ಟಿ ನಡೆದರೆ, 2019–2020ನೇ ಬ್ಯಾಚ್‌ನ ಎಂಬಿಬಿಎಸ್ ವಿದ್ಯಾರ್ಥಿಗಳು ಈ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೇ, 2024–25ನೇ ಸಾಲಿನ ವೈದ್ಯಕೀಯ ಪಿಜಿ ಕೋರ್ಸ್‌ಗಳ ಪ್ರವೇಶಕ್ಕೆ ಕೂಡ ಈ ಎನ್‌ಇಎಕ್ಸ್‌ಟಿ ಫಲಿತಾಂಶವನ್ನೇ ಪರಿಗಣಿಸಲಾಗುತ್ತದೆ ಎಂದು ಇವೇ ಮೂಲಗಳು ಹೇಳಿವೆ.

ಭಾರತದಲ್ಲಾಗಲಿ ಅಥವಾ ವಿದೇಶಗಳಲ್ಲಿ ವೈದ್ಯಕೀಯ ಪದವಿ ಪಡೆದ ವಿದ್ಯಾರ್ಥಿಗಳಿಗೆಲ್ಲರಿಗೂ ರಾಷ್ಟ್ರೀಯ ನಿರ್ಗಮನ ಪರೀಕ್ಷೆ ಒಂದೇ ಆಗಿರುತ್ತದೆ. ಹೀಗಾಗಿ ವಿದೇಶಗಳಲ್ಲಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿರುವವರು ಎದುರಿಸುತ್ತಿರುವ ಸಮಸ್ಯೆಗೆ ಎನ್‌ಇ–ಎಕ್ಸ್‌ಟಿಯಿಂದ ಪರಿಹಾರ ಸಿಗಲಿದೆ ಎಂಬುದು ಗಮನಾರ್ಹ.

ನೀರವ್ ಮೋದಿ ಹಸ್ತಾಂತರಿಸಲು ಲಂಡನ್ ಹೈಕೋರ್ಟ್ ಆದೇಶ

ಲಂಡನ್ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ಸಾವಿರಾರು ಕೋಟಿ ವಂಚನೆ ಪ್ರಕರಣ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪ ಸಂಬಂಧಿಸಿದಂತೆ ವಜ್ರ ವ್ಯಾಪಾರಿ ನೀರವ್ ಮೋದಿಯನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಲಂಡನ್‌ನ ಹೈಕೋರ್ಟ್ ಬುಧವಾರ ಆದೇಶಿಸಿದೆ.

ಆಗ್ನೇಯ ಲಂಡನ್‌ನ ವಾಂಡ್ಸ್ ವರ್ತ್ ಜೈಲಿನಲ್ಲಿ 2019ರಿಂದ ಬಂದಿಯಾಗಿರುವ 51 ವರ್ಷದ ಉದ್ಯಮಿಯನ್ನು ಭಾರತಕ್ಕೆ ಗಡಿಪಾರು ಮಾಡಬೇಕು ಎಂದು ಕಳೆದ ಫೆಬ್ರವರಿಯಲ್ಲಿ ಜಿಲ್ಲಾ ನ್ಯಾಯಾಲಯ ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ನೀರವ್ ಮೋದಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಜೆರೆಮಿ ಸ್ಟುವರ್ಟ್ ಸ್ಮಿತ್ ಹಾಗೂ ರಾಬರ್ಟ್ ಜೇ ಅವರ ಪೀಠ ತೀರ್ಪು ತಿರಸ್ಕರಿಸಿದೆ.

ಮೋದಿಯ ಮಾನಸಿಕ ಸ್ಥಿತಿ ಮತ್ತು ಆತ್ಮಹತ್ಯೆಯ ಅಪಾಯದ ಕಾರಣಕ್ಕೆ ಅವರನ್ನು ಭಾರತಕ್ಕೆ ಹಸ್ತಾಂತರಿಸುವುದು ಅನ್ಯಾಯ ಅಥವಾ ದಬ್ಬಾಳಿಕೆ ಎಂದು ಪರಿಗಣಿಸಬೇಕಾಗಿಲ್ಲ ಎಂದು ಕೋರ್ಟ್ ತೀರ್ಪು ನೀಡಿದೆ.

ಈ ತೀರ್ಪಿನ ವಿರುದ್ಧ 14 ದಿನಗಳ ಒಳಗಾಗಿ ನೀರವ್ ಬ್ರಿಟನ್ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬಹುದಾಗಿದೆ. ಒಂದು ವೇಳೆ ಸುಪ್ರೀಂ ಕೋರ್ಟ್ ಸಹ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದರೆ, ಯುರೋಪಿಯನ್ ಕೋರ್ಟ್ ಆಫ್ ಹ್ಯೂಮನ್ ರೈಟ್‌ಗೆ ಹೋಗುವ ಅವಕಾಶ ಇದೆ. ಹೀಗಾಗಿ ನೀರವ್ ಮೋದಿಯನ್ನು ಭಾರತಕ್ಕೆ ಕರೆತಂದು ಮುಂಬೈಯ ಅರ್ಥರ್ ರೋಡ್ ಜೈಲ್‌ನಲ್ಲಿ ಬಂಧಿಸಿಡುವ ಪ್ರಕ್ರಿಯೆಗೆ ಇನ್ನಷ್ಟು ಸಮಯ ಹಿಡಿಯಬಹುದು ಎಂದು ಹೇಳಲಾಗಿದೆ.

ಸಿಬಿಐ ಮತ್ತು ಇ.ಡಿ ಗಳು ಸಲ್ಲಿಸಿದ ದಾಖಲಿಸಿರುವ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ನೀರವ್ ಮೋದಿಯನ್ನು ಹಸ್ತಾಂತ-ರಿಸಬೇಕು ಎಂದು ಭಾರತವು ಬ್ರಿಟನ್ ಸರ್ಕಾರವನ್ನು ಕೋರಿದ ಮೇರೆಗೆ ಈ ಬೆಳವಣಿಗೆ ನಡೆದಿದೆ.

ಟಿ.ವಿ.ವಾಹಿನಿಗಳಿಗೆ ಮಾರ್ಗಸೂಚಿ

ಒಂದನೇ ಪುಟದಿಂದ

‘ಒಂದೊಮ್ಮೆ ನೇಮಕ ಮಾಡಿ, ಅಂತಹವರನ್ನು ಹುದ್ದೆಯಲ್ಲಿ ಮುಂದುವ ರಿಸಿದರೆ ವಾಹಿನಿಯ ಪ್ರಸಾರವನ್ನು 30 ದಿನಗಳವರೆಗೆ ತಡೆಯಬಹುದು ಮತ್ತು ವಾಹಿನಿಗೆ ನೀಡಿರುವ ಅನುಮತಿಯನ್ನು ಅಮಾನತು ಮಾಡಬಹುದು’ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ. ‘ಪದೇ–ಪದೇ ಇದು ಮುಂದುವರಿದರೆ ಸಚಿವಾಲಯವು ಇನ್ನೂ ಕಠಿಣ ಕ್ರಮ ತೆಗೆದುಕೊಳ್ಳಬಹುದು’ ಎಂದು ಮಾರ್ಗ ಸೂಚಿಯಲ್ಲಿ ಹೇಳಲಾಗಿದೆ. ಆದರೆ, ಅಂತಹ ಕಠಿಣ ಕ್ರಮಗಳು ಯಾವುವು ಎಂಬುದನ್ನು ಮಾರ್ಗ-ಸೂಚಿಯಲ್ಲಿ ವಿವರಿಸಿಲ್ಲ.

ಇದರ ಹೊರತಾಗಿ ವಾಹಿನಿಗಳ ಅಪ್‌ಲಿಂಕಿಂಗ್ ಮತ್ತು ಡೌನ್‌ಲಿಂಕಿಂಗ್ ಸಂಬಂಧಿಸಿದಂತೆ ಹಲವು ಮಾರ್ಗಸೂಚಿಗಳನ್ನು ಸಚಿವಾಲಯವು ಹೊರಡಿಸಿದೆ.

ಬಿಆರ್‌ಎಸ್ ಸಚಿವರ ಕಚೇರಿಗಳಲ್ಲಿ ಶೋಧ

ನವದೆಹಲಿ/ಹೈದರಾಬಾದ್: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಬಿಆರ್‌ಎಸ್ ಮುಖಂಡ ಹಾಗೂ ತೆಲಂಗಾಣ ಸಚಿವ ಗಂಗೂಲ ಕಮಲಾಕರ್ ಅವರಿಗೆ ಸೇರಿದ ಕಚೇರಿಗಳಲ್ಲಿ ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ.

ಹೈದರಾಬಾದ್ ಮತ್ತು ಕರೀಂನಗರ ಜಿಲ್ಲೆಗಳ ವಿವಿಧೆಡೆ ಶೋಧ ನಡೆದಿದೆ. ಗ್ರಾನೈಟ್ ವ್ಯವಹಾರದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡ ಬಳಿಕ ಇ.ಡಿ ಕೂಡ ಇದೇ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದೆ.

ಶಾಸಕರ ಖರೀದಿ: ಎಸ್‌ಐಟಿ ರಚಿಸಿದ ತೆಲಂಗಾಣ ಸರ್ಕಾರ

ಹೈದರಾಬಾದ್ (ಪಿಟಿಐ): ಬಿಜೆಪಿಯು ಬಿಆರ್‌ಎಸ್ ಪಕ್ಷದ ಶಾಸಕರನ್ನು ಖರೀದಿಸಲು ಮುಂದಾಗಿದೆ ಎಂಬ ಆರೋಪ ಕೇಳಿ ಬಂದಿದ್ದು, ಈ ಕುರಿತು ತನಿಖೆ ನಡೆಸಲು ಕೆ.ಚಂದ್ರಶೇಖರ ರಾವ್ ನೇತೃತ್ವದ ತೆಲಂಗಾಣ ಸರ್ಕಾರವು 7 ಸದಸ್ಯರನ್ನೊಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ ಬುಧವಾರ ಆದೇಶಿಸಿದೆ.

ಹೈದರಾಬಾದ್ ನಗರ ಪೊಲೀಸ್ ಕಮಿಷನರ್ ಸಿ.ವಿ.ಆನಂದ್ ಅವರು ತನಿಖಾ ತಂಡದ ನೇತೃತ್ವ ವಹಿಸಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ನವದೆಹಲಿ (ಪಿಟಿಐ): ಪಂಜಾಬ್‌ನ ಭಾರತ–ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿ ಬಳಿ ಪಾಕಿಸ್ತಾನದ ಡ್ರೋನ್‌ನನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೊಡೆದುರುಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಫಿರೋಜ್‌ಪುರ ವಲಯದಲ್ಲಿ ‘ದ ಹೆಕ್ಸ್ ಕಾಪ್ಟರ್’ ಡ್ರೋನ್‌ಅನ್ನು ಮಂಗಳ ವಾರ ರಾತ್ರಿ ಗುಂಡಿಕ್ಕಿ ಉರುಳಿಸಲಾಯಿತು. ಬಿಎಸ್‌ಎಫ್ ಮತ್ತು ಸ್ಥಳೀಯ ಪೊಲೀಸರ ಜಂಟಿ ತಂಡವು ಡ್ರೋನ್‌ಅನ್ನು ಬುಧವಾರ ಬೆಳಿಗ್ಗೆ ವಶಕ್ಕೆ ತೆಗೆದುಕೊಂಡಿತು ಎಂದಿದ್ದಾರೆ.

ಆಸ್ತಿ ವಿವಾದ: ಅಪ್ಪನಿಗೆ ಬೆಂಕಿ ಹಚ್ಚಿದ ಮಗ, ಸೊಸೆ

ಪುಣೆ (ಪಿಟಿಐ): ‘ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ 79 ವರ್ಷದ ವ್ಯಕ್ತಿಯೊಬ್ಬರಿಗೆ ಅವರ ಮಗ ಹಾಗೂ ಸೊಸೆ ಬೆಂಕಿ ಹಚ್ಚಿರುವ ಘಟನೆ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕಾಗಲ್ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆದಿದೆ’ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

‘ವೃದ್ಧ ಗಾಯಗಳಿಂದ ಬಳಲುತ್ತಿದ್ದು, ಅವರ ಮಗ ಹಾಗೂ ಸೊಸೆ ವಿರುದ್ಧ ಭಾರತೀಯ ದಂಡ ಸಂಹಿತೆ 307ರ (ಕೊಲೆ ಯತ್ನ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಘಟನೆ ಬಳಿಕ ಆರೋಪಿಗಳು ಪರಾರಿಯಾಗಿದ್ದಾರೆ. ಅವರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಸೇನೆ ಸದಾ ಸನ್ನದ್ಧ ಸ್ಥಿತಿಯಲ್ಲಿರಲಿ’

ನವದೆಹಲಿ: ಪೂರ್ವ ಲಡಾಖ್‌ನಲ್ಲಿ ಚೀನಾದೊಂದಿಗೆ ದೀರ್ಘಕಾಲದಿಂದ ಗಡಿ ಬಿಕ್ಕಟ್ಟು ಇರುವ ಕಾರಣ ಸೇನೆಯನ್ನು ಸದಾ ಕಾರ್ಯಾಚರಣೆಗೆ ಸನ್ನದ್ಧವಾಗಿರಿಸಿಕೊಳ್ಳಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬುಧವಾರ ಸೇನೆಯ ಉನ್ನತ ಕಮಾಂಡರ್‌ಗಳಿಗೆ ಕರೆ ನೀಡಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಐದು ದಿನಗಳ ದ್ವೈವಾರ್ಷಿಕ ಸಮಾವೇಶದಲ್ಲಿ ಕಮಾಂಡರ್‌ಗಳ ಜೊತೆ ಸಂವಾದ ನಡೆಸಿದ ಸಚಿವರು,‘ಭಾರತೀಯ ಸೇನೆ ಮತ್ತು ಅದರ ನಾಯಕತ್ವದಲ್ಲಿ ನನಗೆ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವಿದೆ’ ಎಂದೂ ಹೇಳಿದ್ದಾರೆ.

ನ.10ರ ಒಳಗೆ ಅಧಿಸೂಚನೆ ಬೇಡ: ‘ಸುಪ್ರೀಂ’

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ರಾಂಪುರ ಸದಾರ್ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ಸಂಬಂಧಿಸಿ ಅಧಿಸೂಚನೆಯನ್ನು ನ. 10 ಒಳಗೆ ಹೊರಡಿಸದಂತೆ ಚುನಾವಣಾ ಆಯೋಗಕ್ಕೆ(ಇ.ಸಿ) ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ದ್ವೇಷ ಭಾಷಣದ ಮೊಕದ್ದಮೆ-ಯಲ್ಲಿ ಸಮಾಜವಾದಿ ಪಕ್ಷದ (ಎಸ್‌ಪಿ) ನಾಯಕ ಆಜಂ ಖಾನ್ ಅವರ ದೋಷ ಸಾಬೀತಾದ ಬಳಿಕ ಅವರನ್ನು ಶಾಸಕ ಸ್ಥಾನವನ್ನು ಅನರ್ಹಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ತೆರವುಗೊಂಡ ರಾಂಪುರ ವಿಧಾನಸಭೆ ಕ್ಷೇತ್ರದ ಶಾಸಕ ಸ್ಥಾನಕ್ಕೆ ಚುನಾವಣೆ ನಡೆಯಬೇಕಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯನೀರು) ಪಶ್ಚಿಮ, 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ಕ್ರಮ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1	(ತ್ಯಾಜ್ಯನೀರು–ಎಸ್‌ಟಿಪಿ) ಹೆಚ್&ಎ.ವಿ	ಬೆಂಜಮಂ/ಕಾನಿಅ(ತ್ಯಾಜ್ಯನೀರು–ಎಸ್‌ಟಿಪಿ–ಹೆಚ್&ಎ.ವಿ)/ಪಿಬಿ/585/2022–23 ದಿನಾಂಕ: 28.10.2022 (2ನೇ ಕರೆ)	ರೂ.44,75,652/– / ರೂ.89,600/–	16.11.2022 ರ ಸಂಜೆ 4.00 ಗಂಟೆಯವರೆಗೆ	19.11.2022 ರಂದು ಬೆಳಿಗ್ಗೆ 11.00 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾಜ್ಯನೀರು–ಎಸ್‌ಟಿಪಿ–ಹೆಚ್&ಎ.ವಿ)				
2	(ತ್ಯಾಜ್ಯನೀರು–ಸಂಪರ್ಕ) ವಿ.ವಿ	ಬೆಂಜಮಂ/ಕಾನಿಅ(ತ್ಯಾಜ್ಯನೀರು–ಸಂಪರ್ಕ)–ವಿ.ವಿ/ಪಿಬಿ/972/2022–23 ದಿನಾಂಕ: 04.11.2022	ರೂ.77.32 ಲಕ್ಷಗಳು / ರೂ.1.82 ಲಕ್ಷಗಳು	24.11.2022 ರ ಸಂಜೆ 5.30 ಗಂಟೆಯವರೆಗೆ	28.11.2022 ರಂದು ಸಂಜೆ 4.00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾಜ್ಯನೀರು–ಸಂಪರ್ಕ)–ವಿ.ವಿ				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ವಾಪ್ರ/3014/ಆಕಾರ್/22–23

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಫೋ.ನಂ 08472–278634/256944, Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2022–23/2021 ದಿನಾಂಕ : 07–11–2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಆಳಂದ ತಾಲೂಕಿನ –17 (Indent No 49774, 49775, 49776, 49777, 49778, 49779, 49780, 49781, 49782, 49783, 49784, 49785, 49786, 49787, 49788, 49789 & 49790), 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ 50,00,001/–, ಗರಿಷ್ಠ 99,99,000/–, 3) ಲೆಕ್ಕ ಶೀರ್ಷಿಕೆ : JJM 2021-22 & 22-23, 4) ಗುತ್ತಿಗೆದಾರರ ಅರ್ಹತೆ : 3ನೇ & 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 07–11–2022 ರಿಂದ 18–11–2022, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 18–11–2022 ಸಾಯಂಕಾಲ 4:00 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: 19–11–2022 ಸಾಯಂಕಾಲ 4:01 ಗಂಟೆವರೆಗೆ, 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 21–11–2022 ಬೆ. 11.00 ಗಂಟೆಗೆ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/813/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಬೀದರ
ರಾಮಪೂರೆ ಕಾಲೋನಿ, ಬ್ಯಾಂಕ ಕಾಲೋನಿ ರಸ್ತೆ, ಬೀದರ, ದೂ: 08482–233115, ಫ್ಯಾಕ್ಸ್ : 08482–233115

ಸಂಖ್ಯೆ: ಶಿಅಯೋಬಿ/ಮಮಅಇ/ಐಸಿಡಿಎಸ್/ಮೊಟ್ಟೆ/ಮರುಟೆಂಡರ್/2022–23 ದಿನಾಂಕ: 05–11–2022

: ಕೋಳಿ ಮೊಟ್ಟೆ ಮರು ಟೆಂಡರ್ ವೇಳಾಪಟ್ಟಿ :

1. ಟೆಂಡರ್ ಉಲ್ಲೇಖ ಸಂಖ್ಯೆ : ಸಂ: ಶಿಅಯೋಬಿ:ಕೋಮೊ:ಮಟೆಂ/2022–23 ದಿನಾಂಕ: 05–11–2022 2. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : ಪ್ರಾರಂಭ ದಿನಾಂಕ: 05–11–2022. 3. ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : 22.11.2022 ಬೆಳಗ್ಗೆ 11:00 ಗಂಟೆಗೆ ಈ ಕೆಳಗಿನ ಸ್ಥಳದಲ್ಲಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ರಾಮಪೂರೆ ಕಾಲೋನಿ, ಬ್ಯಾಕ ಕಾಲೋನಿ ರಸ್ತೆ ಬೀದರ ಕಛೇರಿ ದೂರವಾಣಿ ಸಂಖ್ಯೆ:08482–233115.4. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಆನ್‌ಲೈನ್‌ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : 22.11.2022 ರಿಂದ 05:00 PM ವರೆಗೆ. 5. ಇ–ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲನಲ್ಲಿ ಅಪ್‌ಲೋಡ ಮಾಡಲು ಕೋನೆಯ ದಿನಾಂಕ ಮತ್ತು ಸಮಯ : 03.12.2022 ಸಂಜೆ 05:00 PM ನಂತರ. 6. ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 06.12.2022 ರಂದು ಬೆಳಿಗ್ಗೆ 11:00 AM 7. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. 8. ಟೆಂಡರ್‌ಗಳನ್ನು ತೆರೆಯುವ ಸ್ಥಳ : ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 9. ಸಂವಹನಕ್ಕಾಗಿ ವಿಳಾಸ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ರಾಮಪೂರೆ ಕಾಲೋನಿ, ಬ್ಯಾಂಕ ಕಾಲೋನಿ ರಸ್ತೆ ಬೀದರ ಕಛೇರಿ ದೂರವಾಣಿ ಸಂಖ್ಯೆ:08482–233115. Email ID:-cdpobdr@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬೀದರ.
ವಾ.ಸಾ.ಸಂ.ಇ/ಬೀದರ/312/ಎಂಸಿ&ಎ/2022–23

ಎಕ್ಸಿಸ್ ಬ್ಯಾಂಕ್
ಸಾರ್ವಜನಿಕ ಸೂಚನೆ
ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟೀಸ್

ಸಾಲಗಾರರು ಹಾಗೂ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಈ ಮೂಲಕ ತಿಳಿಸುವುದೇನೆಂದರೇ ಕೆಳಗಿನ ಖಾತೆಗಳಲ್ಲಿನ ಚಿನ್ನಾಭರಣಗಳ ಒತ್ತೆಯ ಸಾರ್ವಜನಿಕ ಹರಾಜನ್ನು ಆಕ್ಸಿಸ್ ಬ್ಯಾಂಕ್ ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರನ್ನು ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು "ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 21.11.2022 ರಂದು ಮಧ್ಯಾಹ್ನ 12:30 ಗಂಟೆಯಿಂದ ನಿಂದ 3:30 ವರೆಗೆ ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರ ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX5430	ಸಂಜೀವ್ ನಂದಕುಮಾರ್	98270	18-Jul-22	31.3	31
ಬನಶಂಕರಿ, ಬೆಂಗಳೂರು [ಕ]	XXXXXXXXXXX6996	ಸಂಜೀವ್ ನಂದಕುಮಾರ್	60384.02	18-Jul-22	31.9	31
ಬಂಗಾರಪೇಟೆ [ಕ]	XXXXXXXXXXX2022	ಚೇತನ್. ಸಿ.	66896	26-Jul-22	15.8	15.6
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX4129	ವೀರನಾಗಯ್ಯ. ಕೆ.	71996.00	18-Jul-22	23.47	23
ಭಟ್ಟರಹಳ್ಳಿ ಬೆಂಗಳೂರು [ಕ]	XXXXXXXXXXX0249	ನಿತಿನ್ ಚಂದ್ರನ್	66785.13	3-Sep-22	25.2	25
ಬಿಡದಿ, ಬೆಂಗಳೂರು [ಕ]	XXXXXXXXXXX6443	ಹೇಮಂತ್ ಕುಮಾರ್. ಬಿ.	213377	29-Jul-22	57.1	55
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX1021	ಜ್ಯೋತಿ. ಕೆ.	108627.4	9-Jun-22	43.8	33.8
ಕಾಕ್ಸ್ ಟೌನ್, ಬೆಂಗಳೂರು [ಕ]	XXXXXXXXXXX1797	ವನಜ. ಎಸ್.	209500	22-Jul-22	67.3	64
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX2576	ಮುನಿಕೃಷ್ಣ. ಎಂ.	127074	24-Jan-22	36.3	35
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX3515	ಪ್ರಭು.ಸಿ.	166971.78	26-Jul-22	55.9	54.5
ಗೋವಿಂದರಾಜನಗರ, ಬೆಂಗಳೂರು [ಕ]	XXXXXXXXXXX3018	ರಮೇಶ್. ಟಿ.	214171	3-Sep-22	79.8	68.8
ಜೆ.ಸಿ.ರಸ್ತೆ, ಬೆಂಗಳೂರು [ಕ]	XXXXXXXXXXX1540	ವಿ. ರವಿ	174235	3-Sep-22	59.6	56
ಜೆ.ಪಿ. ನಗರ, ಬೆಂಗಳೂರು [ಕ]	XXXXXXXXXXX7821	ಅಬ್ದುಲ್ ಲತೀಫ್.ಎಂ.	103612.00	25-Aug-22	45.7	38
ಜೆ.ಪಿ. ನಗರ, ಬೆಂಗಳೂರು [ಕ]	XXXXXXXXXXX0928	ಜನಗೊಲ್ಲ ಗ್ರೀಷ್ಮ ರೆಡ್ಡಿ	124596	26-Jul-22	52.7	36.4
ಜಯನಗರ, ಬೆಂಗಳೂರು [ಕ]	XXXXXXXXXXX9221	ವಿಜಯ್‌ಕುಮಾರ್ ದಸರೀ	209198.83	20-Jun-22	71.1	69.2
ಕಲ್ಯಾಣನಗರ, ಬೆಂಗಳೂರು [ಕ]	XXXXXXXXXXX4885	ಬಿ. ದೇವಿಪ್ರಸಾದ್	176066	22-Jul-22	80.8	79
ಕಲ್ಯಾಣನಗರ, ಬೆಂಗಳೂರು [ಕ]	XXXXXXXXXXX7930	ನವೀನ್. ಎಸ್	122706.84	3-Sep-22	73.3	73
ಕೋರಮಂಗಲ, ಬೆಂಗಳೂರು [ಕ]	XXXXXXXXXXX4672	ಪೂನಮ್ ಅರೋರ	1966731.8	6-Oct-22	731	713
ಕೋರಮಂಗಲ, ಬೆಂಗಳೂರು [ಕ]	XXXXXXXXXXX1053	ಸುಮಿತ್ರಾ	85476	24-Mar-22	36.1	27.2
ಮಹದೇವಪುರ, ಬೆಂಗಳೂರು [ಕ]	XXXXXXXXXXX3312	ಬೋರ್ಲಪಲ್ಲಿ ಶೇಷಾದ್ರಿ	242957.00	11-Jul-22	79.8	77.8
ಮಾರತ್ತಹಳ್ಳಿ, ಬೆಂಗಳೂರು [ಕ]	XXXXXXXXXXX7307	ಮಣಿವಣ್ಣನ್	89264	24-Mar-22	37.5	29.7
ಮಾರತ್ತಹಳ್ಳಿ, ಬೆಂಗಳೂರು [ಕ]	XXXXXXXXXXX4724	ನವೀನ್.ಎ.	116209	20-Jun-22	38.2	33.5
ನಾಗರಭಾವಿ, ಬೆಂಗಳೂರು [ಕ]	XXXXXXXXXXX8654	ಮಣಿವಣ್ಣನ್	59194	14-Jul-22	19.9	19.3
ನೆಲಮಂಗಲ, ಬೆಂಗಳೂರು [ಕ]	XXXXXXXXXXX1982	ಮೂರ್ತಿ. ಪಿ.	457832.01	3-Sep-22	151.2	143.5
ಪ್ರಶಾಂತ್‌ನಗರ	XXXXXXXXXXX0110	ಭೂಪತಿ. ಜಿ.	175491	18-Jun-22	57.7	55.8
ಪ್ರಶಾಂತ್‌ನಗರ	XXXXXXXXXXX0158	ರಮೇಶ್. ಟಿ.	345801.00	3-Sep-22	112.5	106
ಪ್ರಶಾಂತ್‌ನಗರ	XXXXXXXXXXX0406	ಸುನಿಲ್. ಜಿ.	129371.00	13-Sep-22	41.4	38.5
ರಾಮನಗರ [ಕ]	XXXXXXXXXXX4596	ಮುನೀರ್ ಅಹಮದ್	97825	6-Aug-22	42.3	34
ಆರ್.ಟಿ.ನಗರ, ಬೆಂಗಳೂರು [ಕ]	XXXXXXXXXXX7771	ಮುದ್ದರೆಡ್ಡಿ	1335751	26-Jul-22	660	628.3
ಸಹಕಾರನಗರ, ಬೆಂಗಳೂರು [ಕ]	XXXXXXXXXXX6941	ಮಿಲನ್‌ಕುಮಾರ್ ಶೆಟ್ಟಿ	45000.00	3-Sep-22	13.6	13.3
ಸಹಕಾರನಗರ, ಬೆಂಗಳೂರು [ಕ]	XXXXXXXXXXX7149	ರಿಚರ್ಡ್ ಜಾಕ್‌ಸನ್	83352.95	3-Sep-22	24.8	24
ಸಂಜಯನಗರ, ಬೆಂಗಳೂರು [ಕ]	XXXXXXXXXXX4365	ವರದರಾಜು ಸುನೀತಾ	1661314.68	22-Jul-22	584.9	549
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX0178	ಎಂ. ಗಾಡ್ವಿನ್ ನಾಥನ್	91619.86	18-Jun-22	40.3	28
ವಿಜಯನಗರ, ಬೆಂಗಳೂರು [ಕ]	XXXXXXXXXXX0104	ಬಾಲಾಜಿ	415441	3-Sep-22	157.1	135.5
ವಿಜಯನಗರ, ಬೆಂಗಳೂರು [ಕ]	XXXXXXXXXXX8696	ಸುನೀಲ್. ಜಿ.	93298	13-Sep-22	45.6	32
ಯಲಹಂಕ, ಬೆಂಗಳೂರು [ಕ]	XXXXXXXXXXX6392	ಆಶಾ. ಬಿ.ಹೆಚ್.	510945	9-Jun-22	177.3	163.4
ಯಲಹಂಕ, ಬೆಂಗಳೂರು [ಕ]	XXXXXXXXXXX7146	ದಿಲೀಪ್ ರೆಡ್ಡಿ	42798	26-Jul-22	13.5	12.8
ಯಲಹಂಕ, ಬೆಂಗಳೂರು [ಕ]	XXXXXXXXXXX9763	ಶ್ರೀಧರ್ ರೆಡ್ಡಿ. ಕೆ.	160246.8	17-May-22	54	53.1

ಎಕ್ಸಿಸ್ ಬ್ಯಾಂಕ್. ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ https://gold.samil.in ನಲ್ಲಿ ದಿನಾಂಕ : 21.11.2022 ರಂದು ಮಧ್ಯಾಹ್ನ 12:30 ರಿಂದ 3:30ಕ್ಕೆ ನಡುವೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ https://gold.samil.in ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)
ಸ್ಥಳ: ಬೆಂಗಳೂರು ಸಹಿ/– ಅಧಿಕೃತ ಅಧಿಕಾರಿ, ಎಕ್ಸಿಸ್ ಬ್ಯಾಂಕ್ ಲಿಮಿಟೆಡ್.,

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಜೇವರ್ಗಿ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಸಂಖ್ಯೆ:ಶಿಅಯೋಜೇ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23 ದಿನಾಂಕ: 08–11–2022

ಜೇವರ್ಗಿ ತಾಲೂಕಿನ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಕೋಳಿ ಮೊಟ್ಟೆ ಸರಬರಾಜುಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಮಮಇ 169 ಐಸಿಡಿ 2021, ದಿನಾಂಕ : 22.03.2022 ರಂತೆ ಜೇವರ್ಗಿ ತಾಲೂಕಿನ 355 ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ನಿಬಂಧನೆಗಳಿಗೆ ಒಳಪಟ್ಟು ಅನುಬಂಧ–2ರಲ್ಲಿ ನಿಗಧಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ e-Procurement Portal ಪದ್ಧತಿಯಂತೆ http//eproc.karnataka.gov.in Online ಮುಖಾಂತರ ಅನುಬಂಧ–1ರಲ್ಲಿ ತಿಳಿಸಿದಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅನುಬಂಧ–1
1) ವಸ್ತುಗಳು / ಸರಕುಗಳು : ಮೊಟ್ಟೆಗಳು, ಸಾರಿಗೆ ಸಹಿತ, 2) ಪ್ರಮಾಣ : ಮಾಸಿಕ 3,20,441/-, ವಾರ್ಷಿಕ 38,45,292/-, 3) ಘಟಕ : ಸಂಖ್ಯೆಗಳು, 4) ವರ್ಷಕ್ಕೆ ಅಂದಾಜು ವೆಚ್ಚ (ರೂ.) : 2,30,71,752/-, EMD (ರೂ.) : 3,46,000/-, 5) ವಿತರಣಾ ವೇಳಾಪಟ್ಟಿ : 5ನೇ, 15ನೇ ಮತ್ತು 25ನೇ ದಿನ.

ಅನುಬಂಧ–2 (ಟೆಂಡರ್ ವೇಳಾಪಟ್ಟಿ)
1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: ಪ್ರಾರಂಭ ದಿನಾಂಕ: 08–11–2022, 2) ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 28.11.2022 ಸಾಯಂಕಾಲ 05:30 PM ಒಳಗೆ, 3) ಇ–ಟೆಂಡರ್ ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 28.11.2022 ಸಾಯಂಕಾಲ 05:30 PM ಒಳಗೆ, 4) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 30.11.2022, 11:00 AM, 5) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 02.12.2022 11:00 AM, 6) ಟೆಂಡರ್‌ಗಳನ್ನು ತೆರೆಯುವ ಸ್ಥಳ: ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್, 7. ಸಂವಹನಕ್ಕಾಗಿ ವಿಳಾಸ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಜೇವರ್ಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ–585211, ಇಮೇಲ್: jewargicdpo@gmail.com, Mobile No-9880161533

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಜೇವರ್ಗಿ, ಜಿ : ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/819/ಎಂ.ಸಿ.&ಎ/2022–23

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ,
ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eewmccmys@gmail.com

ಸಂಖ್ಯೆ:.ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–08/2022–23 ದಿನಾಂಕ: 07.11.2022

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ನಗರಪಾಲಿಕೆ, ಮಹಾಪೌರರ ಅನುದಾನ ಶೇ.24.1 & 7.25, 14ನೇ ಹಣಕಾಸು, 15ನೇ ಹಣಕಾಸು ಹಾಗೂ ಎಸ್.ಎಫ್.ಸಿ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	(ಇ–ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5.30 ಗಂಟೆಗೆ)	ಟೆಂಡರ್ ತೆರೆಯುವ ದಿನಾಂಕ (ಸಂಜೆ 5.30 ಗಂಟೆಗೆ)
1.	ಕಾರ್ಯಪಾಲಕ ಅಭಿಯಂತರರು (ಸಿವಿಲ್ ವಿಭಾಗ)	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ಟಿಎನ್–48/2022–23, ದಿನಾಂಕ: 07.11.2022	143	2720.98	08.11.2022	22.11.2022	23.11.2022
2.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್–49/2022–23, ದಿನಾಂಕ: 07.11.2022	01	481.35	08.11.2022	08.12.2022	09.12.2022
3.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್–51/2022–23, ದಿನಾಂಕ: 04.11.2022	05	88.12	04.11.2022	14.11.2022	15.11.2022
4.		ಹೆಚ್1/ಪವಿ/66/2022–23, ದಿ: 04.11.2022	01	49.34	08.11.2022	23.11.2022	25.11.2022
5.		ಮೈನಪಾ/ವಾ.ವಿ/2022–23, ದಿ: 31.10.2022	06	96.04	08.11.2022	16.11.2022	17.11.2022
	ಸರ್ವೀಸ್ ಟೆಂಡರ್						
6.	ಕಾರ್ಯಪಾಲಕ ಅಭಿಯಂತರರು (ಸಿವಿಲ್ ವಿಭಾಗ)	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪ)/ಟಿಎನ್–45/2022–23, ದಿ:07.11.2022	05	230.58	08.11.2022	22.11.2022	23.11.2022
7.		ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪ)/ಟಿಎನ್–50/2022–23, ದಿ:07.11.2022	01	35.35	08.11.2022	22.11.2022	23.11.2022

ಇ–ಪೋರ್ಟಲ್ ಮುಖಾಂತರ ಸಿಂಗಲ್ ಕವರ್ ಹಾಗು ದ್ವಿಲಕೋಟೆ ಕವರ್ ಡಾಕ್ಯುಮೆಂಟ್ ಪದ್ಧತಿ ಮತ್ತು ಸರ್ವಿಸ್ ಟೆಂಡರ್ ಪದ್ಧತಿಂಯಲ್ಲಿ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ (https://eproc.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ ಹಾಗೂ ಕಾಮಗಾರಿ ನಿರ್ವಹಿಸಿರುವ ದೃಡೀಕರಣ ಪ್ರಮಾಣ ಪತ್ರದಲ್ಲಿ ಇಂಡೆಂಟ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/647/22-23

ಫೈನಲ್‌ನಲ್ಲಿ ಪಾಕಿಸ್ತಾನಕ್ಕೆ ಎದುರಾಗುವುದೇ ಭಾರತ?

ಇಂಗ್ಲೆಂಡ್ ಸವಾಲು ಮೀರುವ ಛಲ

5 ಪಂದ್ಯ
246 ರನ್
138.98 ಸ್ಟ್ರೈಕ್‌ರೇಟ್

ವಿರಾಟ್ ಕೊಹ್ಲಿ

ಜೋಸ್ ಬಟ್ಲರ್

• ಆರ್. ಕೌಶಿಕ್

ಅಡಿಲೇಡ್: ಚುಟುಕು ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್ ಪ್ರವೇಶದ ಕನಸಿನೊಂದಿಗೆ ರೋಹಿತ್ ಪಡೆಯು ಗುರುವಾರ ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಕಣಕ್ಕಿಳಿಯಲಿದೆ. ಇಲ್ಲಿ ನಡೆಯಲಿರುವ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಆಡಲಿದೆ. 2014ರ ವಿಶ್ವಕಪ್ ಟೂರ್ನಿಯ ನಂತರ ಭಾರತ ತಂಡವು ಫೈನಲ್ ಪ್ರವೇಶಿಸಿಲ್ಲ. ಅಲ್ಲದೇ 2013ರ ನಂತರ ಯಾವುದೇ ಐಸಿಸಿ ಟ್ರೋಫಿಯನ್ನೂ ಜಯಿಸಿಲ್ಲ. ಈ ಎರಡೂ ಕನಸುಗಳನ್ನು ನನಸು ಮಾಡಿಕೊಳ್ಳುವ ಅವಕಾಶ ಇಲ್ಲಿದೆ.

ಕೋಟ್ಯಂತರ ಅಭಿಮಾನಿಗಳ ನಿರೀಕ್ಷೆಯ ನೋಟ ರೋಹಿತ್ ಅವರತ್ತ ಇದೆ. ಅವರಿಗೆ ಇದರ ಅರಿವು ಕೂಡ ಚೆನ್ನಾಗಿಯೇ ಇದೆ. ಆದರೆ ಬುಧವಾರ ಸುದ್ದಿಗೋಷ್ಠಿಗೆ ಬಂದ ರೋಹಿತ್ ಮುಖದಲ್ಲಿ ಒತ್ತಡದ ಭಾವವಿರಲಿಲ್ಲ. ಕಿರುನಗೆಯೊಂದಿಗೆ ಬಂದು ಕುಳಿತ ಅವರು ಶಾಂತಚಿತ್ತರಾಗಿಯೇ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು. ಅವರ ಹಾವಭಾವಗಳಲ್ಲಿ ನಿರಾಳತೆ ಎದ್ದುಕಂಡಿತು.

ಒಂದು ವರ್ಷದ ಹಿಂದೆ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಕಾರ್ಯನಿರ್ವಹಿಸುತ್ತಿರುವ ರೋಹಿತ್ ತಂಡದ ಧ್ಯೇಯೋದ್ದೇಶವನ್ನು ಸ್ಪಷ್ಟವಾಗಿ ರೂಪಿಸಿದ್ದಾರೆ. ಇದರಿಂದಾಗಿ ಅನುಭವಿ ಬ್ಯಾಟರ್‌ಗಳು ಸರಿಯಾದ ಸಂದರ್ಭದಲ್ಲಿ ಲಯಕ್ಕೆ ಮರಳಿದ್ದಾರೆ. ಹೋದ ವರ್ಷ ತಂಡವು ವಿರಾಟ್ ಕೊಹ್ಲಿ ಬ್ಯಾಟಿಂಗ್ ಮೇಲೆ ಹೆಚ್ಚು ಅವಲಂಬಿತವಾಗಿತ್ತು. ಆದರೆ ಈಗ ಹಾಗಿಲ್ಲ. ಸೂರ್ಯಕುಮಾರ್ ಯಾದವ್ ಎಂಬ ವಿಶಿಷ್ಟ ಪ್ರತಿಭೆಯು ಬೆಳಗುತ್ತಿದೆ. ವಿರಾಟ್ ಕೂಡ ಅಮೋಘ ಲಯದಲ್ಲಿದ್ದಾರೆ. ಈ ಜೋಡಿಯ ಆಟವು ತಂಡದ ಬ್ಯಾಟಿಂಗ್‌ಗೆ ಅಗಾಧ ಬಲ ಒದಗಿಸಿದೆ. ಆರಂಭಿಕ ಬ್ಯಾಟರ್ ರೋಹಿತ್‌ಗೆ ಈ ಟೂರ್ನಿಯಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಲು ಈಗ ಹೆಚ್ಚು ಸಮಯವಿಲ್ಲ. ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳಲು ಇದು ಸಕಾಲ.

ಸೂರ್ಯಕುಮಾರ್ ಯಾದವ್

ಸೂಪರ್ 12ರ ಹಂತದಲ್ಲಿ ಭಾರತ ತಂಡವು ಹಲವು ನಾಟಕೀಯ ತಿರುವುಗಳನ್ನು ದಾಟಿ ಬಂದಿದೆ. ಮೊದಲ ಪಂದ್ಯದಲ್ಲಿ ಕೊಹ್ಲಿಯ ಅಬ್ಬರದಾಟದ ಬಲದಿಂದ ಪಾಕಿಸ್ತಾನವನ್ನು ಮಣಿಸಿತ್ತು. ಇದೇ ತಾಣದಲ್ಲಿ ಬಾಂಗ್ಲಾ ವಿರುದ್ಧ ಕಠಿಣ ಜಯ ಸಾಧಿಸಿತ್ತು. ದಕ್ಷಿಣ ಆಫ್ರಿಕಾ ಎದುರು ಮಾತ್ರ ಮಣಿದಿತ್ತು. ಮೊದಲ ಗುಂಪಿನಲ್ಲಿ ಇಂಗ್ಲೆಂಡ್ ಕೂಡ ಇಂತಹದೇ ಹಾದಿಯಲ್ಲಿ ನಡೆದುಬಂದಿದೆ. ಮೊದಲ ಪಂದ್ಯದಲ್ಲಿಯೇ ಐರ್ಲೆಂಡ್ ವಿರುದ್ಧ ಸೋತಿದ್ದ ತಂಡವು ನಂತರ ಪುಟಿದೆದ್ದು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದೆ.

ರೋಹಿತ್ ಶರ್ಮಾ

ನಾಕೌಟ್ ಹಂತಗಳಲ್ಲಿ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅಚ್ಚುಕಟ್ಟಾಗಿ ವಿನಿಯೋಗಿಸುವಲ್ಲಿ ಇಂಗ್ಲೆಂಡ್ ಮೊದಲಿನಿಂದಲೂ ಎತ್ತಿದ ಕೈ. ಟಿ20 ಮಾದರಿಯಲ್ಲಿ ಅಮೋಘ ಲಯ ಹೊಂದಿರುವ ನಾಯಕ ಬಟ್ಲರ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ ಪಂದ್ಯ ಗೆಲ್ಲಿಸಬಲ್ಲ ಸಮರ್ಥರು. ಗಾಯದಿಂದಾಗಿ ಹೊರಗುಳಿದಿರುವ ಜಾನಿ ಬೆಸ್ಟೊ ವರ ಕೊರತೆ ತಂಡಕ್ಕೆ ಇದೆ. ಡೇವಿಡ್ ಮಲಾನ್ ಕೂಡ ಇತ್ತೀಚೆಗೆಗಾಯಗೊಂಡಿದ್ದಾರೆ. ಆದರೆ ಈ ಪಂದ್ಯದಲ್ಲಿ ಫಿಟ್ ಆಗಿ ಕಣಕ್ಕಿಳಿಯುವರೇ ಕಾದುನೋಡಬೇಕು. ಅವರು ಆಡದಿದ್ದರೆ ಭಾರತಕ್ಕೆ ಅನುಕೂಲವಾಗುವ ಸಾಧ್ಯತೆ ಹೆಚ್ಚು. ಇದೆಲ್ಲದರಾಚೆ. ಅಡಿಲೇಡ್ ಆಕಾಶವು ಶುಭ್ರವಾಗಿದೆ. ಕ್ರೀಡಾಂಗಣದ ಆಸನಗಳು ಭರ್ತಿಯಾಗುವುದು ಖಚಿತ. ಅಭಿಮಾನಿಗಳ ಅಬ್ಬರದ ಮುಂದೆ ಉಭಯ ತಂಡಗಳ ಆಟಗಾರರ ಹಣಾಹಣಿ ರಂಗೇರುವ ಎಲ್ಲ ನಿರೀಕ್ಷೆಗಳೂ ಇವೆ.

ತಂಡಗಳು:
ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದಿನೇಶ್ ಕಾರ್ತಿಕ್, ರಿಷಭ್ ಪಂತ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಆರ್. ಅಶ್ವಿನ್, ಅಕ್ಷರ್ ಪಟೇಲ್, ಭುವನೇಶ್ವರ್ ಕುಮಾರ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ದೀಪಕ್ ಹೂಡಾ, ಹರ್ಷಲ್ ಪಟೇಲ್, ಯಜುವೇಂದ್ರ ಚಾಹಲ್.
ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ/ವಿಕೆಟ್‌ಕೀಪರ್), ಬೆನ್ ಸ್ಟೋಕ್ಸ್, ಅಲೆಕ್ಸ್ ಹೇಲ್ಸ್, ಹ್ಯಾರಿ ಬ್ರೂಕ್, ಫಿಲ್ ಸಾಲ್ಟ್, ಡೇವಿಡ್ ಮಲಾನ್, ಸ್ಯಾಮ್ ಕರನ್, ಮಾರ್ಕ್ ವುಡ್, ಮೋಯಿನ್ ಅಲಿ, ಆದಿಲ್ ರಶೀದ್, ಟೈಮಲ್ ಮಿಲ್ಸ್, ಕ್ರಿಸ್ ಜೋರ್ಡಾನ್, ಲಿಯಾಮ್ ಲಿವಿಂಗ್‌ಸ್ಟೋನ್, ಕ್ರಿಸ್ ವೋಕ್ಸ್, ಡೇವಿಡ್ ವಿಲಿ.
ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಟಿ20 ವಿಶ್ವಕಪ್‌ನಲ್ಲಿ ಬಲಾಬಲ

ಭಾರತ		ಇಂಗ್ಲೆಂಡ್
43	ಆಡಿದ ಪಂದ್ಯ	42
28	ಗೆಲುವು	22
14	ಸೋಲು	19
1	ಫಲಿತಾಂಶವಿಲ್ಲ	1

4: ಭಾರತ ಮತ್ತು ಇಂಗ್ಲೆಂಡ್ ತಂಡಗಳು ಒಟ್ಟು ನಾಲ್ಕನೇ ಬಾರಿ ಟಿ20 ವಿಶ್ವಕಪ್ ಸೆಮಿಫೈನಲ್ ಆಡುತ್ತಿವೆ. ಉಭಯ ತಂಡಗಳು ತಲಾ ಎರಡು ಬಾರಿ ಗೆದ್ದು ಒಂದು ಬಾರಿ ಸೋತಿವೆ.

ಟಿ20ಯಲ್ಲಿ ಒಟ್ಟು ಮುಖಾಮುಖಿ

22	ಪಂದ್ಯ
12	ಭಾರತ ಗೆಲುವು
10	ಇಂಗ್ಲೆಂಡ್ ಜಯ

ಟಿ20 ವಿಶ್ವಕಪ್ ಮುಖಾಮುಖಿ

3	ಪಂದ್ಯ
2	ಭಾರತ ಗೆಲುವು
1	ಇಂಗ್ಲೆಂಡ್ ಜಯ

ಈ ಬಾರಿಯ ವಿಶ್ವಕಪ್‌ನಲ್ಲಿ ಸ್ಕೋರಿಂಗ್ ರೇಟ್

ಹಂತ	ಭಾರತ	ಇಂಗ್ಲೆಂಡ್
ಪವರ್‌ಪ್ಲೇ (1–6)	5.96	8.12
ಮಿಡಲ್ ಓವರ್ಸ್ (7–15)	8.28	6.84
ಫೈನಲ್ ಓವರ್ಸ್ (16–20)	11.60	8.02

ಈ ಬಾರಿಯ ವಿಶ್ವಕಪ್‌ನಲ್ಲಿ ಎಕಾನಮಿ ರೇಟ್

ಹಂತ	ಭಾರತ	ಇಂಗ್ಲೆಂಡ್
ಪವರ್‌ಪ್ಲೇ (1–6)	5.70	7.83
ಮಿಡಲ್ ಓವರ್ಸ್ (7–15)	7.68	7.41
ಫೈನಲ್ ಓವರ್ಸ್ (16–20))	9.00	6.00

ಪ್ರಶಸ್ತಿ ಸುತ್ತಿಗೆ ಆಜಂ ಪಡೆ

ಸಿಡ್ನಿ: 'ಈ ಟೂರ್ನಿಯ ಫೈನಲ್‌ನಲ್ಲಿ ಪಾಕಿಸ್ತಾನದ ಎದುರು ಭಾರತ ಸ್ಪರ್ಧಿಸುವುದನ್ನು ನೋಡುವ ವಿಶ್ವಾಸವಿದೆ'–

ಬುಧವಾರ ನ್ಯೂಜಿಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ 7 ವಿಕೆಟ್‌ಗಳಿಂದ ಗೆದ್ದು ಫೈನಲ್ ಪ್ರವೇಶಿಸಿದ ಪಾಕಿಸ್ತಾನ ತಂಡದ ಕೋಚ್ ಮ್ಯಾಥ್ಯೂ ಹೇಡನ್ ಅವರ ಮನದಿಂಗಿತ ಇದು. ಪಂದ್ಯ ಮುಗಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಟೂರ್ನಿಯ ಸೂಪರ್ 12ರ ಹಂತದಲ್ಲಿ 2ನೇ ಗುಂಪಿನಲ್ಲಿ ಭಾರತ ಮತ್ತು ಪಾಕ್ ತಂಡಗಳು ಆಡಿದ್ದವು. ಬದ್ಧ ಪ್ರತಿಸ್ಪರ್ಧಿಗಳಾದ ಉಭಯ ತಂಡಗಳು ಸೆಮಿಫೈನಲ್ ಪ್ರವೇಶಿಸಿದಾಗಿನಿಂದಲೂ ಹಲವು ದಿಗ್ಗಜರು ಇದೇ ಆಶಯ ವ್ಯಕ್ತಪಡಿಸಿದ್ದಾರೆ. ಇದರ ಮೊದಲ ಹಂತವಾಗಿ ಪಾಕ್ ತಂಡವು ಬಲಿಷ್ಠ ಕಿವೀಸ್ ಬಳಗದೆದುರು ಅಮೋಘ ಆಟವಾಡಿ ಜಯಿಸಿದೆ. ಗುರುವಾರ ಭಾರತವು ಇಂಗ್ಲೆಂಡ್ ವಿರುದ್ಧ ಜಯಿಸಿದರೆ ಭಾರತ ಮತ್ತು ಪಾಕ್ ತಂಡಗಳ ಅಭಿಮಾನಿಗಳ ಹುರುಪು ಇಮ್ಮಡಿಯಾಗುವುದು ಖಚಿತ.

ಗುಂಪು ಹಂತದಲ್ಲಿ ಅಮೋಘ ಆಟವಾಡಿದ್ದ ಕೇನ್ ವಿಲಿಯಮ್ಸನ್ ಬಳಗವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪಾಕ್ ವೇಗಿ ಶಾಹೀನ್ ಶಾ ಅಫ್ರಿದಿ (24ಕ್ಕೆ2) ಆರಂಭದಲ್ಲಿಯೇ ಕೊಟ್ಟ ಪೆಟ್ಟಿಗೆ ಕೇನ್ ಬಳಗ ತಡಬಡಾಯಿಸಿತು. ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ಮಿಂಚಿದ ಡೆರಿಲ್ ಮಿಚೆಲ್ (ಔಟಾಗದೆ 53) ಅವರ ಬಲದಿಂದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 152 ರನ್ ಗಳಿಸಿತು.

ಟೂರ್ನಿಯಲ್ಲಿ ಫಾರ್ಮ್‌ಗಾಗಿ ಪರದಾಡಿದ್ದ ಪಾಕ್ ನಾಯಕ ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ ಇಲ್ಲಿ ಅಬ್ಬರಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 105 ರನ್ ಸೇರಿಸಿದ ಅವರು ಪಾಕ್ ತಂಡದ ಗೆಲುವನ್ನು ಸರಳಗೊಳಿಸಿದರು. ಕಿವೀಸ್ ತಂಡದ ಅನುಭವಿ ಬೌಲರ್ ಟ್ರೆಂಟ್ ಬೌಲ್ಟ್ 13ನೇ ಓವರ್‌ನಲ್ಲಿ ಬಾಬರ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. 3 ಓವರ್‌ಗಳ ನಂತರ ರಿಜ್ವಾನ್ ವಿಕೆಟ್ ಅನ್ನೂ ಕಬಳಿಸಿದರು. ಆದರೆ ಪಾಕ್ ಜಯ ತಡೆಯಲು ಸಾಧ್ಯವಾಗಲಿಲ್ಲ.

ಫೀಲ್ಡಿಂಗ್‌ನಲ್ಲಿ ಕಿವೀಸ್ ಬಳಗವು ಪಾಕ್ ಎದುರು ಎಡವಿತು. ಎರಡು ಸುಲಭ ಕ್ಯಾಚ್‌ಗಳನ್ನೂ ಫೀಲ್ಡರ್‌ಗಳು ಕೈಚೆಲ್ಲಿದರು. ಥ್ರೋ ಮತ್ತು ವಿಕೆಟ್‌ಕೀಪಿಂಗ್ ಕೂಡ ಚುರುಕಾಗಿರಲಿಲ್ಲ.

ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 4ಕ್ಕೆ152 (20 ಓವರ್)
ಫಿನ್ ಎಲ್‌ಬಿಡಬ್ಲ್ಯು ಅಫ್ರಿದಿ 4 (3ಎ), ಕಾನ್ವೆ ರನ್‌ಔಟ್ (ಶಾದಾಬ್ ಖಾನ್) 21 (20ಎ, 4X3), ವಿಲಿಯಮ್ಸನ್ ಬಿ ಅಫ್ರಿದಿ 46 (42ಎ, 4X1, 6X1), ಫಿಲಿಪ್ಸ್ ಸಿ ಮತ್ತು ಬಿ ನವಾಜ್ 6 (8ಎ, 4X1), ಡೆರಿಲ್ ಔಟಾಗದೆ 53 (35ಎ, 4X3, 6X1), ನಿಶಾಮ್ ಔಟಾಗದೆ 16 (12ಎ, 4X1)
ಇತರೆ 6 (ಬೈ 2, ಲೆಗ್‌ಬೈ 4)
ವಿಕೆಟ್ ಪತನ: 1–4 (ಫಿನ್ ಅಲೆನ್; 0.3), 2–38 (ಡೆವೊನ್ ಕಾನ್ವೆ; 5.6), 3–49 (ಗ್ಲೆನ್ ಫಿಲಿಪ್ಸ್; 7.6), 4–117 (ಕೇನ್ ವಿಲಿಯಮ್ಸನ್; 16.2)
ಬೌಲಿಂಗ್: ಶಾಹೀನ್ ಶಾ ಅಫ್ರಿದಿ 4–0–24–2, ನಸೀಂ ಶಾಹ 4–0–30–0, ಹ್ಯಾರಿಸ್ ರವೂಫ್ 4–0–32–0, ಮೊಹಮ್ಮದ್ ವಾಸೀಂ ಜೂನಿಯರ್ 2–0–15–0, ಶಾದಾಬ್ ಖಾನ್ 4–0–33–0, ಮೊಹಮ್ಮದ್ ನವಾಜ್ 2–0–12–1

ಪಾಕಿಸ್ತಾನ 3ಕ್ಕೆ153 (19.1 ಓವರ್)
ರಿಜ್ವಾನ್ ಸಿ ಗ್ಲೆನ್ ಬಿ ಬೌಲ್ಟ್ 57 (43ಎ, 4X5), ಬಾಬರ್ ಸಿ ಡೆರಿಲ್ ಬಿ ಬೌಲ್ಟ್ 53 (42ಎ, 4X7), ಹ್ಯಾರಿಸ್ ಸಿ ಫಿನ್ ಬಿ ಸ್ಯಾಂಟನರ್ 30 (26ಎ, 4X2, 6X1), ಮಸೂದ್ ಔಟಾಗದೆ 3 (4ಎ), ಇಫ್ತಿಕಾರ್ ಔಟಾಗದೆ 0 (0ಎ)
ಇತರೆ 10 (ಬೈ 4, ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1–105 (ಬಾಬರ್ ಆಜಂ; 12.4), 2–132 (ಮೊಹಮ್ಮದ್ ರಿಜ್ವಾನ್; 16.6), 3–151 (ಮೊಹಮ್ಮದ್ ಹ್ಯಾರಿಸ್; 18.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–33–2, ಟಿಮ್ ಸೌಥಿ 3.1–0–24–0, ಲಾಕಿ ಫರ್ಗ್ಯುಸನ್ 4–0–37–0, ಮಿಚೆಲ್ ಸ್ಯಾಂಟನರ್ 4–0–26–1, ಈಶ್ ಸೋಧಿ 4–0–26–0

ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 7 ವಿಕೆಟ್‌ಗಳ ಜಯ.

ವಿರಾಟ್ ಕೊಹ್ಲಿಗೆ ಗಾಯ

ಅಡಿಲೇಡ್: ಭಾರತ ತಂಡದ ಆಟಗಾರ ವಿರಾಟ್ ಕೊಹ್ಲಿ ಅವರಿಗೆ ಬುಧವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ಚೆಂಡು ಬಡಿದು ಪೆಟ್ಟಾಯಿತು. ಬ್ಯಾಟಿಂಗ್ ಅಭ್ಯಾಸ ಮಾಡುವಾಗ ಹರ್ಷಲ್ ಪಟೇಲ್ ಹಾಕಿದ ಎಸೆತದಲ್ಲಿ ತೊಡೆಗೆ ಬಡಿಯಿತು. ತಂಡದ ವೈದ್ಯರು ಕೂಡಲೆ ಪ್ರಥಮ ಚಿಕಿತ್ಸೆ ನೀಡಿದರು. ಗಾಯ ಗಂಭೀರವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಏಷ್ಯನ್ ಬಾಕ್ಸಿಂಗ್: ಫೈನಲ್‌ಗೆ ಲವ್ಲಿನಾ

ಲವ್ಲಿನಾ

ನವದೆಹಲಿ (ಪಿಟಿಐ): ಭಾರತದ ಲವ್ಲಿನಾ ಬೊರ್ಗೊಹೈನ್ (75 ಕೆಜಿ ವಿಭಾಗ), ಅಲ್ಫಿಯಾ ಪಠಾಣ್ (81+ ಕೆಜಿ), ಮೀನಾಕ್ಷಿ (52 ಕೆಜಿ) ಮತ್ತು ಪರ್ವೀನ್ (63 ಕೆಜಿ) ಅವರು ಇಲ್ಲಿ ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿದ್ದಾರೆ. ಅಂಕುಷಿತಾ ಬೋರೊ (66 ಕೆಜಿ) ಹಾಗೂ ಪ್ರೀತಿ (57 ಕೆಜಿ) ಕಂಚು ಗೆದ್ದರು.

ಹಾಕಿ: ಡೈನಮೈಟ್ಸ್, ಈಸ್ಟ್ ಇಂಡಿಯಾಗೆ ತಂಡಗಳಿಗೆ ಗೆಲುವು

ಬೆಂಗಳೂರು: ಡೈನಮೈಟ್ಸ್ ಯುನೈಟೆಡ್ ಮತ್ತು ಈಸ್ಟ್ ಇಂಡಿಯಾ ಕ್ಲಬ್ ತಂಡಗಳು ರಾಜ್ಯ ಸಿ ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿದವು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಬುಧವಾರ ಡೈನಮೈಟ್ ಯುನೈಟೆಡ್ 2–1ರಿಂದ ನವೀನ್ ಹಾಕಿ ಕ್ಲಬ್ ಬಿ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಎರಡೂ ಗೋಲುಗಳನ್ನು ಬೋಪಣ್ಣ ಎ. (11, 14ನೇ ನಿಮಿಷ) ಅವರು ಗಳಿಸಿದರು. ನವೀನ್ ಕ್ಲಬ್ ಪರ ಶರತ್ (49ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಈಸ್ಟ್ ಇಂಡಿಯಾ ಹಾಕಿ ಕ್ಲಬ್ 3–0ಯಿಂದ ಬಾಷ್ ಸ್ಪೋರ್ಟ್ಸ್ ಕ್ಲಬ್ ತಂಡಕ್ಕೆ ಸೋಲುಣಿಸಿತು. ಈಸ್ಟ್ ಇಂಡಿಯಾ ತಂಡಕ್ಕಾಗಿ ಪ್ರೇಮಯ್ಯ (24, 48ನೇ ನಿ.) ಎರಡು ಗೋಲು ದಾಖಲಿಸಿ ಮಿಂಚಿದರು. ಶರೀನ್ (7ನೇ ನಿ.) ಕೊಡುಗೆ ನೀಡಿದರು.

ಕೊಚ್ಚಿಯಲ್ಲಿ ಡಿ.23ರಂದು ಐಪಿಎಲ್ ಹರಾಜು

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ಆಟಗಾರರ ಹರಾಜು ಪ್ರಕ್ರಿಯೆ ಡಿಸೆಂಬರ್ 23ರಂದು ಕೊಚ್ಚಿಯಲ್ಲಿ ನಡೆಯಲಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧಿಕಾರಿಯೊಬ್ಬರು ಬುಧವಾರ ಈ ವಿಷಯ ತಿಳಿಸಿದ್ದಾರೆ.

ಈ ವರ್ಷ ಮಿನಿ ಹರಾಜು ಪ್ರಕ್ರಿಯೆ ಇರಲಿದೆ. 10 ಫ್ರಾಂಚೈಸ್‌ಗಳಿಗೆ ತಾವು ತಂಡದಲ್ಲಿ ಉಳಿಸಿಕೊಂಡ ಆಟಗಾರರ ಪಟ್ಟಿಯನ್ನು ಇದೇ 15ರೊಳಗೆ ಸಲ್ಲಿಸಲು ತಿಳಿಸಲಾಗಿದೆ.

ಕೆಎಸ್‌ಸಿಎ: ರಘುರಾಮ್ ಅಧ್ಯಕ್ಷ, ಶಂಕರ್ ಕಾರ್ಯದರ್ಶಿ
ಆಡಳಿತ ಸಮಿತಿ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಎಡಗೈ ಸ್ಪಿನ್ನರ್ ರಘುರಾಮ್ ಭಟ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನವೆಂಬರ್ 20ರಂದು ಚುನಾವಣೆ ನಿಗದಿಯಾಗಿತ್ತು. ಅಭ್ಯರ್ಥಿಗಳಿಗೆ ನಾಮಪತ್ರ ಮರಳಿ ಪಡೆಯಲು ಬುಧವಾರ ಕೊನೆಯ ದಿನವಾಗಿತ್ತು. ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿದ್ದ ಬಿ.ಎನ್. ಮಧುಕರ್, ಸಂಜಯ್ ಪೋಳ್ ಹಾಗೂ ವಿನಯ್ ಮೃತ್ಯುಂಜಯ ಅವರು ತಮ್ಮ ನಾಮಪತ್ರ ಮರಳಿ ಪಡೆದರು. ಭಟ್ ಅವರೊಂದಿಗೆ ಇನ್ನುಳಿದ ಸ್ಥಾನಗಳಿಗೆ ಹಾಗೂ ಆಡಳಿತ ಸಮಿತಿ ಸದಸ್ಯರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಳೆದ ಅವಧಿಯಲ್ಲಿ ಅಧಿಕಾರದಲ್ಲಿದ್ದವರಲ್ಲಿ ಶಾವೀರ್ ತಾರಾಪುರೆ (ಜಂಟಿ ಕಾರ್ಯದರ್ಶಿ) ಅವರೊಬ್ಬರೇ ಮತ್ತೊಂದು ಅವಧಿಗೆ ಮುಂದುವರಿದಿದ್ದಾರೆ. ಉಳಿದವರೆಲ್ಲರೂ ಕೂಲಿಂಗ್ ಆಫ್ ಆಯ್ಕೆ ಮಾಡಿಕೊಂಡಿದ್ದಾರೆ.

ಎ. ಶಂಕರ್ ಕಾರ್ಯದರ್ಶಿ ಹಾಗೂ ಬಿ.ಕೆ. ಸಂಪತ್ ಕುಮಾರ್ ಉಪಾಧ್ಯಕ್ಷರಾಗಿ ನೇಮಕವಾಗಿದ್ದಾರೆ.

ರಘುರಾಮ್ 1980 ರಿಂದ 1993 ರವರೆಗೆ ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದಾರೆ. ಭಾರತ ತಂಡವನ್ನು ಎರಡು ಟೆಸ್ಟ್ ಪಂದ್ಯಗಳಲ್ಲಿ ಪ್ರತಿನಿಧಿಸಿದ್ದರು. 64 ವರ್ಷದ ರಘುರಾಮ್ ಈಗ ಅಧ್ಯಕ್ಷ ಸ್ಥಾನಕ್ಕೇರಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಈಚೆಗೆ ಆಯ್ಕೆಯಾಗಿದ್ದರು. ಉಪಾಧ್ಯಕ್ಷರಾಗಿದ್ದ ಜೆ. ಅಭಿರಾಮ್ ಅವರು ನಾಮಪತ್ರ ಸಲ್ಲಿಸಿರಲಿಲ್ಲ. ಸದ್ಯ ಚುನಾಯಿತರಾಗಿರುವ ಪದಾಧಿಕಾರಿಗಳು ಹಾಗೂ ಸಮಿತಿಯು 2025ರವರೆಗೆ ಅಧಿಕಾರದಲ್ಲಿರಲಿದೆ.

ಚುನಾವಣಾಧಿಕಾರಿ ಎಂ.ಆರ್. ಹೆಗಡೆ ಅಂತಿಮಗೊಳಿಸಿರುವ ಪಟ್ಟಿ:
ರಘುರಾಮ್ ಭಟ್ (ಅಧ್ಯಕ್ಷ), ಬಿ.ಕೆ. ಸಂಪತ್ ಕುಮಾರ್ (ಉಪಾಧ್ಯಕ್ಷ), ಎ. ಶಂಕರ್ (ಕಾರ್ಯದರ್ಶಿ), ಶಾವೀರ್ ತಾರಾಪುರೆ(ಜಂಟಿ ಕಾರ್ಯದರ್ಶಿ), ಇ.ಎಸ್. ಜಯರಾಮ್ (ಖಜಾಂಚಿ)
ಆಡಳಿತ ಸಮಿತಿ ಸದಸ್ಯರು: ಬೆಂಗಳೂರು ವಲಯ: ಎಂ.ಎಸ್. ಕೇಶವ್ (ಸ್ವಸ್ತಿಕ್ ಯೂನಿಯನ್ ಸಿಸಿ), ಕೆ.ವಿ. ಮಂಜುನಾಥ ರಾಜು (ಹೆಮಂಡ್ಸ್ ಸಿಸಿ), ಎಂ.ಎಸ್. ವಿನಯ್ (ಫ್ರೆಂಡ್ಸ್ ಯೂನಿಯನ್ ಸಿಸಿ).
ಮೈಸೂರು ವಲಯ: ಹರಿಕೃಷ್ಣಕುಮಾರ್ ಆರ್.ಕೆ. (ನ್ಯಾಷನಲ್ ಸಿಸಿ, ಮೈಸೂರು)
ಶಿವಮೊಗ್ಗ: ಎಚ್.ಎಸ್. ಸದಾನಂದ (ದುರ್ಗಿಗುಡಿ ಕ್ರಿಕೆಟ್ ಸಂಸ್ಥೆ)
ತುಮಕೂರು: ಕೆ. ಶಶಿಧರ್ (ವೀನಸ್ ಸಿಸಿ)
ಧಾರವಾಡ: ನಿಖಿಲ್ ಎಂ ಭೂಸದ್ (ಬಿಡಿಕೆ ಕ್ರೀಡಾ ಪ್ರತಿಷ್ಠಾನ. ಹುಬ್ಬಳ್ಳಿ)
ರಾಯಚೂರು: ಸುಜಿತ್ ಬೊಹರಾ (ಸಿಟಿ ಎಲೆವನ್ ಸಿಸಿ)
ಮಂಗಳೂರು: ರತನ್ ಕುಮಾರ್ (ಮಂಗಳೂರು ಸ್ಪೋರ್ಟ್ಸ್ ಕ್ಲಬ್)
ಸಂಜಯ್ ಪೋಳ್ ಹಾಗೂ ಎನ್.ಎನ್. ಯುವರಾಜ್ (ಆಜೀವ ಸದಸ್ಯರ ವಿಭಾಗದಿಂದ ಅವಿರೋಧವಾಗಿ ಆಯ್ಕೆಯಾದವರು)

ನ. 20ರಿಂದ ಕತಾರ್‌ನಲ್ಲಿ ನಡೆಯಲಿರುವ ಫುಟ್‌ಬಾಲ್ ವಿಶ್ವಕಪ್ ಅಂಗವಾಗಿ ಕೇರಳದ ಕೋಯಿಕ್ಕೋಡ್‌ನ ನದಿಯೊಂದರಲ್ಲಿ ಬ್ರೆಜಿಲ್ ಆಟಗಾರ ನೇಮರ್ (ಎಡ), ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರ ಬೃಹತ್ ಕಟೌಟ್‌ಗಳನ್ನು ನಿಲ್ಲಿಸಲಾಗಿದೆ– ಎಎಫ್‌ಪಿ ಚಿತ್ರ

ಹಾಕಿ: ಸವಿತಾಗೆ ಸಾರಥ್ಯ

ನವದೆಹಲಿ (ಪಿಟಿಐ): ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಟೂರ್ನಿಯಲ್ಲಿ ಭಾರತ ಮಹಿಳಾ ತಂಡವನ್ನು ಗೋಲ್‌ಕೀಪರ್ ಸವಿತಾ ಪೂನಿಯಾ ನಾಯಕಿಯಾಗಿ ಮುನ್ನಡೆಸಲಿದ್ದಾರೆ. ದೀಪ್ ಗ್ರೇಸ್ ಎಕ್ಕಾ ಉಪನಾಯಕಿಯಾಗಿದ್ದಾರೆ.

ಸ್ಪೇನ್‌ನಲ್ಲಿ ಡಿಸೆಂಬರ್ 11ರಿಂದ 17ರವರೆಗೆ ನಡೆಯಲಿರುವ ಟೂರ್ನಿಗೆ ನವಜೋತ್ ಕೌರ್ ತಂಡಕ್ಕೆ ಮರಳಿದ್ದಾರೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕೋವಿಡ್ ಕಾರಣದಿಂದ ಅವರು ಆಡಿರಲಿಲ್ಲ.

ನೇಷನ್ಸ್ ಕಪ್ ಮಹತ್ವದ ಟೂರ್ನಿಯಾಗಿದ್ದು ಇಲ್ಲಿ ಚಾಂಪಿಯನ್ ಆದವರು ಎಫ್‌ಐಎಚ್ ಮಹಿಳಾ ಪ್ರೊ ಲೀಗ್‌ಗೆ ಬಡ್ತಿ ಪಡೆಯುತ್ತಾರೆ. ಭಾರತ ತಂಡವು ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಚಿಲಿ, ಜಪಾನ್, ದಕ್ಷಿಣ ಆಫ್ರಿಕಾ ಈ ಗುಂಪಿನಲ್ಲಿವೆ. ಡಿ.11ರಂದು ಮೊದಲ ಪಂದ್ಯದಲ್ಲಿ ಸವಿತಾ ಬಳಗ ಚಿಲಿ ಎದುರು ತನ್ನ ಅಭಿಯಾನ ಆರಂಭಿಸಲಿದೆ.

ಡಿಸೆಂಬರ್‌ನಲ್ಲಿ ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್ ಟೂರ್ನಿ

ಮಂಗಳೂರು: ವಿವಾ ವೆಂಚರ್ಸ್ ಕ್ರೀಡಾ ಸಂಸ್ಥೆಯ ಸಹಯೋಗದಲ್ಲಿ ಸ್ಪೋರ್ಟ್ಸ್ ಡೆನ್ ಆಯೋಜಿಸಲಿರುವ ಅಖಿಲ ಭಾರತ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಡಿ. 9ರಿಂದ 11ರವರೆಗೆ ನಗರದಲ್ಲಿ ನಡೆಯಲಿದೆ.ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಯು.ಎಸ್ ಮಲ್ಯ ಅಂಗಣದಲ್ಲಿ ನಡೆಯಲಿರುವ ಟೂರ್ನಿಯಲ್ಲಿ 9ರಿಂದ 65 ವರ್ಷದ ವರೆಗಿನವರು ವಿಭಿನ್ನ ವಯೋಮಾನ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಸ್ಪೋರ್ಟ್ಸ್ ಡೆನ್ ಸಂಸ್ಥೆಯ ನಿರ್ದೇಶಕ ಗಣೇಶ್ ಕಾಮತ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ಸ್ಪರ್ಧೆಗಳು ನಡೆಯಲಿವೆ. ಒಟ್ಟು ₹ 2 ಲಕ್ಷ ಮೊತ್ತದ ನಗದು ಬಹುಮಾನ ಮತ್ತು ಪದಕಗಳನ್ನು ನೀಡಲಾಗುವುದು ಎಂದರು.ಪ್ರವೇಶ ಪತ್ರಗಳನ್ನು 8884409014 ಅಥವಾ 8095810030ಗೆ ಕಳುಹಿಸಬೇಕು. ಮಾಹಿತಿಗೆ denzsports@gmail.com ಸಂಪರ್ಕಿಸುವಂತೆ ಅವರು ತಿಳಿಸಿದರು. ವಿವಾ ವೆಂಚರ್ಸ್‌ನ ನಿರ್ದೇಶಕ ಡೆನ್ಜಿಲ್ ಫರ್ನಾಂಡಿಸ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಸಂಕ್ಷಿಪ್ತ ಸುದ್ದಿ

17ರಿಂದ ಬೀದರ್‌ನಲ್ಲಿ ರಾಷ್ಟ್ರಮಟ್ಟದ ಫುಟ್‌ಬಾಲ್ ಟೂರ್ನಿ

ಬೀದರ್: ಖ್ಯಾತ ಫುಟ್‌ಬಾಲ್ ಆಟಗಾರರಾದ ನಯೀಮ್, ಜಾವೇದ್ ಮತ್ತು ಅರುಣ್ ಪಾಲ್ ಅವರ ಸ್ಮರಣಾರ್ಥ ನಗರದ ನೆಹರೂ ಕ್ರೀಡಾಂಗಣದಲ್ಲಿ ನವೆಂಬರ್ 17ರಿಂದ 20ರವರೆಗೆ ರಾಷ್ಟ್ರ ಮಟ್ಟದ ಫುಟ್‌ಬಾಲ್ ಟೂರ್ನಿ ಆಯೋಜಿಸಲಾಗಿದೆ.

'ನವೆಂಬರ್ 17ರಂದು ಬೆಳಿಗ್ಗೆ 11ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಕಲಬುರಗಿಯ ಪೊಲೀಸ್ ತರಬೇತಿ ಕೇಂದ್ರದ ಪ್ರಾಚಾರ್ಯ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡೆಕ್ಕ ಕಿಶೋರಬಾಬು ಭಾಗ ವಹಿಸುವರು' ಎಂದು ಟೂರ್ನಿಯ ಆಯೋಜಕ ಅಬ್ದುಲ್ ಮನ್ನಾನ್ ಸೇಠ್ ತಿಳಿಸಿದ್ದಾರೆ.

ಭಾರತದಲ್ಲಿ 2023ರ ವಿಶ್ವ ಮಹಿಳಾ ಬಾಕ್ಸಿಂಗ್: ಬಿಎಫ್‌ಐ

ನವದೆಹಲಿ (ಪಿಟಿಐ): ಭಾರತ 2023ರಲ್ಲಿ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಆಯೋಜಿಸಲಿದೆ. ಎರಡು ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಗೆ ಅಗತ್ಯ ಶುಲ್ಕ ಭರಿಸಲು ವಿಫಲವಾದ ಕಾರಣ ಪುರುಷರ ವಿಶ್ವ ಚಾಂಪಿಯನ್‌ಷಿಪ್ ಆತಿಥ್ಯವನ್ನು ದೇಶ ಕಳೆದುಕೊಂಡಿತ್ತು.

'ಮಹಿಳಾ ಬಾಕ್ಸಿಂಗ್ ದೆಹಲಿಯಲ್ಲಿ ಮಾರ್ಚ್ ತಿಂಗಳ ಅಂತ್ಯದಲ್ಲಿ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಆಯೋಜಿಸಲಿದ್ದೇವೆ' ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಪ್ರಧಾನ ಕಾರ್ಯದರ್ಶಿ ಹೇಮಂತ್ ಕಲಿಟ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಫಿಬಾ ಏಷ್ಯಾಕಪ್ ಪ್ರೀಕ್ವಾಲಿಫೈಯರ್ಸ್

ಬೆಂಗಳೂರು: ಫಿಬಾ ಏಷ್ಯಾಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸಿ ಗುಂಪಿನ ಪ್ರೀಕ್ವಾಲಿಫೈಯರ್ಸ್ ಪಂದ್ಯಗಳಿಗೆ ಇಂದಿನಿಂದ ಕಂಠೀರವ ಕ್ರೀಡಾಂಗಣ ಆತಿಥ್ಯ ವಹಿಸಲಿದೆ. ನವೆಂಬರ್ 12ರವರೆಗೆ ನಡೆಯಲಿರುವ ಪಂದ್ಯಗಳಲ್ಲಿ ಗುವಾಮ್, ಹಾಂಗ್‌ಕಾಂಗ್ ಮತ್ತು ಸಿಂಗಪುರ ತಂಡಗಳು ಆಡಲಿವೆ. ಇಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಏಷ್ಯಾಕಪ್ ಕ್ವಾಲಿಫೈಯರ್ಸ್‌ಗೆ ಪ್ರವೇಶ ಪಡೆಯಲಿವೆ.

ಗುರುವಾರ ಸಿಂಗಪುರ–ಗುವಾಮ್, ಶುಕ್ರವಾರ ಗುವಾಮ್– ಹಾಂಗ್‌ಕಾಂಗ್ ಮತ್ತು ಶನಿವಾರ ಹಾಂಗ್‌ಕಾಂಗ್–ಸಿಂಗಪುರ ಸೆಣಸಲಿವೆ. ಪಂದ್ಯಗಳು ರಾತ್ರಿ 7ರಿಂದ ಆರಂಭವಾಗಲಿವೆ.

ಪ್ರೊ ಕಬಡ್ಡಿ: ಬುಲ್ಸ್‌ಗೆ ಜಯ

ಪುಣೆ: ರೋಚಕ ಹಣಾಹಣಿಯಲ್ಲಿ ಬೆಂಗಳೂರು ಬುಲ್ಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯಿಸಿತು.

ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 36–33ರಿಂದ ಹರಿಯಾಣದ ವಿರುದ್ಧ ಗೆದ್ದಿತು.

ಮಿಂಚಿನ ದಾಳಿ ನಡೆದಿ ನೀರಜ್ ನರ್ವಾಲ್ (9) ಹಾಗೂ ರಕ್ಷಣೆಯಲ್ಲಿ ಉತ್ತಮವಾಗಿ ಆಡಿದ ನಾಯಕ ಮಹೇಂದರ್ ಸಿಂಗ್ ಗೆಲುವಿನ ರೂವಾರಿಗಳಾದರು.

ಪ್ರಥಮಾರ್ಧದಲ್ಲಿ ಬೆಂಗಳೂರು 27–11ರಿಂದ ದೊಡ್ಡ ಅಂತರ ಸಾಧಿಸಿತ್ತು. ಆದರೆ ವಿರಾಮದ ನಂತರ ಹರಿಯಾಣ ಆಟಗಾರರು ದಿಟ್ಟ ತಿರುಗೇಟು ನೀಡಿದರು. ಇದರಿಂದಾಗಿ ಪಂದ್ಯವು ಕುತೂಹಲ ಕೆರಳಿಸಿತು. ಆದರೆ ಒತ್ತಡ ಮೀರುವಲ್ಲಿ ಯಶಸ್ವಿಯಾಯಿತು.

ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ 35–34ರಿಂದ ತಮಿಳ್ ತಲೈವಾಸ್ ವಿರುದ್ಧ ಜಯಿಸಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	12	7	3	2	43
ಬೆಂಗಳೂರು	12	7	4	1	41
ಜೈಪುರ	11	7	4	0	37
ಡೆಲ್ಲಿ	12	6	6	0	35
ತಲೈವಾಸ್	12	5	5	2	34
ಮುಂಬಾ	11	6	5	0	33